ಭಾನುವಾರ, ಆಗಸ್ಟ್ 28, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 239 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಆಹಾರ ಪದ್ಧತಿಯ ಹಿನ್ನೆಲೆ, ವಿವಿಧ ಆಚರಣೆಗಳ ಮೂಲ ಮತ್ತು ಉದ್ದೇಶವನ್ನು ಗಮನಿಸಿದರೆ, ಅದು ನಮ್ಮ ಸಂಸ್ಕೃತಿಯ ಭಾಗವೂ ಆಗಿತ್ತು ಎಂಬುದನ್ನು ಅರಿಯಬಹುದು

ಮುರುಘಾ ಮಠದಲ್ಲಿ ಆತಂಕ, ಸರಣಿ ಸಭೆ, ಆಕ್ರೋಶ 5
ಅಕ್ಟೋಬರ್‌ನಿಂದ ಮಾರಾಟ, ಸಾಗಾಟದ ಸಬ್ಸಿಡಿ ತಗ್ಗಿಸುವ ಉದ್ದೇಶ
ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಸೊರೇನ್ ತಂತ್ರ 9
‘ಭಾರತ್’ ಬ್ರ್ಯಾಂಡ್ ರಸಗೊಬ್ಬರ 8

ಬೆಂಗಳೂರು: ನವೋದ್ಯಮದ ತವರು

• ವಿಜಯ್ ಜೋಷಿ

ಒಳನೋಟ
ನವೋದ್ಯಮದಲ್ಲಿ ಕ್ರಾಂತಿ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ‘ತಂತ್ರಜ್ಞಾನ ಆಧಾರಿತ ನವೋದ್ಯಮಗಳು ಅತಿಹೆಚ್ಚಿನ ಸಂಖ್ಯೆಯಲ್ಲಿರುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಇಡೀ ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿದೆ. ಅತ್ಯಂತ ಚೆನ್ನಾಗಿ ಬೆಳೆದಿರುವ ನವೋದ್ಯಮ ಕಾರ್ಯವ್ಯವಸ್ಥೆ, ತಾಂತ್ರಿಕ ನಿಪುಣರ ಜಾಲ, ಔದ್ಯಮಿಕ ಗುಣವನ್ನು ಗೌರವಿಸುವ ಮನಸ್ಸು ಈ ನಗರದಲ್ಲಿದೆ...’

ದೇಶದ ನವೋದ್ಯಮಗಳ ಭೂಪಟದಲ್ಲಿ ಬೆಂಗಳೂರಿನ ಸ್ಥಾನ ಏನು ಎಂಬ ಪ್ರಶ್ನೆಗೆ ಉತ್ತರ ಅರಸಲು ಮುಂದಾದರೆ ಸಿಗುವುದು ನಗರದ ಹಿರಿಮೆಯನ್ನು ಹೆಚ್ಚಿಸುವ ಇಂತಹ ಉತ್ತರಗಳು. ಉದ್ಯಾನ ನಗರಿ ಬೆಂಗಳೂರಿನ ನವೋದ್ಯಮಗಳ ಸಂಖ್ಯೆ, ಅವುಗಳ ಶಕ್ತಿ ಹಾಗೂ ವ್ಯಾಪ್ತಿಯ ಕುರಿತು ಕೆಲವು ನೋಟಗಳನ್ನು ನೀಡುವ ‘ಆಸ್ಕ್ ಪ್ರೈವೇಟ್ ವೆಲ್ತ್ ಹುರೂನ್ ಇಂಡಿಯಾ ಫ್ಯೂಚರ್ ಯೂನಿಕಾರ್ನ್ ಇಂಡೆಕ್ಸ್ 2022’ ವರದಿಯನ್ನು ಹುರೂನ್ ಇಂಡಿಯಾ ಈಚೆಗೆ ಬಿಡುಗಡೆ ಮಾಡಿದ್ದು, ಅದರಲ್ಲಿ ಈ ಮೇಲಿನ ವಿವರಗಳು ಇವೆ.

ಯೂನಿಕಾರ್ನ್‌ಗಳ (₹ 7,981 ಕೋಟಿಗಿಂತ ಹೆಚ್ಚಿನ ಮೌಲ್ಯದ ಕಂಪನಿ) ಸಂಖ್ಯೆಯನ್ನು ಪರಿಗಣಿಸಿದರೆ ಭಾರತದ ನವೋದ್ಯಮಗಳ ಕಾರ್ಯವ್ಯವಸ್ಥೆಯು ವಿಶ್ವದಲ್ಲಿ ಮೂರನೆಯ ಅತಿದೊಡ್ಡದು ಎನ್ನುತ್ತದೆ ಹುರೂನ್ ವರದಿ. ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ನೀಡಿರುವ ಮಾಹಿತಿ ಅನ್ವಯ ದೇಶದಲ್ಲಿನ ನವೋದ್ಯಮಗಳ ಸಂಖ್ಯೆ 69 ಸಾವಿರಕ್ಕಿಂತ ಹೆಚ್ಚು. ಈ ವರ್ಷದ ಮೊದಲಾರ್ಧದಲ್ಲಿ ದೇಶವು ಒಟ್ಟು 20 ಹೊಸ ಯೂನಿಕಾರ್ನ್‌ಗಳಿಗೆ ಜನ್ಮ ನೀಡಿದೆ.

‘ಜಾಗತಿಕ ನವೋದ್ಯಮ ಕಾರ್ಯವ್ಯವಸ್ಥೆ ವರದಿ’ಯು (ಜಿಎಸ್‌ಇಆರ್) ಜೂನ್ ತಿಂಗಳಲ್ಲಿ ಬಿಡುಗಡೆ ಆಗಿದೆ.



ಚಿತ್ರ: ಭಾನು ಪ್ರಕಾಶ್

ಇದು ಸಾಧನೆ, ಹಣಕಾಸಿನ ಲಭ್ಯತೆ, ಮಾರುಕಟ್ಟೆ ವ್ಯಾಪ್ತಿ, ಸಂಪರ್ಕ, ಪ್ರತಿಭೆ ಮತ್ತು ಅನುಭವ, ಜ್ಞಾನ ಆಧರಿಸಿ ನಗರಗಳಿಗೆ ರ‍್ಯಾಂಕ್ ನೀಡಿದೆ. ಈ ವರದಿಯಲ್ಲಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ 22ನೇ ಸ್ಥಾನ ಪಡೆದಿದೆ.

ತಂತ್ರಜ್ಞಾನ ಆಧಾರಿತ ಉದ್ದಿಮೆಗಳನ್ನು ಪೋಷಿಸುವ ಸಂಸ್ಕೃತಿಯು ಇನ್ಫೊಸಿಸ್ ಸ್ಥಾಪನೆ ಆದ ಕಾಲದಿಂದಲೂ ಇಲ್ಲಿದೆ. ನವೋದ್ಯಮಗಳನ್ನು ಪೋಷಿಸಲು ಬೇಕಿರುವ ಸಮುದಾಯ, ಹೂಡಿಕೆದಾರರು ಮತ್ತು ಸರ್ಕಾರದ ನೀತಿಗಳು ಕೂಡ ಇದಕ್ಕೆ ಪೂರಕವಾಗಿದೆ ಎಂದು ಹುರೂನ್ ಇಂಡಿಯಾ ಸಂಸ್ಥೆಯ ಮುಖ್ಯ ಸಂಶೋಧಕ ಅನಸ್ ರೆಹ್ಮಾನ್ ಜುನೈದ್ ಅವರು ಈಚೆಗೆ ಹೇಳಿದ್ದರು.

ಬೆಂಗಳೂರಿನಲ್ಲಿ ಇರುವ ನವೋದ್ಯಮಗಳ ಪೈಕಿ ಹೆಚ್ಚಿನವು ಸಾಫ್ಟ್‌ವೇರ್ ತಂತ್ರಜ್ಞಾನವನ್ನು ಆಧರಿಸಿವೆ. ತಂತ್ರಜ್ಞಾನ ಕಂಪನಿಗಳಲ್ಲಿ ಕೆಲಸ ಮಾಡುವವರೇ ಹೆಚ್ಚಿನ ಸಂಖ್ಯೆಯಲ್ಲಿ ನವೋದ್ಯಮ ಕಟ್ಟಲು ಮುಂದೆ ಬರುತ್ತಿದ್ದಾರೆ.

ಕರ್ನಾಟಕ, ಗುಜರಾತ್ ಅತ್ಯುತ್ತಮ

ನವೋದ್ಯಮಗಳ ಬೆಳವಣಿಗೆಯ ವಿಚಾರದಲ್ಲಿ ಕರ್ನಾಟಕದ ಸಾಧನೆ ‘ಅತ್ಯುತ್ತಮ’ ಎಂದು ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಈಚೆಗೆ ಹೇಳಿದೆ.

ವಿವಿಧ ರಾಜ್ಯಗಳಲ್ಲಿ ನವೋದ್ಯಮಕ್ಕೆ ಇರುವ ಪ್ರೋತ್ಸಾಹ, ಪೂರಕ ವಾತಾವರಣ ಮತ್ತು ಇತರ ಕೆಲವು ಅಂಶಗಳನ್ನು ಪರಿಶೀಲಿಸಿ ಇಲಾಖೆಯು ಈ ಶ್ರೇಣಿ ನೀಡಿದೆ. ‘ಅತ್ಯುತ್ತಮ’ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ, ಗುಜರಾತ್ ಸ್ಥಾನ ಪಡೆದಿವೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಪರೀಕ್ಷಾ ಅಕ್ರಮಕ್ಕೆ ತಡೆ: ರಾಜ್ಯ ಸರ್ಕಾರಕ್ಕೆ ಕೋರಿಕೆ

ಚುನಾವಣಾ ಆಯೋಗದ ಅಧಿಕಾರಕ್ಕೆ ಕೆಇಎ ಮನವಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿವಿಧ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಕ್ರಿಯೆ ವೇಳೆ ಕಠಿಣ ಕ್ರಮಗಳನ್ನು ಕೈಗೊಂಡ ಬಳಿಕವೂ ನಡೆಯುತ್ತಿರುವ ಪರೀಕ್ಷಾ ಅಕ್ರಮಗಳಿಗೆ ಅಂತ್ಯ ಹಾಡಲು ಚುನಾವಣಾ ಆಯೋಗಕ್ಕಿರುವ ಅಧಿಕಾರ ನೀಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ರಾಜ್ಯ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದೆ.

ಸಹಾಯಕ ಪ್ರಾಧ್ಯಾಪಕರ ಮತ್ತು ಕೆಪಿಟಿಸಿಎಲ್‌ನ ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿಗೆ ಕೆಇಎ ಇತ್ತೀಚೆಗೆ ನಡೆಸಿದ್ದ ಪರೀಕ್ಷೆಯಲ್ಲಿ ಅಕ್ರಮ ನಡೆದಿತ್ತು. ಪರೀಕ್ಷಾ ಅಕ್ರಮ ನಡೆಯಬಾರದೆಂದು ಅಭ್ಯರ್ಥಿಗಳಿಗೆ ‘ವಸ್ತ್ರಸಂಹಿತೆ’, ಹಾಲ್‌ಟಿಕೆಟ್‌ಗೆ ಪತ್ರಾಂಕಿತ ಅಧಿಕಾರಿ ಸಹಿ ಹಾಕಿಸಿಕೊಂಡು ಪರೀಕ್ಷೆ ನಡೆಸಿದರೂ ಅಕ್ರಮ ತಡೆಯಲು ಸಾಧ್ಯವಾಗಿಲ್ಲ. ಹೀಗಾಗಿ, ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಿದೆ ಎಂದು ಕೆಇಎ ಪ್ರತಿಪಾದಿಸಿದೆ.

ಈ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿರುವ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ‘ಚುನಾವಣಾ ಆಯೋಗ ತನ್ನ ಕರ್ತವ್ಯಕ್ಕೆ ಅಧಿಕಾರಿ, ಸಿಬ್ಬಂದಿಯನ್ನು ನಿಯೋಜಿಸುವ ಅಧಿಕಾರವನ್ನು ಎಲ್ಲ ಪರೀಕ್ಷಾ ಪ್ರಾಧಿಕಾರಗಳಿಗೆ ನೀಡಬೇಕು. ಅಕ್ರಮ ಎಸಗುವ ಅಭ್ಯರ್ಥಿ, ಸಿಬ್ಬಂದಿಗೆ ಕಠಿಣ ಶಿಕ್ಷೆ ವಿಧಿಸಲು ವಿಶೇಷ ಕಾನೂನು ರೂಪಿಸಬೇಕು’ ಎಂದು ಸಲಹೆ ನೀಡಿದ್ದಾರೆ.

> **ಲಕ್ಷಾಂತರ ಅಭ್ಯರ್ಥಿಗಳು ಬರೆಯುವ ಪರೀಕ್ಷೆಗೆ ಸಾವಿರಾರು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಾರೆ. ಇತ್ತೀಚಿನ ಘಟನೆಗಳ ಹಿನ್ನೆಲೆಯಲ್ಲಿ ಸುಧಾರಣಾ ಕ್ರಮ ಜಾರಿಗೊಳಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ**
> **ಎಸ್. ರಮ್ಯಾ**
> ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

‘ಪ್ರತಿ ಪರೀಕ್ಷೆಗೆ ರಾಜ್ಯದಾದ್ಯಂತ ಕಾರ್ಯನಿರ್ವಹಿಸುವ ಗ್ರೂಪ್ ‘ಎ’ ಮತ್ತು ‘ಬಿ’ ಅಧಿಕಾರಿಗಳನ್ನು ವೀಕ್ಷಕರನ್ನಾಗಿ ನಿಯೋಜಿಸಲು ಅಧಿಕಾರ ನೀಡಬೇಕು. ಹೀಗೆ ನಿಯೋಜಿಸುವ ಅಧಿಕಾರಿ, ಸಿಬ್ಬಂದಿಯನ್ನು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮತ್ತು ಸ್ವಂತ ಜಿಲ್ಲೆ ಹೊರತುಪಡಿಸಿ ಇತರ ಜಿಲ್ಲೆಗಳಿಗೆ ನಿಯೋಜಿಸುವ ಅಧಿಕಾರ ನೀಡಬೇಕು. ನಿಯೋಜಿಸಿದ ಕರ್ತವ್ಯಕ್ಕೆ ಗೈರಾದರೆ, ಚುನಾವಣಾ ಕಾರ್ಯಕ್ಕೆ ನಿಯೋಜಿಸಿರುವ ಅಧಿಕಾರಿಗಳು ಗೈರು ಹಾಜರಾದರೆ ವಿಧಿಸುವ ರೀತಿಯ ದಂಡ ಹಾಕಲು ಅಧಿಕಾರ ನೀಡಬೇಕು’ ಎಂದು ಅವರು ಕೋರಿದ್ದಾರೆ.

‘ಒಂದು ತಾಲ್ಲೂಕಿನಲ್ಲಿ ಎಲ್ಲ ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ ಸಿಬ್ಬಂದಿಯನ್ನು ಪರೀಕ್ಷೆ ಆರಂಭವಾಗುವ ಮೂರು ಗಂಟೆ ಮೊದಲು ಲಾಟರಿ ಮುಖಾಂತರ ಕೇಂದ್ರಗಳಿಗೆ ಹಂಚಿಕೆ ಮಾಡುವ ವ್ಯವಸ್ಥೆ ಅಳವಡಿಸಿಕೊಳ್ಳಬೇಕು. ನೇಮಕಾತಿಗೆ ಸಂಬಂಧಿಸಿದ ಎಲ್ಲ ಪರೀಕ್ಷೆಗಳನ್ನು ಎರಡು ಹಂತಗಳಲ್ಲಿ ಮಾಡಬೇಕು. ಮೊದಲ ಹಂತದಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಕೆಲವೇ ಪರೀಕ್ಷಾ ಕೇಂದ್ರಗಳಲ್ಲಿ ಮುಖ್ಯ ಪರೀಕ್ಷೆ ಬರೆಯುವ ವ್ಯವಸ್ಥೆ ರೂಪಿಸಬೇಕು. ರಾಜ್ಯದಲ್ಲಿ ಅನೇಕ ನಿಗಮ, ಮಂಡಳಿಗಳಿದ್ದು, ಅವುಗಳಿಗೆ ಏಕರೂಪದ ನೇಮಕಾತಿ ವ್ಯವಸ್ಥೆ ತರಬೇಕು. ಆಡಳಿತ ಸಹಾಯಕ ಹುದ್ದೆಗಳಿಗೆ ವರ್ಷದಲ್ಲಿ ಒಂದು ಬಾರಿ ಮಾತ್ರ ಪರೀಕ್ಷೆ ನಡೆಸಿ ಅರ್ಹತಾ ಪಟ್ಟಿಯ ಅನುಸಾರ ಆ ವರ್ಷದಲ್ಲಿ ನಡೆಯುವ ಎಲ್ಲ ಇಲಾಖೆಗಳು, ನಿಗಮ-ಮಂಡಳಿಗಳಿಗೆ ಅಭ್ಯರ್ಥಿಗಳನ್ನು ಪರಿಗಣಿಸಬೇಕು’ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಒಳ ಪುಟಗಳು
ಪೀಠಾಧ್ಯಕ್ಷ–ಆಡಳಿತಾಧಿಕಾರಿ ಮುಸುಕಿನ ಗುದ್ದಾಟ 5
ಮಕ್ಕಳ ಸಾವು: ವಾಮಾಚಾರದ ಶಂಕೆ 7
7 ಕಂಪನಿಗಳ ನಷ್ಟ ₹ 1.54 ಲಕ್ಷ ಕೋಟಿ 8
ಏಷ್ಯಾಕಪ್: ದುಬೈನಲ್ಲಿ ಭಾರತ–ಪಾಕ್ ಸೆಣಸಾಟ 14
ಡಿಸ್ನಿ ಸ್ಟಾರ್‌ಗೆ ಐಸಿಸಿ ಪ್ರಸಾರ ಹಕ್ಕುಗಳು 14

ಮಠದ ಆಡಳಿತಾಧಿಕಾರಿ ಬಸವರಾಜನ್ ವಿರುದ್ಧವೂ ಆರೋಪ

ಮುರುಘಾ ಶ್ರೀ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಶಿವಮೂರ್ತಿ ಮುರುಘಾ ಶ್ರೀ

ಮೈಸೂರು/ಚಿತ್ರದುರ್ಗ: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಪ್ರಕರಣ ಸಂಬಂಧ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರು, ಇತರ ಮೂವರ ವಿರುದ್ಧ ಇಲ್ಲಿ ಪೋಕ್ಸೊ ಕಾಯ್ದೆಯಡಿ ಎಫ್‌ಐಆರ್ ದಾಖಲಾಗಿದೆ. ಅತ್ತ, ಚಿತ್ರದುರ್ಗದಲ್ಲಿ ಮಠದ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ದಂಪತಿ ವಿರುದ್ಧವೂ ಮಹಿಳೆಗೆ ಲೈಂಗಿಕ ಕಿರುಕುಳ ಬಗ್ಗೆ ದೂರು ದಾಖಲಾಗಿದೆ.

ದೂರು ದಾಖಲಾಗುತ್ತಿದ್ದಂತೆ ಚಿತ್ರದುರ್ಗದ ಮಠದ ಆವರಣದಲ್ಲಿ ಆತಂಕ ನೆಲೆಸಿದೆ. ರಾಜಕೀಯ ಮುಖಂಡರು, ವಿವಿಧ ಮಠಾಧೀಶರು ಶರಣರನ್ನು ಭೇಟಿಯಾಗಿದ್ದಾರೆ. ಶರಣರು ಮಠದಲ್ಲಿಯೇ ಇದ್ದು ಸರಣಿ ಸಭೆಗಳನ್ನು ನಡೆಸಿದರು. ಪ್ರಕರಣ ರಾಜ್ಯವ್ಯಾಪಿ ಚರ್ಚೆಗೆ ಆಸ್ಪದವಾಗುತ್ತಿದ್ದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ, ‘ಎರಡು ದೂರಿನ ಬಗ್ಗೆ ತನಿಖೆ ನಡೆದಿದೆ’ ಎಂದು ತಿಳಿಸಿದ್ದಾರೆ.

ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ನಿರಂತರ ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿ ಮೈಸೂರಿನ ನಜರಬಾದ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಶಿವಮೂರ್ತಿ ಮುರುಘಾ ಶರಣರು ಪ್ರಥಮ ಆರೋಪಿ.

ಇತರೆ ಪೋಷಕರಿಂದಲೂ ದೂರು

ಮೈಸೂರು: ‘ಲೈಂಗಿಕ ಕಿರುಕುಳ ಪ್ರಕರಣ ಬಯಲಾಗುತ್ತಿದ್ದಂತೆಯೇ ಬೇರೆ ಕೆಲ ಮಕ್ಕಳ ಪೋಷಕರು ಒಡನಾಡಿ ಸಂಸ್ಥೆಯನ್ನು ಸಂಪರ್ಕಿಸಿದ್ದು, ತಾವು ಕಿರುಕುಳ ಎದುರಿಸಿರುವುದಾಗಿ ಹೇಳಿದ್ದಾರೆ’ ಎಂದು ‘ಒಡನಾಡಿ’ ಸಂಚಾಲಕ ಪರಶುರಾಂ ತಿಳಿಸಿದ್ದಾರೆ.

‘ನೆರವು ಕೋರಿರುವ ಬೇರೆ ಮಕ್ಕಳ ಪೋಷಕರಿಗೆ ಸಾಧ್ಯವಾದರೆ, ಚಿತ್ರದುರ್ಗದಲ್ಲಿಯೇ ದೂರು ನೀಡಿ, ಇಲ್ಲವಾದರೆ ಸಂಸ್ಥೆಯಿಂದ ನೆರವು ನೀಡಲು ಸಿದ್ಧ ಎಂದು ಭರವಸೆ ನೀಡಿದ್ದೇವೆ’ ಎಂದಿದ್ದಾರೆ.

‘ಈ ಮಧ್ಯೆ, ಚಿತ್ರದುರ್ಗ ಪ್ರಭಾವಿಯೊಬ್ಬರು ಸಂಧಾನ ಯತ್ನ ಮಾಡಿದರು. ಸಂತ್ರಸ್ತ ಮಕ್ಕಳು ಸಂಸ್ಥೆಯ ಸಂಪರ್ಕಕ್ಕೆ ಬಂದ ಬಳಿಕ, ಸಿಬ್ಬಂದಿಗೆ ಒತ್ತಡ, ಬೆದರಿಕೆ ಕರೆಗಳು ಬಂದಿವೆ. ಆದರೆ, ಆಮಿಷಕ್ಕೆ ಬಗ್ಗದೇ, ಕಾನೂನು ಪ್ರಕ್ರಿಯೆಗೆ ಒಳಪಡಿಸಲು ನಿರ್ಧರಿಸಿದೆವು’ ಎಂದು ತಿಳಿಸಿದ್ದಾರೆ.

> **ಮುರುಘಾ ಶರಣರ ವಿರುದ್ಧ ಮೈಸೂರಿನಲ್ಲಿ, ಆಡಳಿತಾಧಿಕಾರಿ ಬಸವರಾಜನ್ ವಿರುದ್ಧ ಮಠದ ಮಹಿಳೆಯೊಬ್ಬರು ಚಿತ್ರದುರ್ಗದಲ್ಲಿ ಠಾಣೆಗೆ ದೂರು ನೀಡಿದ್ದಾರೆ. ಈ ಎರಡೂ ಪ್ರಕರಣಗಳ ತನಿಖೆ ನಡೆಯುತ್ತಿದೆ**
> **ಆರಗ ಜ್ಞಾನೇಂದ್ರ**, ಗೃಹ ಸಚಿವ

5ನೇ ಪುಟ ನೋಡಿ

ವರುಣನ ಅಬ್ಬರ ಮನೆ–ಬೆಳೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವು ದಿನಗಳ ಬಿಡುವಿನ ಬಳಿಕ ರಾಜ್ಯದ ವಿವಿಧೆಡೆ ಶನಿವಾರ ಧಾರಾಕಾರ ಮಳೆಯಾಗಿದೆ. ಹಲವೆಡೆ ಮನೆಗಳು ಕುಸಿದು ಬಿದ್ದಿದ್ದು, ಬೆಳೆಗಳು ಜಲಾವೃತಗೊಂಡಿವೆ. ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ.

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತ ವಾ ಗಿದ್ದು, ಬದಲಿ ಮಾರ್ಗಗಳಲ್ಲಿ ಸಂಚ ರಿಸುವಂತೆ ಪೊಲೀಸರು ಸೂಚಿಸಿದ್ದಾರೆ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಹೋಬಳಿಯ ಕಕ್ಕಲದೊಡ್ಡಿ ಗ್ರಾಮ ಜಲಾವೃತವಾಗಿದೆ. ವಡಗೇರಾ ತಾಲ್ಲೂಕಿನ ಮದರಕಲ್ ಗ್ರಾಮದ ಹಿರೇಹಳ್ಳದಲ್ಲಿ ಸಾಗುತ್ತಿದ್ದ ಸಿಮೆಂಟ್ ಲಾರಿ ನೀರಿನ ರಭಸಕ್ಕೆ ಉರುಳಿ ಬಿದ್ದು, 3 ಟನ್ ಸಿಮೆಂಟ್ ನೀರು ಪಾಲಾಗಿದೆ. ಕೋಲಾರ ತಾಲ್ಲೂಕಿನ ಚೆಲುವನ ಹಳ್ಳಿಯಲ್ಲಿ ಆರು ಸಾವಿರ ಕೋಳಿಗಳು ನೀರುಪಾಲಾಗಿವೆ. ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ತಡಿಬಿಡಿ ಗ್ರಾಮದಲ್ಲಿ ಸಿಡಿಲು ಬಡಿದು ಎರಡು ಆಕಳು ಸಾವನ್ನಪ್ಪಿವೆ.

ಇನ್ನಷ್ಟು ಸುದ್ದಿಗಳು 3, 7

ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯ ಐನೋರಪಾಳ್ಯ ಕೆರೆ ಶನಿವಾರ ಕೋಡಿ ಬಿದ್ದಿದ್ದು, ಅಲ್ಲಿಂದ ಹರಿದ ನೀರು ವಂಡರಲಾ ಗೇಟ್ ಬಳಿ ಹೊಸದಾಗಿ ನಿರ್ಮಿಸಲಾಗಿರುವ ಟೋಲ್ ಸಂಗ್ರಹ ಕೇಂದ್ರದಲ್ಲಿ ಕೆರೆಯಂತೆ ಕಾಣಿಸಿತು. ಇದರ ಪರಿಣಾಮ ಹೆದ್ದಾರಿಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯುಂಟಾಯಿತು –ಪ್ರಜಾವಾಣಿ ಚಿತ್ರ

ವಿವರ ಪುಟ 3

ಕಾಂಗ್ರೆಸ್ ಕಾರ್ಯಕಾರಿಣಿ ಇಂದು

ನವದೆಹಲಿ: ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ (ಸಿಡಬ್ಲ್ಯುಸಿ) ಭಾನುವಾರ ನಡೆಯಲಿದ್ದು ಪಕ್ಷದ ಅಧ್ಯಕ್ಷೀಯ ಚುನಾವಣೆಯ ವೇಳಾಪಟ್ಟಿ ನಿಗದಿ ಹಾಗೂ ಹಿರಿಯ ನಾಯಕ ಗುಲಾಂ ನಬಿ ಆಜಾದ್ ಅವರ ರಾಜೀನಾಮೆ ಕುರಿತು ಚರ್ಚೆ ಯಾಗುವ ಸಾಧ್ಯತೆ ಇದೆ.

ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರೊಂದಿಗೆ ಆರೋಗ್ಯ ತಪಾಸಣೆಗಾಗಿ ಲಂಡನ್‌ಗೆ ತೆರಳಿರುವ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಅಲ್ಲಿಂದಲೇ ವರ್ಚುವಲ್ ಮೂಲಕ ಭಾಗವಹಿಸಲಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ರಾಹುಲ್ ಗಾಂಧಿ ಅವರ ಮನವೊಲಿಕೆ ವಿಫಲವಾದರೆ, ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಹೆಸರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಸೆಪ್ಟೆಂಬರ್ 20ರ ಒಳಗಾಗಿ ಪಕ್ಷದ ಅಧ್ಯಕ್ಷೀಯ ಚುನಾವಣೆ ನಡೆಸಬೇಕೆಂದು ಕಳೆದ ವರ್ಷ ಸಿಡಬ್ಲ್ಯುಸಿ ಸಭೆಯಲ್ಲಿ ಗಡುವು ಹಾಕಿಕೊಳ್ಳಲಾಗಿತ್ತು. ಆದರೆ, ಒಮ್ಮತದ ಅಭ್ಯರ್ಥಿ ಆಯ್ಕೆ ವಿಫಲವಾದ ಕಾರಣ ಚುನಾವಣೆ ಮತ್ತೆ ಸುಮಾರು ಮೂರು ವಾರ ಮುಂದಕ್ಕೆ ಹೋಗುವ ಸಾಧ್ಯತೆ ಇದೆ.

ಸಾತ್ವಿಕ್–ಚಿರಾಗ್ ಚಾರಿತ್ರಿಕ ಸಾಧನೆ

ಟೋಕಿಯೊ (ಪಿಟಿಐ): ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿ ಚಾರಿತ್ರಿಕ ಸಾಧನೆ ಮಾಡಿದ್ದಾರೆ.

ವಿಶ್ವ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್‌ನಲ್ಲಿ ಪದಕದ ಸಾಧನೆ ಮಾಡಿದ ಭಾರತದ ಮೊದಲ ಜೋಡಿ ಎಂಬ ಶ್ರೇಯ ಅವರದಾಯಿತು.

ಟೋಕಿಯೊ ದಲ್ಲಿ ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಜೋಡಿಯು 22-20, 18-21, 16-21ರಿಂದ ಮಲೇಷ್ಯಾದ ಆ್ಯರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ವಿರುದ್ಧ ಸೋತಿತು.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಪಿಎಸ್‌ಐ ನೇಮಕ ಅಕ್ರಮ: ಪ್ರಥಮ ರ‍್ಯಾಂಕ್ ಅಭ್ಯರ್ಥಿ ಸೆರೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಕ್ಕೆ ಸಂಬಂಧಿಸಿದಂತೆ ಅಕ್ರಮವಾಗಿ ಒಎಂಆರ್ ಉತ್ತರ ಪತ್ರಿಕೆಯಲ್ಲಿ ತಿದ್ದುಪಡಿ ಮಾಡಿಸಿ ಮಹಿಳಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ರಚನಾ ಹನುಮಂತ (25) ಎಂಬ ಆರೋಪಿಯನ್ನು ಸಿಐಡಿ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ. ಪೊಲೀಸರ ಕಣ್ತಪ್ಪಿಸಿ ಓಡಾಡುವುದರ ಜೊತೆಗೆ ಪದೇಪದೆ ವಾಸ್ತವ್ಯ ಬದಲಿಸುತ್ತಿದ್ದ ರಚನಾ ಪತ್ತೆಗೆ ಬೆಂಗಳೂರು, ಕಲಬುರಗಿ ಪೊಲೀಸರು, ಸಿಐಡಿ ಅಧಿಕಾರಿಗಳು ನಡೆಸಿದ್ದರು.

7

ಚನ್ನಪಟ್ಟಣದ ತಿಟ್ಟಮಾರನಹಳ್ಳಿ ಸಮೀಪ ಕಬ್ಬಿನ ಗದ್ದೆ ಮಳೆ ನೀರಿನಿಂದ ಆವೃತವಾಗಿರುವುದು (ಎಡ ಚಿತ್ರ), ಬೆಂಗಳೂರಿನ ಕಗ್ಗಲೀಪುರದ ಸರ್ಕಾರಿ ಆಸ್ಪತ್ರೆಯ ನೆಲಮಹಡಿಗೆ ನೀರು ನುಗ್ಗಿ, ವಾಹನಗಳು ಮುಳುಗಿದ್ದವು

ಕೋಡಿ ಬಿದ್ದ ಕೆರೆಗಳು • ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನೀರು

ಮಳೆಯ ಆರ್ಭಟ: ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿ ಹಾಗೂ ಶನಿವಾರ ಜೋರು ಮಳೆ ಸುರಿದಿದ್ದು, ಹಲವೆಡೆ ಕೆರೆಗಳು ಕೋಡಿ ಬಿದ್ದು ರಸ್ತೆಯಲ್ಲಿ ನೀರು ಹೊಳೆಯಂತೆ ಹರಿಯಿತು. ಮೈಸೂರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯಲ್ಲೂ ನೀರು ಹರಿದು, ಕೆಲ ಗಂಟೆ ವಾಹನಗಳ ಸಂಚಾರವೇ ಬಂದ್ ಆಗಿತ್ತು.

ಶುಕ್ರವಾರ ಸಂಜೆಯಿಂದ ಕೆಲವೆಡೆ ಮಳೆಯ ಸದ್ದು ಜೋರಾಗಿತ್ತು. ಶನಿವಾರವೂ ಬೆಳಿಗ್ಗೆಯಿಂದ ಸಂಜೆಯವರೆಗೆ ಹಲವೆಡೆ ಮಳೆ ಇತ್ತು. ರಾತ್ರಿ ಮಳೆ ಜೋರಾಗಿ ಸುರಿಯಿತು.

ಬೊಮ್ಮನಹಳ್ಳಿ, ರಾಜರಾಜೇಶ್ವರಿ ನಗರ, ಕೆಂಗೇರಿ, ರಾಮೋಹಳ್ಳಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಅಬ್ಬರ ಹೆಚ್ಚಿತ್ತು. ನಾಯಂಡನಹಳ್ಳಿ, ದೀಪಾಂಜಲಿನಗರ, ವಿಜಯನಗರ, ಬಸವೇಶ್ವರನಗರ, ರಾಜಾಜಿನಗರ, ಚಾಮರಾಜಪೇಟೆ, ಯಲಹಂಕ, ವಿದ್ಯಾರಣ್ಯಪುರ, ಶೆಟ್ಟಿಹಳ್ಳಿ, ಬಸವನಗುಡಿ, ಗಿರಿನಗರ, ಬನಶಂಕರಿ, ಹನುಮಂತನಗರ, ಶಾಂತಿನಗರ, ಅಶೋಕ ನಗರ, ವಿವೇಕನಗರ, ಶಾಂತಿನಗರ, ಸಂಪಂಗಿರಾಮನಗರ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ಕಾಲುವೆಗಳು ತುಂಬಿ ರಸ್ತೆ ಮೇಲೆಯೇ ನೀರು ಧಾರಾಕಾರವಾಗಿ ಹರಿಯಿತು. ಅದೇ ನೀರಿನಲ್ಲೇ ವಾಹನಗಳು ಸಂಚರಿಸಿದವು. ಮೆಜೆಸ್ಟಿಕ್, ಗಾಂಧಿನಗರ, ಬಳ್ಳಾರಿರಸ್ತೆ, ಮೈಸೂರುರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಯಿತು.

ಮಳೆ ಸಂದರ್ಭದಲ್ಲಿ ಗಾಳಿಯೂ ಜೋರಾಗಿ ಬೀಸಿದ್ದು, ಕೋರಮಂಗಲ ಬಳಿ ಮರವೊಂದು ಉರುಳಿಬಿದ್ದಿತ್ತು.

ರಾಜರಾಜೇಶ್ವರಿನಗರ ವರದಿ: ಕಗ್ಗಲೀಪುರದ ಸರ್ಕಾರಿ ಆಸ್ಪತ್ರೆಯ ನೆಲಮಹಡಿಗೆ ಭಾರಿ ಪ್ರಮಾಣದ ನೀರು ನುಗ್ಗಿತ್ತು. ₹ 30 ಲಕ್ಷಕ್ಕೂ ಹೆಚ್ಚು ಮೊತ್ತದ ವೈದ್ಯಕೀಯ ಉಪಕರಣಗಳಿಗೆ ಹಾನಿ ಆಗಿರುವುದಾಗಿ ಆಸ್ಪತ್ರೆ ಸಿಬ್ಬಂದಿ ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿದ್ದ ಬಾಣಂತಿಯರು, ಗರ್ಭಿಣಿಯರು, ವೈದ್ಯರು ಹಾಗೂ ಸಿಬ್ಬಂದಿ ರಾತ್ರಿಯಿಡೀ ಮೊದಲನೇ ಮಹಡಿ ಮತ್ತು ಮೆಟ್ಟಿಲುಗಳ ಮೇಲೆ ಆಶ್ರಯ ಪಡೆದಿದ್ದರು. ದ್ವಿಚಕ್ರ ವಾಹನಗಳೂ ನೀರಿನಲ್ಲಿ ಮುಳಗಿದ್ದವು. ಶನಿವಾರ ನಸುಕಿನಲ್ಲಿ ರೋಗಿಗಳನ್ನು ಆಂಬುಲೆನ್ಸ್ ಮೂಲಕ ಸಮೀಪದ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಯಿತು.

ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಿರಂಜನ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

ಊದ್ದಿಪಾಳ್ಯ, ತಲಘಟ್ಟಪುರ ಸೇರಿ ಹಲವು ಕೆರೆಗಳು ಕೋಡಿ ಬಿದ್ದು ಆಸ್ಪತ್ರೆ ಸಮೀಪದ ಸೇತುವೆ ಮೇಲೆ ನೀರು ಹರಿಯಿತು. ನೀರಿನ ರಭಸಕ್ಕೆ ಸೇತುವೆ ಕುಸಿದಿದೆ. ಆಸ್ಪತ್ರೆ ಸಮೀಪದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೂ ನೀರು ನುಗ್ಗಿದ್ದು, ಕಾಲೇಜಿಗೆ ರಜೆ ಘೋಷಣೆ ಮಾಡಲಾಗಿದೆ.

ಬೊಮ್ಮನಹಳ್ಳಿ ವರದಿ: ಬಿಳೇಕಹಳ್ಳಿಯ ಅನುಗ್ರಹ ಬಡಾವಣೆಯಲ್ಲಿ ರಾಜಕಾಲುವೆ ತುಂಬಿ ಹರಿದು ರಸ್ತೆಗಳಲ್ಲಿ ಹರಿಯಿತು. ಮೂರು ಮನೆಗಳಿಗೆ ನೀರು ನುಗ್ಗಿತ್ತು. ಸಲಾರ್ ಪುರಿಯಾ ಅಪಾರ್ಟ್‌ಮೆಂಟ್ ಸಮುಚ್ಚಯದ ನೆಲಮಹಡಿಯಲ್ಲೂ ನೀರು ನಿಂತಿತ್ತು.

‘ಬಿಳೇಕಹಳ್ಳಿ ಹಾಗೂ ಅನುಗ್ರಹ ಬಡಾವಣೆಯ ಹಲವು ಮನೆಗಳಿಗೆ, ಮಳೆ ಬಂದಾಗಲೆಲ್ಲ ನೀರು ನುಗ್ಗುತ್ತಿದೆ. ಇಲ್ಲಿಯ ರಾಜಕಾಲುವೆ ಹೂಳು ತೆಗೆದಿಲ್ಲ. ರಸ್ತೆ ಗುಂಡಿ ಮುಚ್ಚಿಲ್ಲ. ಮಳೆ ಬಂದಾಗ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಭರವಸೆ ನೀಡುತ್ತಾರೆ. ಆದರೆ, ಮಳೆ ನಿಲ್ಲುತ್ತಿದ್ದಂತೆ ಕಾಣೆಯಾಗುತ್ತಾರೆ’ ಎಂದು ಬಿಳೇಕಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥನಾರಾಯಣ ದೂರಿದರು.

ಕೆಂಗೇರಿ ವರದಿ: ಕೆಂಗೇರಿ ಹಾಗೂ ಸುತ್ತಮುತ್ತ ಎರಡು ದಿನಗಳಿಂದ ಜೋರು ಮಳೆ ಆಗುತ್ತಿದೆ. ರಾಮೋಹಳ್ಳಿ ಕೆರೆ ಎರಡು ದಶಕಗಳ ಬಳಿಕ ಭರ್ತಿಯಾಗಿ ಕೋಡಿ ಬಿದ್ದಿದೆ.

ಕೇತೋಹಳ್ಳಿಯ 2 ಕೆರೆ, ಪುನುಗಮಾರನಹಳ್ಳಿ ಕೆರೆ ಹಾಗೂ ಗಣಪತಿಹಳ್ಳಿ ಕೆರೆಗಳು ಭರ್ತಿ ಆಗಿವೆ. ಈ ಕೆರೆಗಳ ಹೆಚ್ಚುವರಿ ನೀರು ಹಾಗೂ ಮಳೆ ನೀರು, ರಾಮೋಹಳ್ಳಿ ಕೆರೆ ಸೇರುತ್ತಿದೆ.

ಬೆಂಗಳೂರು ಹೊರವಲಯ ಕುಂಬಳಗೋಡು ಬಳಿ ಶನಿವಾರ ಕೆರೆ ಕೋಡಿ ನೀರು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ನುಗ್ಗಿದ್ದರಿಂದ ಸಂಚಾರ ಅಸ್ತವ್ಯಸ್ತಗೊಂಡಿತ್ತು —ಪ್ರಜಾವಾಣಿ ಚಿತ್ರ

ಬೆಂಗಳೂರು– ಮೈಸೂರು ಹೆದ್ದಾರಿ ಕಾಮಗಾರಿ ಭರದಿಂದ ಸಾಗುತ್ತಿದ್ದು, ಕೆಲವೇ ತಿಂಗಳಲ್ಲಿ ಪೂರ್ಣಗೊಳ್ಳುವ ಹಂತದಲ್ಲಿದೆ. ಆದರೆ ಶುಕ್ರವಾರ, ಶನಿವಾರ ಸುರಿದ ಮಳೆಗೆ ಕುಂಬಳಗೋಡುವಿನಿಂದ ರಾಮನಗರ ನಡುವೆ ಭಾರಿ ಅದ್ವಾನ ಸೃಷ್ಟಿಯಾಯಿತು. ಈ ಹೆದ್ದಾರಿ ಯೋಜನೆಯ ಸಂಕ್ಷಿಪ್ತ ವಿವರ ಇಲ್ಲಿದೆ

ರಾಷ್ಟ್ರೀಯ ಹೆದ್ದಾರಿ ಉದ್ದ	118 ಕಿ.ಮೀ.
ಒಟ್ಟು ಯೋಜನಾ ವೆಚ್ಚ	₹9,551 ಕೋಟಿ
ಭೂಸ್ವಾಧೀನ ವೆಚ್ಚ, ಪ್ರಗತಿಯಲ್ಲಿರುವ ಕಾಮಗಾರಿ ಮೊತ್ತ	₹8,350 ಕೋಟಿ
ಶುರುವಾಗಿದ್ದು ಯಾವಾಗ	2019
ಮುಗಿಯುವುದು ಯಾವಾಗ	2023
ಎಕ್ಸ್‌ಪ್ರೆಸ್‌ವೇ	6 ಪಥ
ಸರ್ವಿಸ್‌ರಸ್ತೆ	4 ಪಥ
ಕೆಳ ಸೇತುವೆ	49
ಮೇಲು ಸೇತುವೆ	13
ಬೈಪಾಸ್	6
ಎಲಿವೇಟೆಡ್ ಕಾರಿಡಾರ್	8 ಕಿ.ಮೀ
ದೊಡ್ಡ ಸೇತುವೆ	9
ಕಿರು ಸೇತುವೆ	44

ಬಾಲಾಜಿ ಬಡಾವಣೆ: ಶಾಶ್ವತ ಪರಿಹಾರ

ಕೆಂಗೇರಿ: ಅತಿಯಾದ ಮಳೆಯಿಂದ ಬಾಲಾಜಿ ಬಡಾವಣೆಯಲ್ಲಿ ಸಂಭವಿಸುತ್ತಿರುವ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು.

ಹೆಮ್ಮಿಗೆಪುರ ವಾರ್ಡ್ ವ್ಯಾಪ್ತಿಯ ಬಾಲಾಜಿ ಬಡಾವಣೆಯ 25ಕ್ಕೂ ಹೆಚ್ಚು ಮನೆಗಳಿಗೆ ಮಳೆಯ ನೀರು ನುಗ್ಗಿ ಅವಾಂತರ ಸೃಷ್ಟಿಸಿತ್ತು. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಹಾಗೂ ಜಲಮಂಡಳಿ ಅಧಿಕಾರಿಗಳ ಜತೆಗೆ ಬಡಾವಣೆಗೆ ಭೇಟಿ ನೀಡಿದ ಸಚಿವರು, ಸ್ಥಳೀಯರ ಸಮಸ್ಯೆ ಆಲಿಸಿದರು.

ಕಾವೇರಿ ನೀರು ಪೂರೈಕೆಯ ಪೈಪ್ ಅಳವಡಿಕೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ, ಶಾಶ್ವತ ಪರಿಹಾರ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮಳೆಯ ನೀರು ಒಳಚರಂಡಿಗೆ ಸೇರುತ್ತಿರುವುದರಿಂದ ಮ್ಯಾನ್‌ಹೋಲ್ ತುಂಬಿಕೊಳ್ಳುತ್ತಿದೆ. ಶೀಘ್ರದಲ್ಲೇ ಸಮಸ್ಯೆ ಬಗೆಹರಿಸಲಾಗುವುದು ಎಂದು ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷ ಜಯರಾಮ್ ಹೇಳಿದರು.

ಮಳೆ ನಿಂತ ಕೂಡಲೇ ಪರಿಹಾರಕ್ಕೆ ಕ್ರಮ ವಹಿಸಲಾಗುವುದು. ನೀರು ಸರಾಗವಾಗಿ ಹರಿದು ಹೋಗುವಂತೆ ವೈಜ್ಞಾನಿಕ ರೀತಿಯಲ್ಲಿ ಚರಂಡಿ ನಿರ್ಮಾಣಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನಾಗರಿಕರೂ ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು ಎಂದು ಬಿಬಿಎಂಪಿ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್ ಮನವಿ ಮಾಡಿದರು.

ಮುಖಂಡರಾದ ವಾಜರಹಳ್ಳಿ ಶಶಿಕುಮಾರ್, ಶಿವಮಾದಯ್ಯ ಹಾಜರಿದ್ದರು.

ಮಳೆಯಿಂದ ಹಾನಿಗೊಳಗಾಗದ ಬಾಲಾಜಿ ಬಡಾವಣೆಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಭೇಟಿ ನೀಡಿ ಪರಿಶೀಲಿಸಿದರು

MBBS

Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India

UNIVERSITY - Founded in 1920, 102 years old, Smolensk is 380 km west of Moscow, Very high standards of education, strict disciplinary system. **1650** Indian students (**650** Girls) studying, **183** got degree in **2022**, English Medium in all years, Closed type campus system, **8** attached hospitals (**6000** Beds).
MCI SCREENING TEST – Our graduates of **2008** to **2021** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).
SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,80,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students.
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info
DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Bangalore & Manglore: Mrs. Sudha Kamath - 9740622038
Hubli-Dharwad & Belgavi: Dr. Suchita Halli - 9916187559
Gulbarga & Yadgir: Mr. Chowdhry – 9886813741

ಅರ್ಕಾವತಿ ನದಿಗೆ ನಿರ್ಮಿಸಿದ್ದ ಕಿರುಸೇತುವೆ ಪ್ರವಾಹದಲ್ಲಿ ಮುಚ್ಚಿಹೋಗಿರುವುದು

ಉಕ್ಕಿದ ಅರ್ಕಾವತಿ ಮುಳುಗಿದ ಸೇತುವೆಗಳು

ಕನಕಪುರ: ಕಳೆದ ಮೂರು ದಿನಗಳಿಂದ ಜೋರಾಗಿ ಸುರಿಯುತ್ತಿರುವ ಮಳೆಯಿಂದ ಅರ್ಕಾವತಿ ನದಿಯಲ್ಲಿ ಶನಿವಾರ ಬೆಳಿಗ್ಗೆ ಪ್ರವಾಹ ಉಕ್ಕಿ ಹರಿಯುತ್ತಿದ್ದು ನದಿಗೆ ಅಡ್ಡಲಾಗಿ ಕಟ್ಟಿದ್ದ ಕಿರು ಸೇತುವೆಗಳು ನೀರಿನಲ್ಲಿ ಮುಳುಗಿವೆ.

ತಾಲ್ಲೂಕಿನ ಅಳ್ಳಿಮಾರನಹಳ್ಳಿ ಬಳಿ ಅರ್ಕಾವತಿ ನದಿಗೆ ಅಡ್ಡಲಾಗಿ ಕಟ್ಟಿದ್ದ ಕೋನಮಾನಹಳ್ಳಿ ಮತ್ತು ಕುಂತಿಕಲ್ ದೊಡ್ಡಿ ಗ್ರಾಮಗಳ ಸೇತುವೆಗಳ ಮೇಲೆ ಅಪಾರ ನೀರು ಹರಿಯುತ್ತಿದೆ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿವೆ. ಸೇತುವೆಗಳ ಮೇಲೆ ನೀರು ಹರಿಯುತ್ತಿರು ಕಾರಣ ಹಲವು ಗ್ರಾಮಗಳ ನಡುವೆ ಸಂಪರ್ಕ ಕಡಿತಗೊಂಡಿವೆ. ಇನ್ನೂ 10–15 ಕಿ.ಮೀ ಬಳಸಿಕೊಂಡು ರಾಮನಗರ ಮತ್ತು ಕನಕಪುರಕ್ಕೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ. ಕೋನಮಾನಹಳ್ಳಿ ಮತ್ತು ಕುಂತಿಕಲ್ ದೊಡ್ಡಿ ಗ್ರಾಮಗಳ ನಡುವಿನ ಕಿರು ಸೇತುವೆ ಕೂಡ ಜಲಾವೃತ್ತಗೊಂಡಿದೆ. ಮಾವತ್ತೂರು ಕೆರೆ ಕೋಡಿ ಹರಿಯುತ್ತಿದ್ದು ಆಡನಕುಪ್ಪೆ ಮತ್ತು ಬೂದುಗುಪ್ಪೆ ಗ್ರಾಮಗಳ ಕಿರು ಸೇತುವೆ ಸಂಪೂರ್ಣ ಮುಳುಗಿದೆ.

ಅಂತರರಾಷ್ಟ್ರೀಯ ಸಮಾವೇಶದಲ್ಲಿ ಹಂಪನಾ ಉಪನ್ಯಾಸ

ಬೆಂಗಳೂರು: ಬೆಲ್ಜಿಯಂನ ಬ್ರುಸೆಲ್ಸ್ ನಗರದ ಘೆಂಟ್ ವಿಶ್ವವಿದ್ಯಾಲಯದಲ್ಲಿ ‘ಸಾಹಿತ್ಯಿಕ ಪುನರ್ ಸೃಷ್ಟಿ’ ವಿಷಯ ಕುರಿತು ಸೆ.7ರಿಂದ 9ರ ತನಕ ರಾಷ್ಟ್ರೀಯ ವಿದ್ವತ್ ಸಮ್ಮೇಳನ ಹಮ್ಮಿಕೊಳ್ಳಲಾಗಿದ್ದು, ಭಾರತದಿಂದ ಪ್ರಬಂಧ ಮಂಡಿಸಲು ಸಾಹಿತಿ ಡಾ.ಹಂಪ ನಾಗರಾಜಯ್ಯ ಅವರನ್ನು ಆಹ್ವಾನಿಸಲಾಗಿದೆ.

‘ಕನ್ನಡ ಸಾಹಿತ್ಯದಲ್ಲಿ ಪುನರ್ ಸೃಷ್ಟಿ’ ವಿಷಯ ಕುರಿತು ಅವರು ಉಪನ್ಯಾಸ ನೀಡಲಿದ್ದಾರೆ. ಘೆಂಟ್ ವಿವಿಯ ಭಾರತೀಯ ಭಾಷೆಗಳು ಮತ್ತು ಸಂಸ್ಕೃತಿಗಳು ಎಂಬ ಸಾಹಿತ್ಯ ನಿಕಾಯ ಶಾಖೆಯ ಈ ಸಮಾವೇಶ ಹಮ್ಮಿಕೊಂಡಿದೆ. ಅಮೆರಿಕ, ಇಂಗ್ಲೆಂಡ್, ಯೂರೋಪ್ ರಾಷ್ಟ್ರಗಳ ಆಹ್ವಾನಿತ ವಿದ್ವಾಂಸರು ಪ್ರಬಂಧ ಇಲ್ಲಿ ಮಂಡಿಸುವರು. ನಂತರ ಸಂವಾದ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವರುಣನ ಅಬ್ಬರ: ಜನಜೀವನ ತತ್ತರ

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ ಮಳೆಯ ಅಬ್ಬರ ಜೋರಾಗಿದ್ದು, ರಾಮನಗರದಲ್ಲೂ ಉತ್ತಮ ವರ್ಷಧಾರೆಯಾಯಿತು. ಕೆರೆಗಳು ಕೋಡಿ ತುಂಬಿ ಹರಿದಿದ್ದು, ಹೊಲ-ಗದ್ದೆಗಳಿಗೆ ನೀರು ನುಗ್ಗಿತ್ತು.

ಬೆಂಗಳೂರು–ಮೈಸೂರು ಹತ್ತು ಪಥಗಳ ಹೆದ್ದಾರಿಯು ಈಗಷ್ಟೇ ಹಂತಹಂತವಾಗಿ ಸಂಚಾರಕ್ಕೆ ಮುಕ್ತಗೊಳ್ಳುತ್ತಿದ್ದು, ಈ ನಡುವೆ ಅವೈಜ್ಞಾನಿಕ ಅಂಡರ್‌ಪಾಸ್‌ಗಳ ನಿರ್ಮಾಣ ತಲೆನೋವಾಗಿದೆ. ಶುಕ್ರವಾರ ರಾತ್ರಿ ಭಾರಿ ಮಳೆಯಿಂದಾಗಿ ಅಂಡರ್‌ಪಾಸ್‌ಗಳು ಜಲಾವೃತಗೊಂಡು ವಾಹನ ಸವಾರರು ಪರದಾಟ ನಡೆಸಿದರು.

ಬಸವನಪುರ ಬಳಿ ಅಂಡರ್‌ಪಾಸ್‌ನಲ್ಲಿ ನೀರು ನಿಂತು ವಾಹನಗಳ ಸಂಚಾರಕ್ಕೆ ಅಡ್ಡಿಯಾದ ಹಿನ್ನೆಲೆಯಲ್ಲಿ ಪೊಲೀಸರು ಮಾರ್ಗ ಬದಲಾವಣೆ ಮಾಡಿದರು. ಬಿಳಗುಂಬ, ಜಯಪುರ ಸೇರಿದಂತೆ ವಿವಿಧೆಡೆಯೂ ಮಳೆ ನೀರು ನಿಂತಿದ್ದು, ಸುತ್ತಲಿನ ಜಮೀನುಗಳಿಗೂ ನುಗ್ಗಿತ್ತು. ಕುಂಬಳಗೋಡು ಸಮೀಪದ ಕಣಮಿಣಿಕೆ ಗ್ರಾಮದ ಬಳಿ ಹೆದ್ದಾರಿಗೆ ಕೆರೆ ನೀರು ನುಗ್ಗಿದ್ದು, ಇದರಿಂದಾಗಿ ಹಲವು ಗಂಟೆಗಳವರೆಗೆ ಸಂಚಾರ ಅಸ್ತವ್ಯಸ್ತವಾಗಿತ್ತು. ಜೆಸಿಬಿ ಯಂತ್ರಗಳನ್ನು ಬಳಸಿ ನೀರಿನ ಹರಿವಿಗೆ ವ್ಯವಸ್ಥೆ ಮಾಡಲಾಯಿತು.

ಬೆಂಗಳೂರು–ಮೈಸೂರು ಹೆದ್ದಾರಿಯ ಅಲ್ಲಲ್ಲಿ ಸಂಚಾರಕ್ಕೆ ಅಡ್ಡಿಯಾಗಿರುವ ಹಿನ್ನೆಲೆಯಲ್ಲಿ ಮುಂದಿನ ಮೂರು ಕಾಲ ಪ್ರಯಾಣಿಕರು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸುವಂತೆ ಪೊಲೀಸರು ಸಲಹೆ ನೀಡಿದ್ದಾರೆ.

ಮಂಚನಬೆಲೆ ಜಲಾಶಯಕ್ಕೆ ಒಳ ಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಅರ್ಕಾವತಿ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡಲಾಗಿದ್ದು, ಇದರಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ರಾಮನಗರ ವ್ಯಾಪ್ತಿಯ ಸೀರಳ್ಳದಲ್ಲಿ ನೀರಿನ ಹರಿವು ಹೆಚ್ಚಾದ ಕಾರಣಕ್ಕೆ ಟಿಪ್ಪು ನಗರ ಸೇರಿದಂತೆ ವಿವಿಧ ಪ್ರದೇಶಗಳಿಗೆ ನೀರು ನುಗ್ಗಿ ಪರದಾಡುವಂತೆ ಆಯಿತು. ರಾಮನಗರದ ರೈಲ್ವೆ ಅಂಡರ್‌ಪಾಸ್ ಬಳಿ ಸಾಕಷ್ಟು ಪ್ರಮಾಣದಲ್ಲಿ ನೀರು ನಿಂತು ವಾಹನ ಸವಾರರು ಪರದಾಡುವಂತೆ ಆಯಿತು.

ಬಿಡದಿ ಹೋಬಳಿ ಐನೋರಪಾಳ್ಯದ ಬಳಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆ ಮೇಲೆ ಹರಿಯುತ್ತಿದ್ದು ಅಪಾಯದ ಮಟ್ಟ ತಲುಪಿದೆ. ಪರಸನಪಾಳ್ಯ ಗ್ರಾಮದ ಸಮೀಪ ಚಿಕ್ಕಹೊಳೆಯಲ್ಲಿ ಪ್ರವಾಹ ಬಂದ ಪರಿಣಾಮ ಗ್ರಾಮದ ಸಂಪರ್ಕ ರಸ್ತೆ ಕೊಚ್ಚಿ ಹೋಗಿದೆ.

ಮಳೆಗೆ ಜನಜೀವನ ಅಸ್ತವ್ಯಸ್ತ

ಬಿಡದಿ ವರದಿ: ಬಿಡದಿಯ ಪ್ರಮುಖ ಕರೆಗಳಲ್ಲಿ ಒಂದಾದ ನೆಲ್ಲಿಗುಡ್ಡೆ ಕೆರೆ ಕೋಡಿ ಬಿದ್ದು ನಾಲ್ಕು ಅಡಿಗಳಷ್ಟು ನೀರು ಹರಿಯುತ್ತಿರುವುದು ಜನರಲ್ಲಿ ಆತಂಕ ಸೃಷ್ಟಿಸಿದೆ. ಈ ನೀರಿನ ರಭಸಕ್ಕೆ ಬಿಡದಿ ಮತ್ತು ಬಾನಂದೂರು ತಾತ್ಕಾಲಿಕ ಸೇತುವೆ ಸಂಪೂರ್ಣ ಕೊಚ್ಚಿ ಹೋಗಿದೆ. ಇದರಿಂದ ಬಾನಂದೂರು, ಗೊಲ್ಲಹಳ್ಳಿ, ಇಟ್ಟಮಡು, ರಾಮನಹಳ್ಳಿ ನಡುವೆ ಸಂಪರ್ಕ ಕಡಿತಗೊಂಡಿದೆ.

ಬಾನಂದೂರಿನಲ್ಲಿ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ನೀರು ನುಗ್ಗಿ ದೇಗುಲ ಮುಳುಗಡೆಯಾಗಿದ್ದು, ಅರ್ಚಕರ ಮನೆಗೆ ಕೂಡ ನೀರಿನಲ್ಲಿ ಮುಳಗಿದೆ. ಇದೇ ಗ್ರಾಮದ ಬಿಜಿಎಸ್ ಶಾಲೆಗೂ ನೀರು ನುಗ್ಗಿದೆ. ವಾಜರಹಳ್ಳಿ ಮತ್ತು ಕೇತಗಾನಹಳ್ಳಿ ಸಂಪರ್ಕಿಸುವ ಸೇತುವೆ ಸಂಪೂರ್ಣ ಜಲಾವೃತಗೊಂಡಿದ್ದು, ಶಾಸಕ ಎ.ಮಂಜುನಾಥ್ ಅವರು ಮಳೆ ಹಾನಿ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಮನಗರ ತಾಲ್ಲೂಕಿನ ಬಿಳಗುಂಬ ಬಳಿ ಹೆದ್ದಾರಿ ಅಂಡರ್‌ಪಾಸ್‌ನಲ್ಲಿ ಕೆಲವು ಅಡಿಗಳವರೆಗೆ ಮಳೆ ನೀರು ನಿಂತಿದ್ದು, ಆದರಲ್ಲೇ ಬೈಕ್ ಸವಾರರೊಬ್ಬರು ಸಂಚಾರದ ಸರ್ಕಸ್ ನಡೆಸಿದರು

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

ಬಿಡದಿ ಬಳಿಯ ನೆಲ್ಲಿಗುಡ್ಡೆ ಕೆರೆ ಕೋಡಿ ಬಿದ್ದು ನೀರು ಹರಿಯುತ್ತಿರುವುದು

ನಗರದಲ್ಲಿ ಇಂದು

ಪರಿಸರ ಗಣಪ ಕಾರ್ಯಾಗಾರ: ಅಧ್ಯಕ್ಷತೆ: ರವಿಸುಬ್ರಮಣ್ಯ, ಜಿ.ಪಿ.ಒ ಚಂದ್ರು, ಆಯೋಜನೆ: ರಾಜೇಶ್ವರಿ ಜೋಷಿ, ವೆಂಕಟೇಶ್ ಜೋಷಿ, ಸ್ಥಳ: ರಾಮಾಂಜನೇಯ ದೇವಸ್ಥಾನ, ಹನುಮಂತನಗರ (ಗುಡ್ಡ), ಬೆಳಿಗ್ಗೆ 9.30

ಪುಸ್ತಕ ಸ್ಮೃತಿ: ಮಾತಿನ ಮಂಟಪ: ಜಿ.ಬಿ ಹರೀಶ್, ಗಿರಿಜಾ ರೈಕ್ವ, ಆಯೋಜನೆ ಮತ್ತು ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ಕೆಂಗುಂಟೆ ವೃತ್ತ, ಹೊರವರ್ತುಲ ರಸ್ತೆ, ಬೆಳಿಗ್ಗೆ 10

ಮಡಿವಾಳ ಮಾಚಿದೇವರ ನೂತನ ಕಚೇರಿಯ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ಮುಕ್ತಾನಂದ ಸ್ವಾಮೀಜಿ, ಉದ್ಘಾಟನೆ: ವಿ. ಸೋಮಣ್ಣ, ಅತಿಥಿಗಳು: ನಂಜಪ್ಪ, ಅಶ್ವಥ್ ನಾರಾಯಣ, ಅರುಣ್ ಸೋಮಣ್ಣ, ಸವಿತಾ ಕೃಷ್ಣ, ಆಯೋಜನೆ: ಮಡಿವಾಳರ ಜಾಗೃತಿ ವೇದಿಕೆ ಟ್ರಸ್ಟ್, ಸ್ಥಳ: ಸಂಜೀವಿನಿನಗರ, ಮೂಡಲಪಾಳ್ಯ, ಬೆಳಿಗ್ಗೆ 10

ಎಂ.ವಿ. ನಾರಾಯಣರಾವ್ ಅವರಿಗೆ ‘ರಂಗ ನಮನ’: ಅತಿಥಿಗಳು: ವಿಮಲಾ ರಂಗಾಚಾರ್, ಎಂ.ಎಸ್ ಸತ್ಯು, ರಘುವೀರ್ ಹೊಳ್ಳ, ದತ್ತಣ್ಣ, ಶ್ರೀನಿವಾಸ್ ಜಿ.ಕಪ್ಪಣ್ಣ, ಆಯೋಜನೆ: ಎಡಿಎ ಸಂಸ್ಥೆ, ಕಲಾಗಂಗೋತ್ರಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಬೆಳಿಗ್ಗೆ 10



ಎಚ್ ಎನ್. ನಾಗಮೋಹನ ದಾಸ್ ವರದಿ ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಕೈಗೊಂಡಿರುವ 200ನೇ ದಿನದ ಧರಣಿ ಬೆಂಬಲಿಸಿ ರಾಜ್ಯಮಟ್ಟದ ಸಭೆ: ಆಯೋಜನೆ: ಕರ್ನಾಟಕ ಸ್ವಾಭಿಮಾನಿ ಎಸ್‌ಸಿ ಎಸ್‌ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ, ಸ್ಥಳ: ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10.30

ರಾಷ್ಟ್ರೀಯ ಮಟ್ಟದ ವ್ಯಾಪಾರ ಸಮಾವೇಶ ‘ಪ್ರಾರಂಭ’: ಅತಿಥಿಗಳು: ತೇಜಸ್ವಿ ಸೂರ್ಯ, ಮನೋಜ್ ಕುಮಾರ್ ಶಾ, ರಾಮಕುಮಾರ್ ಶೇಷು, ಗಣಪತಿ ರಾವ್, ಆಯೋಜನೆ: ಎಂಎಸ್‌ಎಂ ಆ್ಯಂಡ್ ಸ್ಟಾರ್ಟ್‌ಅಪ್ಸ್ ಫೋರಂ–ಭಾರತ, ಸ್ಥಳ: ವೆಸ್ಟ್ ಫೋರ್ಟ್, ಮಿನರ್ವ ಮಿಲ್ಸ್, ಮಾಗಡಿ ರಸ್ತೆ, ರಾಜಾಜಿನಗರ, ಮಧ್ಯಾಹ್ನ 1.30

ಬಡಗುತಿಟ್ಟು ಯಕ್ಷಗಾನ ಕಾರ್ಯಕ್ರಮ: ಪ್ರಸ್ತುತಿ: ಮಾರುತಿ ಪ್ರತಾಪ ಮತ್ತು ಪಾಂಚಜನ್ಯ, ಆಯೋಜನೆ: ಬಿ.ಇ.ಎಲ್ ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ಬಿ.ಇ.ಎಲ್., ಕುವೆಂಪು ಕಲಾಕ್ಷೇತ್ರ, ಮಧ್ಯಾಹ್ನ 2

ಹಸಿರು ಗಣಪ, ಬೀಜ ಗಣಪ ಅಭಿಯಾನವನ್ನು ಗಿನ್ನಿಸ್ ದಾಖಲೆಗೆ ಸೇರಿಸೋಣ: ಆಯೋಜನೆ: ಬೆಂಗಳೂರು ಗಣೇಶ ಉತ್ಸವ, ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಮಧ್ಯಾಹ್ನ 3

ಶ್ರೀಕೃಷ್ಣ ಗಾರುಡಿ ಯಕ್ಷಗಾನ ಪ್ರದರ್ಶನ: ನಿರ್ದೇಶನ: ಗೌತಮ್, ಹಿಮ್ಮೇಳ ಭಾಗವತರು: ವಿಶ್ವನಾಥ ಶೆಟ್ಟಿ, ಚೆಂಡೆ: ಸುಬ್ರಹ್ಮಣ್ಯ, ಆಯೋಜನೆ: ಕರ್ನಾಟಕ ಮಹಿಳಾ ಯಕ್ಷಗಾನ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 3.30,

ಕನ್ನಡ ನಾಡು ನುಡಿ ನಿತ್ಯೋತ್ಸವ, ಸಣ್ಣ ಕಥೆಗಳ ಕಥಾಗುಚ್ಛ ‘ಮಧುಸಿಂಚನ’ ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಕವಿರಾಜ್, ಅತಿಥಿಗಳು: ಅಣಕು ರಾಮನಾಥ್, ಎಂ.ಜಿ ಪಂಡಿತ್, ಸುಧಾಕರ್ ಕೊಠಾರಿ, ಆಯೋಜನೆ: ಕೆನರಾ ಬ್ಯಾಂಕ್ ಕನ್ನಡ ಸಂಘ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ ವಾಡಿಯಾ ರಸ್ತೆ, ಸಂಜೆ 4

7ನೇ ಸಾರ್ವಜನಿಕ ಶ್ರೀಕೃಷ್ಣ ಜನ್ಮಾಷ್ಟಮಿ ಉತ್ಸವ: ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಬೆಳಿಗ್ಗೆ 9.30, ಶ್ರೀಕೃಷ್ಣ ಸಂಕೀರ್ತನೆ: 10.30, ಶ್ರೀಕೃಷ್ಣ ವೇಷ ಸ್ಪರ್ಧೆ: ಮಧ್ಯಾಹ್ನ 1.30, ರಥೋತ್ಸವ: ಸಂಜೆ 4, ಮೊಸರು ಕುಡಿಕೆ: 5, ಸಾಂಸ್ಕೃತಿಕ ಕಾರ್ಯಕ್ರಮ: ರಾತ್ರಿ 7 ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7, ಆಯೋಜನೆ: ಶ್ರೀಕೃಷ್ಣ ಜನ್ಮಾಷ್ಟಮಿ ಟ್ರಸ್ಟ್, ಸ್ಥಳ: ನರಸಿಂಹರಾಜ ಕಾಲೊನಿ, ಬಸವನಗುಡಿ.

ಪುರಂದರ ಬಹುಮುಖ ಕೃತಿ ನಮನ: ಗಾಯನ: ವೀಣಾ ಮೋಹನ್, ಪಿಟೀಲು: ಆನಂದ್ ವಿಶ್ವನಾಥನ್, ಮೃದಂಗ: ಕೆ.ವಿ. ರವಿಶಂಕರ್ ಶರ್ಮಾ, ಆಯೋಜನೆ: ಪುರಂದರದಾಸ ಮೆಮೋರಿಯಲ್ ಟ್ರಸ್ಟ್, ಸ್ಥಳ: ಪುರಂದರ ಮಂಟಪ, ಇಸ್ರೋ ಲೇಔಟ್, ಸಂಜೆ 6

‘ಟೇಲ್ಸ್ ಫ್ರಮ್ ದಿ ನೈಟ್ ಆಫ್ ಫ್ರೀಡಂ’ ಕಿರು ಚಿತ್ರಗಳ ಪ್ರದರ್ಶನ: ನಿರ್ದೇಶಕರು: ಮಾಯಾ ಚಂದ್ರ, ಆಯೋಜನೆ: ಹೆರಿಟೇಜ್ ಬೇಕು, ಆರ್. ಎಸ್. ಕನೆಕ್ಟ್, ಸ್ಥಳ: ರಂಗಶಂಕರ, ಸಂಜೆ 6.45



ಈದ್ಗಾ ಮೈದಾನ: ಸಾಧಕ–ಬಾಧಕ ಪರಿಗಣಿಸಿ, ಎಚ್ಚರಿಕೆಯಿಂದ ಗಣೇಶೋತ್ಸವಕ್ಕೆ ಅವಕಾಶ ನೀಡಲು ತೀರ್ಮಾನ

ಗಣಪತಿ ಪ್ರತಿಷ್ಠಾಪನೆ: ಮಂಗಳವಾರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣಪತಿ ಮೂರ್ತಿ ಪ್ರತಿಷ್ಠಾಪನೆ ವಿಷಯದಲ್ಲಿ ಮುಂದಿನ ಮೂರು ದಿನಗಳ ಬೆಳವಣಿಗೆ ನೋಡಿಕೊಂಡು ಮಂಗಳವಾರ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಕಂದಾಯ ಸಚಿವ ಆರ್. ಅಶೋಕ ಸ್ಪಷ್ಟಪಡಿಸಿದರು.

‘ವಕ್ಫ್ ಮಂಡಳಿ ಮತ್ತು ಮುಸ್ಲಿಂ ಸಂಘಟನೆಗಳು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ಮಾಹಿತಿ ಇದೆ. ಸರ್ಕಾರದ ವತಿಯಿಂದ ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಕೇವಿಯಟ್ ಸಲ್ಲಿಕೆಯಾಗಿದೆ. ಮಂಗಳವಾರದ ತನಕ ಬೆಳವಣಿಗೆ ಗಮನಿಸುತ್ತೇವೆ’ ಎಂದು ಹೇಳಿದರು.

‘ಗಣಪತಿ ಪ್ರತಿಷ್ಠಾಪನೆಗೆ ಐದಾರು ಸಂಘಟನೆಗಳು ಮುಂದೆ ಬಂದಿವೆ. ಅವುಗಳಲ್ಲಿ ಚಾಮರಾಜಪೇಟೆ ನಾಗರಿಕರ ಒಕ್ಕೂಟ ಮತ್ತು ಮೈದಾನ ಪಕ್ಕದ ರಸ್ತೆ ಬದಿಯಲ್ಲಿ ಐದಾರು ವರ್ಷಗಳಿಂದ ಗಣಪತಿ ಪ್ರತಿಷ್ಠಾಪನೆ ಮಾಡುತ್ತಿರುವ ಸಂಘಟನೆಗಳು ಪ್ರಮುಖವಾದವು. ಒಮ್ಮತದಿಂದ ಕೆಲಸ ಮಾಡುವಂತೆ ಎರಡೂ ಸಂಘಟನೆಗಳಿಗೆ ತಿಳಿಸಿದ್ದೇವೆ’ ಎಂದರು.

‘ಅನುಮತಿ ನೀಡಿದ ಬಳಿಕ ಅಹಿತಕರ ಘಟನೆಗೆ ಅವಕಾಶ ಆಗದಂತೆ ನೋಡಿಕೊಳ್ಳುವುದು ಸಂಘಟನೆಯ ಜವಾಬ್ದಾರಿ. ಆದ್ದರಿಂದ ಯಾರೇ ಮನವಿ ಕೊಟ್ಟರೂ ಸಾಧಕ–ಬಾಧಕ ಪರಿಶೀಲಿಸುತ್ತೇವೆ. ಪೊಲೀಸ್ ಅಧಿಕಾರಿಗಳ ಜತೆ ಚರ್ಚಿಸಿ ಅನುಮತಿ ನೀಡುತ್ತೇವೆ. ಸುಗಮ ಸಂಗೀತ, ಭಕ್ತಿಗೀತೆ ಹೊರತುಪಡಿಸಿ ಬೇರೆ ಗೀತೆಗಳಿಗೆ ಅವಕಾಶ ಇಲ್ಲದಂತೆ ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಜವಾಬ್ದಾರಿಯುತ ಸಂಘಟನೆಗೆ ಎಂದು ಕಂಡು ಬಮದರೆ ಮಾತ್ರ ಅವಕಾಶ ನೀಡಲಾಗುವುದು’ ಎಂದು ಸ್ಪಷ್ಟಪಡಿಸಿದರು.

‘ಒಮ್ಮೆ ಅನುಮತಿ ನೀಡಿದರೆ ಅದು ನಿರಂತರವಾಗಿ, ಸುಲಲಿತವಾಗಿ ನಡೆಯಬೇಕು. ಆದ್ದರಿಂದ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಿದೆ. ಸಭೆಯಲ್ಲಿ ಹಾಜರಾಗಿದ್ದ ಸಂಘಟನೆಗಳು ಸಂಸದ ಪಿ.ಸಿ.ಮೋಹನ್ ಅವರಿಗೆ ಜವಾಬ್ದಾರಿ ನೀಡಿವೆ. ಅವರ ಜತೆ ಚರ್ಚಿಸಿ ಅಂತಿಮ ತೀರ್ಮಾನವನ್ನು ಕಂದಾಯ ಇಲಾಖೆ ಕೈಗೊಳ್ಳಲಿದೆ’ ಎಂದರು.

ಚಾಮರಾಜಪೇಟೆ ಮೈದಾನದಲ್ಲಿ ಆರ್.ಅಶೋಕ ಶನಿವಾರ ಕ್ರಿಕೆಟ್ ಆಟವಾಡಿದರು

ಮುಖ್ಯಮಂತ್ರಿ ಗೃಹ ಕಚೇರಿಯಲ್ಲಿ ಅಧಿಕಾರಿಗಳ ಸಭೆ

ಚಾಮರಾಜಪೇಟೆ ಮೈದಾನಕ್ಕೆ ಭೇಟಿ ನೀಡುವ ಮುನ್ನ ಗಣಪತಿ ಪ್ರತಿಷ್ಠಾಪನೆ ಸಾಧಕ–ಬಾಧಕಗಳ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳ ಜತೆ ಆರ್.ಅಶೋಕ ಸಭೆ ನಡೆಸಿ ಸಾಧಕ–ಬಾಧಕ ಚರ್ಚಿಸಿದರು.

ಮುಖ್ಯಮಂತ್ರಿ ಗೃಹ ಕಚೇರಿಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಕಪಿಲ್ ಮೋಹನ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ನಗರ ಪೊಲೀಸ್ ಕಮಿಷನರ್ ಪ್ರತಾಪರೆಡ್ಡಿ, ಜಂಟಿ ಕಮಿಷನರ್ ಸಂದೀಪ್ ಪಾಟೀಲ, ಗುಪ್ತದಳದ ಎಡಿಜಿಪಿ ಬಿ.ದಯಾನಂದ, ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಸಭೆಯಲ್ಲಿ ಭಾಗವಹಿಸಿದ್ದರು.

ಬಳಿಕ ಮೈದಾನಕ್ಕೆ ಬಂದ ಸಚಿವರು, ನಾಗರಿಕ ಸಂಘಟನೆಗಳ ಜತೆಯೂ ಸಭೆ ನಡೆಸಿದರು. ನಂತರ ಮೈದಾನದಲ್ಲಿ ಆಟವಾಡುತ್ತಿದ್ದ ಯುವಕರ ಜತೆ ಸೇರಿ ಕ್ರಿಕೆಟ್ ಆಡಿದರು.

16 ನದಿಗಳ ಜಲ ಪ್ರೋಕ್ಷಣೆ: ಲಹರಿ ವೇಲು

‘ದೇಶದ 16 ಪವಿತ್ರ ನದಿಗಳ ಜಲವನ್ನು ಮೈದಾನದಲ್ಲಿ ಪ್ರೋಕ್ಷಣೆ ಮಾಡುವ ಮೂಲಕ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುಲಾಗುವುದು. ಪ್ರತಿವರ್ಷ ಮೂರ್ತಿಯನ್ನು ನಮ್ಮ ಲಹರಿ ಸಂಸ್ಥೆಯ ಮೂಲಕ ನೀಡಲಾಗುವುದು’ ಎಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟ ಮತ್ತು ಗಣೇಶೋತ್ಸವ ಸಮಿತಿ ಮುಖ್ಯಸ್ಥ ಲಹರಿ ವೇಲು ಹೇಳಿದರು.

‘ಕೇವಲ ಒಂದು ಧರ್ಮಕ್ಕೆ ಸೀಮಿತವಾಗಿದ್ದ ಪ್ರದೇಶದಲ್ಲಿ ಗಣೇಶೋತ್ಸವಕ್ಕೆ ಅವಕಾಶ ಸಿಗುತ್ತಿರುವುದು ಹೋರಾಟಕ್ಕೆ ಸಂದ ಫಲ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಗಣೇಶ ಪ್ರತಿಷ್ಠಾಪನೆಗೆ ಅವಕಾಶ ನೀಡಬೇಕೆಂದು 11 ವಿವಿಧ ಸಂಘಟನೆಗಳು ಅರ್ಜಿ ಸಲ್ಲಿಸಿದ್ದು, ಅದರಲ್ಲಿ ಸ್ಥಳೀಯ ಎರಡು ಸಂಘಟನೆಗಳಿಗೆ ಅವಕಾಶ ನೀಡುವ ಭರವಸೆಯಿದೆ. ಗಣೇಶೋತ್ಸವದಲ್ಲಿ ಭಾಗವಹಿಸಲು ಪ್ರತಿಯೊಬ್ಬರಿಗೂ ಮುಕ್ತ ಅವಕಾಶವಿದೆ. ಈ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯುವುದಿಲ್ಲ’ ಎಂದು ಭರವಸೆ ವ್ಯಕ್ತಪಡಿಸಿದರು.

‘ಗಣೇಶ ಹಬ್ಬ ಮುಗಿದ ನಂತರ ಮೈದಾನಕ್ಕೆ ಹೆಸರಿಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗುವುದು’ ಎಂದರು.

‘ವಿಘ್ನ ನಿವಾರಿಸಿಕೊಳ್ಳುವ ಶಕ್ತಿ ಗಣಪತಿಗೆ ಇದೆ’

‘ಎಲ್ಲಾ ವಿಘ್ನಗಳನ್ನು ನಿವಾರಿಸಿಕೊಂಡು ಪ್ರತಿಷ್ಠಾಪನೆಗೊಳ್ಳುವ ಶಕ್ತಿ ಗಣಪತಿಗೆ ಇದೆ’ ಎಂದು ಆರ್.ಅಶೋಕ ಹೇಳಿದರು.

ಮಂಗಳವಾರ ಅವಕಾಶ ನೀಡಿದರೆ ಒಂದೇ ದಿನದಲ್ಲಿ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆಗೆ, ‘ಎಲ್ಲವನ್ನೂ ಗಮನಿಸುತ್ತಿರುವ ಗಣಪತಿಗೆ ಸಿದ್ಧತೆ ಮಾಡಿಸುವುದು ದೊಡ್ಡ ವಿಷಯವಾಗದು’ ಎಂದು ಹೇಳಿದರು.

‘ಮುಜರಾಯಿ ಇಲಾಖೆಯ ಆಗಮ ಪಂಡಿತರ ಜತೆಯೂ ಮಾತನಾಡಿದ್ದೇನೆ. ಗಣಪತಿಯನ್ನು ಎಲ್ಲಿ ಪ್ರತಿಷ್ಠಾಪಿಸಬೇಕು, ಎಷ್ಟು ದಿನಗಳ ಬಳಿಕ ವಿಸರ್ಜನೆ ಮಾಡಬೇಕು ಎಂಬುದನ್ನು ಅವರು ತಿಳಿಸಿದ್ದಾರೆ. ಆ.30ರಂದು ಅನುಮತಿ ನೀಡಿದರೆ ಯಾವ ಸಂಘಟನೆಗೆ ನೀಡಬೇಕು ಎಂಬುದನ್ನು ತೀರ್ಮಾನಿಸುತ್ತೇವೆ’ ಎಂದು ಹೇಳಿದರು.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ.: SBC-PCET-YPR-SNL2-2022, ದಿನಾಂಕ: 24-08-2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಪಾರ್ಸೆಲ್ ಕಾರ್ಗೋ ಎಕ್ಸ್‌ಪ್ರೆಸ್ ರೈಲನ್ನು (ಪಿಸಿಇಟಿ) ಹೋಗಿಬರುವ ಪದ್ಧತಿಯ ಮೇರೆಗೆ ಆರು ವರ್ಷಗಳ ಅವಧಿಗಾಗಿ ಗುತ್ತಿಗೆಗೆ ಪಡೆದುಕೊಳ್ಳುವುದು. ಯಶವಂತಪುರ (ವೈಪಿಆರ್) ದಿಂದ ಸನೇಹ್ವಾಲ್ (ಎಸ್‌ಎನ್‌ಎಲ್) ವರೆಗೆ. ಗುತ್ತಿಗೆ ಅವಧಿ: 6 ವರ್ಷಗಳು	ರೂ. 25,16,493/– ಪ್ರತಿಯೊಂದು ಹೋಗಿಬರುವ ಟ್ರಿಪ್‌ನ 15 ವಿಪಿಹೆಚ್ (ಪ್ರತಿಯೊಂದೂ 23 ಟನ್ ಸಿಸಿ) + 01 ಬ್ರೇಕ್‌ವ್ಯಾನ್ (ಪ್ರತಿಯೊಂದೂ 04 ಟನ್‌ಗಳ ಎರಡು ಘಟಕಗಳು) ಇದರ ಕಾಯ್ದಿರಿಸಿದ ದರ.

ಪೂರ್ವ ಬಿಡ್ ಸಭೆಯ ಸಮಯ ಮತ್ತು ದಿನಾಂಕ: 16:00 ಗಂಟೆ, 06.09.2022 ಮತ್ತು ಬಿಡ್‌ಗಳನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕ 15:00 ಗಂಟೆ, 23.09.2022. ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/326/AAD/PRB/SWR/2022-23 ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

S.W.Railways sw_rly SWRRLY southwesternrailway SWRRLY

ಸುದ್ದಿ 2 ನಿಮಿಷ

‘ಆರೋಪಕ್ಕೆ ದಾಖಲೆ ಒದಗಿಸಿ’

ಬೆಂಗಳೂರು: ಕೆಪಿಟಿಸಿಎಲ್ ಕಿರಿಯ ಎಂಜಿನಿಯರ್‌ಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಕ್ಕೆ ಸಿದ್ದರಾಮಯ್ಯ ದಾಖಲೆ ಒದಗಿಸಲಿ ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಸವಾಲು ಹಾಕಿದ್ದಾರೆ.

ಸಿದ್ದರಾಮಯ್ಯ ಅವರ ಆರೋಪಕ್ಕೆ ಪತ್ರಿಕಾ ಹೇಳಿಕೆ ಮೂಲಕ ಶನಿವಾರ ಪ್ರತಿಕ್ರಿಯಿಸಿರುವ ಅವರು, ‘ಕಿರಿಯ ಎಂಜಿನಿಯರ್‌ಗಳ ನೇಮಕಾತಿ ಪ್ರಕ್ರಿಯೆ ಯಲ್ಲಿ ಯಾವ ಅಕ್ರಮವೂ ನಡೆದಿಲ್ಲ. ಸುಳ್ಳನ್ನೇ ಸತ್ಯವನ್ನಾಗಿಸುವ ವಿಫಲ ಯತ್ನವನ್ನು ಮಾಡಬೇಡಿ. ಕತ್ತಲೆಯಲ್ಲಿ ಕಪ್ಪು ಬೆಕ್ಕು ಹುಡುಕುವ ವ್ಯರ್ಥ ಸಾಹಸ ಮಾಡಬೇಡಿ’ ಎಂದಿದ್ದಾರೆ.

ತಾವು ಇಂಧನ ಸಚಿವರಾದ ಬಳಿಕ ಕೆಪಿಟಿಸಿಎಲ್ ನಡೆಸಿದ ನೇಮಕಾತಿ ಪರೀಕ್ಷೆಯಲ್ಲಿ ಉತ್ತೀರ್ಣರಾದ 1,800 ಪವರ್ ಮ್ಯಾನ್ ಹಾಗೂ ಕಿರಿಯ ಸ್ಟೇಷನ್ ಪರಿಚಾರಕರಿಗೆ ಯಾವ ಕಪ್ಪು ಚುಕ್ಕೆಯೂ ಇಲ್ಲದಂತೆ ನೇಮಕಾತಿ ಆದೇಶ ನೀಡಲಾಗಿದೆ. ಕಿರಿಯ ಎಂಜಿನಿಯರ್‌ಗಳ ನೇಮಕಾತಿ ಪರೀಕ್ಷೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಡೆದಿದೆ. ತಾವಾಗಲೀ, ತಮ್ಮ ಕಚೇರಿಯ ಸಿಬ್ಬಂದಿಯಾಗಲಿ ಯಾವುದೇ ಅವ್ಯವಹಾರವನ್ನೂ ನಡೆಸಿಲ್ಲ. ಈ ವಿಚಾರದಲ್ಲಿ ದಾಖಲೆ ಒದಗಿಸಿದರೆ ತನಿಖೆ ಎದುರಿಸಲು ಸಿದ್ಧ ಎಂದು ಹೇಳಿದ್ದಾರೆ.



‘ನೀವು ಮುಖ್ಯಮಂತ್ರಿ ಆಗಿದ್ದಾಗಲೇ ನೇಮಕಾತಿ ಪ್ರಕ್ರಿಯೆಯಲ್ಲಿ ಹೆಚ್ಚು ಅಕ್ರಮ ನಡೆದಿವೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲೂ ಸಾಧ್ಯವಾಗಿರಲಿಲ್ಲ. ನೀವು ಹೊಣೆ ಹೊರಲೇಬೇಕಾದ ವಿಚಾರಗಳನ್ನು ಅನಾವರಣಗೊಳಿಸುತ್ತಾ ಹೋದರೆ ನಿಮ್ಮ ಮೇಲೆ ಭಾರ ಬೀಳಬಹುದು. ಎಷ್ಟೆಂದರೂ ನೀವು ಅರ್ಕಾವತಿ ಅಧಿಪತಿಗಳಲ್ಲವೆ’ ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

‘ಗಣೇಶೋತ್ಸವ: ಧ್ವನಿವರ್ಧಕ ನಿಯಮ ಮೀರಿದರೆ ಕ್ರಮ’

ಬೆಂಗಳೂರು: ‘ಸಾರ್ವಜನಿಕ ಸ್ಥಳಗಳಲ್ಲಿ ಗಣೇಶೋತ್ಸವ ಆಚರಿಸುವವರು ಪೆಂಡಾಲ್‌ಗಳಲ್ಲಿ ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೆ ಮಾತ್ರ ಧ್ವನಿವರ್ಧಕ ಬಳಸಬೇಕು. ಹೈಕೋರ್ಟ್ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ನು ಮೀರಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಎಚ್ಚರಿಸಿದ್ದಾರೆ.

ಗಣೇಶೋತ್ಸವ ಆಚರಣೆ ನಿಯಮಗಳ ಬಗ್ಗೆ ಶನಿವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಸಾರ್ವಜನಿಕ ಸ್ಥಳದಲ್ಲಿ ಗಣಪತಿ ಪ್ರತಿಷ್ಠಾಪನೆಗಾಗಿ ಬಿಬಿಎಂಪಿ ವತಿಯಿಂದ ಏಕ ಗವಾಕ್ಷಿ ವ್ಯವಸ್ಥೆ ಮೂಲಕ ಅನುಮತಿ ಪಡೆಯುವುದು ಕಡ್ಡಾಯ’ ಎಂದಿದ್ದಾರೆ.

‘ವಿವಾದಿತ ಸ್ಥಳ ಹಾಗೂ ಮಾಲೀಕರ ಅನುಮತಿ ಇಲ್ಲದ ಸ್ಥಳಗಳಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಬಾರದು. ಪೆಂಡಾಲ್‌ಗಳಲ್ಲಿ ಬ್ಯಾನರ್, ಫ್ಲೆಕ್ಸ್, ಇತರೆ ಫಲಕಗಳನ್ನು ಅಳವಡಿಸಲು ಬಿಬಿಎಂಪಿ ವತಿಯಿಂದ ಪ್ರತ್ಯೇಕವಾಗಿ ಅನುಮತಿ ಪಡೆಯಬೇಕು’ ಎಂದೂ ಸೂಚಿಸಿದ್ದಾರೆ.

‘ಪೆಂಡಾಲ್ ಸ್ಥಳ ಹಾಗೂ ಸುತ್ತಮುತ್ತ ಕಾನೂನು ಸುವ್ಯಸ್ಥೆಗೆ ಧಕ್ಕೆಯಾಗದಂತೆ ಸಂಘಟಕರು ನೋಡಿಕೊಳ್ಳಬೇಕು. ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಿರಬೇಕು. ಯಾರಾದರೂ ಕಾನೂನು ಉಲ್ಲಂಘಿಸಿದರೆ, 112 ಸಂಖ್ಯೆಗೆ ಕರೆ ಮಾಡಬೇಕು. ಸೂಕ್ಷ್ಮ ಪ್ರದೇಶ ಹಾಗೂ ಪ್ರಾರ್ಥನಾ ಸ್ಥಳಗಳ ಮುಂಭಾಗದಲ್ಲಿ ಸಿಡಿಮದ್ದು, ಪಟಾಕಿ ಹಚ್ಚಬಾರದು. ಗಣೇಶೋತ್ಸವಕ್ಕಾಗಿ ಬಲವಂತದಿಂದ ದೇಣಿಗೆ ಸಂಗ್ರಹಿಸಬಾರದು’ ಎಂದೂ ತಿಳಿಸಿದ್ದಾರೆ.

ಪೋಕ್ಸೊ: ಆರೋಪಿಗಳ ಬಂಧನಕ್ಕೆ ಆಗ್ರಹ

ಬೆಂಗಳೂರು: ಚಿತ್ರದುರ್ಗದ ಮಠದ ವಸತಿ ನಿಲಯದ ಹೆಣ್ಣು ಮಕ್ಕಳ ಮೇಲೆ ಸ್ವಾಮೀಜಿ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಎಲ್ಲ ಆರೋಪಿಗಳನ್ನು ಬಂಧಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ, ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ ಆಗ್ರಹಿಸಿವೆ.

‘ದೌರ್ಜನ್ಯಕ್ಕೊಳಗಾದ ಹೆಣ್ಣು ಮಕ್ಕಳಿಗೆ ಸ್ವಾಮೀಜಿಯೇ ಜೀವ ಬೆದರಿಕೆ ಹಾಕಿರುವ ಆರೋಪವೂ ಇದೆ. ಇನ್ನೂ ಹಲವು ಮಕ್ಕಳ ಮೇಲೆ ಸ್ವಾಮೀಜಿಯಿಂದ ದೌರ್ಜನ್ಯ ನಡೆದಿರಬಹುದು. ಹೆಣ್ಣು ಮಕ್ಕಳನ್ನು ವಸತಿ ನಿಲಯದಿಂದ ಹೊರತಂದು ಆಪ್ತ ಸಮಾಲೋಚನೆ ನಡೆಸಿ, ಸೂಕ್ತ ಕ್ರಮ ಜರುಗಿಸಬೇಕು’ ಎಂದು ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ನಾಗಸಿಂಹ ಜಿ.ರಾವ್ ಅವರು ಮುಖ್ಯಮಂತ್ರಿ, ಗೃಹ ಸಚಿವ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಪ್ರಕರಣದಲ್ಲಿ ಹಲವು ವ್ಯಕ್ತಿಗಳು ಸ್ವಾಮೀಜಿಗೆ ಸಹಕಾರ ನೀಡಿರಬಹುದು. ವಸತಿ ನಿಲಯದ ವಾರ್ಡನ್, ಅಡುಗೆ ಸಿಬ್ಬಂದಿ, ಶಿಕ್ಷಕರನ್ನೂ ವಿಚಾರಣೆಗೆ ಒಳಪಡಿಸಬೇಕು. ಆರೋಪಿಗಳು ಎಷ್ಟೇ ಪ್ರಭಾವಿಗಳಾಗಿದ್ದರೂ ಮಣಿಯದೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸಾವರ್ಕರ್ ಪೀಠ ಸ್ಥಾಪನೆಗೆ ವಿರೋಧ

ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿ.ಡಿ.ಸಾವರ್ಕರ್ ಅಧ್ಯಯನ ಪೀಠ ಸ್ಥಾಪನೆ ನಿರ್ಧಾರಕ್ಕೆ ರಾಜಕೀಯ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ರಾಜಕೀಯ ಒತ್ತಡದಿಂದ ಪೀಠ ಸ್ಥಾಪನೆಗೆ ನಿರ್ಧರಿಸಲಾಗಿದೆ. ರಾಜ್ಯದ ಜನರು ಗಮನಿಸುತ್ತಿದ್ದಾರೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಜನರು ಪ್ರತ್ಯುತ್ತರ ಕೊಡುತ್ತಾರೆ ಎಂದು ಶಾಸಕ ಡಾ.ಜಿ.ಪರಮೇಶ್ವರ ಟೀಕಿಸಿದ್ದಾರೆ.

‘ಗಾಂಧೀಜಿ ಕೊಂದವನ ಪೀಠ ಸ್ಥಾಪಿಸಲು ಹೊರಟವರಿಗೆ ಸಾವರ್ಕರ್ ಪೀಠ ಸ್ಥಾಪಿಸುವುದು ದೊಡ್ಡ ಕೆಲಸವೇನಲ್ಲ. ವಿವಾದ ಮಾಡುವುದೇ ಬಿಜೆಪಿಯವರ ಕೆಲಸವಾಗಿದೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಪ್ರತಿಕ್ರಿಯಿಸಿದ್ದಾರೆ.

ಕೆಂಪಣ್ಣ ಆರೋಪ ಆಧಾರರಹಿತ: ಉತ್ತರ ಕರ್ನಾಟಕ ಗುತ್ತಿಗೆದಾರರ ಸಂಘ ಆರೋಪ

ಬೆಂಗಳೂರು: ‘ಕೆಂಪಣ್ಣನವರಿಗೆ ಜ್ಞಾನವಿಲ್ಲ, ಅವರು ಈ ಕ್ಷೇತ್ರದಲ್ಲಿ ಸಕ್ರಿಯವಾಗಿಲ್ಲ, ಗುತ್ತಿಗೆದಾರರೂ ಅಲ್ಲ. ರಾಜ್ಯ ಸರ್ಕಾರದ ವಿರುದ್ಧ ಶೇ 40ರಷ್ಟು ಕಮಿಷನ್ ಆರೋಪ ಆಧಾರರಹಿತ’ ಎಂದು ಉತ್ತರ ಕರ್ನಾಟಕ ಗುತ್ತಿಗೆದಾರರ ಸಂಘ ಆರೋಪಿಸಿದೆ.

ರಾಜ್ಯದಲ್ಲಿ ಹಿಂದಿನಿಂದಲೂ ಕಮಿಷನ್ ವ್ಯವಹಾರವಿದೆ. ಆದರೆ ಕೆಂಪಣ್ಣನವರು ಆರೋಪಿಸಿರುವಷ್ಟು ಪ್ರಮಾಣದಲ್ಲಿ ಇಲ್ಲ ಎಂದು ಸಂಘದ ಅಧ್ಯಕ್ಷ ಸುಭಾಸ ಬಿ. ಪಾಟೀಲ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯದ ಯಾವುದೇ ಒಂದು ಭಾಗದಲ್ಲಿ ನಡೆದ ಘಟನೆಯನ್ನು ಎಲ್ಲಾ ಗುತ್ತಿಗೆದಾರರಿಗೆ ಅನ್ವಯಿಸುವುದು ತಪ್ಪು. ಶೇ 40ರಷ್ಟು ಕಮಿಷನ್, 18ರಷ್ಟು ಜಿಎಸ್‌ಟಿ ನೀಡಿ ಯಾವುದೇ ಕಾಮಗಾರಿಗಳನ್ನೂ ಮಾಡಲು ಸಾಧ್ಯವಿಲ್ಲ. ನಾವು ಯಾರಿಗೂ ಶೇ 40ರಷ್ಟು ಕಮಿಷನ್ ನೀಡಿ ಕೆಲಸ ಮಾಡಿಲ್ಲ’ ಎಂದರು.

‘ಗುತ್ತಿಗೆದಾರರ ಕ್ಷೇಮನಿಧಿ ಕಮಿಟಿಯಲ್ಲಿ ದಕ್ಷಿಣ ಕರ್ನಾಟಕದ ಪ್ರತಿನಿಧಿಗಳಿದ್ದು, ಉತ್ತರ ಕರ್ನಾಟಕದ ಪದಾಧಿಕಾರಿಗಳನ್ನು ಸದಸ್ಯರನ್ನಾಗಿ ಮಾಡಬೇಕು. ಸರ್ಕಾರಿ ಗುತ್ತಿಗೆದಾರರಿಗೆ ಎಂಡಿಪಿ ಕಾಯ್ದೆಯಿಂದ ವಿನಾಯಿತಿ ನೀಡಬೇಕು. ಬಾಕಿ ಇರುವ ಬಿಲ್ಲುಗಳನ್ನು ಕೂಡಲೇ ಪಾವತಿಸಬೇಕು. ಜಿಎಸ್‌ಟಿಯನ್ನು ಶೇ 12ರಿಂದ 18ಕ್ಕೆ ಹೆಚ್ಚಿಸಿರುವುದು ಹೊರೆಯಾಗಿ ಪರಿಣಮಿಸಿದೆ’ ಎಂದರು.

‘ಸರ್ಕಾರಿ ಕಾಮಗಾರಿಗಳನ್ನು ಪ್ಯಾಕೇಜ್ ಮಾಡಿ ಟೆಂಡರ್ ನೀಡುವ ಪದ್ಧತಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು. ಎನ್‌ಓಸಿಯನ್ನು ₹5 ಕೋಟಿ ಮೇಲ್ಪಟ್ಟ ಕಾಮಗಾರಿಗಳಿಗೆ ಮಾತ್ರ ಅನ್ವಯಿಸಬೇಕು. 200ಕ್ಕೂ ಹೆಚ್ಚು ಅನಧಿಕೃತ ಗುತ್ತಿಗೆದಾರರ ಪರವಾನಗಿಗಳನ್ನು ತನಿಖೆ ನಡೆಸಿ ಕಪ್ಪು ಪಟ್ಟಿಗೆ ಸೇರಿಸಬೇಕು’ ಎಂದು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ರವೀಂದ್ರ ಮಾನೆ, ರಾಮನಾಥ ಶಾನಭಾಗ್, ಕೆ.ಡಬ್ಲ್ಯು. ಕಂಕಾಳೆ, ರಮೇಶ ದುಬಾಶಿಇದ್ದರು.

ಸಂಕ್ಷಿಪ್ತ ಸುದ್ದಿ

ಚೀನಾ ಪರ ವಿಚಾರ ಸಂಕಿರಣ ರದ್ದು

ಬೆಂಗಳೂರು: ಭಾರತ– ಚೀನಾ ಫ್ರೆಂಡ್‌ಶಿಪ್ ಅಸೋಸಿಯೇಷನ್ ನಗರದ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿದ್ದ ‘ಚೀನಾದ ಆಂತರಿಕ ವ್ಯವಹಾರಗಳಲ್ಲಿ ಅಮೆರಿಕದ ಬಂಡವಾಳಶಾಹಿಗಳ ಹಸ್ತಕ್ಷೇಪ’ ಕುರಿತ ವಿಚಾರ ಸಂಕಿರಣದಲ್ಲಿ ಅತಿಥಿಯಾಗಿ ಪಾಲ್ಗೊಳ್ಳಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನಿರಾಕರಿಸಿದ್ದರಿಂದ ಕಾರ್ಯಕ್ರಮವೇ ರದ್ದಾಯಿತು.

ಚೀನಾ ಪರವಾದ ವಿಚಾರ ಸಂಕಿರಣದಲ್ಲಿ ಕಾಂಗ್ರೆಸ್ ನಾಯಕರನ್ನು ಅತಿಥಿಗಳನ್ನಾಗಿ ಆಹ್ವಾನಿಸಿದ್ದ ವಿಚಾರ ಬಿಜೆಪಿ– ಕಾಂಗ್ರೆಸ್ ನಾಯಕರ ನಡುವೆ ಸಾಮಾಜಿಕ ಮಾಧ್ಯಮಗಳಲ್ಲಿ ವಾಗ್ವಾದಕ್ಕೂ ಕಾರಣವಾಯಿತು. ‘ಕಾಂಗ್ರೆಸ್ ಚೀನಾ ಪರವಾಗಿದೆ’ ಎಂದು ಬಿಜೆಪಿ ಮುಖಂಡರು ಆಪಾದಿಸಿದರು.

ಆಫ್ರಿಕನ್ ಹಂದಿ ಜ್ವರ ಪತ್ತೆ

ಹೊಸಕೋಟೆ (ಬೆಂಗಳೂರು ಗ್ರಾಮಾಂತರ): ತಾಲ್ಲೂಕಿನ ದೊಡ್ಡಬೆಳಮಂಗಲ ಗ್ರಾಮದ ಹಂದಿ ಸಾಕಾಣಿಕೆ ಕೇಂದ್ರದ ಹಂದಿಗಳಲ್ಲಿ ಆಫ್ರಿಕನ್ ಹಂದಿ ಜ್ವರ ಪತ್ತೆಯಾಗಿದೆ.

ರಾಜ್ಯದಲ್ಲಿಯೇ ಮೊದಲ ಬಾರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಆಫ್ರಿಕನ್ ಹಂದಿ ಜ್ವರ ಕಾಣಿಸಿಕೊಂಡಿರುವುದು ಸಾಕಾಣಿಕೆದಾರರ ನಿದ್ದೆಗೆಡಿಸಿದೆ. ಮಾಂಸ ಮಾರಾಟದ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ. ನಾಗಾಲ್ಯಾಂಡ್ ಮತ್ತಿತರ ಕಡೆ ಆಫ್ರಿಕನ್ ಹಂದಿ ಜ್ವರದ ಪ್ರಕರಣ ಪತ್ತೆಯಾಗಿತ್ತು. ಅಲ್ಲಿನ ಹಂದಿಗಳನ್ನು ಜಿಲ್ಲೆಗೆ ತಂದಾಗ ಸೋಂಕು ಹರಡಿರುವ ಸಾಧ್ಯತೆ ಇದೆ. ಫಾರಂನಿಂದ ಮತ್ತೊಂದು ಫಾರಂಗೆ ರವಾನೆ ಮಾಡುವಾಗಲೂ ಸೋಂಕು ಹರಡಿರಬಹುದು ಎಂದು ಪಶುವೈದ್ಯರು ಶಂಕಿಸಿದ್ದಾರೆ.

ಪಿಂಚಣಿ ಅದಾಲತ್

ಬೆಂಗಳೂರು: ರಿಚ್‌ಮಂಡ್ ವೃತ್ತದಲ್ಲಿರುವ ರಾಜಾರಾಮ್ ಮೋಹನ್ ರಾಯ್ ರಸ್ತೆಯ ಇಪಿಎಫ್‌ಒ ಪ್ರಾದೇಶಿಕ ಕಚೇರಿಯಲ್ಲಿ ಆಗಸ್ಟ್ 29 ಹಾಗೂ 30ರಂದು ಪಿಂಚಣಿ ಅದಾಲತ್ ಆಯೋಜಿಸಲಾಗಿದೆ.

ಪಿಂಚಣಿದಾರರು, ಫಲಾನುಭವಿಗಳು ಅದಾಲತ್‌ಗೆ ಹಾಜರಾಗಬಹುದು. ಪಿಂಚಣಿದಾರರು ತಮ್ಮ ಕುಂದುಕೊರತೆಗಳನ್ನು ro.bangalore1@epfindia.gov.inಗೂ ಕಳುಹಿಸಬಹುದು ಎಂದು ಪ್ರಕಟಣೆ ಕೋರಿದೆ.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ನೀಡುವ ವಾರ್ಷಿಕ ಪ್ರಶಸ್ತಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅರ್ಜಿ ಆಹ್ವಾನಿಸಿದೆ.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ವಾಸಿಸುವ ಅರ್ಹರು ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆಗಳನ್ನು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸುಧಾರಣಾ ಸಂಸ್ಥೆಗಳ ಸಂಕೀರ್ಣ, ಧರ್ಮಾರಾಂ ಕಾಲೇಜು ಅಂಚೆ, ಹೊಸೂರು ರಸ್ತೆ, ಬೆಂಗಳೂರು–560029 ಈ ವಿಳಾಸಕ್ಕೆ ಸೆ.31ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ ಸಂಖ್ಯೆ: 080 29578688

ಚಿತ್ರಾವಳಿ

ಆರ್ಟ್ ಬೇರು ಫೋರಂ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ‘ಆರು ಬೇರು’ ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಕಲಾ ಪ್ರದರ್ಶನದಲ್ಲಿ ಕಲಾವಿದ ಗಣಪತಿ ಅಗ್ನಿಹೋತ್ರಿ ಅವರು ತಮ್ಮ ಕಲಾಕೃತಿಯ ಬಗ್ಗೆ ವಿವರಿಸುತ್ತಿರುವುದು –ಪ್ರಜಾವಾಣಿ ಚಿತ್ರ

ಪಿಇಎಸ್ ವಿಶ್ವವಿದ್ಯಾಲಯದ ಮೊದಲ ವರ್ಷದ ಕಾನೂನು ತರಗತಿಗಳ ಆರಂಭ ಮತ್ತು ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪುರಸ್ಕಾರ ಕಾರ್ಯಕ್ರಮ ಶನಿವಾರ ನಡೆಯಿತು. ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಕೆ.ಎಸ್. ಶ್ರೀಧರ್, ಉಪಕುಲಪತಿ ಜೆ. ಸೂರ್ಯಪ್ರಸಾದ್, ಹೈಕೋರ್ಟ್ ನ್ಯಾಯಮೂರ್ತಿ ಆರ್. ದೇವದಾಸ್, ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್.ದೊರೆಸ್ವಾಮಿ, ನಿರ್ವಹಣೆ ಮತ್ತು ವಾಣಿಜ್ಯ ವಿಭಾಗದ ಡೀನ್ ಶೈಲಶ್ರೀ ಹರಿದಾಸ್ ಭಾಗವಹಿಸಿದ್ದರು

ನಾರಿಶಕ್ತಿ ಪುರಸ್ಕಾರಕ್ಕೆ ಪ್ರಸ್ತಾವನೆ ಆಹ್ವಾನ

ಬೆಂಗಳೂರು: ಕೇಂದ್ರ ಸರ್ಕಾರದ ‘ನಾರಿಶಕ್ತಿ’ ಪುರಸ್ಕಾರಕ್ಕೆ ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮನವಿ ಮಾಡಿಕೊಂಡಿದೆ.

ಪ್ರಸ್ತಾವನೆ ಸಲ್ಲಿಸಲು ಅ.31 ಕೊನೆಯ ದಿನಾಂಕ. 2023ರ ಮಾರ್ಚ್ 8 ರಂದು ನಡೆಯುವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರ ಪ್ರಶಸ್ತಿ ಪ್ರದಾನ ಮಾಡಲಿದೆ. ಅರ್ಜಿ ನಮೂನೆ ಹಾಗೂ ಪ್ರಶಸ್ತಿಯ ಮಾನದಂಡಗಳು www.narishaktipuraskar.wcd.gov.in ನಲ್ಲಿ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ ಕಾಕೋಳು ಗ್ರಾಮದ 32.05 ಗುಂಟೆ ಕೃಷಿ ಭೂಮಿ ಸರ್ವೆ ನಂ.74/2ಇ (ಹಳೆಯ ಸರ್ವೆ ನಂ.74/2ಬಿ) ಮತ್ತು ಸರ್ವೆ ನಂ.74/2ಡಿ 32.08 ಗುಂಟೆ ಕೃಷಿ ಭೂಮಿಯನ್ನು ನನ್ನ ಕಕ್ಷಿದಾರರು ಕೆಳಕಂಡ ಸ್ವತ್ತುಗಳನ್ನು ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ.

ಸರ್ವೆ ನಂ.74/2ಇ
ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ಕೆ.ಹೆಚ್. ಹನುಂತಮಯ್ಯನವರ ಜಮೀನು, ಉತ್ತರಕ್ಕೆ: ನೀಲಮ್ಮನವರ ಜಮೀನು, ದಕ್ಷಿಣಕ್ಕೆ: ಕೆ.ಹೆಚ್ ಹೊನ್ನೆಗೌಡ ರವರ ಜಮೀನು

ಸರ್ವೆ ನಂ.74/2ಡಿ
ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ಹನುಮಯ್ಯನವರ ಜಮೀನು, ಉತ್ತರಕ್ಕೆ: ಚೌಡಯ್ಯನವರ ಜಮೀನು, ದಕ್ಷಿಣಕ್ಕೆ: ಗೌತಮ್ ಅಗರ್ವಾಲ್ ಜಮೀನು (ಪ್ರಸ್ತುತ ಪ್ರಿಯಾ ಲತಾ ನಾಯರ್ ಮುಂಚೆ ಪ್ರಿಯಾ ಲತಾ ಅಗರ್ವಾಲ್)
ಈ ಸ್ವತ್ತನ್ನು ಮಾಲೀಕರಾದ ಪ್ರಿಯಾಲತಾ ನಾಯರ್ (ಮುಂಚೆ ಪ್ರಿಯಾ ಲತಾ ಅಗರ್ವಾಲ್) ರವರಿಂದ

ಸರ್ವೆ ನಂ.74/13
ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ ಕಾಕೋಳು ಗ್ರಾಮದಲ್ಲಿ 1 ಎಕರೆ 25 ಗುಂಟೆ ಸರ್ವೆ ನಂ.74/13 (ಹಳೆಯ ಸರ್ವೆ ನಂ. 74/2ಸಿ) ಕೃಷಿ ಭೂಮಿ. ಪೂರ್ವಕ್ಕೆ: ಸರ್ಕಾರಿ ರಸ್ತೆ, ಪಶ್ಚಿಮಕ್ಕೆ: ಲಕ್ಕಮ್ಮ ಮತ್ತು ಹನುಮಯ್ಯನವರ ಜಮೀನು, ಉತ್ತರಕ್ಕೆ: ಪ್ರಿಯಾ ಲತಾ ನಾಯರ್ (ಮುಂಚೆ ಪ್ರಿಯಾ ಲತಾ ಅಗರ್ವಾಲ್), ದಕ್ಷಿಣಕ್ಕೆ: ಕೆ.ಹೆಚ್. ಆಶಾರವರ ಜಮೀನು
ಈ ಸ್ವತ್ತನ್ನು ಮಾಲೀಕರಾದ ತನುಷ್ಕ ಅಗರ್ವಾಲ್ ರವರಿಂದ

ಷೆಡ್ಯೂಲ್ ಸ್ವತ್ತಿನ ಮೇಲೆ ಹಿತಾಸಕ್ತಿ ಹೊಂದಿರುವ ಆಕ್ಷೇಪಣೆಗಳು ಪಡೆಯುವ ವ್ಯಕ್ತಿಗಳು ಇದ್ದಲ್ಲಿ ಈ ಪ್ರಕಟಣೆಗೊಂಡ ದಿನಾಂಕದಿಂದ ಏಳು ದಿನಗಳ ಒಳಗಾಗಿ ಲಿಖಿತ ಮೂಲಕ ಅಥವಾ ಖುದ್ದಾಗಿ ದಾಖಲಾತಿಗಳ ಸಮೇತ ಈ ಕೆಳಕಂಡವರನ್ನು ಸಂಪರ್ಕಿಸಿ ತಮ್ಮ ಅಹವಾಲುಗಳನ್ನು ದಾಖಲಿಸತಕ್ಕದ್ದು, ನಿಗದಿತ ಅವಧಿಯ ಒಳಗಾಗಿ ಯಾರಿಂದ ಯಾವುದೇ ತರಹದ ಆಕ್ಷೇಪಣೆಗಳು ಇಲ್ಲವೆಂಬುದಾಗಿ ಪರಿಗಣಿಸಿ ನನ್ನ ಕಕ್ಷಿದಾರರು ಸ್ವತ್ತನ್ನು ನೋಂದಣಿ ಮಾಡಿಸಿಕೊಳ್ಳಲು ಅರ್ಹರಾಗಿರುತ್ತಾರೆ. ಅವಧಿ ಮುಗಿದ ಅಹವಾಲುಗಳನ್ನು ಪರಿಗಣಿಸಲಾಗುವುದಿಲ್ಲ

ಸಹಿ/- ಪ್ರಶಾಂತ್ ವಿಜಯಲಕ್ಷ್ಮಿ ಮತ್ತು ಅಸೋಸಿಯೇಟ್ಸ್, ವಕೀಲರು
ನಂ.162, 1ನೇ ಮಹಡಿ, 2ನೇ ಮುಖ್ಯ ರಸ್ತೆ, ಕಾಂತಿ ಸ್ವೀಟ್ಸ್ ಪಕ್ಕ, ಕಸ್ತೂರಿನಗರ, ಬೆಂಗಳೂರು–560043. ಇಮೇಲ್: prashanthviji.adv@gmail.com
ಸ್ಥಳ: ಬೆಂಗಳೂರು ದಿನಾಂಕ: 28.08.2022

ಸಾರ್ವಜನಿಕ ಪ್ರಕಟಣೆ

ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತು ಮೂಲತಃ ಸಿ.ಎಸ್.ಐ.ರವರಿಗೆ ಸೇರಿದ ಸ್ವತ್ತಾಗಿದ್ದು ಸದರಿ ಸ್ವತ್ತನ್ನು ಗುಬ್ಬಿ ವೆಸ್ಲಿಯನ್ ಮೆಷಿನ್ ಸಂಘ, ಇವರಿಗೆ ಕೊಟ್ಟಿದ್ದು ಸದರಿ ಸ್ವತ್ತಿಗೆ ಕ್ರಿಸ್ಟೋಫರ್ ಬಿನ್ ಶಾಂತಪ್ಪ ಮತ್ತು ಅವರ ವಾರಸುದಾರರದ ಎಡ್ವಿನ್ ಪ್ರಭಾಕರ್, ಫ್ರಾನ್ಸೀಸ್ ಪ್ರಮೀಳ, ಪ್ರೇಮಚಂದ್. ಎಸ್, ನಿರಂಜನ ರವೀಂದ್ರಕುಮಾರ್ ಮತ್ತು ಅವರ ವಂಶಸ್ಥರಿಗೆ ಗುಬ್ಬಿ ಗುಬ್ಬಿ ಭೂನ್ಯಾಯ ಮಂಡಲಿಯು ಷೆಡ್ಯೂಲ್ ಸ್ವತ್ತಿಗೆ ಗೇಣಿದಾರರೆಂದು ತೀರ್ಮಾನವಾಗಿರುತ್ತದೆ. ತದನಂತರ ದಿನಾಂಕ: 28.09.2016ರಂದು ಎಂ.ಕೆ. ಶ್ರೀನಿವಾಸ ಮೂರ್ತಿರವರಿಗೆ ಮೇಲೆ ಹೇಳಿದವರು ಕ್ರಯದ ಕರಾರನ್ನು ಮಾಡಿಕೊಟ್ಟಿರುತ್ತಾರೆ. ಇದಲ್ಲದೇ ಸದರಿ ಸ್ವತ್ತಿನ ಬಗ್ಗೆ ಯಾವುದೇ ರೀತಿಯ ಕ್ರಯದ ಕರಾರು/ಭೋಗ್ಯ/ಆಧಾರ ಅಥವಾ ಇನ್ನಾವುದೇ ರೀತಿಯ ವ್ಯವಹರಿಸಿದ್ದಲ್ಲಿ ಈ ಪ್ರಕಟಣೆಯಾದ ಹತ್ತು (10) ದಿನದೊಳಗೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಲಿಖಿತ ಮೂಲಕ ತಮ್ಮ ತಕರಾರು ಸಲ್ಲಿಸಲು ಅರ್ಹರಿರುತ್ತಾರೆ. ಈ ಹತ್ತು (10) ದಿನಗಳು ಕಳೆದ ನಂತರ ಬಂದ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲವೆಂದು ಈ ಸಾರ್ವಜನಿಕ ಪ್ರಕಟಣೆಯುನ್ನು ನೀಡಲಾಗಿದೆ. ಷೆಡ್ಯೂಲ್ ಸ್ವತ್ತಿನ ವಿವರ: ಗುಬ್ಬಿ ಕಸಬಾ ಗ್ರಾಮದ ಸರ್ವೆ ನಂ. 39/2, ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಮೂಡಲ ಗಿರಿಯಪ್ಪನವರಿಗೆ ಭೂ ನ್ಯಾಯಮಂಡಲಿಯಲ್ಲಿ ತೀರ್ಮಾನವಾಗಿರುವ ಸರ್ವೆ ನಂ. 39/3, ಪಶ್ಚಿಮಕ್ಕೆ: ರಮೇಶ್‌ರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ: ನರಸಪ್ಪನವರ ಸ್ವತ್ತು, ದಕ್ಷಿಣಕ್ಕೆ: ದೇವರಾಜುರವರಿಗೆ ಸೇರಿದ ಸ್ವತ್ತು.
ಸಹಿ/– ಕೆ. ಶಿವನಂಜಪ್ಪ, ವಕೀಲರು, ಡಾ. ಶ್ರೀ ಶಿವಕುಮಾರಸ್ವಾಮಿ ವೃತ್ತದ ಹತ್ತಿರ, ಬಿ.ಹೆಚ್.ರಸ್ತೆ, ತುಮಕೂರು. ಮೊ: 9448659873

ಕ್ಲಾಸಿಫೈಡ್ಸ್ JOBS CORNER

VIDYA SOUDHA GROUP OF INSTITUTIONS
No.9/1, 1st Main Peenya, 1st Stage, Near Basaveshwara Bus Station, Bengaluru – 560 058.
We're hiring

BANGALORE CENTERS
VIDYA SOUDHA PU COLLEGE
Position: Lecturers for Economics, Statistics and English
Qualification: Master degree with B.Ed.
Experience: Minimum 3 years
Position: Librarian
Qualification: Master of Library and Information Science
Experience: Minimum 2 years
VIDYA SOUDHA PUBLIC SCHOOL
Position: Primary Teacher
Qualification: Any degree with B.Ed.
Experience: Minimum 2 years
Position: Accounts Executive & Stores Executive
Qualification: B.Com
Experience: Minimum 3 years

HASSAN CENTERS
VIDYA SOUDHA PUBLIC SCHOOL
Position: Senior Co-Ordinators (CBSE)
Qualification: Post Graduation with B.Ed
Experience: Minimum 3 years as Co-Ordinator
Position: Physical Education Teacher (Female)
Qualification: M.PEd/B.PEd
Experience: Minimum 2 years
Position: Pre-Primary Teachers
Qualification: Degree with NTT/MTT
NON-TEACHING
1 Position: Warden for Ladies Hostel at Hassan (Female)
Qualification: Any degree with minimum 3 years experience
2 Postion: Accounts Executive
Qualification: M.Com/B.Com with minimum 3 years experience
3 Position: Front Office Executive
Qualification: Any degree with minimum 2 years experience

Email: hr@vidyasoudha.edu.in
Last date for application: 05.09.2022
Call: 89715 66659 www.vidyasoudha.edu.in

PUBLIC NOTICE
IN THE COURT OF THE PRINCIPAL FAMILY JUDGE AT BANGALORE
M.C. No. 5687/2021
Between
Sushma M. Petitioner
And
Ajay Dasari Respondent
NOTICE TO THE RESPONDENT
To Ajay Dasari, S/o Prakasam Naidu, aged about 42 years, residing at No. 4-114, NTR Colony, Puttur, Chittoor, Andhra Pradesh -517 583.
Whereas, the above named petitioner has filed the above petition under section 13(1), (i-a) of the Hindu Marriage Act against the respondent for the Decree of Divorce of the marriage and such other relief. You are hereby summoned to appear in person or through a pleader duly instruct before Principal family court, Bengaluru.
Take notice that in default of your appear appearance. On the 21-09-2022 at 11.00 AM. The petition will be heard and determined in your absence placing you as ex-parte.
Issued under my hand and seal of this Court on this 11th day of August 2022.
BY ORDER OF THE COURT
Sd/-
Sherestedar
Family Court, Bengaluru
Advocate for Petitioner
M.L. SANTHOSH, Advocate
No. 984, 12th Main, 1st Cross, HAL 2nd Stage, Indiranagar, Bengaluru-560 008

ಸಾರ್ವಜನಿಕ ಪ್ರಕಟಣೆ

ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತು ಮೂಲತಃ ಸಿ.ಎಸ್.ಐ.ರವರಿಗೆ ಸೇರಿದ ಸ್ವತ್ತಾಗಿದ್ದು ಸದರಿ ಸ್ವತ್ತನ್ನು ಗುಬ್ಬಿ ವೆಸ್ಲಿಯನ್ ಮೆಷಿನ್ ಸಂಘ, ಇವರಿಗೆ ಕೊಟ್ಟಿದ್ದು ಸದರಿ ಸ್ವತ್ತಿಗೆ ಮೂಡಲಗಿರಿಯಪ್ಪ ಬಿನ್ ಚೆನ್ನಿಗಯ್ಯನವರು ಷೆಡ್ಯೂಲ್ ಸ್ವತ್ತಿನ ಬಗ್ಗೆ ಭೂ ಸುಧಾರಣಾ ನ್ಯಾಯಮಂಡಲಿಯಲ್ಲಿ ಅರ್ಜಿ ಸಲ್ಲಿಸಿದ ಪ್ರಕಾರ ಗುಬ್ಬಿ ಭೂನ್ಯಾಯ ಮಂಡಲಿಯು ಷೆಡ್ಯೂಲ್ ಸ್ವತ್ತನ್ನು ಸದರಿಯವರಿಗೆ ಗೇಣಿ ಹಕ್ಕನ್ನು ನೀಡಿರುತ್ತಾರೆ. ಅದರಂತೆ ಖಾತೆ ಮತ್ತು ಪಹಣಿ ಸಹ ಮೂಡಲಗಿರಿಯಪ್ಪನವರ ಹೆಸರಿಗೆ ಆಗಿದ್ದು, ಸದರಿ ಮೂಡಲ ಗಿರಿಯಪ್ಪನವರು ದಿನಾಂಕ: 01.08.2016ರಂದು ಶ್ರೀನಿವಾಸಮೂರ್ತಿ ಬಿನ್ ಕೃಷ್ಣಪ್ಪನವರಿಗೆ ಮಾರಾಟ ಮಾಡಲು ಕ್ರಯದ ಕರಾರು ಪತ್ರ ಮಾಡಿರುವುದು ಸರಿಯಷ್ಟೆ. ಸದರಿ ಸ್ವತ್ತಿನ ಅನುಭವ ಇಂದಿಗೂ ಮೂಡಲಗಿರಿಯಪ್ಪ ಮತ್ತು ಅವರ ವಾರಸುದಾರರ ಅನುಭವದಲ್ಲಿ ರುವುದು ಸರಿಯಷ್ಟೆ. ಸದರಿ ಸ್ವತ್ತಿನ ಬಗ್ಗೆ ಯಾರಾದರೂ ವ್ಯವಹರಿಸಿ ಕ್ರಯದ ಕರಾರು/ಭೋಗ್ಯ/ಆಧಾರ ಅಥವಾ ಇನ್ನಾವುದೇ ರೀತಿಯ ವ್ಯವಹರಿಸಿದ್ದಲ್ಲಿ ಈ ಪ್ರಕಟಣೆ ಆದ ಹತ್ತು (10) ದಿನದೊಳಗೆ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಲಿಖಿತ ಮೂಲಕ ತಮ್ಮ ತಕರಾರು ಸಲ್ಲಿಸಲು ಅರ್ಹರಿರುತ್ತಾರೆ. ಈ ಹತ್ತು (10) ದಿನಗಳು ಕಳೆದ ನಂತರ ಬಂದ ಯಾವುದೇ ತಕರಾರುಗಳನ್ನು ಪರಿಗಣಿಸುವುದಿಲ್ಲವೆಂದು ಈ ಸಾರ್ವಜನಿಕ ಪ್ರಕಟಣೆಯನ್ನು ನೀಡಲಾಗಿದೆ. ಷೆಡ್ಯೂಲ್ ಸ್ವತ್ತಿನ ವಿವರ: ಗುಬ್ಬಿ ಕಸಬಾ ಗ್ರಾಮದ ಸರ್ವೆ ನಂ. 39/3, ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಗಂಗಣ್ಣನವರ ಜಮೀನು, ಪಶ್ಚಿಮಕ್ಕೆ: ಶಾಂತಪ್ಪನವರ ಜಮೀನು, ಉತ್ತರಕ್ಕೆ: ದೇವರಾಜುರವರ ಜಮೀನು, ದಕ್ಷಿಣಕ್ಕೆ: ಕುಮಾರ್‌ರವರಿಗೆ ಸೇರಿದ ಜಮೀನು.
ಸಹಿ/– ಕೆ. ಶಿವನಂಜಪ್ಪ, ವಕೀಲರು, ಡಾ. ಶ್ರೀ ಶಿವಕುಮಾರಸ್ವಾಮಿ ವೃತ್ತದ ಹತ್ತಿರ, ಬಿ.ಹೆಚ್.ರಸ್ತೆ, ತುಮಕೂರು. ಮೊ: 9448659873

PERSONAL

Change of Name

I, AMIT ARAVIND KURHADE, residing at No. 2801/A-1, Gandhinglaj Road, Sankeshwar (R) Belagavi, Karnataka- 591313, have changed my name to AMIT KURHADE, vide affidavit dated 27.08.2022 before Notary Uday Kumar K., Bengaluru. Henceforth I shall be known as AMIT KURHADE only.

I, HARISH VATS, is legal father of HINAL residing at House No. SMQ-226/12, Map Qtrs, Command Hospital, Air Force, Agram Post, Bangalore-560007, have changed my daughter's name from HINAL to HINAL VATS vide affidavit dated 22-07-2022 sworn before Advocate and notary H.K. Gopalagowda Bangalore.

I, GANGADHARAIAH. M S/O MUDDARANGAIAH Residing at Suggatta Village, Hunasamaranahalli Post, Bangalore- 562163. Have Changed My Name From Gangadhar .M to Gangadharaiah .M Vide Affidavit Dated 23.08.2022 Sworn Before Notary Kodi Nagappaya, Bangalore.

I, KIRAN SESHADRI, residing at No. 44, 31st main road, ITI Layout, J.P.Nagar 1st phase, Bangalore- 560078, have changed my name to KIRAN BAILEY, vide affidavit dated 27.08.2022 before Notary Jayalingayya Mudenoormath, Bangalore. Henceforth I shall be called KIRAN BAILEY only.

14825978X HAV/MT SK Sahnawaj 2ATC DEPO COY Daughter's name Records SUHANA instead of SUHANA KHATUN, Notary BM Chandrashekar, Bangalore.

14874157M SEP/MT Vikram Singh 2ATC Father's name Records RAJVIR instead of RAJVIR SINGH, Notary BM Chandrashekar, Bangalore.

MORE Classifieds IN SUPPLEMENT

BEAUTY & HEALTH

Skin Care

ಕರ್ನಾಟಕದಲ್ಲೇ ಪ್ರಪ್ರಥಮ ಬಾರಿ ತುಮಕೂರು ಮತ್ತು ಬೆಂಗಳೂರಿನಲ್ಲಿ ಪ್ರಾರಂಭವಾಗಿದೆ ವಿಶ್ವವಿಖ್ಯಾತ FRAXEL DUAL LASER (ಫ್ರಾಕ್ಸೆಲ್ ಡ್ಯುಯಲ್ ಲೇಸರ್) ಚಿಕಿತ್ಸೆ ತುಮಕೂರಿನ ಕಾಸ್ಮೊ ಕ್ಲಿನಿಕ್‌ನಲ್ಲಿ ಲಭ್ಯ
ಈ ಮಿಷನ್‌ನಿಂದ ಲಭ್ಯವಾಗುವ ಚಿಕಿತ್ಸೆಗಳು
ಕಪ್ಪು ಕಲೆ, ಕುಳಿಬಿದ್ದ ಕಲೆ, ಉಬ್ಬಿದ ಕಲೆ, ಶಸ್ತ್ರ ಚಿಕಿತ್ಸೆಗಳಿಂದ ಆಗಿರುವ ಕಲೆಗಳ ನಿವಾರಣೆ ತ್ವಚೆಯ ದೃಢತೆ, ಮುಖದ ಸುಕ್ಕು ಮತ್ತು ನೆರಿಗೆಗಳಿಗೆ ಸ್ಟ್ರೆಚ್ ಮಾರ್ಕ್‌ಗಳಿಗೆ ತ್ವರಿತಗತಿಯಲ್ಲಿ ನಿವಾರಣೆಯಾಗುತ್ತದೆ.
ಡಾ. ಸತ್ಯಾನಂದ
ಕಾಸ್ಮೊ ಸ್ಕಿನ್ ಕ್ಲಿನಿಕ್
1ನೇ 'ಎ' ಕ್ರಾಸ್, ಸಿದ್ಧಗಂಗಾ ಬಡಾವಣೆ, ತುಮಕೂರು
Mobile : 94482 14441
Ph : 0816-2270061

ನಗರದ ಲೀಲಾ ಪ್ಯಾಲೇಸ್‌ನಲ್ಲಿ ಶನಿವಾರ ನಡೆದ 6ನೇ ಬೆಂಗಳೂರು ಕಾವ್ಯ ಉತ್ಸವದಲ್ಲಿ ಲೇಖಕಿ ಹಾಗೂ ನಟಿ ದೀಪ್ತಿ ನವಲ್ ಅವರೊಂದಿಗೆ ಶಾಂತನು ರಾಯ್ ಚೌಧರಿ ಅವರು ಸಂವಾದ ನಡೆಸಿದರು (ಎಡ ಚಿತ್ರ). ಮಣಿಪುರದ ಮಾನವಹಕ್ಕು ಹೋರಾಟಗಾರ್ತಿ ಇರೋಮ್ ಚಾನು ಶರ್ಮಿಳಾ ಅವರು ಪತಿ ಡೆಸ್ಮಂಡ್ ಅಂಥೋನಿ ಬೆಲ್ಲರಿ ಮತ್ತು ಇಬ್ಬರು ಮಕ್ಕಳೊಂದಿಗೆ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ.

ಸಾಹಿತ್ಯಾಸಕ್ತರ ಮನಸೆಳೆದ ಕವಿತೆಗಳು, ರಂಜಿಸಿದ ಸಂಗೀತ

‘ಕವನೋತ್ಸವ’: ಬಹುಭಾಷಾ ಸೊಗಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ಆರಂಭವಾದ ‘ಬೆಂಗಳೂರು ಕವನೋತ್ಸವ’ದಲ್ಲಿ ಮೊದಲ ದಿನ ಬಹುಭಾಷಾ ಸೊಗಡು ಮೇಳೈಸಿತು. ಕನ್ನಡ, ಹಿಂದಿ, ತಮಿಳು, ಬೆಂಗಾಲಿ ಹಾಗೂ ಇಂಗ್ಲಿಷ್ ಭಾಷಾ ಕವಿಗಳು ಸಮಕಾಲೀನ ಸಮಸ್ಯೆ ಹಾಗೂ ಸವಾಲುಗಳನ್ನು ಕವನದ ಮೂಲಕ ಅಭಿವ್ಯಕ್ತಗೊಳಿಸಿದರು. ವೇದಿಕೆಯಲ್ಲಿ ಕಾವ್ಯದ ರಸಧಾರೆ ಹರಿಯಿತು. ಇಡೀ ಕಾರ್ಯಕ್ರಮಕ್ಕೆ ಸಂಗೀತಾಸಕ್ತರು ತಲೆದೂಗಿದರು.

ಇಲ್ಲಿನ ಲೀಲಾ ಪ್ಯಾಲೇಸ್‌ನಲ್ಲಿ ‘ಆಟಾ ಗಲಾಟ’ದ 6ನೇ ಆವೃತ್ತಿಯ ಉತ್ಸವಕ್ಕೆ ಸಿನಿಮಾ ನಟಿ, ಲೇಖಕಿ ದೀಪ್ತಿ ನವಲ್ ಚಾಲನೆ ನೀಡಿದರು.

ಕೋವಿಡ್ ಸಾಂಕ್ರಾಮಿಕ ರೋಗ ಭೀತಿಯಿಂದ ಎರಡು ವರ್ಷ ಆನ್‌ಲೈನ್‌ನಲ್ಲಿ ಕವನ ಉತ್ಸವ ನಡೆದಿತ್ತು. ಈ ಬಾರಿ ಭೌತಿಕವಾಗಿ ನಡೆದ ಕಾರ್ಯಕ್ರಮಕ್ಕೆ ಹಲವರು ಸಾಕ್ಷಿಯಾದರು.

ಕವಿಗಳು, ಕಲಾವಿದರು ಹಾಗೂ ಸಾಹಿತ್ಯಾಸಕ್ತರಿಂದ ಸಭಾಂಗಣ ಭರ್ತಿಗೊಂಡಿತ್ತು. ಜ್ಯೋತಿ ಸೇವಾ ಸದನ ಮಕ್ಕಳ ಹಾಡಿನಿಂದ ಆರಂಭವಾದ ಉತ್ಸವ, ದಿನವಿಡೀ ಹಲವು ವಿಚಾರಗಳ ಮಂಥನದ ಮೂಲಕ ಕಣ್ತೆರೆಸಿತು.

ದೀಪ್ತಿ ನವಲ್ ಮಾತನಾಡಿ, ‘ನಾನು ಸಿನಿಮಾ ನಟಿಯಾದರೂ ಕಾವ್ಯದ ಬಗ್ಗೆ ಆಸಕ್ತಿ ಬೆಳೆದು ಹಲವು ಕವನ ಸಂಕಲನಗಳನ್ನು ಹೊರತಂದಿರುವೆ. ತಾಯಿ ಪ್ರೇರಣೆಯಿಂದ ಬರವಣಿಗೆ ಸಾಧ್ಯಯಾಯಿತು’ ಎಂದರು.

‘ನಾನು ಮನಃಶಾಸ್ತ್ರ ವಿಭಾಗದಲ್ಲಿ ಪದವಿ ಪಡೆದಿದ್ದು, ಸಿನಿಮಾವೊಂದರಲ್ಲಿ ಮಾನಸಿಕ ಖಿನ್ನತೆಗೆ ಒಳಗಾದ ಮಹಿಳೆಯ ಪಾತ್ರದಲ್ಲಿ ನಟಿಸುವ ಅವಕಾಶ ಲಭಿಸಿತು. ಪಾತ್ರವು ನೈಜವಾಗಿ ಬರಲೆಂದು ರಾಂಚಿಯ ಮಾನಸಿಕ ರೋಗಿಗಳ ಆಸ್ಪತ್ರೆಯಲ್ಲಿ 23 ದಿನ ವಾಸ್ತವ್ಯ ಮಾಡಿದ್ದೆ. ಅದು ನನ್ನ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಅಲ್ಲಿನ ಅನುಭವಗಳೂ ಕವನಗಳಾಗಿವೆ. ಅಲ್ಲಿಂದ ಬಂದಮೇಲೆ ಹೊರಗಿನ ಪ್ರಪಂಚಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು’ ಎಂದು ನೆನಪಿಸಿಕೊಂಡರು.

‘ನ್ಯೂಯಾರ್ಕ್‌ನಲ್ಲಿ ಎಲ್ಲರೂ ಇಂಗ್ಲಿಷ್‌ನಲ್ಲಿ ಕವಿತೆ ಬರೆಯುತ್ತಿದ್ದರೆ, ನಾನು ಹಿಂದಿ ಹಾಗೂ ಉರ್ದುವಿನಲ್ಲಿ ಕವನ ರಚಿಸುತ್ತಿದ್ದೆ. ಎರಡೂ ಭಾಷೆಗಳಲ್ಲೂ ನನಗೆ ಹಿಡಿತವಿದೆ’ ಎಂದು ಹೇಳಿದರು.

ಇದೇ ವೇಳೆ ನಟಿ ಸ್ವರಚಿತ ಕವನ ವಾಚಿಸಿದರು. ಸಿನಿಮಾ ವಿಮರ್ಶಕ ಶಂತನು ರಾಯ್ ಚೌಧರಿ ಸಂದರ್ಶಿಸಿದರು.

ನೃತ್ಯದ ಕುರಿತು ನಡೆದ ಗೋಷ್ಠಿಯಲ್ಲಿ ಮೈಸೂರಿನ ಅಖಿಲಾ ಕೃಷ್ಣಮೂರ್ತಿ, ಚೆನ್ನೈನ ಅಪೂರ್ವಾ, ಬೆಂಗಳೂರಿನ ನವ್ಯಾ ಹಾಗೂ ದೆಹಲಿಯ ಪೂರ್ವಾ ವಿಚಾರ ಮಂಡಿಸಿದರು.

‘ನೃತ್ಯಕ್ಕೆ ಹಾಡುಗಳ ಆಯ್ಕೆಯೂ ಮುಖ್ಯ. ಕಲೆಯನ್ನು ಸ್ವತಃ ಅನುಭವಿಸಿ ಪ್ರದರ್ಶಿಸಬೇಕು. ವೈವಿಧ್ಯ ಅಗತ್ಯ, ಚಲನಶೀಲತೆ ಇರಬೇಕು’ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ತಮಿಳಿನ ಯುವ ಕವಯಿತ್ರಿ ಮೀನಾ ಕಂದಸ್ವಾಮಿ ನಿರ್ಭಯ ಪ್ರಕರಣದ ಕುರಿತು ಬರೆದಿದ್ದ ಕವಿತೆಯು ಘಟನೆಯ ಭೀಕರತೆ ವಿವರಿಸಿತು.

‘ಸಮಕಾಲೀನ ಸಮಸ್ಯೆಗಳಿಗೆ ಸ್ಪಂದನ’

ಲೇಖಕಿ ಪ್ರತಿಭಾ ನಂದಕುಮಾರ್ ಅವರ ‘ಅವನ ಮುಖ ಮರೆತು ಹೋಗಿದೆ’ ಕೃತಿಯನ್ನು ಸಾಹಿತಿ ರಾಜೇಂದ್ರ ಪ್ರಸಾದ್ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿ, ’ಪ್ರತಿಭಾ ಅವರು ಯುವ ಸಾಹಿತಿಗಳಿಗೆ ಪ್ರೇರಣೆ. ಕಾವ್ಯದ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಳಪು ನೀಡುತ್ತಿದ್ದಾರೆ’ ಎಂದು ಬಣ್ಣಿಸಿದರು.

ಪ್ರತಿಭಾ ಮಾತನಾಡಿ, ’ಇಂದಿನ ಯುವಕವಿಗಳ ಬಗ್ಗೆ ನನಗೆ ಅತಿಯಾದ ಕುತೂಹಲವಿದೆ. ಅವರು ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ರೀತಿ ಭಿನ್ನವಾಗಿದೆ‘ ಎಂದರು.

ಕನ್ನಡಗೋಷ್ಠಿಯಲ್ಲಿ ಸೀರೆ ಒಣಗಿಸುವುದು, ಅಕ್ಕನ ಬೆರಳು, ಟ್ರಯಲ್ ರೂಂನ ಅಪ್ಸರೆಯರು, ಅಪ್ಪುಗೆಯ ಧ್ಯಾನದಲ್ಲಿ... ಶೀರ್ಷಿಕೆಯ ಕವಿತೆಗಳನ್ನು ಭುವನಾ ಹಿರೇಮಠ್ ಹಾಗೂ ರಾಜು ಹೆಗಡೆ ವಾಚಿಸಿದರು.

> **ಬದುಕಿನ ಸಂತೋಷಕ್ಕೆ ಸಾಹಿತ್ಯ ರಚಿಸಬೇಕು. ಸಾಹಿತ್ಯದಿಂದ ಬದಲಾವಣೆ ಸಾಧ್ಯವಿದೆ.**
> **ದೀಪ್ತಿ ನವಲ್,** ನಟಿ

ಲಕ್ಷ್ಮೀನಾರಾಯಣ್ ಮರಳಿ ಬಿಜೆಪಿಗೆ

ತುರುವೇಕೆರೆ: ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷ ಎಂ.ಡಿ.ಲಕ್ಷ್ಮೀನಾರಾಯಣ್ ಶೀಘ್ರ ಕಾಂಗ್ರೆಸ್ ತೊರೆದು ಮರಳಿ ಬಿಜೆಪಿ ಸೇರುವುದಾಗಿ ಹೇಳಿದ್ದಾರೆ.

‘ತಾಲ್ಲೂಕಿನ ಮತದಾರರು, ಬೆಂಬಲಿಗರು ಹಾಗೂ ಹಿಂದುಳಿದ ವರ್ಗಗಳ ಪದಾಧಿಕಾರಿಗಳ ಒತ್ತಾಸೆಯ ಮೇರೆಗೆ ಬಿಜೆಪಿಗೆ ಸೇರುತ್ತೇನೆ’ ಎಂದು ಅವರು ಘೋಷಿಸಿದ್ದಾರೆ.

ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಬಿಡುವುದು ನಿಶ್ಚಿತ. ಬಿಜೆಪಿ ಪ್ರಮುಖರಿಂದ ಆಹ್ವಾನ ಬಂದಿದ್ದು, ವಾರದೊಳಗೆ ಕಾಂಗ್ರೆಸ್‌ಗೆ ರಾಜೀನಾಮೆ ಕೊಡುವು ದು ಖಚಿತ’ ಎಂದರು.

‘ಕಾಂಗ್ರೆಸ್ ಸಂಸ್ಕೃತಿ ಹೀನ ಪಕ್ಷ. ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕಿಂಚಿತ್ತೂ ಗೌರವವಿಲ್ಲ’ ಎಂದರು.

ಮತ್ತೆ ನಾವೇ ಅಧಿಕಾರಕ್ಕೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ ಕ್ಷೇತ್ರದ ನಡೆದ ಕಾರ್ಯಕ್ರಮದಲ್ಲಿ ಯಡಿಯೂರಪ್ಪ ಅವರು ಮಹಿಳೆಯರಿಗೆ ಬಾಗಿನ ನೀಡಿದರು.

ಕೆ.ಆರ್.ಪುರ: ‘140ಕ್ಕೂ ಹೆಚ್ಚು ಸೀಟ್ ಗೆಲ್ಲುವ ಮೂಲಕ ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಮಹಿಳಾ ಮುಖಂಡರಿಗೆ ಗೌರಿ ಗಣೇಶ ಹಬ್ಬದ ಪ್ರಯುಕ್ತ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ನೇತೃತ್ವದಲ್ಲಿ ಮಹಿಳೆಯರಿಗೆ ಸೀರೆ, ಅರಿಶಿನ, ಕುಂಕುಮ, ಬಳೆಯೊಂದಿಗೆ ಬಾಗಿನ ಅರ್ಪಿಸಿ ಮಾತನಾಡಿದರು.

ರಾಜ್ಯದಲ್ಲಿ ಸಾಮೂಹಿಕ ನಾಯಕತ್ವದಲ್ಲಿ ಎಲ್ಲರೂ ಒಟ್ಟಾಗಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಪಕ್ಷ ಬಲವರ್ಧನೆಗೆ ಶ್ರಮಿಸಲಾಗುವುದು ಎಂದರು.

‘ಚುನಾವಣೆ ಹಿನ್ನೆಲೆಯಲ್ಲಿ ಮೋದಿ ಅವರಿಗೆ ಆಗಾಗ ರಾಜ್ಯಕ್ಕೆ ಬರುವಂತೆ ಮನವಿ ಮಾಡಿದ್ದೇನೆ. ತಿಂಗಳಿಗೊಮ್ಮೆ ಯಾವುದಾದರೂ ಕಾರ್ಯಕ್ರಮಕ್ಕೆ ಬರುವುದಾಗಿ ಒಪ್ಪಿಕೊಂಡಿದ್ದಾರೆ. ಮುಂದಿನ ತಿಂಗಳು ಮಂಗಳೂರಿನಲ್ಲಿ ನಡೆಯುವ ಬೃಹತ್ ಸಮಾವೇಶಕ್ಕೆ ನರೇಂದ್ರ ಮೋದಿಗೆ ಆಹ್ವಾನ ನೀಡಿದ್ದೇವೆ. ಸಮಾವೇಶಕ್ಕೆ ಲಕ್ಷಾಂತರ ಜನರು ಪಾಲ್ಗೊಳ್ಳಲಿದ್ದಾರೆ. ಸಮಾವೇಶ ಮಾಡಲು ರಾಜ್ಯದಾದ್ಯಂತ ಪ್ರವಾಸ ಮಾಡಲಿದ್ದೇನೆ' ಎಂದು ಅವರು ಹೇಳಿದರು.

ಶೇ 40 ಕಮಿಷನ್ ಆರೋಪ ಸುಳ್ಳು, ಕಮಿಷನ್ ಬಗ್ಗೆ ಮೂರ್ಖರು ಮಾತನಾಡುತ್ತಾರೆ. ಯಾರೋ ಒಬ್ಬನಿಗೆ ಹೇಳಿಕೊಟ್ಟು ಸುಳ್ಳು ಆರೋಪ ಮಾಡಿಸುತ್ತಿದ್ದಾರೆ ಎಂದು ಹೇಳಿದರು.

ಸಚಿವ ಬೈರತಿ ಬಸವರಾಜ ಮಾತನಾಡಿ, ಬಾಗಿನ ಕಾರ್ಯಕ್ರಮ ಚುನಾವಣೆಗಾಗಿ ಮಾಡಿರುವ ಕಾರ್ಯಕ್ರಮ ಅಲ್ಲ ಎಂದರು.

ರಾಜ್ಯ ಬಿಜೆಪಿ ಮಹಿಳಾ ಅಧ್ಯಕ್ಷೆ ಗೀತಾ ವಿವೇಕಾನಂದ, ನಗರ ಉತ್ತರ ಜಿಲ್ಲಾ ಅಧ್ಯಕ್ಷೆ ಆಶಾರಾವ್, ಕೆ.ಆರ್.ಪುರ ಮಹಿಳಾ ಅಧ್ಯಕ್ಷೆ ಮಂಜುಳಾದೇವಿ, ಮಾಜಿ ಪಾಲಿಕೆ ಸದಸ್ಯರಾದ ಜಯಪ್ರಕಾಶ್, ಶ್ರೀಕಾಂತ್, ಎಸ್.ಜಿ.ನಾಗರಾಜ್, ಸುರೇಶ್, ಅಂತೋಣಿ ಸ್ವಾಮಿ, ಮೇಡಹಳ್ಳಿ ಕೃಷ್ಣಮೂರ್ತಿ ಇದ್ದರು.

ಆಧುನಿಕ ಜೀವನಶೈಲಿ: ಪ್ರಾಸ್ಟೇಟ್ ಕ್ಯಾನ್ಸರ್ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಧುನಿಕ ಜೀವನ ವಿಧಾನ, ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ವಾಯುಮಾಲಿನ್ಯದಿಂದಾಗಿ ನಗರದಲ್ಲಿ ಪ್ರಾಸ್ಟೇಟ್ (ಮೂತ್ರನಾಳ) ಕ್ಯಾನ್ಸರ್ ಹೆಚ್ಚಳವಾಗುತ್ತಿದೆ’ ಎಂದು ಕ್ಯಾನ್ಸರ್ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಗ್ಲೋಬಲ್ ಹೆಲ್ತ್ ಅಕಾಡೆಮಿ (ಜಿಎಚ್‌ಎ) ಸಹಯೋಗದಲ್ಲಿ ಸೊಸೈಟಿ ಆಫ್ ಜೆನಿಟೋರಿನರಿ ಆಂಕಾಲಾಜಿಸ್ಟ್ (ಎಸ್‌ಒಜಿಒ) ಆಯೋಜಿಸಿದ್ದ ಕ್ಯಾನ್ಸರ್ ತಜ್ಞರ ‘ಸೊಗೊಕಾನ್-2022’ ಸಮ್ಮೇಳನಕ್ಕೆ ನಗರದಲ್ಲಿ ಶನಿವಾರ ಚಾಲನೆ ದೊರೆಯಿತು.

ಎಚ್.ಸಿ.ಜಿ. ಕ್ಯಾನ್ಸರ್ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ರಘುನಾಥ್ ಎಸ್.ಕೆ., ‘ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ, ನಗರ ಪ್ರದೇಶದಲ್ಲಿ ಪ್ರಾಸ್ಟೇಟ್ ಕ್ಯಾನ್ಸರ್ ವೇಗವಾಗಿ ಹೆಚ್ಚಳವಾಗುತ್ತಿದೆ. ಪುರುಷರಲ್ಲಿ ಪತ್ತೆಯಾಗುವ ಕ್ಯಾನ್ಸರ್‌ಗಳಲ್ಲಿ ಇದು ಎರಡನೆಯ ಸ್ಥಾನದಲ್ಲಿದೆ. ಬಹುತೇಕ ಕ್ಯಾನ್ಸರ್ ಪೀಡಿತರು ರೋಗ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ಬರುತ್ತಾರೆ. ಕ್ಯಾನ್ಸರ್ ಇರುವುದು ಪ್ರಾಥಮಿಕ ಹಂತದಲ್ಲಿಯೇ ಪತ್ತೆಯಾದರೆ ಅಗತ್ಯ ಚಿಕಿತ್ಸೆ ನೀಡಿ, ಗುಣಪಡಿಸಬಹುದು’ ಎಂದರು.

ಸಮ್ಮೇಳನದ ಅಧ್ಯಕ್ಷ ಡಾ.ಶೇಖರ್ ಪಾಟೀಲ, ‘ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಗುರುತಿಸಿದಲ್ಲಿ ಚಿಕಿತ್ಸೆ ಸುಲಭವಾಗಲಿದೆ. ಸರ್ಕಾರವು ಕ್ಯಾನ್ಸರ್ ತಪಾಸಣೆಗೆ ಯೋಜನೆಗಳನ್ನು ರೂಪಿಸಬೇಕು. ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ರೋಗಿಗಳಿಗೆ ಚಿಕಿತ್ಸೆಗಳನ್ನು ಒದಗಿಸಬಹುದಾಗಿದೆ. ಆದರೆ, ಚಿಕಿತ್ಸಾ ವೆಚ್ಚ ಕಡಿತ ಮಾಡುವುದು ದೊಡ್ಡ ಸವಾಲಾಗಿದೆ. ಹಲವರು ವೈದ್ಯಕೀಯ ವಿಮೆ ಹೊಂದಿಲ್ಲವಾದ್ದರಿಂದ ಚಿಕಿತ್ಸಾ ವೆಚ್ಚ ಹೊರೆಯಾಗಲಿದೆ. ಇದಕ್ಕೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು’ ಎಂದು ತಿಳಿಸಿದರು.

ನಂದಿನಿ ಬಡಾವಣೆಯ ಕಂಠೀರವ ನಗರದ ಶನಿ ದೇವಾಲಯದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಅನ್ನ ಸಂತರ್ಪಣೆಗೆ ಸ್ಥಳೀಯ ಶಾಸಕರೂ ಆದ ಅಬಕಾರಿ ಸಚಿವ ಕೆ. ಗೋಪಾಲಯ್ಯ ಚಾಲನೆ ನೀಡಿದರು. ದೇವಾಲಯ ಆಡಳಿತ ಮಂಡಳಿಯ ಪದಾಧಿಕಾರಿಗಳು ಇದ್ದಾರೆ.

ನೋಟ್‌ಬುಕ್ ಗಣಪ ತಯಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರದ ಗ್ಲೋಬಲ್ ಮಾಲ್‌ನಲ್ಲಿ ಶಿಲ್ಪಿ ಕಲ್ಯಾಣ್ ಎಸ್. ರಾಥೋಡ್ ಅವರ ಸಹಯೋಗದಲ್ಲಿ ನೋಟ್‌ಬುಕ್‌ನಿಂದ 20 ಅಡಿ ಎತ್ತರದ ಗಣಪನ ಮೂರ್ತಿ ತಯಾರಿಸಲಾಗುತ್ತಿದೆ.

10 ಸಾವಿರ ಪುಸ್ತಕಗಳಿಂದ ಮೂರ್ತಿ ತಯಾರಿಸಲಾಗುತ್ತಿದ್ದು, ಹಬ್ಬ ಮುಕ್ತಾಯಗೊಂಡ ಬಳಿಕ ಆ ಪುಸ್ತಕಗಳನ್ನು ಬೆಂಗಳೂರಿನ 10ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಮಕ್ಕಳಿಗೆ ವಿತರಣೆ ಮಾಡಲಾಗುತ್ತದೆ.

ತ್ಯಾಜ್ಯದ ಪ್ರಮಾಣ ಕಡಿಮೆಗೊಳಿಸುವ ಜತೆಗೆ ಅಶಕ್ತ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

‘ಹೆಚ್ಚು ಅರ್ಥಪೂರ್ಣ ಸಮುದಾಯ ಚಟುವಟಿಕೆ ಹಮ್ಮಿಕೊಳ್ಳಲು ಬಯಸಿದ್ದೇವೆ. ಈ ಶುಭ ಸಂದರ್ಭದಲ್ಲಿ ಶಿಕ್ಷಣದ ಉದ್ದೇಶಕ್ಕಾಗಿ ಸಹಾಯ ಮಾಡುವುದು ಉತ್ತಮ ಎಂದು ಯೋಚಿಸಿ, ಆ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದ್ದೇವೆ’ ಎಂದು ಜನರಲ್ ಮ್ಯಾನೇಜರ್ ಕಿರಣ್ ಪುತ್ರನ್ ಅವರು ತಿಳಿಸಿದ್ದಾರೆ.

ಬುಲ್ ಬುಲ್ ಹಕ್ಕಿ ಮೇಲೆ ತಾಯ್ನಾಡಿಗೆ ಸಾವರ್ಕರ್!

ಬೆಂಗಳೂರು: ವಿ.ಡಿ. ಸಾವರ್ಕರ್ ಕುರಿತು 8ನೇ ತರಗತಿ ಕನ್ನಡ (2ನೇ ಭಾಷೆ) ಪಠ್ಯದಲ್ಲಿ ಅಳವಡಿಸಿರುವ ‘ಕಾಲವನ್ನು ಗೆದ್ದವರು’ ಪ್ರವಾಸ ಕಥನದ ಒಂದು ಪ್ಯಾರಾ ವ್ಯಾಪಕ ಟೀಕೆಗೆ ಕಾರಣವಾಗಿದೆ.

ವಿಜಯಮಾಲಾ ರಂಗನಾಥ್ ಅವರ ‘ಬ್ಲಡ್ ಗ್ರೂಪ್’ ಗದ್ಯದ ಬದಲಿಗೆ ಲೇಖಕ ಕೆ.ಟಿ.ಗಟ್ಟಿ ಅವರ ಪ್ರವಾಸ ಕಥನವನ್ನು ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪಠ್ಯಕ್ಕೆ ಅಳವಡಿಸಿತ್ತು. ಈ ಪ್ರವಾಸ ಕಥನದ ಒಂದು ಪ್ಯಾರಾದಲ್ಲಿ ಸಾವರ್ಕರ್ ಕುರಿತು ಈ ರೀತಿಯ ವಾಕ್ಯಗಳಿವೆ.

‘ಕೋಣೆಯೊಳಗಿನ ಹಿಂಬದಿ ಗೋಡೆಯಲ್ಲಿ ಎತ್ತರದಲ್ಲಿ ಆಕಾಶ ಕೂಡ ಕಾಣಿಸದ, ಕಿಂಡಿ ಕೂಡ ಇಲ್ಲದ ಆ ಕತ್ತಲ ಕೋಣೆಯಲ್ಲಿ ಸಾವರ್ಕರ್ ಅವರನ್ನು ಇಡಲಾಗಿತ್ತು. ಆದರೂ, ಎಲ್ಲಿಂದಲೊ ಬುಲ್‌ಬುಲ್ ಹಕ್ಕಿಗಳು ಹಾರಿ ಸೆಲ್ ನೊಳಗೆ ಬರುತ್ತಿದ್ದವು. ಅವುಗಳ ರೆಕ್ಕೆಯ ಮೇಲೆ ಕುಳಿತು ಸಾವರ್ಕರ್ ಪ್ರತಿದಿನ ತಾಯ್ನಾಡಿನ ನೆಲ ಸಂದರ್ಶಿಸಿ ಬರುತ್ತಿದ್ದರು’ ಎಂದು ಕೆ.ಟಿ.ಗಟ್ಟಿ ವರ್ಣಿಸಿದ್ದಾರೆ. ‘2022–23ನೇ ಸಾಲಿಗೆ ಅಳವಡಿಸಿಕೊಂಡಿರುವ ನಾನು ಬರೆದ ‘ಅಮ್ಮನಾಗುವುದೆಂದರೆ’ ಪದ್ಯಕ್ಕೆ ಅನುಮತಿ ಕೋರಿ ಪಠ್ಯ ಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು ಪತ್ರ ಬರೆದಿದ್ದಾರೆ. ನನ್ನ ಸಮ್ಮತಿ ಇಲ್ಲ ಎಂದು ಪ್ರತಿಕ್ರಿಯಿಸಿರುವೆ’ ಎಂದು ಲೇಖಕಿ ರೂಪ ಹಾಸನ ಮಾಹಿತಿ ನೀಡಿದ್ದಾರೆ.

ಕೋವಿಡ್: ಆಸ್ಪತ್ರೆ ದಾಖಲಾತಿ ಇಳಿಕೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪೀಡಿತರ ಆಸ್ಪತ್ರೆ ದಾಖಲಾತಿ ಇಳಿಕೆಯಾಗಿದ್ದು, ಸೋಂಕಿತರಲ್ಲಿ 12 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸದ್ಯ ನಗರದಲ್ಲಿ 5 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 48 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ತಲಾ ಒಬ್ಬರು ಎಚ್‌ಡಿಯು ಹಾಗೂ ವೆಂಟಿಲೇಟರ್ ಸಹಿತ ಐಸಿಯು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. 34 ಮಂದಿಗೆ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ಈ ತಿಂಗಳ ಮೊದಲ ವಾರ ಆಸ್ಪತ್ರೆಗಳಿಗೆ ದಾಖಲಾದವರ ಸಂಖ್ಯೆ 70ಕ್ಕೆ ತಲುಪಿತ್ತು. ಆಗ ಸಕ್ರಿಯ ಪ್ರಕರಣಗಳ ಸಂಖ್ಯೆ 8 ಸಾವಿರದಷ್ಟಿತ್ತು. ವಾರದಿಂದ ಹೊಸ ಪ್ರಕರಣಗಳು ನಿಯಂತ್ರಣದಲ್ಲಿದ್ದು, ಸಕ್ರಿಯ ಪ್ರಕರಣ ಇಳಿಕೆಯಾಗಿದೆ. ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ.

ನಿತ್ಯ ಸರಾಸರಿ 15 ಸಾವಿರ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸೋಂಕು ದೃಢ ಪ್ರಮಾಣ ಶೇ 5ರ ಗಡಿಯ ಆಸುಪಾಸಿನಲ್ಲಿದೆ. ವಾರದ ಅವಧಿಯಲ್ಲಿ ದೃಢಪಟ್ಟ ಪ್ರಕರಣಗಳನ್ನು ಬಿಬಿಎಂಪಿ ವಾರ್ ರೂಮ್ ವಿಶ್ಲೇಷಿಸಿದೆ. ಏಳು ದಿನಗಳಲ್ಲಿ 1.03 ಲಕ್ಷ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದ್ದು, 5,367 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಅವಧಿಯಲ್ಲಿ 7,169 ಮಂದಿ ಚೇತರಿಸಿಕೊಂಡಿದ್ದಾರೆ. ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ.

ಅತ್ಯಾಚಾರ, ಕೊಲೆ ಅಪರಾಧಿಗಳ ಕ್ಷಮಾದಾನ ರದ್ದುಪಡಿಸಲು ಆಗ್ರಹ

ಬಿಲ್ಕಿಸ್ ಜೊತೆ ಕರ್ನಾಟಕ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

‘ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಅವರ ಕುಟುಂಬದವರನ್ನು ಹತ್ಯೆ ಮಾಡಿರುವ ಅಪರಾಧಿಗಳನ್ನು ಮರಳಿ ಜೈಲಿಗೆ ಕಳುಹಿಸಬೇಕು’ ಎಂದು ಒತ್ತಾಯಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಗುಜರಾತ್‌ನಲ್ಲಿ ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಅವರ ಕುಟುಂಬದವರನ್ನು ಹತ್ಯೆ ಮಾಡಿರುವ ಅಪರಾಧಿಗಳನ್ನು ಮರಳಿ ಜೈಲಿಗೆ ಕಳುಹಿಸಬೇಕು’ ಎಂದು ಒತ್ತಾಯಿಸಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರಗಳಲ್ಲಿ ಶನಿವಾರ ಪ್ರತಿಭಟನೆಗಳು ನಡೆದವು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಪಾಲ್ಗೊಂಡಿದ್ದರು. ‘ಬಿಲ್ಕಿಸ್ ಬಾನು ಜೊತೆ ಕರ್ನಾಟಕ’ ಘೋಷವಾಕ್ಯದೊಂದಿಗೆ ಫಲಕ ಹಾಗೂ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಬಿಲ್ಕಿಸ್ ಬಾನು ಪರವಾಗಿ ಸಹಿ ಸಂಗ್ರಹ ಅಭಿಯಾನವೂ ನಡೆಯಿತು.

ಹಲವು ಸಂಘಟನೆಗಳ ಪದಾಧಿಕಾರಿಗಳು, ಕಾರ್ಮಿಕರು, ವಕೀಲರು, ಕಲಾವಿದರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

‘ಬಿಲ್ಕಿಸ್ ಬಾನು ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಅವರ ಕುಟುಂಬದ 7 ಜನರನ್ನು ಹತ್ಯೆ ಮಾಡಿರುವ 11 ಅಪರಾಧಿಗಳನ್ನು ಸನ್ನಡತೆ ಆಧಾರದಲ್ಲಿ ಕ್ಷಮಾಧಾನ ನೀಡಿ ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಜೈಲಿನಿಂದ ಬಿಡುಗಡೆಯಾದ ಅಪರಾಧಿಗಳನ್ನು ವಿಶ್ವ ಹಿಂದೂ ಪರಿಷತ್ ಸದಸ್ಯರು ಹೂ ಮಾಲೆ ಹಾಕಿ ಆರತಿ ಎತ್ತಿ ಬರಮಾಡಿಕೊಂಡಿರುವುದು ನಮಗೆಲ್ಲರಿಗೂ ಆಘಾತವನ್ನುಂಟು ಮಾಡಿದೆ’ ಎಂದು ಪ್ರತಿಭಟನಕಾರರು ಹೇಳಿದರು.

‘ಗುಜರಾತಿನ ದಾಹೋದ್ ಜಿಲ್ಲೆಯ ರಣಧಿಕ್‌ಪುರ ಹಳ್ಳಿಯಲ್ಲಿ 2002ರಲ್ಲಿ ಹಿಂಸೆ ನಡೆದಿತ್ತು. ಬಿಲ್ಕಿಸ್ ಬಾನು ಕುಟುಂಬವೇ ತತ್ತರಿಸಿ ಹೋಯಿತು.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ಸಂದರ್ಭದಲ್ಲೇ ಸಾಮೂಜಿಕ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣದ ಅಪರಾಧಿಗಳನ್ನು ಜೈಲಿನಿಂದ ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ಕ್ರಮ ಖಂಡನೀಯ. ಕೇಂದ್ರ ಸರ್ಕಾರ ರೂಪಿಸಿದ್ದ ನಿಯಮಗಳನ್ನೂ ಗುಜರಾತ್ ಸರ್ಕಾರ ಗಾಳಿಗೆ ತೂರಿದೆ’ ಎಂದು ದೂರಿದರು.

‘ನನಗೆ ಸೇಡು ಬೇಕಿಲ್ಲ. ನ್ಯಾಯ ಬೇಕು’ ಎಂಬುದಾಗಿ ಬಿಲ್ಕಿಸ್ ಬಾನು ಹೇಳುತ್ತಿದ್ದಾರೆ. ನಾವೆಲ್ಲರೂ ಬಿಲ್ಕಿಸ್ ಬಾನು ಪರ ನಿಂತಿದ್ದೇವೆ. ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಯಲಿದೆ’ ಎಂದೂ ತಿಳಿಸಿದರು.

ಡೇಟಿಂಗ್ ಆ್ಯಪ್ ಸ್ನೇಹಿತನ ಅಪಹರಣ: 8 ಮಂದಿ ಬಂಧನ

ಬೆಂಗಳೂರು: ಡೇಟಿಂಗ್ ಆ್ಯಪ್ ಮೂಲಕ ಪರಿಚಯವಾಗಿದ್ದ ಸ್ನೇಹಿತನನ್ನು ಅಪಹರಿಸಿ ಹಲ್ಲೆ ಮಾಡಿದ್ದ ಆರೋಪದಡಿ ಮಹಿಳೆ ಸೇರಿ ಎಂಟು ಮಂದಿಯನ್ನು ಹನುಮಂತನಗರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಯೊಬ್ಬರನ್ನು ಅಪಹರಿಸಿ ಹಲ್ಲೆ ಮಾಡಿದ್ದ ಬಗ್ಗೆ ದೂರು ದಾಖಲಾಗಿತ್ತು. ಆರೋಪಿ ಕ್ಲಾರಾ, ಮಧು ಸೇರಿ 8 ಮಂದಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮದುವೆಯಾಗಿ ಪತಿಯಿಂದ ದೂರವಿದ್ದ ಕ್ಲಾರಾ, ಡೇಟಿಂಗ್ ಆ್ಯಪ್ ಮೂಲಕ ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದರು. ಇಬ್ಬರ ನಡುವೆ ಸ್ನೇಹವಾಗಿ, ಸಲುಗೆ ಬೆಳೆದಿತ್ತು. ಇಬ್ಬರೂ ಕೆಲ ತಿಂಗಳು ಒಂದೇ ಮನೆಯಲ್ಲಿ ಸಹಜೀವನ ನಡೆಸಿದ್ದರು.’

‘ಕ್ಲಾರಾ ಬೇರೊಬ್ಬ ಪುರುಷನ ಜೊತೆ ಸಲುಗೆ ಹೊಂದಿರುವ ಬಗ್ಗೆ ದೂರುದಾರರಿಗೆ ಅನುಮಾನ ಬಂದಿತ್ತು. ಇದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ಆಗಿತ್ತು. ನಂತರ, ಇಬ್ಬರೂ ಪ್ರತ್ಯೇಕವಾಗಿ ವಾಸವಿದ್ದರು. ಮೋಸ ಮಾಡಿದನೆಂದು ತಿಳಿದ ಮಹಿಳೆ, ಮಾತನಾಡಬೇಕೆಂದು ಹೇಳಿ ದೂರುದಾರರನ್ನು ತನ್ನ ಬಳಿ ಕರೆಸಿಕೊಂಡು ಅಪಹರಿಸಿದ್ದರು. ಇತರೆ ಆರೋಪಿಗಳ ಜೊತೆ ಸೇರಿ ಹಲ್ಲೆ ಮಾಡಿದ್ದರು’ ಎಂದೂ ತಿಳಿಸಿವೆ.

ಆಭರಣ ಮಾರಾಟ: ಆರೋಪಿ ಬಂಧನ

ಬೆಂಗಳೂರು: ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಅಜ್ಮತ್ ಪಾಷಾ (33) ಎಂಬಾತನನ್ನು ಭಾರತಿನಗರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಯಾದ ಆರೋಪಿ ಅಜ್ಮತ್, ಕದ್ದ ಚಿನ್ನಾಭರಣವನ್ನು ಮಾರಲೆಂದು ಶಿವಾಜಿನಗರ ಮಳಿಗೆಯೊಂದರ ಬಳಿ ಬಂದಿದ್ದ. ಆತನ ನಡೆಯಿಂದ ಅನುಮಾನಗೊಂಡು ವಶಕ್ಕೆ ಪಡೆದು ವಿಚಾರಿಸಿದಾಗ ಕಳ್ಳತನ ಪ್ರಕರಣಗಳು ಬಯಲಾದವು. ₹ 8 ಲಕ್ಷ ಮೌಲ್ಯದ 165 ಗ್ರಾಂ ಚಿನ್ನಾಭರಣವನ್ನು ಆತನಿಂದ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಪರಿಶಿಷ್ಟ ಜನಾಂಗದವರಿಗೆ ಸರ್ಕಾರಿ ಉದ್ಯೋಗದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಬೇಕೆಂದು ಆಗ್ರಹಿಸಿ ಧರಣಿ ನಡೆಸಿರುವ ರಾಜನಹಳ್ಳಿ ಮಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಅವರನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಶುಕ್ರವಾರ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಸಚಿವರನ್ನು ಗೌರವಿಸಲಾಯಿತು.

ರಾಜ್ಯಪಾಲರ ಹೆಸರಿನಲ್ಲಿ ವಂಚನೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಆಮಿಷವೊಡ್ಡಿ ಹಣ ಪಡೆದು ವಂಚಿಸಿದ್ದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನಗರದ ಜ್ಞಾನ ಪ್ರಕಾಶ್ ಹಾಗೂ ದೆಹಲಿಯ ಗಿರಿಧರ್ ಝಾ ಬಂಧಿತರು. ಇಂಡಿಯನ್ ಜರ್ನಲಿಸ್ಟ್ ಕಾಂಪೆಂಡಿಯಂ (ಐಜೆಸಿ) ಸಂಸ್ಥೆ ಸ್ಥಾಪಿಸಿಕೊಂಡಿದ್ದ ಆರೋಪಿಗಳು, ಅದರ ಮೂಲಕ ಪ್ರಶಸ್ತಿ–ಪುರಸ್ಕಾರ ನೀಡುವ ಆಮಿಷವೊಡ್ಡಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದರೆಂಬ ಮಾಹಿತಿ ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಿಜೆಪಿ ಮುಖಂಡರೂ ಆಗಿರುವ ಪೀಣ್ಯ ಕೈಗಾರಿಕಾ ಪ್ರದೇಶದ ದೂರುದಾರ ವೆಂಕಟೇಶ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ‘ಐಜೆಸಿ ಸಂಸ್ಥೆಯ ಪರವಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಆಗಸ್ಟ್ 16ರಂದು ಬೆಳಿಗ್ಗೆ 11 ಗಂಟೆಗೆ ರಾಜಭವನದಲ್ಲಿ ಪ್ರಶಸ್ತಿ ಕೊಡಿಸುತ್ತೇವೆ. ನೀವು ನಮ್ಮ ಸಂಸ್ಥೆಗೆ ದೇಣಿಗೆ ನೀಡಬೇಕು’ ಎಂದಿದ್ದರು. ಅದನ್ನು ನಂಬಿದ್ದ ವೆಂಕಟೇಶ್, ₹ 1 ಲಕ್ಷ ನೀಡಿದ್ದರು.’

‘ಹಣ ಪಡೆದಿದ್ದ ಆರೋಪಿಗಳು, ಪ್ರಶಸ್ತಿ ಪ್ರದಾನ ಸಮಾರಂಭಕ್ಕೆಂದು ದೂರುದಾರ ವೆಂಕಟೇಶ್ ಅವರನ್ನು ಆಗಸ್ಟ್ 16ರಂದು ರಾಜಭವನಕ್ಕೆ ಕರೆಸಿದ್ದರು. ಆದರೆ, ಯಾವುದೇ ಸಮಾರಂಭ ನಡೆದಿರಲಿಲ್ಲ. ಸ್ವಾತಂತ್ರ್ಯೋತ್ಸವ ಶುಭಾಶಯ ಕೋರಲು ರಾಜ್ಯಪಾಲರು ನೀಡಿದ್ದ ಸಮಯ ಅದಾಗಿತ್ತಷ್ಟೆ. ವಂಚನೆ ಗಮನಕ್ಕೆ ಬರುತ್ತಿದ್ದಂತೆ ವೆಂಕಟೇಶ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ಮೂಲಗಳು ತಿಳಿಸಿದರು.

150 ಕಡೆ ಕಳ್ಳತನ: 54 ವರ್ಷದ ಆರೋಪಿ ಬಂಧನ

ಬೆಂಗಳೂರು: ಬಾಲ್ಯದಿಂದಲೇ ಕಳ್ಳತನವನ್ನು ವೃತ್ತಿ ಮಾಡಿಕೊಂಡು ಹಲವೆಡೆ ಕೃತ್ಯ ಎಸಗುತ್ತಿದ್ದ ಆರೋಪದಡಿ ಪ್ರಕಾಶ್ (54) ಎಂಬುವವರನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಪ್ರಕಾಶ್, 1978ರಿಂದಲೇ ಕಳ್ಳತನ ಕೃತ್ಯ ಎಸಗಲಾರಂಭಿಸಿದ್ದ. 20 ಬಾರಿ ಪೊಲೀಸರಿಗೆ ಸಿಕ್ಕಿಬಿದ್ದು, ಜೈಲಿಗೂ ಹೋಗಿ ಜಾಮೀನಿನ ಮೇಲೆ ಹೊರಬಂದಿದೆ. ಇತ್ತೀಚೆಗೆ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಪ್ರಕಾಶ್‌ನನ್ನು ಮತ್ತೊಮ್ಮೆ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಬೆಂಗಳೂರು, ಬಳ್ಳಾರಿ, ಶಿವಮೊಗ್ಗ ಸೇರಿ ಹಲವು ನಗರಗಳಲ್ಲಿ 150 ಕಡೆ ಆರೋಪಿ ಕಳ್ಳತನ ಮಾಡಿದ್ದ. ಈತನ ಕುಟುಂಬದವರೂ ಕಳ್ಳತನಕ್ಕೆ ಸಹಕಾರ ನೀಡುತ್ತಿದ್ದರು’ ಎಂದರು.

₹ 6.61 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಅಪರಾಧ ಸುದ್ದಿ

ಬೆಂಗಳೂರು: ವಿಲ್ಸನ್ ಗಾರ್ಡನ್ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದ ಆರೋಪಿ ಪಗಳವನ್ ಅಲಿಯಾಸ್ ಜೆ.ಕೆ (34) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಜೆ.ಸಿ.ರಸ್ತೆಯ ರಾಮಣ್ಣ ಗಾರ್ಡನ್ ನಿವಾಸಿ ಪಗಳವನ್, ದ್ವಿಚಕ್ರ ವಾಹನದಲ್ಲಿ ಸುತ್ತಾಡಿ ಡ್ರಗ್ಸ್ ಮಾರುತ್ತಿದ್ದ. ಈತನನ್ನು ಬಂಧಿಸಿ, ₹ 6.61 ಲಕ್ಷ ಮೌಲ್ಯದ 21 ಕೆ.ಜಿ. 348 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದ ಆರೋಪಿ, ಅದರಲ್ಲೇ ಸುತ್ತಾಡಿ ಗಾಂಜಾ ಮಾರುತ್ತಿದ್ದ. ವಿಲ್ಸನ್ ಗಾರ್ಡನ್, ಸಂಪಂಗಿರಾಮನಗರ, ಎಸ್‌.ಜೆ. ಪಾರ್ಕ್, ಸಿದ್ದಾಪುರ ಠಾಣೆ ವ್ಯಾಪ್ತಿಯಲ್ಲಿ ಹಲವು ಗ್ರಾಹಕರು ಈತನಿಂದ ಗಾಂಜಾ ಖರೀದಿಸುತ್ತಿದ್ದರು’ ಎಂದು ತಿಳಿಸಿದರು.

‘ಕೊಲೆ, ಕಳ್ಳತನ, ವಂಚನೆ ಪ್ರಕರಣದಲ್ಲೂ ಪಗಳವನ್ ಆರೋಪಿಯಾಗಿದ್ದ. ಇತ್ತೀಚೆಗೆ ಅಕ್ರಮವಾಗಿ ಹಣ ಸಂಪಾದನೆ ಮಾಡಲು ಗಾಂಜಾ ಮಾರಾಟಕ್ಕೆ ಇಳಿದಿದ್ದ’ ಎಂದೂ ಹೇಳಿದರು.

ಅನಾರೋಗ್ಯದಿಂದ ಆನೆ, ಹುಲಿ ಸಾವು

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ‘ಸುಂದರ್’ ಅನಾರೋಗ್ಯದಿಂದ ಶನಿವಾರ ಮೃತಪಟ್ಟಿದೆ.

ಆ. 23ರಿಂದ ಸುಂದರ್‌ಗೆ ಆರೋಗ್ಯ ಸಮಸ್ಯೆ ಉಂಟಾಗಿತ್ತು. ಪಶುವೈದ್ಯ ತಂಡವು ಪರೀಕ್ಷಿಸಿತ್ತು. ಅದು ಉದರ ನೋವು ಮತ್ತು ತೀವ್ರ ಬಾಯಿ ಹುಣ್ಣು ಸಮಸ್ಯೆಯಿಂದ ಬಳಲುತ್ತಿತ್ತು.

ಮಹಾರಾಷ್ಟ್ರದ ಕೊಲ್ಲಾಪುರ ದೇವಾಲಯದಿಂದ ಪೇಟಾದವರು ರಕ್ಷಿಸಿದ್ದರು. ಬನ್ನೇರುಘಟ್ಟ ಉದ್ಯಾನಕ್ಕೆ 2014ರಲ್ಲಿ ಕರೆ ತರಲಾಗಿತ್ತು. ಪೇಟಾ ಪ್ರತಿನಿಧಿಗಳ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗುವುದು ಎಂದು ಉದ್ಯಾನದ ನಿರ್ದೇಶಕರು ತಿಳಿಸಿದ್ದಾರೆ.

ಇಲ್ಲಿಯ ಹುಲಿ ಕಿರಣ್ ರಕ್ತದ ಪ್ರೋಟೊಜೋವಾ ಸೋಂಕಿನಿಂದ ಶುಕ್ರವಾರ ಮೃತಪಟ್ಟಿದೆ.

ಗೊರಗುಂಟೆಪಾಳ್ಯದ 30 ವರ್ಷಗಳ ಸಮಸ್ಯೆಗೆ ಪರಿಹಾರ

ಪಿಎಸ್ಐ ಅಭಿಯಾನ: ಶೌಚಾಲಯ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೊರಗುಂಟೆಪಾಳ್ಯ ತಂಗುದಾಣ ಬಳಿ ಶೌಚಾಲಯ ನಿರ್ಮಿಸಬೇಕು’ ಎಂದು ಒತ್ತಾಯಿಸಿ ಪಿಎಸ್ಐ ಶಾಂತಪ್ಪ ಜಡೆಮ್ಮನವರ ಹಾಗೂ ಸ್ನೇಹಿತರು ನಡೆಸಿದ್ದ ಅಭಿಯಾನದಿಂದ ಎಚ್ಚೆತ್ತ ಬಿಬಿಎಂಪಿ, ಕೊನೆಗೂ ಶಾಶ್ವತ ಶೌಚಾಲಯ ನಿರ್ಮಾಣ ಮಾಡಿದೆ.

ನಗರದ ಪ್ರಮುಖ ಸ್ಥಳವಾದ ಗೊರಗುಂಟೆಪಾಳ್ಯ ಮೂಲಕ ವಿವಿಧೆಡೆ ಸಂಚರಿಸುವ ಪ್ರಯಾಣಿಕರು, 30 ವರ್ಷಗಳಿಂದ ಶೌಚಾಲಯ ಸಮಸ್ಯೆ ಎದುರಿಸುತ್ತಿದ್ದರು. ಮಹಿಳೆಯರು, ವೃದ್ಧರ ಸ್ಥಿತಿಯಂತೂ ಹೇಳತೀರದಾಗಿತ್ತು. ಇದೀಗ, ತಂಗುದಾಣಕ್ಕೆ ಹೊಂದಿಕೊಂಡೇ ‘ಹಣ ಪಾವತಿಸಿ ಬಳಸಿ (ಪೇ ಆ್ಯಂಡ್ ಯೂಸ್)’ ಶೌಚಾಲಯ ನಿರ್ಮಿಸಲಾಗಿದೆ. ಸೆಪ್ಟೆಂಬರ್ 1ರಿಂದ ಸಾರ್ವಜನಿಕರ ಬಳಕೆಗೆ ಲಭ್ಯವಾಗಲಿದೆ.

ತುಮಕೂರು ಕಡೆಯಿಂದ ರಾಷ್ಟ್ರೀಯ ಹೆದ್ದಾರಿ ಮೂಲಕ ನಗರಕ್ಕೆ ಬರುವ ಬಹುತೇಕ ವಾಹನಗಳು, ಗೊರಗುಂಟೆಪಾಳ್ಯ ಮಾರ್ಗವಾಗಿ ಹಾದು ಹೋಗುತ್ತವೆ. ಪ್ರಯಾಣಿಕರು ಇಳಿಯುವ ಹಾಗೂ ಹತ್ತುವ ಪ್ರಮುಖ ಸ್ಥಳವಿದು. ಇಂಥ ಸ್ಥಳದಲ್ಲಿ ವ್ಯವಸ್ಥಿತ ಶೌಚಾಲಯ ಇಲ್ಲದಿದ್ದರಿಂದ, ಮಲ–ಮೂತ್ರ ವಿಸರ್ಜನೆಗೆ ಜನರು ಪರದಾಡುವ ಸ್ಥಿತಿ ಇತ್ತು. ಸ್ಥಳೀಯರು ಬಿಬಿಎಂಪಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಶಾಶ್ವತ ಶೌಚಾಲಯದ ಕನಸು ಈಡೇರಿರಲಿಲ್ಲ.

ಗೊರಗುಂಟೆಪಾಳ್ಯ ಬಸ್ ತಂಗುದಾಣ ಬಳಿ ಬಿಬಿಎಂಪಿ ನಿರ್ಮಿಸಿರುವ ಸಾರ್ವಜನಿಕ ಶಾಶ್ವತ ಶೌಚಾಲಯ — ಪ್ರಜಾವಾಣಿ ಚಿತ್ರ

100 ದಿನ ಅಭಿಯಾನ, ಮೊಬೈಲ್ ಶೌಚಾಲಯ: ತಾಯಿಯನ್ನು ತಮ್ಮೂರಿನ ಬಸ್‌ಗೆ ಹತ್ತಿಸಲು ಗೊರಗುಂಟೆಪಾಳ್ಯ ತಂಗುದಾಣಕ್ಕೆ ಹೋಗಿದ್ದಾಗ ಪಿಎಸ್ಐ ಶಾಂತಪ್ಪ ಅವರಿಗೆ ಶೌಚಾಲಯದ ಸಮಸ್ಯೆ ಗಮನಕ್ಕೆ ಬಂದಿತ್ತು. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿರಲಿಲ್ಲ. ಅವಾಗಲೇ, ಸಾಮಾಜಿಕ ಮಾಧ್ಯಮಗಳ ಮೂಲಕ ಅಭಿಯಾನ ಆರಂಭಿಸಿದ್ದರು.

ಅಭಿಯಾನಕ್ಕೆ ಸಾರ್ವಜನಿಕರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು. ಆದರೆ, 100 ದಿನ ಅಭಿಯಾನ ನಡೆದರೂ ಬಿಬಿಎಂಪಿಯಿಂದ ಯಾವುದೇ ಸ್ಪಂದನೆ ಸಿಕ್ಕಿರಲಿಲ್ಲ. ಅವಾಗಲೇ, ಶಾಂತಪ್ಪ ಅವರು ಸ್ವಂತ ಖರ್ಚಿನಲ್ಲಿ ತಂಗುದಾಣ ಬಳಿಯೇ ಮೊಬೈಲ್ ಶೌಚಾಲಯ ಇರಿಸಿದ್ದರು.

'ಸ್ವಚ್ಛತೆಯೇ ಸ್ವರಾಜ್' ಎನ್ನುವ ಗಾಂಧೀಜಿ ತತ್ವ ಹಾಗೂ ‘ಸ್ವಚ್ಛ ಭಾರತ’ ಧ್ಯೇಯದಡಿ ಇರಿಸಿದ್ದ ಮೊಬೈಲ್ ಶೌಚಾಲಯವನ್ನು ತೃತೀಯ ಲಿಂಗಿ ಉದ್ಘಾಟಿಸಿದ್ದರು. ಈ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ ಎಚ್ಚೆತ್ತ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಜನಪ್ರತಿನಿಧಿಗಳು, ಶಾಂತಪ್ಪ ಅವರ ಜೊತೆ ಮಾತುಕತೆ ನಡೆಸಿ ಮಾಹಿತಿ ಪಡೆದುಕೊಂಡಿದ್ದರು. ಇದಾದ ಕೆಲವೇ ದಿನಗಳಲ್ಲಿ ಶೌಚಾಲಯ ನಿರ್ಮಾಣವಾಗಿದ್ದು, ಪಿಎಸ್ಐ ಅಭಿಯಾನ ಫಲ ನೀಡಿದೆ.

‘ಎಚ್ಚೆತ್ತ ಬಿಬಿಎಂಪಿಗೆ ಧನ್ಯವಾದ’

‘ನನ್ನ ತಾಯಿಗೆ ಬಂದ ಸಂಕಷ್ಟ ಮತ್ತ್ಯಾರಿಗೂ ಬಾರದಿರಲೆಂದು ಅಭಿಯಾನ ಆರಂಭಿಸಿದ್ದೆ. ಪ್ರಧಾನಮಂತ್ರಿ ಅವರ ಸ್ವಚ್ಛಭಾರತ ಅಭಿಯಾನವೇ ನನಗೆ ಪ್ರೇರಣೆ’ ಎಂದು ಪಿಎಸ್ಐ ಶಾಂತಪ್ಪ ಹೇಳಿದರು.

ಅಭಿಯಾನ ಯಶಸ್ವಿ ಬಗ್ಗೆ ಮಾತನಾಡಿದ ಅವರು, ‘ತುಮಕೂರು, ಶಿವಮೊಗ್ಗ, ಹಾಸನ, ಚಿತ್ರದುರ್ಗ, ದಾವಣಗೆರೆ ಹಾಗೂ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಯ ಜನರು ನಿತ್ಯವೂ ಗೊರಗುಂಟೆಪಾಳ್ಯದಿಂದ ಪ್ರಯಾಣಿಸುತ್ತಾರೆ. ಇವರೆಲ್ಲರೂ ಶೌಚಾಲಯ ಸಮಸ್ಯೆ ಎದುರಿಸುತ್ತಿದ್ದರು. ಅಭಿಯಾನದಿಂದ ಎಚ್ಚೆತ್ತು ಶಾಶ್ವತ ಶೌಚಾಲಯ ನಿರ್ಮಿಸಿರುವ ಬಿಬಿಎಂಪಿ ಆಯುಕ್ತರು, ಸಚಿವ ಮುನಿರತ್ನ ಅವರಿಗೆ ಧನ್ಯವಾದ’ ಎಂದರು.

ಸಲಹಾ ಸಮಿತಿ, ಹಿತೈಷಿಗಳ ಸಭೆ ನಡೆಸಿದ ಶಿವಮೂರ್ತಿ ಮುರುಘಾ ಶರಣರು • ತಕ್ಷಣ ಬಂಧಿಸದಂತೆ ಭಕ್ತರ ಆಗ್ರಹ

ಮಠದಲ್ಲಿ ಆತಂಕ, ಸರಣಿ ಸಭೆ, ಆಕ್ರೋಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಜಾತಿ ಭೇದವಿಲ್ಲದೇ ಭಕ್ತಗಣ ಸಂಪಾದಿಸಿದ್ದ ಮುರುಘಾ ಮಠದಲ್ಲೀಗ ಆತಂಕ ಮಡುಗಟ್ಟಿದೆ. ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಲೈಂಗಿಕ ಕಿರುಕುಳದ ಆರೋಪದ ಹಿಂದೆಯೇ ಭಕ್ತಗಣದಲ್ಲಿ ಮಠವು ಚರ್ಚೆಯ ಕೇಂದ್ರವಾಗಿದೆ.

ಶರಣರ ವಿರುದ್ಧ ದೂರು ದಾಖಲಾದ ಹಿಂದೆಯೇ ಮಠದ ಸಲಹಾ ಸಮಿತಿ ಸದಸ್ಯರು, ಹಿತೈಷಿಗಳು, ವಕೀಲರು ಹಾಗೂ ಇತರ ಮಠಾಧೀಶರು ಶರಣರೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ಅಲ್ಲದೆ, ಸರಣಿ ಸಭೆಗಳನ್ನು ನಡೆಸಿದರು.

ಮುರುಘಾ ಮಠವು ಇಡೀ ದಿನ ಬಿರುಸಿನ ಚಟುವಟಿಕೆಗೆ ಸಾಕ್ಷಿಯಾಯಿತು. ವೀರಶೈವ ಲಿಂಗಾಯತ ಸಮುದಾಯದ ಮುಖಂಡರು ಮಠಕ್ಕೆ ಧಾವಿಸಿದರು. ಶರಣರಿಗೆ ಧೈರ್ಯ ತುಂಬಿದರು. ಕಾನೂನು ಹೋರಾಟದಲ್ಲಿ ಜೊತೆಗೆ ನಿಲ್ಲುವುದಾಗಿ ಭರವಸೆ ಮೂಡಿಸಿದರು. ಮಠದ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ವಿರುದ್ಧ ಆಕ್ರೋಶ ಹೊರಹಾಕಿದರು.

‘ಅನಿರೀಕ್ಷಿತವಾಗಿ ಆಪತ್ತು ಬಂದಿದೆ. ತಪ್ಪು ಮಾಡದ ನನಗೆ ಖಂಡಿತ ಭೀತಿ ಇಲ್ಲ. ಕಾನೂನಾತ್ಮಕವಾಗಿ ಆರೋಪ ಎದುರಿಸುತ್ತೇನೆ. ಆರೋಪಮುಕ್ತ-ವಾಗಿ ಹೊರಗೆ ಬರುವ ವಿಶ್ವಾಸವಿದೆ ಎಂದು ಶಿವಮೂರ್ತಿ ಮುರುಘಾ ಶರಣರು ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದರು‘ ಎಂದು ಮೂಲಗಳು ಮಾಹಿತಿ ನೀಡಿವೆ.

ಬಂಧಿಸದಂತೆ ಭಕ್ತರ ಒತ್ತಡ: ಪ್ರಕರಣ ಸಂಬಂಧ ಮುರುಘಾ ಶರಣರನ್ನು ಬಂಧಿಸದಂತೆ ಸರ್ಕಾರ, ಪೊಲೀಸರ ಮೇಲೆ ಒತ್ತಡ ಸೃಷ್ಟಿಸುವ ಕುರಿತಂತೆ ಹಲವು ಭಕ್ತರು ಮಠದಲ್ಲಿ ನಡೆದ ಸರಣಿ ಸಭೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಮಠಕ್ಕೆ ನೂರಾರು ವರ್ಷಗಳ ಪರಂಪರೆ ಇದೆ. ಕಪ್ಪುಚುಕ್ಕೆ ಅಂಟಬಾರದು. ಆರೋಪ ಸಂಬಂಧಿಸಿ ಕೂಲಂಕಷವಾಗಿ ಪರಿಶೀಲನೆ, ತನಿಖೆ ನಡೆಯಬೇಕು. ಸತ್ಯಾಸತ್ಯತೆ ಪರಿಶೀಲಿಸದೇ ಕಾನೂನು ಕ್ರಮದ ದುಡುಕಿನ ನಿರ್ಧಾರ ಕೈಗೊಳ್ಳಬಾರದು. ಮಠಾಧೀಶರಿಗೆ ಸಂಬಂಧಿಸಿದ ವಿಚಾರವಾದರೂ ಪೊಲೀಸರು ಇಡುವ ಹೆಜ್ಜೆಗಳು ಭಕ್ತರಲ್ಲಿ ಇರುಸುಮುರುಸು ಉಂಟು ಮಾಡಬಾರದು’ ಎಂದು ಸಲಹಾ ಸಮಿತಿ ಸದಸ್ಯರೂ ಆಗಿರುವ ಜೆಡಿಎಸ್ ಮುಖಂಡ ಬಿ.ಕಾಂತರಾಜ ಒತ್ತಾಯಿಸಿದರು.

ಚಿತ್ರದುರ್ಗದ ಮುರುಘಾ ಮಠಕ್ಕೆ ಶನಿವಾರ ಭೇಟಿ ನೀಡಿದ ವಿವಿಧ ಮಠಾಧೀಶರು ಶಿವಮೂರ್ತಿ ಮುರುಘಾ ಶರಣರೊಂದಿಗೆ ಚರ್ಚಿಸಿ ಹೊರಬಂದರು. ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಸೇವಾಲಾಲ್ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಇದ್ದಾರೆ.

ಶರಣರು ಮುರುಘಾ ಮಠದ ಪೀಠಾಧ್ಯಕ್ಷರಾಗಿ ಎರಡೂವರೆ ದಶಕ ಕಳೆದಿದೆ. ಈವರೆಗೆ ಇಂತಹ ಯಾವುದೇ ಆರೋಪ ಕೇಳಿಬಂದಿಲ್ಲ. ಶ್ರೀಮಠದ ಪರಂಪರೆಗೆ ಧಕ್ಕೆಯಾಗಬಾರದು

ಎಂ. ಚಂದ್ರಪ್ಪ, ಶಾಸಕ, ಹೊಳಲ್ಕೆರೆ

ವ್ಯಕ್ತಿಯೊಬ್ಬರ ಅಧಿಕಾರ ದಾಹದಿಂದ ಈ ಬೆಳವಣಿಗೆ ಆಗಿದೆ. ಸಂಧಾನಕ್ಕೂ, ಸಂಘರ್ಷಕ್ಕೂ ಸಿದ್ಧ ಇದ್ದೇವೆ. ಗುರುಪರಂಪರೆಗೆ ದ್ರೋಹ ಬಗೆಯುವುದು ಅಕ್ಷಮ್ಯ

ಮಹಾಂತ ರುದ್ರ ಸ್ವಾಮೀಜಿ, ಹೆಬ್ಬಾಳು ಶಾಖಾ ಮಠ, ದಾವಣಗೆರೆ

ಆರೋಪದ ಬಗ್ಗೆ ಸೂಕ್ತ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶೀಘ್ರ ಶಿಕ್ಷೆಯಾಗಬೇಕು. ಹೆಣ್ಣುಮಕ್ಕಳಿಗೆ ಭದ್ರತೆ ಒದಗಿಸಬೇಕು

ಜಿ.ಎಸ್.ಸೀಮಾ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ, ಮೈಸೂರು ಜಿಲ್ಲಾ ಕಾರ್ಯದರ್ಶಿ

ಹಾಸ್ಟೆಲ್‌ನ ಎಲ್ಲ ವಿದ್ಯಾರ್ಥಿನಿಯರ ಹೇಳಿಕೆ ದಾಖಲು

ಚಿತ್ರದುರ್ಗ: ಮುರುಘಾ ಶರಣರ ವಿರುದ್ಧ ಲೈಂಗಿಕ ಕಿರುಕುಳ ಆರೋಪ ಮಾಡಿದ ಇಬ್ಬರು ವಿದ್ಯಾರ್ಥಿನಿಯರು ತಂಗಿದ್ದ ಹಾಸ್ಟೆಲ್‌ನ ಎಲ್ಲ ವಿದ್ಯಾರ್ಥಿಗಳ ಹೇಳಿಕೆಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಶನಿವಾರ ದಾಖಲು ಮಾಡಿಕೊಂಡರು.

ಇಲಾಖೆ ನಿರ್ದೇಶಕರ ಸೂಚನೆ ಮೇರೆಗೆ ಹಾಸ್ಟೆಲ್‌ಗೆ ಭೇಟಿ ನೀಡಿದ ತಂಡ ಹಾಜರಾತಿ ಪುಸ್ತಕ, ಊಟ ಹಾಗೂ ವಸತಿ ಸೌಲಭ್ಯ ಪರಿಶೀಲಿಸಿತು. ತರಗತಿ ಮುಗಿಸಿ ಬಂದ ಮಕ್ಕಳ ವಿಚಾರಣೆ ನಡೆಸಿತು.

ಚಿತ್ರದುರ್ಗ, ದಾವಣಗೆರೆ ಹಾಗೂ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಿಂದ ಬಂದಿರುವ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ವ್ಯಾಸಂಗ ಮಾಡುತ್ತಿರುವ 100 ವಿದ್ಯಾರ್ಥಿನಿಯರು ವಸತಿನಿಲಯ-ದಲ್ಲಿದ್ದಾರೆ. ಪ್ರತಿಯೊಬ್ಬರ ಹೇಳಿಕೆಯನ್ನು ಪ್ರತ್ಯೇಕವಾಗಿ ದಾಖಲಿಸಲಾಯಿತು.

ಆರೋಪ ಕೇಳಿಬರುತ್ತಿದ್ದಂತೆ ಆತಂಕಗೊಂಡ ಕೆಲ ಮಕ್ಕಳ ಪಾಲಕರು ಹಾಸ್ಟೆಲ್‌ನತ್ತ ಧಾವಿಸಿ ಮಕ್ಕಳನ್ನು ಮನೆಗೆ ಕರೆದೊಯ್ಯಲು ಮುಂದಾದರು. ಹೇಳಿಕೆ ಪಡೆದ ಬಳಿಕ ಸುಪರ್ದಿಗೆ ನೀಡುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಪಾಲಕರಿಗೆ ಮನವರಿಕೆ ಮಾಡಿಕೊಟ್ಟರು.

ಶಾಲೆ ಬಿಟ್ಟಿದ್ದ ಮಕ್ಕಳು

ಲೈಂಗಿಕ ಕಿರುಕುಳದಿಂದ ಸಂತ್ರಸ್ತರಾಗಿರುವ ವಿದ್ಯಾರ್ಥಿನಿಯರು ಒಂದೂವರೆ ತಿಂಗಳಿಂದ ಶಾಲೆಗೆ ಹಾಜರಾಗಿರಲಿಲ್ಲ. ಶಾಲೆ ಬಿಟ್ಟ ಮಕ್ಕಳ ಪಟ್ಟಿಯಲ್ಲಿ ಈ ವಿದ್ಯಾರ್ಥಿನಿಯರ ಹೆಸರುಗಳಿವೆ.

ಶಾಲೆಯಿಂದ ಹೊರಗುಳಿದವರ ಪಟ್ಟಿ ಹಿಡಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿ ಮಕ್ಕಳ ಪಾಲಕರ ವಿಳಾಸ ಸಂಪರ್ಕಿಸಿದ್ದರು. ಮಕ್ಕಳ ಬಗ್ಗೆ ವಿವರ ನೀಡಲು ಪಾಲಕರು ಹಿಂದೇಟು ಹಾಕಿದ್ದರು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೂಲಗಳು ಮಾಹಿತಿ ನೀಡಿವೆ.

ಮಠದ ಆಡಳಿತಾಧಿಕಾರಿ ವಿರುದ್ಧ ಆಕ್ರೋಶ

‘ಮುರುಘಾ ಶರಣರ ವಿರುದ್ಧದ ಆರೋಪ ಶುದ್ಧ ಸುಳ್ಳು. ಮಾನಸಿಕ ಕಿರುಕುಳ ನೀಡುವ ಉದ್ದೇಶದಿಂದ ಈ ಪ್ರಕರಣ ಹೆಣೆಯಲಾಗಿದೆ’ ಎಂದು ಮಠದ ಸಲಹಾ ಸಮಿತಿ ಸದಸ್ಯ ಎನ್.ಬಿ.ವಿಶ್ವನಾಥ್ ಹೇಳಿದರು.

ಸಲಹಾ ಸಮಿತಿ ಸಭೆಯ ಬಳಿಕ ಮಾತನಾಡಿದ ಅವರು, ‘ಈ ಆರೋಪ ಭಕ್ತರಿಗೆ ಆಘಾತ ತಂದಿದೆ. ದೂರಿನ ಹಿಂದೆ ಮುರುಘಾ ಮಠದ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಷಡ್ಯಂತ್ರ ಇದೆ. ಮಠಕ್ಕೆ ಮರಳಿದ ಅವರು ಪರಮಾಧಿಕಾರ ನಿರೀಕ್ಷೆ ಮಾಡಿದ್ದರು’ ಎಂದು ಆರೋಪಿಸಿದರು.

ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಕುಂಚಿಟಿಗ ಮಹಾಸಂಸ್ಥಾನ ಮಠದ ಶಾಂತವೀರ ಸ್ವಾಮೀಜಿ, ಬಂಜಾರ ಗುರುಪೀಠದ ಸೇವಾಲಾಲ್ ಸ್ವಾಮೀಜಿ, ದಾವಣಗೆರೆ ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಛಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ, ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಮಡಿವಾಳ ಗುರುಪೀಠದ ಬಸವ ಮಡಿವಾಳ ಸ್ವಾಮೀಜಿ, ಕೇತೇಶ್ವರ ಸ್ವಾಮೀಜಿ, ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಇದ್ದರು.

ಸಮಸ್ಯೆ ಶಾಶ್ವತವಲ್ಲ: ಶರಣರು

ಚಿತ್ರದುರ್ಗ: ‘ಮಠದ ಒಳಗಿರುವವರೇ ಷಡ್ಯಂತ್ರ, ಪಿತೂರಿ ನಡೆಸಿದ್ದಾರೆ. ಈ ಸಮಸ್ಯೆ ಶಾಶ್ವತವಲ್ಲ. ಯಾರೊಬ್ಬರೂ ದುಃಖಪಡಬೇಡಿ’ ಎಂದು ಶಿವಮೂರ್ತಿ ಮುರುಘಾ ಶರಣರು ಭಕ್ತರಿಗೆ ಕೋರಿದ್ದಾರೆ.

ಮಠದಲ್ಲಿ ಶನಿವಾರ ನಡೆದ ಭಕ್ತರ ಸಭೆಯಲ್ಲಿ ಅವರು ಮಾತನಾಡಿದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಎಲ್ಲವನ್ನೂ ಕಾಲವೇ ನಿರ್ಣಯಿಸು-ತ್ತದೆ. ಸಾಧ್ಯವಾದರೆ ಸಮಸ್ಯೆ ಬಗೆಹರಿಸಿ-ಕೊಳ್ಳೋಣ, ಇಲ್ಲವೇ ಹೋರಾಡೋಣ. ಎರಡೂ ವಿಚಾರಕ್ಕೂ ನಾವು ಸಿದ್ಧ. ಸಮರ ಹಾಗೂ ಸಂಧಾನದ ಹಾದಿಗಳು ನಮ್ಮ ಎದುರು ಇವೆ’ ಎಂದು ಹೇಳಿದರು.

‘ರೋಲ್‌ಕಾಲ್‌, ಬ್ಲ್ಯಾಕ್‌ಮೇಲ್ ತಂತ್ರದ ಮೂಲಕ ಅಧಿಕಾರ ಬೇಕು ಎಂಬ ಧೋರಣೆ ಇಲ್ಲಿ ಮುಖ್ಯವಾಗಿದೆ. ಜಗತ್ತಿನಲ್ಲಿ ಧರ್ಮಾಂಧರು, ಕಳ್ಳರು ಈ ರೀತಿ ಸನ್ನಿವೇಶ ಎದುರಿಸಿಲ್ಲ. ತಾತ್ವಿಕ ತಳಹದಿಯ ಮೇಲೆ ನಡೆದವರಿಗೆ ಕುತ್ತು ಎದುರಾಗುತ್ತದೆ. ಗಾಂಧಿ, ಬಸವಣ್ಣ ಅವರೂ ನೋವಿನ ದಿನಗಳನ್ನು ಎದುರಿಸಿದ್ದಾರೆ’ ಎಂದರು.

‘ಎಲ್ಲ ಸಮಾಜ ಸುಧಾರಕರ ಕಾಲದಲ್ಲಿಯೂ ಸಾತ್ವಿಕ ಶಕ್ತಿ ಮತ್ತು ದುಷ್ಟಶಕ್ತಿಯ ನಡುವೆ ಹೋರಾಟ ನಡೆದಿವೆ. ಸಾತ್ವಿಕರು ಸಕಾರಾತ್ಮಕ ಧೋರಣೆ ಹೊಂದಿರುತ್ತಾರೆ. ಅದಕ್ಕೆ ವ್ಯತಿರಿಕ್ತವಾಗಿ ಅನೇಕರು ನಕಾರಾತ್ಮಕ ಧೋರಣೆ ಹೊಂದಿರುತ್ತಾರೆ. ಏಸುಕ್ರಿಸ್ತರಿಗೆ ಶಿಲುಬೆಗೆ ಏರಿಸಿದವರು ಅದೇ ಧರ್ಮದವರು. ಪೈಗಂಬರರಿಗೆ ಕಿರುಕುಳ ನೀಡಿದವರು, ಗೌತಮ ಬುದ್ಧನಿಗೆ ಹಂದಿಯ ಮಾಂಸದ ರಸ ಉಣಿಸಿದವರು ಅದೇ ಧರ್ಮದವರು’ ಎಂದು ಬೇಸರ ವ್ಯಕ್ತಪಡಿಸಿದರು.

ಡಿ.ಸಿ ಮಧ್ಯಪ್ರವೇಶದ ಬಳಿಕ ದಾವೆ

• ಕೆ.ನರಸಿಂಹಮೂರ್ತಿ

ಮೈಸೂರು: ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಸೇರಿದಂತೆ ಮಠದ ಮೂವರು ಹಾಗೂ ಮೈಸೂರಿನ ಇಬ್ಬರ ವಿರುದ್ಧ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಂ ಅವರು ಮಧ್ಯಪ್ರವೇಶಿಸಿದ ನಂತರವೇ ದೂರು ದಾಖಲಾಗಿದೆ!

‘ಸಂತ್ರಸ್ತ ಬಾಲಕಿಯರ ಜೊತೆಗೆ ಸುದೀರ್ಘ ಆಪ್ತಸಮಾಲೋಚನೆ ನಡೆಸಿ, ಹೇಳಿಕೆ ಸತ್ಯಾಂಶವನ್ನು ದೃಢಪಡಿಸಿಕೊಂಡ ಬಳಿಕ, ದೂರು ದಾಖಲಿಸಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸೂಚನೆ ನೀಡಲಾಯಿತು. ಆದರೆ, ರಕ್ಷಣಾ ಘಟಕದ ಅಧಿಕಾರಿ ದೂರು ದಾಖಲಿಸಲು ಮೊದಲು ಪೊಲೀಸರು ನಿರಾಕರಿಸಿದರು’ ಎಂದು ಮಕ್ಕಳ ಕಲ್ಯಾಣ ಸಮಿತಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಲೈಂಗಿಕ ದೌರ್ಜನ್ಯದ ಘಟನೆಯು ಮೈಸೂರಿನಲ್ಲಿ ನಡೆದಿಲ್ಲ. ಹೀಗಾಗಿ ಇಲ್ಲಿನ ಸಮಿತಿಯ ನೇತೃತ್ವದಲ್ಲಿ ದೂರು ದಾಖಲಿಸಬಹುದೇ ಎಂಬ ಬಗ್ಗೆ ಚರ್ಚೆ ನಡೆಯಿತು. ಎಸಿಪಿ ದರ್ಜೆಯ ಅಧಿಕಾ-ರಿಯೊಬ್ಬರು ಸಮಿತಿಯ ಮುಂದೆ ಬಂದು ಆ ಬಗ್ಗೆ ಗಮನ ಸೆಳೆದರು. ಇಲ್ಲಿ ದೂರು ದಾಖಲಿಸಲು ಒಲವು ತೋರಲಿಲ್ಲ’ ಎಂದು ಮೂಲಗಳು ಹೇಳಿವೆ.

‘ಮಕ್ಕಳು ಬಂದಿರುವುದರಿಂದ, ಇಲ್ಲಿಯೇ ದೂರು ದಾಖಲಿಸಬೇಕು ಎಂದು ಸಮಿತಿ ಪ್ರತಿಪಾದಿಸಿತು. ಇದನ್ನು ಡಿ.ಸಿ. ಗಮನಕ್ಕೂ ತರಲಾಯಿತು. ಅವರು ಸಮಿತಿಯ ತೀರ್ಮಾನವೇ ಅಂತಿಮ ಎಂದು ಸ್ಪಷ್ಟಪಡಿಸಿದ ಬಳಿಕವೇ ದೂರು ದಾಖಲಿಸಿದರು’ ಎಂದು ತಿಳಿಸಿವೆ.

‘ಚಿತ್ರದುರ್ಗದಲ್ಲಿ ದೂರು ದಾಖಲಿಸಿದರೆ ನ್ಯಾಯ ದೊರಕುವುದಿಲ್ಲ ಎಂದು, ಮಕ್ಕಳನ್ನು ಇಲ್ಲಿಗೆ ಕರೆತಂದಿದ್ದ-ವರೂ ಪ್ರತಿಪಾದಿಸಿದ್ದರಿಂದ, ಇಲ್ಲಿಯೇ ದೂರು ದಾಖಲಿಸಲು ನಿರ್ಧರಿಸಲಾ-ಯಿತು’ ಎಂದು ತಿಳಿಸಿವೆ.

ಐತಿಹಾಸಿಕ ಮುರುಘಾ ಮಠದಲ್ಲಿ ಅನಿರೀಕ್ಷಿತ ಬೆಳವಣಿಗೆ

ಪೀಠಾಧ್ಯಕ್ಷ–ಆಡಳಿತಾಧಿಕಾರಿ ಮುಸುಕಿನ ಗುದ್ದಾಟ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಐತಿಹಾಸಿಕ ಮುರುಘಾ ಮಠದ ಶೂನ್ಯ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರು ಹಾಗೂ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ನಡುವಿನ ಮುಸುಕಿನ ಗುದ್ದಾಟ ಅನಿರೀಕ್ಷಿತ ಬೆಳವಣಿಗೆಗೆ ಸಾಕ್ಷಿಯಾಗಿದೆ.

ಪರಸ್ಪರರ ವಿರುದ್ಧ ಲೈಂಗಿಕ ಕಿರುಕುಳದ ಪ್ರಕರಣಗಳು ದಾಖಲಾಗಿದ್ದು, ಭಕ್ತರನ್ನು ಮುಜುಗರಕ್ಕೀಡು ಮಾಡಿದೆ. ಶಿವಮೂರ್ತಿ ಮುರುಘಾ ಶರಣರು ಹಾಗೂ ಎಸ್.ಕೆ. ಬಸವರಾಜನ್ ಅವರಿಗೆ ಮುರುಘಾ ಮಠದ ನಂಟು ಬಾಲ್ಯದಿಂದ ಇದೆ.

ಶಿಕ್ಷಣಕ್ಕಾಗಿ ಮುರುಘಾ ಮಠಕ್ಕೆ ಬಂದ ಇಬ್ಬರೂ, ಪೀಠಾಧ್ಯಕ್ಷರಾಗಿದ್ದ ಮಲ್ಲಿಕಾರ್ಜುನ ಸ್ವಾಮೀಜಿ ಅವರ ನೆಚ್ಚಿನ ಶಿಷ್ಯರಾಗಿದ್ದರು. ಶರಣರು ಶೂನ್ಯ ಪೀಠಾರೋಹಣ ಮಾಡಿದರೆ, ಬಸವರಾಜನ್ ಆಡಳಿತಾಧಿಕಾರಿಯಾಗಿ ಮಠದ ಚುಕ್ಕಾಣಿ ಹಿಡಿದರು.

ಆತ್ಮೀಯರಾಗಿದ್ದ ಇಬ್ಬರು ಮಠವನ್ನು ಅಭಿವೃದ್ಧಿ ಪಥದಲ್ಲಿ ನಡೆಸಿದರು. ಸಮಾಜದ ಎಲ್ಲ ಸಮುದಾಯಕ್ಕೆ ಗುರುಪೀಠ ಸ್ಥಾಪಿಸಿ ದೀಕ್ಷೆ ನೀಡುವ ಐತಿಹಾಸಿಕ ತೀರ್ಮಾನದ ಹಿಂದೆ ಇಬ್ಬರ ಆಲೋಚನೆ ಇದೆ ಎಂದು ಕಿರಿಯ ಮಠಾಧೀಶರು ಸ್ಮರಿಸಿಕೊಳ್ಳುತ್ತಾರೆ. ರಾಜಕೀಯ ಒಲವಿದ್ದ ಬಸವರಾಜನ್, ಮುರುಘಾ ಶರಣರ ನಡುವಿನ ವೈಮನಸು ಹಲವು ಬೆಳವಣಿಗೆಗೆ ಕಾರಣವಾಗಿದೆ.

ಆರ್ಥಿಕ ವ್ಯವಹಾರ, ಪ್ರಮುಖ ತೀರ್ಮಾನದ ಬಗ್ಗೆ ಇಬ್ಬರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದ್ದರಿಂದ 2007ರಲ್ಲಿ ಬಸವರಾಜನ್ ಮುರುಘಾ ಮಠದಿಂದ ಹೊರಬಂದರು. ಜೆಡಿಎಸ್ ಟಿಕೆಟ್ ಪಡೆದು ಚುನಾವಣಾ ರಾಜಕೀಯ ಪ್ರವೇಶಿಸಿ ಶಾಸಕರಾಗಿ ಆಯ್ಕೆಯಾದರು. ಮಠದ ಸ್ಥಿರಾಸ್ತಿ ಹಾಗೂ ಬಹಿರಂಗ ಆರೋಪಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪರಸ್ಪರ ದಾವೆ ಹೂಡಿದರು. ಇವು ಇತ್ಯರ್ಥವಾಗುವ ಹಂತ ತಲುಪಿದಾಗ ಮತ್ತೆ ಒಗ್ಗೂಡಿದರು.

14 ವರ್ಷ ಮಠದಿಂದ ದೂರ ಇದ್ದ ಬಸವರಾಜನ್ 2022ರ ಮಾರ್ಚ್ 9ರಂದು ಆಡಳಿತಾಧಿಕಾರಿಯಾಗಿ ಮರುನೇಮಕಗೊಂಡರು. ಶಿವಮೂರ್ತಿ ಮುರುಘಾ ಶರಣರೇ ಇದನ್ನು ಅಧಿಕೃತವಾಗಿ ಪ್ರಕಟಿಸಿದರು. ಅಲ್ಲದೆ, ಕೋರ್ಟ್ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳುವ ಒಪ್ಪಂದಕ್ಕೆ ಬಂದಿದ್ದರು. ಬಸವರಾಜನ್ ಅವರಿಗೆ ಮಠ ಹಲವು ಷರತ್ತು ವಿಧಿಸಿತ್ತು.

ಎರಡು ವಾರದ ಬಳಿಕ ಬಾಂಧವ್ಯದಲ್ಲಿ ಮತ್ತೆ ಬಿರುಕು ಕಾಣಿಸಿಕೊಂಡಿತು. ಅಧಿಕಾರ, ಆರ್ಥಿಕ ವ್ಯವಹಾರಕ್ಕೆ ಸಂಬಂಧಿಸಿದ ತೀರ್ಮಾನಗಳಲ್ಲಿ ಭಿನ್ನಾಭಿಪ್ರಾಯ ಬಲಗೊಂಡಿತು. ಬಸವಾದಿತ್ಯ ದೇವರು ಅವರನ್ನು ಉತ್ತರಾಧಿಕಾರಿಯಾಗಿ ನೇಮಿಸುವಾಗ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ ಎಂಬ ಸಿಟ್ಟನ್ನು ಆಡಳಿತಾಧಿಕಾರಿ ಹೊರಹಾಕಿದ್ದರು. ಹಾಸ್ಟೆಲ್‌ನಿಂದ ತೆರಳಿದ್ದ ಇಬ್ಬರು ಸಂತ್ರಸ್ತ ಬಾಲಕಿಯರನ್ನು ಬೆಂಗಳೂರಿನ ಕಾಟನ್‌ಪೇಟೆ ಪೊಲೀಸ್ ಠಾಣೆಯಿಂದ ಆಡಳಿತಾಧಿಕಾರಿ ಕರೆತಂದ ಬಳಿಕ ಕಂದಕ ಮೂಡಿತ್ತು.

ಜುಲೈ ಅಂತ್ಯಕ್ಕೆ ಆಡಳಿತಾಧಿಕಾರಿ ಕಚೇರಿಗೆ ಬೀಗ ಹಾಕಲಾಯಿತು. ಕುಪಿತಗೊಂಡ ಬಸವರಾಜನ್ ಮತ್ತೆ ಮಠಕ್ಕೆ ಮರಳಲಿಲ್ಲ. ಸಲಹಾ ಸಮಿತಿ, ಕಿರಿಯ ಮಠಾಧೀಶರ ಮಧ್ಯಸ್ಥಿಕೆಯಲ್ಲಿ ಸಂಧಾನ ಸಭೆ ನಡೆದರೂ ಒಗ್ಗೂಡಲಿಲ್ಲ. ಆಡಳಿತಾಧಿಕಾರಿ ಹುದ್ದೆಯಿಂದ ಬಸವರಾಜನ್ ಪದಚ್ಯುತಿಯಾಗಿದೆ ಎಂದು ಮಠ ಹೇಳುತ್ತಿದ್ದರೂ ಆದೇಶ ಹೊರಬಿದ್ದಿಲ್ಲ ಎನ್ನುತ್ತಾರೆ ಅವರ ಆಪ್ತರು.

ಕಾನೂನುಬದ್ಧ ಕ್ರಮ: ಎಸ್‌ಪಿ

ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಶರಣರು ಹಾಗೂ ಆಡಳಿತಾಧಿಕಾರಿ ಬಸವರಾಜನ್ ವಿರುದ್ಧ ದಾಖಲಾದ ಪ್ರಕರಣಗಳಲ್ಲಿ ಕಾನೂನುಬದ್ಧವಾಗಿ ನಡೆದುಕೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಪರಶುರಾಮ್ ತಿಳಿಸಿದ್ದಾರೆ.

‘ಮೈಸೂರಿನಿಂದ ವರ್ಗಾವಣೆಗೊಂಡ ಲೈಂಗಿಕ ಕಿರುಕುಳ ಪ್ರಕರಣ ಸ್ವೀಕರಿಸಲಾಗಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ. ಸಂತ್ರಸ್ತ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯ ಸಹಕಾರದೊಂದಿಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಪೋಕ್ಸೊ ಪ್ರಕರಣಕ್ಕೆ ರೂಪಿಸಿದ ನಿಯಮಾವಳಿ ಪ್ರಕಾರವೇ ತನಿಖೆ ನಡೆಯಲಿದೆ. ಡಿವೈಎಸ್‌ಪಿ ಅನಿಲ್‌ಕುಮಾರ್ ತನಿಖಾಧಿಕಾರಿಯಾಗಿ ನಿಯೋಜನೆಗೊಂಡಿದ್ದಾರೆ’ ಎಂದು ಅವರು ಮಾಹಿತಿ ನೀಡಿದರು.

ನಿಧನ ವಾರ್ತೆ

ಎಂ.ಎಂ. ನಾಯಕ್

ಬೆಂಗಳೂರು: ಕೆಪಿಎಸ್‌ಸಿ ಮಾಜಿ ಸದಸ್ಯ ಎಂ.ಎಂ.ನಾಯಕ್ (90) ಅವರು ವಯೋಸಹಜ ಅನಾರೋಗ್ಯದಿಂದ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.

ಅಂಕೋಲಾ ತಾಲ್ಲೂಕಿನ ವರಾದ ಗ್ರಾಮದವರಾಗಿದ್ದ ನಾಯಕ್, ಸಚಿವಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾದ ಮೇಲೆ ನಗರದಲ್ಲಿ ನೆಲೆಸಿದ್ದರು. ಪುತ್ರರು ಅಮೆರಿಕದಲ್ಲಿದ್ದು, ನಗರಕ್ಕೆ ಸೋಮವಾರ ಬರುವ ಸಾಧ್ಯತೆ ಇದೆ. ಬಳಿಕ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

Indian Institute of Tourism and Travel Management
An Autonomous Body under
Ministry of Tourism, Government of India
पर्यटन शिक्षा संस्कृति रक्षा
MBA Tourism & Travel Management
Rs. 67,000/- waived of on Total FEE for MBA Only at Nellore Centre
IITTM
Dual Specialization in LOGISTICS & TOUR OPERATIONS
BBA Tourism & Travel
Rs. 52,000/- waived of on Total FEE for BBA Only at Nellore Centre
ADMISSIONS OPEN
Contact : 87781-58261, 94907-87854, 99664-62786, 89991-99338
Programs are offered through an MoU with
To Apply visit : www.iittm.ac.in
Write to us : nellore@iittm.ac.in, admissions@iittm.ac.in
INDIRA GANDHI NATIONAL TRIBAL UNIVERSITY (A Central University established by an Act of Parliament) Amarkantak, Madhya Pradesh
100% Campus Placements

ನಿಷ್ಪಕ್ಷಪಾತ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುರುಘಾ ಮಠದ ಶರಣರ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪದಲ್ಲಿ ಸರ್ಕಾರ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಯಾವುದೇ ಪ್ರಭಾವಕ್ಕೂ ಒಳಗಾಗಬಾರದು’ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಒತ್ತಾಯಿಸಿದೆ.

‘ಮಹಿಳೆಯರು, ಮಕ್ಕಳೊಂದಿಗೆ ಲೈಂಗಿಕ ದೌರ್ಜನ್ಯ ಎಸಗಿದ ವ್ಯಕ್ತಿಗಳು ಸಮಾಜದ ದೃಷ್ಟಿಯಲ್ಲಿ ಎಷ್ಟೇ ದೊಡ್ಡವರು ಎನಿಸಿಕೊಂಡಿರಲಿ. ಅವರ ಕೊಳಕು ಕ್ರಿಯೆಯನ್ನು ಸಹಿಸಲಾಗದು’ ಎಂದು ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಮತ್ತು ಪ್ರಧಾನ ಕಾರ್ಯದರ್ಶಿ ದೇವಿ ಹೇಳಿದ್ದಾರೆ.

‘ಪ್ರಾಮಾಣಿಕವಾಗಿ ತನಿಖೆಗೆ ಒಳಪಡಲಿ’

ಪ್ರಜಾವಾಣಿ ವಾರ್ತೆ

ಮೈಸೂರು: ‘ವಚನ ಸಾಹಿತ್ಯ, ಬಸವ ಸಾಹಿತ್ಯವನ್ನು ಪ್ರಚುರಪಡಿಸಿರುವ ಮುರುಘಾ ಶರಣರು ಪ್ರಾಮಾಣಿಕವಾಗಿ ತನಿಖೆಗೆ ಒಳಪಡಬೇಕು. ಸ್ವತಂತ್ರ ನ್ಯಾಯಾಂಗ ತನಿಖೆಯಾಗಬೇಕು. ಸರ್ಕಾರವೂ ನ್ಯಾಯಪರ ಧೋರಣೆ ತಾಳಬೇಕು’ ಎಂದು ಒಡನಾಡಿ ಸಂಸ್ಥೆಯ ಸಂಚಾಲಕರಾದ ಸ್ಟ್ಯಾನ್ಲಿ ಮತ್ತು ಪರಶುರಾಂ ಆಗ್ರಹಿಸಿದ್ದಾರೆ.

‘ಈ ಪ್ರಕರಣ ಸಮಾಜ ತಲೆತಗ್ಗಿಸುವ ವಿಚಾರ. ಧರ್ಮ, ಜಾತಿ, ಕುಲದ ನೆಪದಲ್ಲಿ ಸಮರ್ಥಿಸದೆ, ಜನ ಪ್ರತಿಭಟಿಸಬೇಕು. 4–5 ವರ್ಷದಿಂದ ಮಕ್ಕಳು ಕಿರುಕುಳ ಎದುರಿಸಿದ್ದು, ನ್ಯಾಯ ದೊರಕಿಸುವ ಪ್ರಯತ್ನ ಮಾಡಲಾಗುವುದು’ ಎಂದರು.

‘ರಾಜ್ಯ, ಕೇಂದ್ರ ಮಕ್ಕಳ ಹಕ್ಕುಗಳ ಆಯೋಗ, ಸಂಘ–ಸಂಸ್ಥೆಗಳು ಹೋರಾಟದಲ್ಲಿ ಭಾಗಿಯಾಗಬೇಕು, ನಿಷ್ಪಕ್ಷಪಾತ ತನಿಖೆಯಾಗಿ, ಸತ್ಯಾಂಶ ಹೊರಬರಬೇಕು’ ಎಂದರು.

ಶಿವಮೂರ್ತಿ ಮುರುಘಾ ಶರಣರ ಮೇಲಿನ ಲೈಂಗಿಕ ಕಿರುಕುಳ ಆರೋಪ ನನಗೆ ಆಶ್ಚರ್ಯ ತಂದಿಲ್ಲ. ಐದಾರು ತಿಂಗಳ ಹಿಂದೆಯೇ ಇದರ ಬಗ್ಗೆ ಚರ್ಚೆ ನಡೆದಿತ್ತು

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಶಿಕ್ಷಣ ಇಲಾಖೆಯಲ್ಲೂ ಸಂಚಲನ: ಲೈಂಗಿಕ ಕಿರುಕುಳ ಆರೋಪ ಪ್ರಕರಣ ದಾಖಲಾಗುತ್ತಿದ್ದಂತೆ, ಶಿಕ್ಷಣ ಇಲಾಖೆಯಲ್ಲೂ ಸಂಚಲನೆ ಮೂಡಿತ್ತು.

ಸ್ವಾಮೀಜಿ ಹೆಸರು ಉಲ್ಲೇಖಿಸದೇ ‘ಪ್ರಜಾವಾಣಿ’ಯಲ್ಲಿ ಶನಿವಾರ ವರದಿ ಪ್ರಕಟವಾದ ಬಳಿಕ ಉನ್ನತ ಅಧಿಕಾರಿಯೊಬ್ಬರು ಮೈಸೂರಿನ ಡಿಡಿಪಿಐ ಅವರಿಂದ ಮಾಹಿತಿ ಪಡೆದರು.

ಸಾವರ್ಕರ್ ಪೀಠ ಸ್ಥಾಪನೆಗೆ ವಿರೋಧ

ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದಲ್ಲಿ ವಿ.ಡಿ.ಸಾವರ್ಕರ್ ಅಧ್ಯಯನ ಪೀಠ ಸ್ಥಾಪನೆ ನಿರ್ಧಾರಕ್ಕೆ ರಾಜಕೀಯ ವಲಯದಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ರಾಜಕೀಯ ಒತ್ತಡದಿಂದ ಪೀಠ ಸ್ಥಾಪನೆಗೆ ನಿರ್ಧರಿಸಲಾಗಿದೆ. ರಾಜ್ಯದ ಜನರು ಗಮನಿಸುತ್ತಿದ್ದಾರೆ. 2023ರ ವಿಧಾನಸಭೆ ಚುನಾವಣೆಯಲ್ಲಿ ಜನರು ಪ್ರತ್ಯುತ್ತರ ಕೊಡುತ್ತಾರೆ ಎಂದು ಶಾಸಕ ಡಾ.ಜಿ.ಪರಮೇಶ್ವರ ಟೀಕಿಸಿದ್ದಾರೆ.

‘ಗಾಂಧೀಜಿ ಕೊಂದವನ ಪೀಠ ಸ್ಥಾಪಿಸಲು ಹೊರಟವರಿಗೆ ಸಾವರ್ಕರ್ ಪೀಠ ಸ್ಥಾಪಿಸುವುದು ದೊಡ್ಡ ಕೆಲಸವೇನಲ್ಲ. ವಿವಾದ ಮಾಡುವುದೇ ಬಿಜೆಪಿಯವರ ಕೆಲಸವಾಗಿದೆ’ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಪ್ರತಿಕ್ರಿಯಿಸಿದ್ದಾರೆ.

ಮುರುಘಾ ಶ್ರೀ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ವಿದ್ಯಾರ್ಥಿನಿಯರಿದ್ದ ವಸತಿ ನಿಲಯದ ವಾರ್ಡನ್ ಎರಡನೇ ಆರೋಪಿಯಾಗಿದ್ದರೆ, ಮಠದ ಬಸವಾದಿತ್ಯ ಮೂರನೇ, ಮಠದ ಭಕ್ತರು ಎನ್ನಲಾದ ಮೈಸೂರಿನ ಪರಮಶಿವಯ್ಯ ಮತ್ತು ವಕೀಲ ಗಂಗಾಧರಯ್ಯ ಕ್ರಮವಾಗಿ ನಾಲ್ಕು ಮತ್ತು ಐದನೇ ಆರೋಪಿಗಳಾಗಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ ಸಿ.ಚಂದ್ರಕುಮಾರ್ ದೂರು ನೀಡಿದ್ದು, ‘ಇಬ್ಬರು ವಿದ್ಯಾರ್ಥಿನಿಯರ ಪೈಕಿ ಒಬ್ಬರನ್ನು ಮುರುಘಾ ಶರಣರು ಮೂರೂವರೆ ವರ್ಷಗಳಿಂದ, ಮತ್ತೊಬ್ಬರನ್ನು ಒಂದೂವರೆ ವರ್ಷದಿಂದ ಲೈಂಗಿಕವಾಗಿ ದೌರ್ಜನ್ಯ ಮಾಡುತ್ತಿದ್ದರು. ಈ ಕೃತ್ಯಕ್ಕೆ ಉಳಿದ ಆರೋಪಿಗಳು ಸಹಕರಿಸಿರುವುದಾಗಿ ವಿದ್ಯಾರ್ಥಿನಿಯರು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಆಪ್ತಸಮಾಲೋಚನೆ ವೇಳೆ ಹೇಳಿಕೆ ನೀಡಿದ್ದಾರೆ‘ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಮಧ್ಯಾಹ್ನ 3 ಗಂಟೆಯಿಂದ 9ರವರೆಗೂ ಮಕ್ಕಳೊಂದಿಗೆ ಆಪ್ತ ಸಮಾಲೋಚನೆ ನಡೆಸಿದ ಸಮಿತಿಯು, ರಾತ್ರಿ 10ರ ವೇಳೆಗೆ ದೂರು ದಾಖಲಿಸಲು ಅಧಿಕಾರಿಗೆ ಸೂಚಿಸಿತ್ತು. ಅದರಂತೆ ಶುಕ್ರವಾರ ರಾತ್ರಿ 10.30ರ ವೇಳೆಗೆ ದೂರು ದಾಖಲಾಗಿದೆ.

ಆಡಳಿತಾಧಿಕಾರಿ ವಿರುದ್ಧ ದೂರು

ಚಿತ್ರದುರ್ಗ ವರದಿ: ಮಹಿಳೆಗೆ ಲೈಂಗಿಕ ಕಿರುಕುಳ ಕುರಿತಂತೆ ಮಠದ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್, ಕೃತ್ಯಕ್ಕೆ ಕುಮ್ಮಕ್ಕು ನೀಡಿದ ಆರೋಪದಡಿ ಅವರ ಪತ್ನಿ ಸೌಭಾಗ್ಯ ವಿರುದ್ಧ ಇಲ್ಲಿನ ಗ್ರಾಮೀಣ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಸವರಾಜನ್

ಸೌಭಾಗ್ಯ

ಬಲಾತ್ಕಾರ (ಐಪಿಸಿ 354ಎ), ಕೊಲೆ ಬೆದರಿಕೆ (ಐಪಿಸಿ 506), ಶಾಂತಿ ಭಂಗಕ್ಕೆ ಪ್ರಚೋದಿಸುವುದು (ಐಪಿಸಿ 504), ಅಪರಾಧ ಸಂಚು (ಐಪಿಸಿ 34) ಸೇರಿ ಹಲವು ಕಾಲಂ ಅಡಿಯಲ್ಲಿ ದಂಪತಿ ವಿರುದ್ಧ ಪ್ರಕರಣ ದಾಖಲಾಗಿದೆ. ಬಸವರಾಜನ್ ಮಾಜಿ ಶಾಸಕರಾಗಿದ್ದು, ಸೌಭಾಗ್ಯ ಅವರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆಯಾಗಿದ್ದಾರೆ.

ಮಠದಲ್ಲಿ ನೆಲೆಸಿದ್ದ ಮಹಿಳೆಯೇ ಈ ಇಬ್ಬರ ವಿರುದ್ಧ ದೂರು ನೀಡಿದ್ದು, ‘ಜುಲೈ 27ರಂದು ಸಂಜೆ 6ಕ್ಕೆ ಪರಿಶೀಲನೆ ನೆಪದಲ್ಲಿ ವಿದ್ಯಾರ್ಥಿನಿಯರ ವಸತಿನಿಲಯಕ್ಕೆ ಭೇಟಿ ನೀಡಿದ್ದ ಆಡಳಿತಾಧಿಕಾರಿ, ಅಶ್ಲೀಲವಾಗಿ ಮಾತನಾಡಿದರು. ಯಾರೂ ಇಲ್ಲದ್ದನ್ನು ಗಮನಿಸಿ ದೇಹದ ಅಂಗಾಂಗ ಮುಟ್ಟಿ ಕಿರುಕುಳ ನೀಡಿದರು. ಬಲಾತ್ಕಾರಕ್ಕೆ ಯತ್ನಿಸಿದಾಗ ಪ್ರತಿರೋಧ ತೋರಿದೆ. ಕುಪಿತಗೊಂಡ ಅವರು ಕೊಲೆ ಬೆದರಿಕೆ ಹಾಕಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮಠದ ಶಿಕ್ಷಣ ಸಂಸ್ಥೆಯಲ್ಲಿದ್ದ ಇಬ್ಬರು ವಿದ್ಯಾರ್ಥಿನಿಯರು ವೈಯಕ್ತಿಕ ಕಾರಣ ನೀಡಿ ಹಾಸ್ಟೆಲ್‌ನಿಂದ ಹೋಗಿದ್ದು, ಬೆಂಗಳೂರಿನ ಕಾಟನ್‌ಪೇಟೆ ಪೊಲೀಸ್ ಠಾಣೆ ತಲುಪಿದ್ದರು. ಠಾಣೆಯಿಂದ ಮಕ್ಕಳನ್ನು ಕರೆತಂದ ಬಸವರಾಜನ್, ವಸತಿನಿಲಯಕ್ಕೆ ಒಪ್ಪಿಸದೇ ತಮ್ಮ ಮನೆಯಲ್ಲಿ ಅಕ್ರಮವಾಗಿ ಇಟ್ಟುಕೊಂಡಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಲೈಂಗಿಕ ಕಿರುಕುಳ ನೀಡಿದ್ದಾರೆ’ ಎಂದು ಹೇಳಿದ್ದಾರೆ.

ಪ್ರಕರಣ ಚಿತ್ರದುರ್ಗಕ್ಕೆ ವರ್ಗ: ಈ ಮಧ್ಯೆ, ಮೈಸೂರಿನಲ್ಲಿ ದಾಖಲಾಗಿದ್ದ ಪ್ರಕರಣವನ್ನು ಚಿತ್ರದುರ್ಗದ ಗ್ರಾಮಾಂತರ ಠಾಣೆಗೆ ವರ್ಗಾಯಿಸಲಾಗಿದೆ. ದೂರುದಾರ ಬಾಲಕಿಯರನ್ನು ಚಿತ್ರದುರ್ಗಕ್ಕೆ ಕರೆದೊ ಯ್ಯಲಾಯಿತು. ಮಕ್ಕಳ ಕಲ್ಯಾಣ ಸಮಿತಿ ಸದಸ್ಯರೊಬ್ಬರು, ಮಹಿಳಾ ಆಪ್ತಸಮಾಲೋಚಕರು ಸೇರಿದಂತೆ ಸುಮಾರು 8ಮಂದಿ ಬಾಲಕಿಯರೊಂದಿಗೆ ತೆರಳಿದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು: ನವೋದ್ಯಮದ ತವರು

ಒಂದನೇ ಪುಟದಿಂದ..

ಅವರಲ್ಲಿ ಆರಂಭಿಕ ಬಂಡವಾಳ ಇದೆ. ಅವರಲ್ಲಿನ ಹಣ ಸಾಲದಿದ್ದರೆ, ಒಂದಿಷ್ಟು ಹಣ ತೊಡಗಿಸಲು ಜೊತೆಗಾರರು ಇದ್ದಾರೆ. ತಂತ್ರಜ್ಞಾನ ಆಧಾರಿತ ನವೋದ್ಯಮದ ಪರಿಕಲ್ಪನೆಯನ್ನು ಸ್ಪಷ್ಟವಾಗಿ ವಿವರಿಸಿದರೆ, ದೊಡ್ಡ ಬಂಡವಾಳ ಹೂಡಿಕೆ ಮಾಡುವ ಕಂಪನಿಗಳು ಇವೆ.

'ತಂತ್ರಜ್ಞಾನ ಆಧಾರಿತ ನವೋದ್ಯಮಕ್ಕೆ ಅಗತ್ಯವಿರುವ ಪರಿಸರ ಬೆಂಗಳೂರಿನಲ್ಲಿ ಬೆಳೆದಿದೆ. ಬಂಡವಾಳ ಹೂಡಿಕೆ ಮಾಡುವವರಲ್ಲಿಯೂ ತಂತ್ರಜ್ಞಾನ ಹಿನ್ನೆಲೆಯವರೇ ಹೆಚ್ಚಿದ್ದಾರೆ. ಇವೆಲ್ಲವೂ ಪೂರಕವಾಗಿ ಕೆಲಸ ಮಾಡುತ್ತಿವೆ' ಎಂದು ವಿಶ್ಲೇಷಿಸುತ್ತಾರೆ ತೇಜಸ್ ನೆಟ್‌ವರ್ಕ್ಸ್ ಕಂಪನಿಯ ನಿವೃತ್ತ ಹಿರಿಯ ಉಪಾಧ್ಯಕ್ಷ, ನವೋದ್ಯಮಗಳ ಕುರಿತು ಅಧ್ಯಯನ ನಡೆಸಿರುವ ಸತ್ಯೇಶ್ ಬೆಳ್ಳೂರ್.

ಬಂಡವಾಳದಲ್ಲಿ ಮುಂದು

ನವೋದ್ಯಮಗಳ ರಾಜಧಾನಿಯಾಗಿ ಬೆಂಗಳೂರು ಬೆಳೆದು ನಿಂತಿದ್ದಕ್ಕೆ ಐ.ಟಿ. ಮತ್ತು ಬಿ.ಟಿ. ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಜಿಎಸ್‌ಇಆರ್ ವರದಿಯನ್ನು ಆಧರಿಸಿ ಇನ್ನೊಂದಿಷ್ಟು ಕಾರಣಗಳನ್ನು ನೀಡುತ್ತಾರೆ. 'ಬಂಡವಾಳ ಸಂಗ್ರಹಿಸುವ ವಿಚಾರದಲ್ಲಿ ಬೆಂಗಳೂರು ಜಗತ್ತಿನ ಟಾಪ್ 15 ನಗರಗಳ ಪೈಕಿ ಒಂದು, ನವೋದ್ಯಮಗಳ ಯಶಸ್ಸಿನ ದೃಷ್ಟಿಯಿಂದ ಬೆಂಗಳೂರು ಟಾಪ್ 25 ನಗರಗಳ ಪೈಕಿ ಒಂದು' ಎಂದು ಅವರು ವಿವರಿಸುತ್ತಾರೆ.

ಬೆಂಗಳೂರಿನಲ್ಲಿ ಇರುವ ಮೂಲಸೌಕರ್ಯ, ತಾಂತ್ರಿಕ ನಿಪುಣರ ಸಂಖ್ಯೆ ಮತ್ತು ಬಂಡವಾಳ ಸಂಗ್ರಹ ಅವಕಾಶಗಳು ಈ ನಗರವನ್ನು ನವೋದ್ಯಮಗಳ ಪಾಲಿನ ಗಮ್ಯ ಸ್ಥಾನವನ್ನಾಗಿಸಿವೆ ಎಂದು ಅಶ್ವತ್ಥನಾರಾಯಣ ಅವರು ಜಿಎಸ್‌ಇಆರ್ ವರದಿ ಉಲ್ಲೇಖಿಸುತ್ತಾರೆ. ಬಂಡವಾಳ ಸಂಗ್ರಹ ಅವಕಾಶದ ಬಗ್ಗೆ ಸಚಿವರ ಮಾತು ಅನುಮೋದಿಸುವ ನವೋದ್ಯಮ ಕಂಪನಿ ಮೈಲ್ಯಾಂಗ್ ಬುಕ್ಸ್ ಪ್ರೈ.ಲಿ. ಸಹಸಂಸ್ಥಾಪಕ ಹಾಗೂ ಬರಹಗಾರ ವಸಂತ ಶೆಟ್ಟಿ, 'ಸಾಫ್ಟ್‌ವೇರ್ ಲೋಕದ ಪ್ರತಿಭಾವಂತರು ಹೊಸ ಆಲೋಚನೆಗಳ ಮೂಲಕ ಇಲ್ಲಿ ನವೋದ್ಯಮಗಳನ್ನು ಸೃಷ್ಟಿಸಿದರು. ಹೂಡಿಕೆಗಳ ಮೂಲಕ ಸಂಪತ್ತು ಸೃಷ್ಟಿಸಿದ್ದ ಇಲ್ಲಿನ ಹಲವರು, ನವೋದ್ಯಮಗಳ ಮೇಲೆ ಹೂಡಿಕೆಗೆ ಮುಂದಾದರು' ಎಂದು ವಿವರಿಸುತ್ತಾರೆ.

ತಂತ್ರಜ್ಞಾನ ಆಧಾರಿತ ನವೋದ್ಯಮಗಳಲ್ಲಿ ಆಗುತ್ತಿರುವ ವೆಂಚರ್ ಕ್ಯಾಪಿಟಲ್ ಹೂಡಿಕೆಯಲ್ಲಿ ಬೆಂಗಳೂರು ಈಗ ಜಾಗತಿಕ ಮಟ್ಟದಲ್ಲಿ ಐದನೆಯ ಸ್ಥಾನದಲ್ಲಿದೆ. 2017ರಿಂದ 2021ರ ನಡುವಿನ ಅವಧಿಯಲ್ಲಿ ಬೆಂಗಳೂರಿನಲ್ಲಿ ಆಗಿರುವ ವೆಂಚರ್ ಕ್ಯಾಪಿಟಲ್ ಹೂಡಿಕೆಯ ಮೊತ್ತವು ಅಂದಾಜು ₹ 1.67 ಲಕ್ಷ ಕೋಟಿ. ಈ ಅವಧಿಯಲ್ಲಿ ಜಗತ್ತಿನ ಇತರ ನವೋದ್ಯಮ ನಗರಗಳಲ್ಲಿನ ಸರಾಸರಿ ವೆಂಚರ್ ಕ್ಯಾಪಿಟಲ್ ಹೂಡಿಕೆ ₹ 35 ಸಾವಿರ ಕೋಟಿ ಮಾತ್ರ ಎಂಬ ಮಾಹಿತಿಯನ್ನು ಜಿಎಸ್‌ಇಆರ್ ವರದಿ ಹೇಳಿದೆ.

'ಈ ವರ್ಷದ ಜನವರಿಯಿಂದ ಮೇ ತಿಂಗಳವರೆಗಿನ ಅವಧಿಯಲ್ಲಿ ಬೆಂಗಳೂರಿನ ತಂತ್ರಜ್ಞಾನ ಆಧಾರಿತ ನವೋದ್ಯಮಗಳಲ್ಲಿ ಒಟ್ಟು ₹ 59 ಸಾವಿರ ಕೋಟಿ ವೆಂಚರ್ ಕ್ಯಾಪಿಟಲ್ ಹೂಡಿಕೆ ಆಗಿದೆ. ಹಿಂದಿನ ವರ್ಷದ (2021ರ) ಮೊದಲ ಆರು ತಿಂಗಳ ಅವಧಿಯಲ್ಲಿ ಆದ ಹೂಡಿಕೆ ₹ 41 ಸಾವಿರ ಕೋಟಿ ಮಾತ್ರ. ಬೆಂಗಳೂರು ನಗರವು ಈಗ ಸಿಂಗಪುರ, ಪ್ಯಾರಿಸ್ ಮತ್ತು ಬರ್ಲಿನ್‌ಗಿಂತ ಹೆಚ್ಚಿನ ಹೂಡಿಕೆ ಆಕರ್ಷಿಸುತ್ತಿದೆ. ಆದರೆ ಬೋಸ್ಟನ್ ಹಾಗೂ ನ್ಯೂಯಾರ್ಕ್‌ಗಿಂತ ಹಿಂದೆ ಇದೆ' ಎಂದು ಅಶ್ವತ್ಥನಾರಾಯಣ ತಿಳಿಸುತ್ತಾರೆ.

ನವೋದ್ಯಮಗಳು ಬೆಂಗಳೂರಿನಲ್ಲಿ ಬೆಳೆದು ನಿಂತಿರುವುದಕ್ಕೆ ಒಂದು ದೊಡ್ಡ ಕಾರಣ ಇಲ್ಲಿ ವೆಂಚರ್ ಕ್ಯಾಪಿಟಲಿಸ್ಟ್‌ಗಳು, ಏಂಜೆಲ್ ಇನ್ವೆಸ್ಟರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದು. 'ದೇಶದ ಇತರ ಯಾವ ನಗರಕ್ಕೂ ಈ ಬಗೆಯ ಔದ್ಯಮಿಕ ಸಂಸ್ಕೃತಿಯನ್ನು ಕಟ್ಟುವ ವಿಚಾರದಲ್ಲಿ ಬೆಂಗಳೂರನ್ನು ಮೀರಿ ನಿಲ್ಲಲು ಆಗದು. ಬೇರೆ ರಾಜ್ಯಗಳ ನಗರಗಳಲ್ಲಿಯೂ ಮುಂದೆ ನವೋದ್ಯಮಗಳು ಬೆಳೆಯುತ್ತವೆ ಎಂಬುದು ನಿಜ. ಆದರೆ, ಬೆಂಗಳೂರು ಯಾವತ್ತಿಗೂ ಇತರ ನಗರಗಳಿಗಿಂತ ಮುಂದಿರಲಿದೆ' ಎನ್ನುತ್ತಾರೆ.



21,656	17,879	3,777
ರಾಜ್ಯದಲ್ಲಿನ ನೋಂದಾಯಿತ ನವೋದ್ಯಮಗಳು	ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಯಲ್ಲಿನ ನೋಂದಾಯಿತ ನವೋದ್ಯಮಗಳು	ಬೆಂಗಳೂರಿನ ಆಚೆ ನೋಂದಾಯಿತ ಆಗಿರುವ ನವೋದ್ಯಮಗಳು

ಬೆಂಗಳೂರಿನ ಆಚೆ ಅತಿಹೆಚ್ಚಿನ ಸಂಖ್ಯೆಯಲ್ಲಿ ನವೋದ್ಯಮಗಳು ಇರುವ ಜಿಲ್ಲೆಗಳು

ಮೈಸೂರು	ಬೆಳಗಾವಿ	ಹುಬ್ಬಳ್ಳಿ-ಧಾರವಾಡ	ದಕ್ಷಿಣ ಕನ್ನಡ	ಉಡುಪಿ
602	355	244	237	213

ಮೈಸೂರು ಮಹಾರಾಜರ ಆಡಳಿತ ಇದ್ದ ಕಾಲದಿಂದಲೂ ಬೆಂಗಳೂರು ವಿಜ್ಞಾನ ನಗರವಾಗಿ ಗುರುತಿಸಿಕೊಂಡಿದೆ. ಇಲ್ಲಿನ ಹವಾಗುಣ, ಸರ್ಕಾರ ನೀತಿಗಳು ಕೂಡ ಇಂದಿನ ಉತ್ತಮ ಸ್ಥಿತಿಗೆ ಕಾರಣ ಎನ್ನುವುದು ಸಚಿವರ ವಾದ. ನವೋದ್ಯಮಗಳಲ್ಲಿ ಹಲವರು ಈ ಮಾತನ್ನು ಅನುಮೋದಿಸುವರು.

ದೇಶದ ನವೋದ್ಯಮಗಳ ರಾಜಧಾನಿ ಎಂಬ ಹೆಗ್ಗಳಿಕೆಯು ಈಗಲೂ ಬೆಂಗಳೂರಿಗೇ ಇದೆ. ಯೂನಿಕಾರ್ನ್ ಆಗಬಹುದಾದ 46 ನವೋದ್ಯಮಗಳು ಬೆಂಗಳೂರಿನಲ್ಲಿವೆ. ದೆಹಲಿ ಹಾಗೂ ಮುಂಬೈನಲ್ಲಿ ಇರುವ ಇಂತಹ ನವೋದ್ಯಮಗಳ ಸಂಖ್ಯೆ ಕ್ರಮವಾಗಿ 25 ಹಾಗೂ 16 ಎಂದು ಹುರೂನ್ ವರದಿಯಲ್ಲಿ ಹೇಳಲಾಗಿದೆ.

ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ ಅವರು ಸಚಿವರ ಮಾತಿಗೆ ಪೂರಕವಾಗಿ ಇನ್ನೊಂದಿಷ್ಟು ಆಯಾಮಗಳನ್ನು ಮುಂದಿರಿಸುತ್ತಾರೆ. 'ಸರ್ಕಾರ, ಅಕಾಡೆಮಿಕ್ ವಲಯ ಹಾಗೂ ಉದ್ಯಮ ವಲಯವು ಕರ್ನಾಟಕದಲ್ಲಿ ಒಟ್ಟಾಗಿ ಕೆಲಸ ಮಾಡುತ್ತದೆ. ಅಗತ್ಯವಾದ ನೀತಿಗಳನ್ನು ರೂಪಿಸುತ್ತದೆ. ಹೀಗಾಗಿ ಇಲ್ಲಿ ನವೋದ್ಯಮಗಳು ಬೆಳೆದಿವೆ' ಎಂದು ಅವರು ವಿವರಿಸುತ್ತಾರೆ.

ಉನ್ನತ ಶಿಕ್ಷಣ ಖಾಸಗೀಕರಣದ ಫಲ

'ಮೈಸೂರಿನ ಮಹಾರಾಜರು ಕೈಗಾರಿಕೆಗಳಿಗೆ ಆದ್ಯತೆ ನೀಡಿದ್ದರು. ಕೈಗಾರಿಕೀಕರಣದ ಬಗ್ಗೆ ಜನ ಹೆಚ್ಚು ಆಲೋಚನೆ ಮಾಡದೇ ಇದ್ದ ಸಂದರ್ಭದಲ್ಲಿಯೇ ಸರ್.ಎಂ. ವಿಶ್ವೇಶ್ವರಯ್ಯ ಅವರು ಕೈಗಾರಿಕೀಕರಣ ಇಲ್ಲವೇ ವಿನಾಶ ಎಂಬ ಮಾತು ಆಡಿದ್ದರು. ರಾಜ್ಯವು 60 ವರ್ಷಗಳ ಹಿಂದೆಯೇ ಉನ್ನತ ಶಿಕ್ಷಣದಲ್ಲಿ ಖಾಸಗಿಯವರಿಗೆ ಅವಕಾಶ ಕಲ್ಪಿಸಿತು. ಹಲವು ಎಂಜಿನಿಯರಿಂಗ್ ಕಾಲೇಜುಗಳು ಇಲ್ಲಿ ತಲೆಯೆತ್ತಿದವು. ಬೆಂಗಳೂರಿನಲ್ಲಿ ಆರಂಭಗೊಂಡ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳು, ಆಡಳಿತದಲ್ಲಿ ತಂತ್ರಜ್ಞಾನವನ್ನು ಬಹಳ ಹಿಂದೆಯೇ ಅಳವಡಿಸಿಕೊಂಡಿದ್ದು, ನೀತಿಗಳನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿ ಇದ್ದಿದ್ದು... ಇವೆಲ್ಲವುಗಳ ಒಟ್ಟು ಫಲವಾಗಿ ಬೆಂಗಳೂರು ಇಂದು ನವೋದ್ಯಮಗಳ ರಾಜಧಾನಿಯಾಗಿ ಬೆಳೆದಿದೆ' ಎನ್ನುತ್ತಾರೆ ರೆಡ್ಡಿ.

ದೇಶವು ಆರ್ಥಿಕ ಉದಾರೀಕರಣಕ್ಕೆ ತೆರೆದುಕೊಂಡ ನಂತರದಲ್ಲಿ ಬೆಂಗಳೂರು ಐ.ಟಿ. ಕ್ರಾಂತಿಗೆ ಸಾಕ್ಷಿಯಾಯಿತು. ಬೆಂಗಳೂರು ಮೂಲದ ಐ.ಟಿ. ಕಂಪನಿಗಳು ವಿಶ್ವ ಮಟ್ಟದಲ್ಲಿ ಬೆಳೆದವು. ಈ ಕಂಪನಿಗಳಲ್ಲಿ ಹೂಡಿಕೆ ಮಾಡಿದ್ದ ಹಲವರ ಸಂಪತ್ತು ಅಗಾಧವಾಗಿ ಬೆಳೆಯಿತು. ದೇಶದ ಮೂಲೆ ಮೂಲೆಗಳಿಂದ ಐ.ಟಿ. ತಜ್ಞರು ಬೆಂಗಳೂರಿಗೆ ಬಂದು ನೆಲೆ ಕಂಡುಕೊಂಡರು. ಟೆಕಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂಬ ಕಾರಣಕ್ಕೆ ಬೆಂಗಳೂರಿಗೆ ಹೊಸ ಹೊಸ ಐ.ಟಿ. ಕಂಪನಿಗಳು ಬಂದವು. ಇದು ಬೆಂಗಳೂರಿನಲ್ಲಿ ನವೋದ್ಯಮಗಳ ಹುಟ್ಟು, ಬೆಳವಣಿಗೆಗೆ ಅನುಕೂಲ ಕಲ್ಪಿಸುವ ವಾತಾವರಣವನ್ನು ರೂಪಿಸಿತು.

'ಏಂಜೆಲ್ ಇನ್ವೆಸ್ಟರ್‌ಗಳ ಬಹುದೊಡ್ಡ ಸಮುದಾಯ ಬೆಂಗಳೂರಿನಲ್ಲಿದೆ. ಇವರೆಲ್ಲ ಬೆಂಗಳೂರಿನಲ್ಲಿ ಇದ್ದಾರೆ ಎಂಬ ಕಾರಣಕ್ಕೆ, ಕಚೇರಿ ಕೆಲಸಗಳಿಗೆ ಅಗತ್ಯವಿರುವ ಸೇವೆಗಳನ್ನು ಒಂದೇ ಕಡೆ ನೀಡುವ ವಿ-ವರ್ಕ್‌ನಂತಹ ಕಂಪನಿಗಳು ಬಂದು, ನವೋದ್ಯಮಗಳಿಗೆ ಅಗತ್ಯವಿರುವ ಕೆಲವು ಅಗತ್ಯ ಸೌಲಭ್ಯಗಳನ್ನು ಒದಗಿಸಲು ಆರಂಭಿಸಿದವು. ರಾಜ್ಯದ ಶಾಂತಿ, ಸುವ್ಯವಸ್ಥೆ, ಎಲ್ಲರನ್ನೂ ಜೊತೆಗೂಡಿಸಿಕೊಳ್ಳುವ ಕನ್ನಡ ಮನಸ್ಸು ಕೂಡ ಈ ಕ್ರಾಂತಿಗೆ ನೆರವಾಗಿದೆ' ಎಂದು ವಸಂತ ಶೆಟ್ಟಿ ಅಭಿಪ್ರಾಯ ಹಂಚಿಕೊಳ್ಳುತ್ತಾರೆ.

'ಎಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಕಾಲದಿಂದಲೂ ಯಾವ ಪಕ್ಷದ ಮುಖ್ಯಮಂತ್ರಿಯೂ ಇಲ್ಲಿನ ಐ.ಟಿ. ಜಗತ್ತಿಗೆ ತೊಂದರೆ ಆಗದಂತೆ ನೋಡಿಕೊಂಡರು. ಇದು ಕೂಡ ಇಂದಿನ ನವೋದ್ಯಮಗಳ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದೆ' ಎನ್ನುತ್ತಾರೆ ಶೆಟ್ಟಿ ಅವರು.

'ಸರ್ಕಾರದ ನೀತಿಗಳು ಬಹಳ ಚೆನ್ನಾಗಿವೆ. ಅನುಮೋದನೆಗಳು ತ್ವರಿತವಾಗಿ ಸಿಗುತ್ತವೆ. ನಾವು ಇಲ್ಲಿ ನಮ್ಮ ಉದ್ದಿಮೆಯ ಮೇಲೆ ಹೆಚ್ಚು ಗಮನ ಕೊಡಬಹುದು' ಎಂದು ನವೋದ್ಯಮ ಕಂಪನಿ ಡೀಲ್‌ಶೇರ್‌ನ ಸಹ ಸಂಸ್ಥಾಪಕ ಸೌರ್ಜೇಂದು ಮೆಡ್ಡಾ ಅವರು ಹೇಳುತ್ತಾರೆ. ಆದರೆ, ಬೆಂಗಳೂರಿನ ಸಾರ್ವಜನಿಕ ಸಾರಿಗೆ, ನಗರದ ಒಳಗಿನ ರಸ್ತೆ ಜಾಲ ಇನ್ನಷ್ಟು ಚೆನ್ನಾಗಿ ಆಗಬೇಕು ಎಂದು ಬಯಸುತ್ತಾರೆ. ಇವೆರಡು ಇನ್ನಷ್ಟು ಸುಧಾರಣೆ ಕಂಡರೆ ನವೋದ್ಯಮಗಳ ಪಾಲಿಗೆ ಹೆಚ್ಚು ಒಳಿತಾಗುತ್ತದೆ ಎಂಬುದು ಅವರ ಅನಿಸಿಕೆ. ಡೀಲ್‌ಶೇರ್ ಕಂಪನಿಯು ಜೈಪುರದಲ್ಲಿ ಆರಂಭವಾದರೂ, ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಸ್ಥಳಾಂತರಗೊಂಡಿದೆ.

'ಸರ್ಕಾರದ ನೀತಿಯು ನವೋದ್ಯಮಗಳಿಗೆ ಇನ್ನಷ್ಟು ಹಣಕಾಸಿನ ಉತ್ತೇಜನ ಒದಗಿಸಲು, ನವೋದ್ಯಮಗಳಿಗೆ ಬಂಡವಾಳ ಲಭ್ಯತೆಯನ್ನು ಹೆಚ್ಚಿಸಲು ನೆರವಾಗುವಂತೆ ಇರಬೇಕು' ಎಂದು ಬೆಂಗಳೂರಿನ ನವೋದ್ಯಮ ಸ್ಪೈವೇರ್‌ನ ಸಹ ಸಂಸ್ಥಾಪಕ ಅಕ್ಷತ್ ಜೈನ್ ಬಯಸುತ್ತಾರೆ. ತಂತ್ರಜ್ಞಾನ ಜಗತ್ತಿನ ನವೋದ್ಯಮಗಳನ್ನು ಬೆಂಬಲಿಸಲು ಇಲ್ಲಿ ಸರ್ಕಾರವೇ ಒಂದು ವೆಂಚರ್ ಕ್ಯಾಪಿಟಲ್ ನಿಧಿಯನ್ನು ಆರಂಭಿಸಿದೆ ಎಂಬ ಮೆಚ್ಚುಗೆಯ ಮಾತನ್ನೂ ಅವರು ಹೇಳುತ್ತಾರೆ. ಇನ್‌ಸ್ಟಾಮೋಜೊ ಕಂಪನಿಯ ಸಹಸಂಸ್ಥಾಪಕ ಆಕಾಶ್ ಗೆಹಾನಿ ಅವರು ಕೂಡ ಬೆಂಗಳೂರಿನ ಮೂಲಸೌಕರ್ಯದ ಕುರಿತು ಉಲ್ಲೇಖಿಸುತ್ತಾರೆ. 'ಒಳ್ಳೆಯ ಮೂಲಸೌಕರ್ಯ ಇಲ್ಲದಿರುವುದು ದೊಡ್ಡ ಹಿನ್ನಡೆ' ಎಂದು ಅವರು ಹೇಳುತ್ತಾರೆ.

ನವೋದ್ಯಮಗಳಿಗೆ ಹೂಡಿಕೆದಾರರಿಂದ ಬಂಡವಾಳ ಸಿಗುವುದು ಈಗ ತುಸು ಕಷ್ಟವಾಗುತ್ತಿದೆ. ಜಾಗತಿಕ ಅಸ್ಥಿರತೆ ಮತ್ತು ಆರ್ಥಿಕ ಹಿಂಜರಿತದ ಭೀತಿ ಕೂಡ ಇದಕ್ಕೆ ಒಂದು ಕಾರಣ. ಆದರೆ, ಈ ಪರಿಸ್ಥಿತಿ ತಿಳಿಯಾಗುತ್ತದೆ. ನವೋದ್ಯಮಗಳಿಗೆ ಹೂಡಿಕೆ ಮತ್ತೆ ಹೆಚ್ಚಾಗುವುದು ಖಂಡಿತ ಎನ್ನುವ ಅಭಿಪ್ರಾಯವು ಉದ್ಯಮ ಹಾಗೂ ಸರ್ಕಾರದ ಪ್ರಮುಖರಲ್ಲಿ ಇದೆ.

ನವೋದ್ಯಮಗಳಿಗಾಗಿ ಪ್ರತ್ಯೇಕ ಬ್ಯಾಂಕ್ ಶಾಖೆ

ದೇಶದಲ್ಲಿ ನವೋದ್ಯಮಗಳ ಹಣಕಾಸಿನ ಅಗತ್ಯಗಳನ್ನು ಪೂರೈಸಲು ಪ್ರತ್ಯೇಕ ಬ್ಯಾಂಕ್ ಶಾಖೆ ಇರುವುದು ಬೆಂಗಳೂರಿನಲ್ಲಿ ಮಾತ್ರ. ಭಾರತೀಯ ಸ್ಟೇಟ್ ಬ್ಯಾಂಕ್ ಬೆಂಗಳೂರಿನ ಕೋರಮಂಗಲದಲ್ಲಿ ಈಚೆಗೆ ಈ ಶಾಖೆಯನ್ನು ಆರಂಭಿಸಿದೆ.

'ನವೋದ್ಯಮಗಳ ಹಣಕಾಸಿನ ಅಗತ್ಯಗಳು ಇತರ ಉದ್ಯಮಗಳಿಗಿಂತ ತುಸು ಭಿನ್ನ. ನವೋದ್ಯಮಗಳಿಗಾಗಿನ ಶಾಖೆಯಲ್ಲಿ ಅವುಗಳ ಅಗತ್ಯವನ್ನು ಅರ್ಥ ಮಾಡಿಕೊಳ್ಳಬಲ್ಲ ಸಿಬ್ಬಂದಿ ಇರುತ್ತಾರೆ. ಎಸ್‌ಬಿಐ ಇಲ್ಲಿ ಶಾಖೆ ಆರಂಭಿಸಿರುವುದರ ಹಿಂದೆ ನಮ್ಮ ಒತ್ತಾಯವೂ ಕೆಲಸ ಮಾಡಿದೆ. ಈ ಬಗೆಯ ಶಾಖೆ ಆರಂಭಿಸುವಂತೆ ನಾವು ಇತರ ಬ್ಯಾಂಕ್‌ಗಳ ಜೊತೆಯೂ ಮಾತುಕತೆ ನಡೆಸಲಿದ್ದೇವೆ' ಎಂದು ಅಶ್ವತ್ಥನಾರಾಯಣ ಹೇಳಿದರು.

'ಪ್ರತ್ಯೇಕ ಶಾಖೆ ಆರಂಭಿಸುವಂತೆ ಎಸ್‌ಬಿಐಗೆ ಪ್ರಸ್ತಾವ ಸಲ್ಲಿಕೆಯಾಗಿದ್ದು ನಮ್ಮಿಂದಲೇ. ಇಂತಹ ಶಾಖೆ ಆರಂಭಿಸುವ ವಿಚಾರವಾಗಿ ಇತರ ಬ್ಯಾಂಕ್‌ಗಳ ಜೊತೆಯೂ ನಾವು ಸಂಪರ್ಕದಲ್ಲಿದ್ದೇವೆ' ಎಂದು ರಮಣ ರೆಡ್ಡಿ ತಿಳಿಸಿದರು.

ಮಾಯಾನಗರಿಗಳ ಟೊಳ್ಳು ಬಿಚ್ಚಿಟ್ಟ 'ಡೊಳ್ಳು'

ಸಿನಿಮಾ: ಡೊಳ್ಳು (ಕನ್ನಡ)
ನಿರ್ದೇಶನ: ಸಾಗರ್ ಪುರಾಣಿಕ್
ನಿರ್ಮಾಪಕರು: ಅಪೇಕ್ಷ ಪುರೋಹಿತ್, ಪವನ್ ಒಡೆಯರ್
ತಾರಾಗಣ: ಕಾರ್ತಿಕ್ ಮಹೇಶ್, ನಿಧಿ, ಬಾಬು ಹಿರಣಯ್ಯ, ಚಂದ್ರ ಮಯೂರ್, ಶರಣ್ಯ ಸುರೇಶ್

ನಾವು ನೋಡಿದ ಸಿನಿಮಾ

'ಕಾಲಕ್ಕೆ ತಕ್ಕ ಹಾಗೆ ನಾವು ಬದಲಾಗದೇ ಹೋದರೆ ಕಲೆ ಸತ್ತು ಹೋಗುತ್ತದೆ' ಎಂಬ ನಾಯಕನ ಮಾತು 'ಡೊಳ್ಳು' ಸಿನಿಮಾದ ಅಂತರಾಳ. ನಗರೀಕರಣದಿಂದಾಗಿ ನಮಗರಿವಿರದಂತೆಯೇ ಅವನತಿಯತ್ತ ಹೆಜ್ಜೆ ಹಾಕುತ್ತಿರುವ ಜಾನಪದ ಕಲೆಗಳನ್ನು ಉಳಿಸಲು ಡೊಳ್ಳು ಕುಣಿತ ಹಾಕುತ್ತಾ ನಿರ್ದೇಶಕ ಸಾಗರ್ ಪುರಾಣಿಕ್ ಹಲವು ವಾಸ್ತವಗಳನ್ನು ಹರಡಿದ್ದಾರೆ.

ಊರಿನಲ್ಲಿರುವ ಶಿವನ ದೇವಸ್ಥಾನದ ವರ್ಷಂಪ್ರತಿ ಜಾತ್ರೆಯಲ್ಲಿ ಡೊಳ್ಳು ಕುಣಿತ ಸಂಪ್ರದಾಯ. ಈ ಸಂಪ್ರದಾಯವನ್ನು ತನ್ನ ಕಾಲದಲ್ಲಿ ಮುಂದುವರಿಸಿಕೊಂಡು ಬಂದ ಕಾಳಪ್ಪ(ಚಂದ್ರ ಮಯೂರ್), ತನ್ನ ಮಗ ಭದ್ರನಿಗೂ(ಕಾರ್ತಿಕ್ ಮಹೇಶ್) ಈ ಕಲೆಯನ್ನು ಕಲಿಸುತ್ತಾನೆ. 'ಡೊಳ್ಳು ಕುಣಿತವನ್ನು ಯಾರು ಬೇಕಾದರೂ ಕಲಿಯಬಹುದು. ಆದರೆ ಮನಸ್ಸಿನಲ್ಲಿ ಇಳಿಸಿಕೊಳ್ಳಲು ಆಗುವುದಿಲ್ಲ. ಡೊಳ್ಳು ಕುಣಿತವನ್ನು ದುಡ್ಡಿಗೆ ಮಾರಿಕೊಳ್ಳಬಾರದು' ಎನ್ನುವುದು ಕಾಳಪ್ಪ, ಭದ್ರನ ಮನಸ್ಸಿನಲ್ಲಿ ಭದ್ರವಾಗಿಸಿಟ್ಟ ಮಾತು. ಭದ್ರ ಯುವಕನಾದಾಗ ಊರಿನಲ್ಲೊಂದು ಸ್ನೇಹಿತರನ್ನು ಒಳಗೊಂಡ ಡೊಳ್ಳು ಕುಣಿತದ ತಂಡ ಕಟ್ಟುತ್ತಾನೆ. ಹೊಟ್ಟೆಪಾಡಿಗಾಗಿ ಜಾತ್ರೆಯ ಜೊತೆಗೆ ಡೊಳ್ಳು ಕುಣಿತವನ್ನು ದುಡ್ಡಿಗೆ ಮಾರಿಕೊಳ್ಳುತ್ತಾನೆ. ತಂಡದ ಸದಸ್ಯರು ನಗರದತ್ತ ಆಕರ್ಷಿತರಾದಾಗ ತಂಡ ಒಡೆದು ಹೋಗದೇ ಇರುವಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಾನೆ. ಮುಂದೆ ಊರಿನ ಜಾತ್ರೆಯ ಸಂಪ್ರದಾಯ ಉಳಿಯುತ್ತಾ ಅಥವಾ ಅಳಿಯುತ್ತಾ ಎನ್ನುವುದು ಕಥಾಹಂದರ.

ಇದು ಖಂಡಿತವಾಗಿಯೂ ಕಮರ್ಷಿಯಲ್ ಸಿನಿಮಾವಲ್ಲ. ರಾಷ್ಟ್ರ ಪ್ರಶಸ್ತಿ ಪಡೆದ ಈ ಚಿತ್ರ 106 ನಿಮಿಷದ್ದು. ಈ ಅವಧಿಯಲ್ಲಿ ತನಗೇನು ಹೇಳಬೇಕಿತ್ತೋ ಅದನ್ನು ಅಚ್ಚುಕಟ್ಟಾಗಿ ಸಾಗರ್ ಪುರಾಣಿಕ್ ಕಟ್ಟಿಕೊಟ್ಟಿದ್ದಾರೆ. ಕಲೆ ಎನ್ನುವುದು ಜಾತಿ, ಧರ್ಮ, ಲಿಂಗವನ್ನು ಮೀರಿ ನಿಂತದ್ದು ಎನ್ನುವುದು ಸಿನಿಮಾದ ಹೂರಣ. ಶ್ರೀನಿಧಿ ಅವರ ಸಂಭಾಷಣೆಯಲ್ಲೇ ಕಥೆ ಕಟ್ಟಿಕೊಡುವ ನಿರ್ದೇಶಕರ ಪ್ರಯತ್ನ ಕೈಹಿಡಿದಿದೆ. ಹಳ್ಳಿಯಲ್ಲೇ ಜನ್ಮತಾಳುವ ಬೆಳಕನ್ನು ಪೇಟೆಗೆ ಒಯ್ದರೆ, ಆ ಬೆಳಕನ್ನು ಹುಡುಕುತ್ತಾ ಹಳ್ಳಿಯ ಯುವಜನತೆ ಪೇಟೆಗೆ ಹೆಜ್ಜೆಹಾಕುವ ಕಾಲವನ್ನು ಈ ಕಥೆ ಕಟ್ಟಿಕೊಟ್ಟಿದೆ. ಈ ಸಿನಿಮಾವನ್ನು ಚಿತ್ರಮಂದಿರಗಳಲ್ಲೂ ಬಿಡುಗಡೆ ಮಾಡುವ ನಿರ್ಮಾಪಕರ ನಿರ್ಣಯ, ಧೈರ್ಯ ಶ್ಲಾಘನೀಯ.

ನಟ ಕಾರ್ತಿಕ್ ಮಹೇಶ್ ಇಲ್ಲಿ ಪಾತ್ರವನ್ನು ಜೀವಿಸಿದ್ದಾರೆ. ಡೊಳ್ಳು ಕುಣಿತ ಕಲಿಕೆಯ ತರಬೇತಿಯ ಫಲ ತೆರೆಯ ಮೇಲೆ ಸ್ಪಷ್ಟವಾಗಿ ಕಾಣುತ್ತದೆ. ತನ್ನೊಳಗಿರುವ ಸಂಕಟ, ನೋವನ್ನು ಭದ್ರನು ನಿರಂತರವಾಗಿ ಡೊಳ್ಳು ಬಾರಿಸುತ್ತಾ, ಕುಣಿಯುತ್ತಾ ಹೊರಹಾಕುವ ದೃಶ್ಯ ಮನಸ್ಸಿನಲ್ಲಿ ಉಳಿಯುತ್ತದೆ. ಭರವಸೆಯ ನಟನಾಗಿ ಕಾರ್ತಿಕ್ ಮುಂದೆ ನಿಲ್ಲುತ್ತಾರೆ. ಚಿತ್ರದ ಅಂತ್ಯದಲ್ಲಿ ನಾಯಕನ ತಂಗಿ ಲಚ್ಚಿ(ಶರಣ್ಯ ಸುರೇಶ್) ತೆರೆ ತುಂಬಿಕೊಳ್ಳುತ್ತಾಳೆ. ಪುರೋಹಿತರ ಪಾತ್ರ ನಿಭಾಯಿಸಿದ ಬಾಬು ಹಿರಣ್ಣಯ್ಯ, ಚಂದ್ರ ಮಯೂರ್, ನಾಯಕಿ ನಿಧಿ, ನಾಯಕನ ಸ್ನೇಹಿತರಾಗಿ ನಟಿಸಿದವರೆಲ್ಲರೂ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ.

ಅಭಿಲಾಷ್ ಕಳತ್ತಿ ಛಾಯಾಗ್ರಹಣ ಇಲ್ಲಿ ಉಲ್ಲೇಖಾರ್ಹ. ಹಳ್ಳಿಯ ಸೌಂದರ್ಯ, ನಗರದ ಒತ್ತಡವನ್ನು ಪ್ರೇಕ್ಷಕನ ಕಣ್ಣೊಳಗೆ ಅಭಿಲಾಷ್ ಇಳಿಸಿದ್ದಾರೆ. ವರ್ಷದಲ್ಲಿ ನಾಲ್ಕೈದು ದಿನ ಊರಿನ ಜಾತ್ರೆಯಲ್ಲಿ ಪಾಲ್ಗೊಳ್ಳಿ, ಬೆರೆತು ಬನ್ನಿ ಎನ್ನುವ ಮಾತು ಬೆಂಗಳೂರಿನಂಥ ಮಾಯಾನಗರಿಯಲ್ಲಿ ಕುಳಿತು ಸಿನಿಮಾ ವೀಕ್ಷಿಸಿದ ಪ್ರೇಕ್ಷಕನ ಮನಸ್ಸನ್ನೊಮ್ಮೆ ತಟ್ಟೀತು, ಪ್ರಶ್ನಿಸೀತು...

ಅಭಿಲಾಷ್ ಪಿ.ಎಸ್.

ಹಣಕ್ಕೆ ಬೇಡಿಕೆಯಿಟ್ಟ ಅಧಿಕಾರಿ; ರುಪ್ಸದಿಂದ ಆಡಿಯೊ ಬಿಡುಗಡೆ

ಶಿಕ್ಷಣ ಇಲಾಖೆಯಲ್ಲಿ ಲಂಚ: ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮಿತಿಮೀರಿದ ಭ್ರಷ್ಟಾಚಾರ, ಕಿರುಕುಳದ ಪರಿಣಾಮ ರಾಜ್ಯದಲ್ಲಿರುವ ಖಾಸಗಿ ಶಾಲೆಗಳು ಮುಚ್ಚುವ ಸ್ಥಿತಿ ತಲುಪಿವೆ' ಎಂದು ಆಕ್ರೋಶ ವ್ಯಕ್ತಪಡಿಸಿರುವ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ(ರುಪ್ಸ), ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದೆ.

ಶಾಲೆಯ ಅನುಮತಿ ಪತ್ರದ ನವೀಕರಣಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ಖಾಸಗಿ ಶಾಲೆಯ ವ್ಯಕ್ತಿಯೊಬ್ಬರಿಂದ ಲಂಚ ಕೇಳಿರುವ ಆಡಿಯೊ ಸಂಭಾಷಣೆ ಮತ್ತು ವಾಟ್ಸ್‌ಆ್ಯಪ್ ತುಣುಕು ಬಿಡುಗಡೆ ಮಾಡಿ ಸುದ್ದಿಗಾರರ ಜೊತೆ ಮಾತನಾಡಿದ ರುಪ್ಸದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ, 'ಅಧಿಕಾರಿಗಳಿಗೆ ಲಂಚ ಕೊಡದೆ, ಮಾನ್ಯತೆ ನವೀಕರಣ ಪತ್ರ, ಆರ್‌ಟಿಇ ಅಡಿಯಲ್ಲಿ ದಾಖಲಾಗಿರುವ ಮಕ್ಕಳ ಶುಲ್ಕ ಮರುಪಾವತಿ ಮಾಡುತ್ತಿಲ್ಲ' ಎಂದು ದೂರಿದರು.

'ಶಿಕ್ಷಣ ಸಚಿವರ ಬೇಜವಾಬ್ದಾರಿಯಿಂದಾಗಿ ಎರಡು ವರ್ಷಗಳಿಂದ ಖಾಸಗಿ ಶಾಲೆಗಳು ಸಂಕಷ್ಟ ಎದುರಿಸುತ್ತಿವೆ. ಅವರ ಕುಮ್ಮಕ್ಕಿನಿಂದ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಪದೇ ಪದೇ ಸಮಸ್ಯೆ ಮಾಡುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಲವು ಬಾರಿ ಮನವಿ ಮಾಡಿದ್ದೇವೆ. ಆದರೆ, ಅವರು ಮನವಿಗೆ ಸ್ಪಂದಿಸಿಲ್ಲ. ನಮ್ಮ ಎಲ್ಲ ಆರೋಪಗಳಿಗೆ ಸಂಬಂಧಿಸಿದಂತೆ ಸಾಕ್ಷ್ಯಗಳ ಸಹಿತ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದೇವೆ. ಸಚಿವ ಸಂಪುಟದಿಂದ ಬಿ.ಸಿ. ನಾಗೇಶ್ ಅವರನ್ನು ತಕ್ಷಣ ಕೈ ಬಿಡುವಂತೆ ಆಗ್ರಹಿಸಿದ್ದೇವೆ. ವಜಾಗೊಳಿಸದಿದ್ದರೆ ಕಾನೂನಾತ್ಮಕ ಹೋರಾಟ ಮಾಡುತ್ತೇವೆ' ಎಂದು ಎಚ್ಚರಿಕೆ ನೀಡಿದರು.

'ಮಾನ್ಯತೆ ನವೀಕರಣ (ಆರ್.ಆರ್) ಇಲ್ಲದೆ ಎಸ್ಸೆಸ್ಸೆಲ್ಸಿ ಪರೀಕ್ಷೆ ನೋಂದಣಿ ಮಾಡುತ್ತಿಲ್ಲ. ಬೇರೆ ಪಠ್ಯಕ್ರಮ ಅನುಸರಿಸಲು ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ಕೊಡುತ್ತಿಲ್ಲ. ಮಾಮೂಲಿ ವಸೂಲಿಗಾಗಿ ಇಲಾಖೆಯ ಅಧಿಕಾರಿಗಳು ಖಾಸಗಿ ಶಾಲೆಗಳಿಗೆ ಭೇಟಿ ನೀಡುತ್ತಾರೆ. ಅನಗತ್ಯ ದಾಖಲೆಗಳ ನೆಪದಲ್ಲಿ ಹಣ ವಸೂಲಿ ಮಾಡುತ್ತಿದ್ದಾರೆ. ಅಧಿಕಾರಿಗಳ ಲಂಚ ಪ್ರಮಾಣ ಶೇ 40ರಿಂದ 50ರಷ್ಟಿದೆ' ಎಂದು ಆರೋಪಿಸಿದರು.

'10 ವರ್ಷಕ್ಕೊಮ್ಮೆ ಮಾನ್ಯತೆ ನವೀಕರಣ ಪತ್ರ (ಆರ್.ಆರ್) ನೀಡಬೇಕು ಎಂದು ರಾಜ್ಯ ಹೈಕೋರ್ಟ್ ತೀರ್ಪು ನೀಡಿದೆ. ಆದರೆ, ಪ್ರತಿವರ್ಷ ಆರ್ ಆರ್ ಪಡೆಯಲೇಬೇಕು ಎಂದು 2020ರಿಂದ ಶಿಕ್ಷಣಾಧಿಕಾರಿಗಳು ಒತ್ತಡ ಹಾಕಿ, ಕಾನೂನುಬಾಹಿರವಾಗಿ ನಡೆದುಕೊಳ್ಳುತ್ತಿದ್ದಾರೆ. ಇಲಾಖೆಯ ಬಹುತೇಕ ಕೆಲಸಗಳಿಗೆ ಆನ್‌ಲೈನ್ ವ್ಯವಸ್ಥೆ ಇಲ್ಲ. ಆನ್‌ಲೈನ್ ವ್ಯವಸ್ಥೆ ಮಾಡುವಂತೆ ಮನವಿ ಮಾಡಿದರೂ ಅಧಿಕಾರಿಗಳು ಸುಮ್ಮನಿದ್ದಾರೆ. ಈ ವ್ಯವಸ್ಥೆ ಇಲ್ಲದೇ ಇರುವುದರಿಂದ ಅಧಿಕಾರಿಗಳು ಲಂಚ ಬಾಕರಾಗುತ್ತಿದ್ದಾರೆ' ಎಂದೂ ಕಿಡಿಕಾರಿದರು.

ಶಿಕ್ಷಣ ಇಲಾಖೆಯಲ್ಲಿ ಎಲ್ಲ ಹಂತಗಳಲ್ಲಿ ಅಧಿಕಾರಿಗಳಿಗೆ ಹಣ ನೀಡದೆ ಯಾವ ಕೆಲಸವೂ ಆಗುವುದಿಲ್ಲ. ಲಂಚಾವತಾರಕ್ಕೆ ಬೆದರಿ ಆರ್‌ಟಿಇ ಹಣವನ್ನೂ ಕ್ಲೈಮ್ ಮಾಡಿಕೊಂಡಿಲ್ಲ
ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ರುಪ್ಸಾ

ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಶಿಕ್ಷಣ ಕ್ಷೇತ್ರಕ್ಕೂ ನುಸುಳಿರುವುದು ನಾಚಿಕೆಗೇಡು. ಮಾನ್ಯತೆ ನವೀಕರಣಕ್ಕೂ ಹಣಕ್ಕಾಗಿ ಕೈಚಾಚುತ್ತಿರುವ ದಂಧೆ ನಡೆದಿದೆ
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 28-8-1997

● ವೀರಪ್ಪನ್ ವಿರುದ್ಧ ಜಂಟಿ ಕಾರ್ಯಾಚರಣೆ ಇಲ್ಲ: ಪಟೇಲ್

ಬೆಂಗಳೂರು, ಆಗಸ್ಟ್ 27– ಕುಖ್ಯಾತ ನರಹಂತಕ, ದಂತಚೋರ ವೀರಪ್ಪನ್ ರಾಜ್ಯದ ತಂಟೆಗೆ ಬರದಿದ್ದರೆ ಆತನ ವಿರುದ್ಧ ಯಾವುದೇ ಕಾರ್ಯಾಚರಣೆ ನಡೆಸುವುದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಖಚಿತವಾಗಿ ಹೇಳಿದರು.

ವೀರಪ್ಪನ್ ವಶದಿಂದ ಮುಕ್ತಿ ಪಡೆದು ಸಜೀವವಾಗಿ ರಾಜ್ಯಕ್ಕೆ ಹಿಂದಿರುಗಿದ ಒಂಬತ್ತು ಮಂದಿ ಅರಣ್ಯ ಸಿಬ್ಬಂದಿ ಸಮ್ಮುಖದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದ ಗಡಿಯಾಚೆ ಅಂದರೆ ತಮಿಳುನಾಡಿನಲ್ಲಿ ಆತ ಏನು ಮಾಡಿದರೂ ಅದು ನಮಗೆ ಸಂಬಂಧಿಸಿದ ವಿಷಯವಲ್ಲ. ಹಾಗಾಗಿ ಆತನ ಬೆನ್ನು ಹತ್ತುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 28-8-1972

● ಪಕ್ಷದ ಘಟನೆ ಮೇರೆಗೆ ಕೆಂಗಲ್‌ರ ವಿರುದ್ಧ ಕ್ರಮಕ್ಕೆ ಅರಸು ಸಲಹೆ

ಬೆಂಗಳೂರು, ಆಗಸ್ಟ್ 27– ಕೆ. ಹನುಮಂತಯ್ಯನವರ ಹೇಳಿಕೆಗಳು ಮತ್ತು ಚಟುವಟಿಕೆಗಳ ಬಗ್ಗೆ ಪಕ್ಷದ ನಿಯಮಾವಳಿಗೆ ಅನುಗುಣವಾಗಿ ಕ್ರಮ ಕೈಗೊಳ್ಳುವುದು ಕಾಂಗ್ರೆಸ್ ಹೈಕಮಾಂಡ್‌ಗೆ ಬಿಟ್ಟದದ್ದೆಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಇಂದು ವರದಿಗಾರರ ಪ್ರಶ್ನೆಯೊಂದಕ್ಕೆ ಉತ್ತರವಿತ್ತರು.

ದೆಹಲಿಯಿಂದ ಹಿಂದಿರುಗಿದ ಮುಖ್ಯಮಂತ್ರಿಯವರು, ಅದರ ವಿಚಾರದಲ್ಲಿ ಕೇಂದ್ರ ನಾಯಕರು ನನ್ನ ಪ್ರತಿಕ್ರಿಯೆ ಕೇಳಿದರು. ಪಕ್ಷದ ನಿಯಮಾವಳಿ ಇದೆ. ಅದರ ಪ್ರಕಾರ ಪರಿಸ್ಥಿತಿ ತೀವ್ರತೆ ಎಷ್ಟರ ಮಟ್ಟಿಗೆ ಇದೆಯೋ ಅದರ ಪ್ರಕಾರ ಕ್ರಮ ತೆಗೆದುಕೊಳ್ಳಿ ಅಂತ ಹೇಳಿದೆ ಎಂದು ವಿವರಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಆಗಸ್ಟ್ 28, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪ್ರತಿಪದ್ ಗಂ. 14-46 ನಕ್ಷತ್ರ: ಪೂರ್ವಫಲ್ಗುನಿ ಗಂ. 21-56 ಯೋಗ: ಸಿದ್ಧ ಗಂ. 25-44, ಕರಣ: ಬವ ಗಂ. 14-46, ಸಿಂಹ ಮಾಸದ 11 ನೇ ದಿನ.
ರಾಹುಕಾಲ : ಸಾಯಂಕಾಲ 04:30 - 06:00
ಸೂರ್ಯೋದಯ : 06-23 ಸೂರ್ಯಾಸ್ತ : 06-41
ಮುಸ್ಲಿಂ ದಿನಾಂಕ : 29 ಮೊಹರಮ್
ಅದೃಷ್ಟ ಸಂಖ್ಯೆ : 6, 11

ಮೇಷ: ಶರತ್ತುಗಳಿಗೆ ಒಪ್ಪಿಕೊಳ್ಳುವಂತಹ ಯಾವುದೇ ರೀತಿಯ ವ್ಯವಹಾರಕ್ಕೂ ಈ ದಿನ ಕೈ ಹಾಕದಿರುವುದು ಉತ್ತಮ. ಕುಟುಂಬದ ಗಣ್ಯರಿಂದ ನಿಮ್ಮ ಮುಂದಿನ ಬದುಕಿನ ದಾರಿಯ ಬಗ್ಗೆ ಮಾರ್ಗದರ್ಶನ ಸಿಗಲಿದೆ.

ವೃಷಭ: ಸಹೋದ್ಯೋಗಿಗಳ ಅನಗತ್ಯ ಮಾತಿನಿಂದ ಭಿನ್ನಾಭಿಪ್ರಾಯಗಳು ಸೃಷ್ಟಿಯಾಗುತ್ತದೆ. ನಿಮ್ಮ ಉದಾರ ಮನೋಭಾವ ಅನುಕೂಲ ಒದಗಿಸಲಿದೆ. ಅಧಿಕಾರಿಗಳಿಗೆ ನಿಮ್ಮ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ. ಶುಭವಾಗಲಿದೆ.

ಮಿಥುನ: ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡುವುದರಿಂದ ಗುರಿ ತಲುಪುವುದು ಸುಲಭ. ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಕುಶಲಕರ್ಮಿಗಳಿಗೆ ಪ್ರದರ್ಶನ ಮಾರಾಟಗಳಿಂದ ಅಧಿಕ ಆದಾಯ.

ಕರ್ಕಾಟಕ: ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕವಾಗುವ ಅವಶ್ಯಕತೆ ಇಲ್ಲ. ದಿನ ನಿತ್ಯದ ಔಷಧ ಸೇವನೆಯನ್ನು ಮರೆಯದಿರಿ. ಅತಿ ಅವಸರ ಮತ್ತು ಅತಿ ಉದ್ವೇಗ ಇವೆರಡು ನಿಮ್ಮನ್ನು ತಲೆ ತಗ್ಗಿಸುವಂತೆ ಮಾಡುತ್ತದೆ

ಸಿಂಹ: ಇತರರನ್ನು ಮಾತಿನ ಮೂಲಕ ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಅದನ್ನು ಈ ದಿನ ಬಳಸಿಕೊಳ್ಳಿ. ರಾಜಕೀಯ ವ್ಯಕ್ತಿಗಳಿಗೆ ತನ್ನವರೇ ಆದಂತಹ ಅಕ್ಕ-ಪಕ್ಕದವರ ಕುತಂತ್ರದಿಂದಾಗಿ ತೊಂದರೆಗಳು ಉಂಟಾಗಬಹುದು.

ಕನ್ಯಾ: ಆಕಸ್ಮಿಕ ಪ್ರಯಾಣದಿಂದ ಆರೋಗ್ಯದಲ್ಲಿ ಏರುಪೇರಾದರು ಆರ್ಥಿಕ ಬೆಳವಣಿಗೆ ಖಂಡಿತ ಸಾಧ್ಯವಿದೆ. ಕಾರ್ಯಕ್ಷೇತ್ರದಲ್ಲಿ ಅಡ್ಡಿ, ಆತಂಕ, ವಿಳಂಬಗಳು ತೋರಿ ಬಂದರೂ ಯೋಜಿತ ಕೆಲಸಗಳು ಫಲ ನೀಡಲಿದೆ.

ತುಲಾ: ನಿಮ್ಮ ಮನೋಭಾವಕ್ಕೆ ಕುಟುಂಬ ವರ್ಗದವರು ಸಕಾರಾತ್ಮಕ ಸಹಾಯ ಕಲ್ಪಿಸುತ್ತಾರೆ. ರಸ ಪದಾರ್ಥಗಳ ವ್ಯಾಪಾರ ವ್ಯವಹಾರದವರಿಗೆ ಅನುಕೂಲಕರವಾದ ವಾತಾವರಣ ಇರಲಿದೆ. ಗಣೇಶನ ಧ್ಯಾನ ಶುಭತರಲಿದೆ.

ವೃಶ್ಚಿಕ: ಜೀವನ ನಡೆಸಲು ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ. ಕೌಟುಂಬಿಕ ಸಮಸ್ಯೆಗಳಿಂದ ಜಾಗ್ರತೆ ವಹಿಸಿ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ಮೂಡಲಿದೆ. ದೈವಾನುಗ್ರಹವನ್ನು ಪ್ರಾರ್ಥಿಸಬೇಕಾಗುತ್ತದೆ.

ಧನು: ಮನಸ್ಸನ್ನು ಪ್ರಶಾಂತವಾಗಿರಿಸಿಕೊಳ್ಳುವ ಪ್ರಯತ್ನ ಫಲಿಸಲಿದೆ. ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ನಿಮ್ಮ ಮುಂದಿದ್ದು, ವಿಚಲಿತರಾಗಬೇಕಾಗಿಲ್ಲ. ಹಣಕಾಸು ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿರಲಿ.

ಮಕರ: ಈ ದಿನವನ್ನು ಗಣಪತಿಯ ಪ್ರಾರ್ಥನೆ ಅಥವಾ ದರ್ಶನದೊಂದಿಗೆ ಪ್ರಾರಂಭಿಸಲು ಮರೆಯದಿರಿ. ಮಕ್ಕಳನ್ನು ಯಾವುದೇ ರೀತಿಯ ಶಿಕ್ಷೆಗೆ ಒಳಪಡಿಸದೇ ನಯವಾದ ಮಾತುಗಳಿಂದ ತಿದ್ದುವ ಪ್ರಯತ್ನವನ್ನು ಮಾಡಿ.

ಕುಂಭ: ವ್ಯವಹಾರದ ವಿಚಾರದಲ್ಲಿ ನಿಮಗೆ ಇನ್ನೂ ಸಾಕಷ್ಟು ಅನುಭವ ಅಗತ್ಯ. ಸುಖ-ದುಃಖ, ನೋವು, ಅನಾರೋಗ್ಯ, ಲಾಭ-ನಷ್ಟಗಳ ಮಿಶ್ರಣ ಫಲ ಅನುಭವಿಸಬೇಕಾಗುತ್ತದೆ. ಅನಾವಶ್ಯಕವಾಗಿ ಖರ್ಚು ನಿಲ್ಲಿಸಿದರೆ ಒಳ್ಳೆಯದು.

ಮೀನ: ಆಲಸ್ಯ ದೂರವಾಗಿ ಲವಲವಿಕೆಯಿಂದ ದಿನ ಕಳೆಯುತ್ತೀರಿ. ಮನೆಯಲ್ಲಿ ನಡೆಯಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಒಡಹುಟ್ಟಿದವರೊಡನೆ ಗಹನವಾದ ಮಾತುಕತೆ ನಡೆಯಲಿದೆ. ನವಗ್ರಹರ ಆರಾಧನೆಯಿಂದ ಶುಭ.

ಪದಬಂಧ 5063

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಂಜರು ತೋರಿದ ಒಣ ಆಡಂಬರ (2)
3.ಅಯಾಳಿಗಾಗಿರುವ ಸುಸ್ತು (3)
5.ವನದೊಳಗಿರುವ ಬಟ್ಟೆ (3)
7.ಕಣ್ಣ ಕೊನೆಯ ನೋಟ (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಕಡ ಕೊಟ್ಟು ನೋಡಿರುವ ಸಮುದ್ರ (3)
11.ಜೀರ್ಣೋದ್ಧಾರ ಮಾಡಿದುದು (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ಈತ ವಿಷಯಾಸಕ್ತ (3)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮ ಅಂಗ (2)

ಮೇಲಿಂದ ಕೆಳಕ್ಕೆ
2.ಈತ ದುಡ್ಡಿಲ್ಲದವ (3)
3.ಅವನ ಮುಖ (3)
4.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
6.ಸರ ಧರಿಸಿದವನ ಪಾಳಿ (3)
8.ಪಾಲು ಮಾಡೆಂದು ಬರೆದ ಪತ್ರ (3)
9.ವನದೊಳಗೆ ಮಾಡಿದ ಕ್ಷೌರ (3)
10.ಕಣದೊಳಗೆ ನಡೆದ ಮದುವೆ (3)
12.ಆಸಕ್ತನಾದವನು ಇಲ್ಲಿದ್ದಾನೆ (3)
13.ಸೊಳ್ಳೆ ಇಲ್ಲಿಯೇ ಹಾರುತ್ತಿದೆ (3)
14.ಕಕ್ಕಾವಿಕ್ಕಿಯಾಗಿ ನೋಡುತ್ತಿರುವ ಪೆದ್ದ! (3)



5062ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜವಾಬ್ದಾರ 3.ಜಟಿಲ
4.ಪುರೋಹಿತ
6.ಜುಲುಮೆ 8.ಕಾರಣ
9.ಅಗುಳು 10.ಲಶುನ
12.ಕಸರತ್ತು 14.ಕಮರಿ
15.ನವಿರೆಳೆ

ಮೇಲಿಂದ ಕೆಳಕ್ಕೆ:
1.ಜಲ 2.ರಿಪು
3.ಜಹಜು 5.ತರುಣ
7.ಮೆದುಳು 8.ಕಾದಲ
9.ಅಳ್ಳಕ 11.ನಸರಿ
13.ತ್ತುನ 14.ಕಳೆ

ಸುಡೊಕು 5449

		8		7			6	
			4		2	3		1
	3	1		5			8	
6		4		3			5	
5	7	2	6		9			8
				2			4	
3				1			9	
	2	5	8			6		7
1				6			2	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5448 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಕ್ಕಳ ಸಾವು: ವಾಮಾಚಾರದ ಶಂಕೆ

ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ನನ್ನಿವಾಳ ಗ್ರಾಮದಲ್ಲಿ ಇಬ್ಬರು ಮಕ್ಕಳು ಶುಕ್ರವಾರ ರಾತ್ರಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ವಾಮಾಚಾರಕ್ಕೆ ವಿಷಪ್ರಾಶನ ಮಾಡಿಸಿರುವ ಶಂಕೆ ವ್ಯಕ್ತವಾಗಿದೆ.

ಕಡಬನಕಟ್ಟೆ ಗ್ರಾಮದ ಅಲೆಮಾರಿ ಸಮುದಾಯದ ಇಂದ್ರಪ್ಪ, ಕಾವೇರಿ ದಂಪತಿ ಪುತ್ರ ಓಬಳೇಶ್ (5) ಹಾಗೂ ಪುತ್ರಿ ಬಿಂದು (3) ಮೃತ ಮಕ್ಕಳು.

ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು, ಪಾಲಕರು, ಅಜ್ಜಿ ರೇಣುಕಾ, ಅಜ್ಜ ದುರುಗಪ್ಪ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.'ಮಂತ್ರವಾದಿಯಾಗಿದ್ದ ದುರುಗಪ್ಪ ನಿಧಿ ಆಸೆಗೆ ವಾಮಾಚಾರ ಉದ್ದೇಶದಿಂದ ದೇವರ ತೀರ್ಥದ ನೆಪದಲ್ಲಿ ಶುಕ್ರವಾರ ಮಧ್ಯರಾತ್ರಿ ವಿಷವುಣಿಸಿದ್ದಾನೆ' ಎಂದು ಸ್ಥಳೀಯರು ದೂರಿದ್ದಾರೆ.

'ಮಕ್ಕಳು ವಿಷಪೂರಿತ ಆಹಾರ ಸೇವಿಸಿದ್ದರು. ದೇವರ ತೀರ್ಥ ಕುಡಿಸಿದರೆ ಗುಣಮುಖರಾಗುತ್ತಾರೆ ಎಂದು ಕುಡಿಸಿದ್ದಾರೆ. ಕೂಡಲೇ ಆಸ್ಪತ್ರೆಗೆ ಕರೆದೊಯ್ಯದ ಕಾರಣ ಮಕ್ಕಳು ಮೃತಪಟ್ಟಿದ್ದಾರೆ' ಎಂದು ಗ್ರಾಮಾಂತರ ಡಿವೈ ಎಸ್‌ಪಿ ರಮೇಶ್‌ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಹಲವರಿಗೆ ನೋಟಿಸ್ ಜಾರಿ

ನಿವೇಶನ ಹಿಂಪಡೆಯಲು ಬಿಡಿಎ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ಹಲವರಿಗೆ ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿ ಹಂಚಿಕೆ ಮಾಡಿದ್ದ ಬದಲಿ ನಿವೇಶನಗಳನ್ನು ಹಿಂಪಡೆಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂದಾಗಿದೆ.

ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಿರುವುದಕ್ಕೆ ಸುಪ್ರೀಂ ಕೋರ್ಟ್‌ನಿಂದ ಛೀಮಾರಿಗೆ ಒಳಗಾಗಿರುವ ಬಿಡಿಎ, ಅಂತಹ ನಿವೇಶನ ಮಂಜೂರಾತಿಗಳನ್ನು ರದ್ದುಗೊಳಿಸುವ ತೀರ್ಮಾನಕ್ಕೆ ಬಂದಿದೆ. ಜ್ಞಾನೇಂದ್ರ, ಬಿಜೆಪಿ ಶಾಸಕ ವೀರಣ್ಣ ಚರಂತಿಮಠ, ಬಿಜೆಪಿ ಮುಖಂಡ ಬಸವರಾಜ ಪಾಟೀಲ ಸೇಡಂ, ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ಡಾ.ಎಂ. ನಾಗರಾಜ್ ಸೇರಿದಂತೆ ಹಲವರಿಗೆ ನೋಟಿಸ್ ಜಾರಿಗೊಳಿಸಿದೆ.

ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿನ ಬಿಡಿ ನಿವೇಶನ, ಮೂಲೆ ನಿವೇಶನಗಳು ಹಾಗೂ ಒತ್ತುವರಿದಾರರಿಂದ ವಶಪಡಿಸಿಕೊಂಡ ಜಮೀನುಗಳಲ್ಲಿ ನಿರ್ಮಿಸುವ ನಿವೇಶನಗಳನ್ನು ಬಹಿರಂಗ ಹರಾಜಿನ ಮೂಲಕವೇ ಮಾರಾಟ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 21ರಂದು ಆದೇಶಿಸಿತ್ತು. ಈಗ ಹಂಚಿಕೆಯಾಗಿರುವ ಬದಲಿ ನಿವೇಶನಗಳನ್ನು ಹಿಂಪಡೆದು ಹರಾಜಿನ ಮೂಲಕ ಮಾರಾಟ ಮಾಡಲು ಬಿಡಿಎ ನಿರ್ಧರಿಸಿದೆ.

'ಸುಪ್ರೀಂ ಕೋರ್ಟ್ ಗುರುವಾರ ನೀಡಿರುವ ನಿರ್ದೇಶನದ ಅನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. ಆರ್‌ಎಂವಿ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ಬದಲಿ ನಿವೇಶನಗಳನ್ನು ಹಿಂದಿರುಗಿಸುವಂತೆ ಫಲಾನುಭವಿಗಳಿಗೆ ನೋಟಿಸ್ ನೀಡಲಾಗಿದೆ. ಶೀಘ್ರದಲ್ಲಿ ಎಲ್ಲ ನಿವೇಶನಗಳನ್ನೂ ಪ್ರಾಧಿಕಾರದ ವಶಕ್ಕೆ ಪಡೆಯಲಾಗುವುದು' ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

ಇತರ ಬಡಾವಣೆಗಳ ಮೇಲೂ ಕಣ್ಣು: ಸುಪ್ರೀಂ ಕೋರ್ಟ್ ಆದೇಶದ ಬಳಿಕ ನಡೆದಿರುವ ಬದಲಿ ನಿವೇಶನಗಳ ಹಂಚಿಕೆಯನ್ನು ಸಂಪೂರ್ಣವಾಗಿ ಪರಿಶೀಲನೆ ನಡೆಸಲು ಬಿಡಿಎ ನಿರ್ಧರಿಸಿದೆ. ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಬದಲಿ ನಿವೇಶನ ಮಂಜೂರು ಮಾಡಿರುವ ಎಲ್ಲ ಆದೇಶಗಳನ್ನೂ ರದ್ದುಮಾಡುವ ಕುರಿತು ಚರ್ಚೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಬಿಡಿಎ ವಿರುದ್ಧ ನ್ಯಾಯಾಲಯಕ್ಕೆ : ಆರಗ

ಬೆಂಗಳೂರು: '17 ವರ್ಷಗಳ ಹಿಂದೆ ಹಂಚಿಕೆಯಾಗಿದ್ದ ನಿವೇಶನ ಇನ್ನೂ ನನ್ನ ಸ್ವಾಧೀನಕ್ಕೆ ಬಂದಿಲ್ಲ. ನಿವೇಶನದ ವಿಚಾರದಲ್ಲಿ ನ್ಯಾಯ ಪಡೆಯಲು ಬಿಡಿಎ ವಿರುದ್ಧ ನ್ಯಾಯಾಲಯದ ಮೊರೆ ಹೋಗುತ್ತೇನೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ.

ನಿವೇಶನ ಹಂಚಿಕೆ ವಿವಾದದ ಕುರಿತು ಶನಿವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಹಿಂದೆ ಹಣ ಪಾವತಿಸಿದ ನೂರಾರು ಮಂದಿಗೆ ನಿವೇಶನ ಪಡೆಯಲು ಸಾಧ್ಯವಾಗಿರಲಿಲ್ಲ. ಅವರೆಲ್ಲರೂ ನ್ಯಾಯಾಲಯದಲ್ಲಿ ಕಾನೂನು ಹೋರಾಟ ನಡೆಸಿ ಬದಲಿ ನಿವೇಶನ ಪಡೆದಿದ್ದಾರೆ. ನಾನು ಕೂಡ ಅದೇ ರೀತಿ ಕಾನೂನು ಹೋರಾಟ ಮಾಡುತ್ತೇನೆ' ಎಂದಿದ್ದಾರೆ.

'17 ವರ್ಷಗಳ ಹಿಂದೆ ಬಿಡಿಎ ಮಂಜೂರು ಮಾಡಿದ್ದ ನಿವೇಶನದ ಬದಲಿಗೆ ಆರ್‌ಎಂವಿ ಎರಡನೇ ಹಂತದ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಲಾಗಿದೆ. ಇದಕ್ಕಾಗಿ ನಾನು ಯಾವುದೇ ರೀತಿಯ ರಾಜಕೀಯ ಪ್ರಭಾವ ಬಳಸಿಲ್ಲ' ಎಂದು ಹೇಳಿದ್ದಾರೆ.

'ಬಿಡಿಎನಿಂದ ಮಂಜೂರಾದ ನಿವೇಶನ ಪಡೆಯಲು ಮೂರು ಬಾರಿ ನೋಂದಣಿ ಶುಲ್ಕ ಪಾವತಿ ಮಾಡಿದ್ದೇನೆ. ಈವರೆಗೂ ನಿವೇಶನವನ್ನು ಸ್ವಾಧೀನಕ್ಕೆ ಪಡೆಯಲು ಸಾಧ್ಯವಾಗಿಲ್ಲ. ಈಗ ಬದಲಿ ನಿವೇಶನ ಪಡೆಯಲು ಬಿಡಿಎ ನಿಗದಿಪಡಿಸಿದ್ದ ಹೆಚ್ಚುವರಿ ಶುಲ್ಕವನ್ನೂ ಪಾವತಿಸಿದ್ದೇನೆ' ಎಂದಿದ್ದಾರೆ.

'ಇತರ ಶಾಸಕರು, ಸಚಿವರಂತೆ ನನಗೂ 'ಜಿ' ಕೋಟಾದಡಿ ನಿವೇಶನ ಹಂಚಿಕೆ ಮಾಡಲಾಗಿತ್ತು. ಬಿಡಿಎ ನಿಯಮಗಳ ಅನುಸಾರವೇ ನನಗೆ ನಿವೇಶನ ಹಂಚಿಕೆ ಮಾಡಲಾಗಿದೆ. 'ಜಿ' ಕೋಟಾದಡಿ ನಿವೇಶನ ಹಂಚಿಕೆ ಕುರಿತು ಪರಿಶೀಲನೆ ನಡೆಸಲು ಹೈಕೋರ್ಟ್ ನೇಮಿಸಿದ್ದ ಸಮಿತಿಯೂ ಅದನ್ನು ಪುರಸ್ಕರಿಸಿತ್ತು' ಎಂದು ಹೇಳಿದ್ದಾರೆ.

ಆ.30ಕ್ಕೆ ವೀರಭದ್ರೇಶ್ವರ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಶೈವ ಲಿಂಗಾಯತ ಸಂಘಟನಾ ವೇದಿಕೆ ವತಿಯಿಂದ ವೀರಭದ್ರೇಶ್ವರ ಜಯಂತಿಯನ್ನು ಆಗಸ್ಟ್ 30ರಂದು ಭಾದ್ರಪದ ಮಾಸದ ಮೊದಲನೇ ಮಂಗಳವಾರ ಆಚರಣೆ ಮಾಡಲಾಗುವುದು ವೇದಿಕೆ ರಾಷ್ಟ್ರೀಯ ಅಧ್ಯಕ್ಷ ಪ್ರದೀಪ ಕಂಕಣವಾಡಿ ತಿಳಿಸಿದ್ದಾರೆ.

ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಬಾಗಲಕೋಟೆ

ಪತ್ರಿಕಾ ಪ್ರಕಟಣೆ

ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಒಟ್ಟು 109 ವಿವಿಧ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು ದಿನಾಂಕ : **10/09/2022** & **11/09/2022** ರಂದು ನಿಗಧಿಪಡಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರವನ್ನು ಬ್ಯಾಂಕಿನ ವೆಬ್‌ಸೈಟ್ www.bagalkotdccbank.com ನಲ್ಲಿ ಡೌನಲೋಡ್ ಮಾಡಿಕೊಂಡು ಪ್ರಿಂಟ್ ತೆಗೆದುಕೊಳ್ಳತಕ್ಕದ್ದು. ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ಪ್ರವೇಶ ಪತ್ರವನ್ನು ಕಳುಹಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿ ಬೇಕಾದಲ್ಲಿ **ದೂರವಾಣಿ ಸಂಖ್ಯೆ 08354–235573/236443** ಗೆ ಬ್ಯಾಂಕಿನ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಕಾರ್ಯನಿರ್ವಹಣಾಧಿಕಾರಿ

Azadi Ka Amrit Mahotsav

ಕರ್ನಾಟಕ ರಾಜ್ಯ
ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು
"ನ್ಯಾಯದೇಗುಲ", ಮೊದಲನೆ ಮಹಡಿ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು–560027,
ದೂರವಾಣಿ ಸಂಖ್ಯೆ: 080–22111729, 22111875, ಇ–ಮೇಲ್: mskar-slsa@hck.gov.in

ಸಾರ್ವಜನಿಕರ ಗಮನಕ್ಕೆ

ಕರ್ನಾಟಕ ರಾಜ್ಯದ 16 ಜಿಲ್ಲೆಗಳಲ್ಲಿ **Legal Aid Defense Counsel Office** ಸ್ಥಾಪಿತವಾಗಿದ್ದು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಹಾಸನ, ಕಲಬುರಗಿ, ಮಂಗಳೂರು, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯಪೂರ ಜಿಲ್ಲೆಗಳಲ್ಲಿ, **'Full Time Legal Aid Lawyers'** ಹುದ್ದೆಗೆ ನೇಮಕ ಮಾಡುವ ಸಲುವಾಗಿ ಅರ್ಹ ವಕೀಲರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ನಿಗದಿತ ನಮೂನೆಯಲ್ಲಿ ದಿನಾಂಕ : 05.09.2022ರ ಸಾಯಂಕಾಲ 5:00 ಗಂಟೆ ಒಳಗಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಈ ಬಗ್ಗೆ ಮಾಹಿತಿ ಹಾಗೂ ಅರ್ಜಿಯ ನಮೂನೆಯನ್ನು ಆಯಾ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
(ಹೆಚ್. ಶಶಿಧರ ಶೆಟ್ಟಿ)
ಸದಸ್ಯ ಕಾರ್ಯದರ್ಶಿ, ಕ.ರಾ.ಕಾ.ಸೇ.ಪ್ರಾ.

ಧಾರಾಕಾರ ಮಳೆ: ಗ್ರಾಮಗಳಿಗೆ ನುಗ್ಗಿದ ನೀರು, ಸಂಪರ್ಕ ಕಡಿತ ● ತೋಟ, ಬಡಾವಣೆ, ಶಾಲೆ ಜಲಾವೃತ

ಕೋಡಿ ಬಿದ್ದ ಕೆರೆ, ಜನ–ವಾಹನ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ರಾತ್ರಿ ಮತ್ತು ಶನಿವಾರ ಧಾರಾಕಾರ ಮಳೆಯಾಗಿದೆ. ಕೆರೆಗಳು ಕೋಡಿ ಬಿದ್ದು, ಗ್ರಾಮಗಳಿಗೆ ನೀರು ನುಗ್ಗಿದೆ. ಶಾಲೆಗಳು ಜಲಾವೃತಗೊಂಡಿದ್ದು, ನೂರಾರು ಹೆಕ್ಟೇರ್ ಬೆಳೆ ಮುಳುಗಿದೆ.

ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಮನೆ–ಬೆಳೆಗಳಿಗೆ ಹಾನಿಯಾಗಿದೆ. ಕೆಲವೆಡೆ ಕೆರೆ ಕೋಡಿ ಒಡೆದು ತೋಟಗಳು ಜಲಾವೃತ ಗೊಂಡಿವೆ. ರಸ್ತೆಗಳು ಜಲಾವೃತವಾಗಿ ಗ್ರಾಮಗಳ ನಡುವೆ ಸಂಪರ್ಕ ಕಡಿದಿದೆ.

ಮೈಸೂರು ತಾಲ್ಲೂಕಿನ ಜಯಪುರ ಹೋಬಳಿಯ ನಗರ್ತಹಳ್ಳಿಯ ಕೆರೆ 15 ವರ್ಷದ ಬಳಿಕ ಭರ್ತಿ ಯಾಗಿದ್ದು, ಸಮೀಪದ ಯಡಹಳ್ಳಿ, ಕೋಟೆಹುಂಡಿ, ಧನಗಹಳ್ಳಿ, ಡಿ.ಸಾಲುಂಡಿ ಗ್ರಾಮಗಳ ಸಂಪರ್ಕ ರಸ್ತೆ ಮುಳುಗಡೆಯಾಗಿದೆ. ನಂಜನಗೂಡು ತಾಲ್ಲೂಕಿನ ಕಪ್ಪಸೋಗೆ ಗ್ರಾಮದ ಮಹದೇವ ನಾಯಕ ಅವರ ಮನೆಯ ಗೋಡೆ ಕುಸಿದಿದೆ.

ಹಾಸನ ಜಿಲ್ಲೆಯ ಬಾಗೂರು ಕೆರೆ ಕೋಡಿಯ ನೀರಿನಿಂದ ನುಗ್ಗೇಹಳ್ಳಿ–ಬಾಗೂರು ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಕೆರೆ, ನುಗ್ಗೇಹಳ್ಳಿ ಹೋಬಳಿಯ ಅತ್ತಿಹಳ್ಳಿ ಕೆರೆ, ಬಾಗೂರು ಕೆರೆ ಕೋಡಿ ಬಿದ್ದಿವೆ.

ಮಂಡ್ಯದ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದಾಗಿ, ಮಳೆ ನೀರು ಗದ್ದೆಗೆ ನುಗ್ಗುತ್ತಿದೆ. ಗುಡುಗೇನಹಳ್ಳಿ ವ್ಯಾಪ್ತಿಯ ಸುಮಾರು 150 ಎಕರೆ ಜಮೀನು ಜಲಾವೃತವಾಗಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಕೆರೆ ಕೋಡಿ ಬಿದ್ದಿದೆ.

ಸುವರ್ಣಾವತಿ ನದಿ ಉಕ್ಕಿ ಹರಿಯುತ್ತಿರುವುದರಿಂದ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಕಂದಹಳ್ಳಿ, ಗಣಿಗನೂರು, ಯರಿಯೂರು, ಅಂಬಳೆ ಹಾಗೂ ಮದ್ದೂರು ಸುತ್ತಮುತ್ತಲ ಕೃಷಿ ಭೂಮಿಗಳಲ್ಲಿ ಫಸಲು ನಾಶವಾಗುವ ಆತಂಕ ಮೂಡಿದೆ.

ರಾಮನಗರ ಜಿಲ್ಲೆಯಲ್ಲಿ ಹತ್ತಾರು ಕೆರೆಗಳು ಕೋಡಿ ಬಿದ್ದು ಗ್ರಾಮಗಳಿಗೆ ನೀರು ನುಗ್ಗಿದೆ. ತೋಟ, ಮನೆ, ಶಾಲೆಗಳು ಜಲಾವೃತಗೊಂಡಿವೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಹತ್ತಾರು ಕೆರೆಗಳು ಕೋಡಿ ಬಿದ್ದಿದ್ದು ನೂರಾರು ಹೆಕ್ಟೇರ್ ಬೆಳೆ ಮುಳುಗಿದೆ. ಮಳೂರು ಕೆರೆ ಕೋಡಿಯಿಂದಾಗಿ ಹೊಲಗಳಿಗೆ ನೀರು ನುಗ್ಗಿದ್ದು, ಅದರ ರಭಸಕ್ಕೆ ತೆಂಗಿನ ಮರಗಳು ನೆಲ ಕಚ್ಚಿವೆ. ರಾಮಮ್ಮನ ಕೆರೆ ಶುಕ್ರವಾರ ಮಧ್ಯರಾತ್ರಿ ಕೋಡಿ ತುಂಬಿ ಹರಿದಿದ್ದು, ಸುತ್ತಲಿನ 30ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದೆ. ಹೊಂಗನೂರು ಕೆರೆ ಮೂವತ್ತು ವರ್ಷದ ಬಳಿಕ ಕೋಡಿ ಬಿದ್ದಿದ್ದು, ಚನ್ನಪಟ್ಟಣ–ಹಲಗೂರು ರಸ್ತೆ ಸಂಪರ್ಕ ಕಡಿತಗೊಂಡಿತ್ತು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಮುಂಡಗೋಡ, ಹಳಿಯಾಳ, ಬೆಳಗಾವಿ, ಹೊಸಪೇಟೆಯ ಹರಪನಹಳ್ಳಿ, ಹಾವೇರಿ ಜಿಲ್ಲೆಯ ಕೆಲವೆಡೆ ಮಳೆಯಾಗಿದೆ.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನಲ್ಲಿ ಐದು ಮನೆಗಳು ಕುಸಿದು ಬಿದ್ದಿವೆ. ಕಂಪ್ಲಿ ತಾಲ್ಲೂಕಿನಲ್ಲಿ 5 ಸೆ.ಮೀ. ಮಳೆಯಾಗಿದೆ. ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಯಲ್ಲಿ ಸಾಧಾರಣ ಮಳೆಯಾದರೆ, ದಾವಣಗೆರೆ ನಗರದಲ್ಲಿ ಜೋರು ಮಳೆಯಾಗಿದೆ.

ಕಲಬುರಗಿ ನಗರ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಮಳೆಯಾಯಿತು. ಯಾದಗಿರಿ ತಾಲ್ಲೂಕಿನ ಅಬ್ಬೆತುಮಕೂರು, ಶಹಾಪುರ ತಾಲ್ಲೂಕಿನ ಕೊಳ್ಳೂರು (ಎಂ) ಸುತ್ತಮುತ್ತಲ ಗ್ರಾಮಗಳಲ್ಲಿ ಭತ್ತ ಮತ್ತು ಹತ್ತಿ ಜಮೀನುಗಳು ಜಲಾವೃತವಾಗಿವೆ. ಮನೆಗಳಿಗೆ ನೀರು ನುಗ್ಗಿದ್ದು, ಆಹಾರ ಧಾನ್ಯ ನೀರು ಪಾಲಾಗಿವೆ.

ಕೋಲಾರದಲ್ಲಿ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ. ರಾತ್ರಿ ಇಡೀ ನಿವಾಸಿಗಳು ನೀರು ಹೊರಹಾಕುವ ಕಾರ್ಯದಲ್ಲಿ ತೊಡಗಿದ್ದರು.

ಚನ್ನಪಟ್ಟಣ ತಾಲ್ಲೂಕಿನ ತಿಟ್ಟಮಾರನಹಳ್ಳಿ ಸಮೀಪ ಮಳೂರು ಕೆರೆ ಕೋಡಿ ನೀರಿನ ಪ್ರವಾಹಕ್ಕೆ ತೋಟದಲ್ಲಿನ ತೆಂಗಿನ ಮರಗಳು ಕೊಚ್ಚಿ ಹೋಗಿವೆ. ಪ್ರಜಾವಾಣಿ ಚಿತ್ರ: ಚಂದ್ರೇಗೌಡ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಹೋಬಳಿಯ ಕಕ್ಕಲದೊಡ್ಡಿ ಗ್ರಾಮ ಜಲಾವೃತವಾಗಿದೆ

> ಬೆಂಗಳೂರು–ಮೈಸೂರು ಹೆದ್ದಾರಿ ಕಾಮಗಾರಿ ಅವೈಜ್ಞಾನಿಕವಾಗಿ ನಡೆದಿದೆ. ಸೆ. 5 ರಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿ ಚರ್ಚಿಸುತ್ತೇನೆ
>
> ಎಚ್.ಡಿ. ಕುಮಾರಸ್ವಾಮಿ
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕೊಚ್ಚಿ ಹೋದ ಆರು ಸಾವಿರ ಕೋಳಿ

ಕೋಲಾರ: ತಾಲ್ಲೂಕಿನ ಚೆಲುವನಹಳ್ಳಿ ಗ್ರಾಮದ ತಿಮ್ಮೇಗೌಡ ಅವರ ಜಮೀನಿನಲ್ಲಿರುವ ಕೋಳಿ ಫಾರಂಗೆ ಮಳೆ ನೀರು ನುಗ್ಗಿ ಆರು ಸಾವಿರಕ್ಕೂ ಹೆಚ್ಚು ಕೋಳಿಗಳು ಕೊಚ್ಚಿಕೊಂಡು ಹೋಗಿವೆ.

ರಾಜಕಾಲುವೆ ಉಕ್ಕಿ ಹರಿದ ಕಾರಣ ಮಳೆ ನೀರು ಕೋಳಿ ಫಾರಂ ಶೆಡ್‌ನೊಳಗೆ ನುಗ್ಗಿದೆ. ರಾಜಕಾಲುವೆ ಒತ್ತುವರಿ ಕಾರಣ ಈ ಅನಾಹುತ ಸಂಭವಿಸಿದೆ ಎಂದು ಕೋಲಾರ ತಾಲ್ಲೂಕು ತಹಶೀಲ್ದಾರ್ ನಾಗರಾಜ್ ಹೇಳಿದ್ದಾರೆ. 'ಸುಮಾರು ₹12 ಲಕ್ಷ ನಷ್ಟವಾಗಿದ್ದು ಸರ್ಕಾರ ಪರಿಹಾರ ನೀಡಬೇಕು' ಎಂದು ಕೋಳಿ ಫಾರಂ ಮಾಲೀಕ ತಿಮ್ಮೇಗೌಡ ಆಗ್ರಹಿಸಿದ್ದಾರೆ.

ಬದಲಿ ಮಾರ್ಗದಲ್ಲಿ ಸಂಚಾರ

ರಾಮನಗರ: ಮಳೆಯಿಂದಾಗಿ ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತವಾಗಿದೆ. ರಸ್ತೆ ಸುರಕ್ಷತೆ ಕಾರಣಕ್ಕೆ ಪ್ರಯಾಣಿಕರು ಬೆಂಗ ಳೂರು- ಕನಕಪುರ- ಮೈಸೂರು ಇಲ್ಲವೇ ಬೆಂಗಳೂರು-ಕುಣಿಗಲ್-ಮೈಸೂರು ಮಾರ್ಗವಾಗಿ ಸಂಚರಿಸುವಂತೆ ರಾಮನಗರ ಪೊಲೀಸರು ಸಲಹೆ ನೀಡಿದ್ದಾರೆ. ಕುಂಬಳಗೋಡು ಸಮೀಪ ಕೆರೆ ಕೋಡಿ ಬಿದ್ದು ರಸ್ತೆಗೆ ನೀರು ನುಗ್ಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.56	21,718	20,233
ಹಾರಂಗಿ	2,859	2,857.01	2,809	3,670
ಕಬಿನಿ	2,284	2,284	17,000	17,000
ಹೇಮಾವತಿ	2,922	2,921.95	7,465	5,725
ಲಿಂಗನಮಕ್ಕಿ	1,819	1,814	7,516	7,373
ಸೂಪಾ (ಮೀ)	564	549.95	5,302	1,142
ಮಾಣಿ	595	588	1,442	-
ತುಂಗಭದ್ರಾ	1,633	1632.71	84,959	85,000
ಮಲಪ್ರಭಾ	2079.50	2,078.40	2,291	694
ಘಟಪ್ರಭಾ	2,175	2,175.00	4,910	4,910
ಭದ್ರಾ	186	184	8,605	10,098
ಆಲಮಟ್ಟಿ (ಮೀ)	519.60	519.60	42,500	42,500
ನಾರಾಯಣಪುರ (ಮೀ)	492.25	492.10	45,000	47,040

* ನೆಲಮಟ್ಟದಿಂದ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ವಿಭಾಗ ಕಾರ್ಯಾಲಯ, ಹಬ್ಬುವಾಡಾ–ಕಾರವಾರ, ಉತ್ತರ ಕನ್ನಡ ಜಿಲ್ಲೆ –581 301.
ದೂ: 08382–228935, ಫ್ಯಾಕ್ಸ್: 229735 e-mail: eerdwsd.uk@gmail.com
ನಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/ಪಿಬಿ–1/ ಟೆಂಡರ/JJM/2022–23/1293 ದಿನಾಂಕ: 25.08.2022

ಇ–ಪ್ರೊಕ್ಯೂರಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಾರವಾರ ಇವರಿಂದ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ/ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರಮೆಂಟ್ ಸಂಸ್ಥೆಯಿಂದ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document KW-4** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್ ಸೈಟ್ **www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ. ಟೆಂಡರ್ ವಿವರಗಳು ಈ ಕೆಳಗಿನಂತಿದೆ.

ಕಾಮಗಾರಿ ಹೆಸರು: (1) Indent- 40907/call-3 (2) INDENT40414/CALL-4 (3) INDENT40381/CALL-4 (4) INDENT 41684/CALL-2
(1) Downloading of document through e-proc portal: **26.08.2022 to 03.09.2022 up to 16.30 Hrs.** (2) Time & date of Pre-Bid Conference: **30.08.2022 Time: 11.30 Hrs.** Venue: O/o. Executive Engineer, Rural Drinking Water & Sanitation Division Po: Habbuwada, Karwar- Uttara Kannada Dist. (3) Last Date & Time for Receipt of Bids: **03.09.2022 Time: 16.30 Hrs.** (4) Date & Time of Technical Bid Opening: **04.09.2022 Time: 17:00 Hrs.** (5) Date & Time of Financial Bid Opening: Will be informed technically qualified bidders after approval of Technical Bid.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು
ಗ್ರಾ.ಕು.ನೀ.ಮತ್ತು ನೈ. ವಿಭಾಗ, ಕಾರವಾರ (ಉ.ಕ. ಜಿಲ್ಲೆ)
DIPR/ADK/MCA/360/22-23 dt. 25.08.2022

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in
ಟೆಂಡರ್ ಸಂಖ್ಯೆ:PCB/CEL/CSO/21/Procure PHASE III/2022-23/3577 ದಿನಾಂಕ: 22.08.2022

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಸದಸ್ಯ ಕಾರ್ಯದರ್ಶಿಗಳು(ಖರೀದಿದಾರರು), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರಿಂದ ಅರ್ಹ ಸರಬರಾಜುದಾರರಿಂದ ಮಂಡಳಿಯ ಪ್ರಯೋಗಾಲಯಗಳಿಗೆ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಆಹ್ವಾನಿಸಲಾಗಿದೆ.

ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: 22.09.2022 (ಸಂಜೆ 4:00 ಗಂಟೆಯವರೆಗೆ). ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ
ವಾಸಾಸಂಇ/ವಾ.ಪ್ರ/1978/ಎಂಎಎ/2022–23

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಿರಿಧಾನ್ಯಗಳ ಸಮಾವೇಶದಲ್ಲಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆ

'ಸಿರಿಧಾನ್ಯ ಕೇಂದ್ರವಾಗಿ ಕಲ್ಯಾಣ ಕರ್ನಾಟಕ'

ಪ್ರಜಾವಾಣಿ ವಾರ್ತೆ

ರಾಯಚೂರು: 'ಕಲ್ಯಾಣ ಕರ್ನಾಟಕವನ್ನು ಸಿರಿಧಾನ್ಯಗಳ ಕೇಂದ್ರವಾಗಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರದ ಜೊತೆ ಕೇಂದ್ರವೂ ನೆರವು ನೀಡಲಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಶನಿವಾರ ತಿಳಿಸಿದರು.

ರಾಯಚೂರು ಕೃಷಿ ವಿ.ವಿ. ಆವರಣದಲ್ಲಿ ನಬಾರ್ಡ್ ಸಹಯೋಗದಲ್ಲಿ ನಡೆದ ಸಿರಿಧಾನ್ಯಗಳ ಸಮಾವೇಶದ ಸಮಾರೋಪದಲ್ಲಿ ಅವರು, 'ಸಿರಿಧಾನ್ಯ ಬೆಳೆ ಸಂಸ್ಕರಿಸಲು, ಪ್ಯಾಕೇಜಿಂಗ್ ಮತ್ತು ದಾಸ್ತಾನು ಮಾಡಲು ಬದ್ಧತೆ ತೋರಿಸಬೇಕು' ಎಂದರು.

'ಕಲ್ಯಾಣ ಕರ್ನಾಟಕವು ಸಿರಿಧಾನ್ಯಗಳ ತಾಣವಾಗಿ ಅಭಿವೃದ್ಧಿಗೊಂಡು, ದೊಡ್ಡ ಕಂಪನಿಗಳಿಂದ ವಹಿವಾಟು ನಡೆಸಬೇಕು. ಉದ್ಯೋಗ ಸೃಷ್ಟಿಯಾಗಬೇಕು. ಪ್ರತಿ ಜಿಲ್ಲೆಯಲ್ಲೂ ಸಿರಿಧಾನ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದರೆ, ಮಹಿಳೆಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ದೊರೆಯುತ್ತವೆ. ಆಹಾರ ಸಂಸ್ಕರಣಾ ಘಟಕಗಳಿಗೆ 5 ವರ್ಷ ತೆರಿಗೆ ವಿನಾಯಿತಿಯಿದೆ' ಎಂದರು.

ಮುಖ್ಯಮಂತ್ರಿ ಬಸರಾಜ ಬೊಮ್ಮಾಯಿ ಅವರು, 'ರಾಯಚೂರು ಸಿರಿಧಾನ್ಯ ಘೋಷಣೆ' ಪ್ರಕಟಿಸುವ ಕಾರ್ಯ ಕುಲಪತಿ ಮಾಡಬೇಕು. ಕಲ್ಯಾಣ ಕರ್ನಾಟಕದ ಪ್ರತಿ ಜಿಲ್ಲೆಗೆ ಒಂದು ಸಿರಿಧಾನ್ಯ ಗೊತ್ತುಪಡಿಸಿ ಬೆಳೆಸಬೇಕು' ಎಂದರು. 'ಪ್ರತಿ ಜಿಲ್ಲೆಯಲ್ಲಿ ಸಂಸ್ಕರಣ ಘಟಕ ಸ್ಥಾಪಿಸಲಾಗುವುದು. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಸಂಸ್ಕರಣ ಮತ್ತು ರಫ್ತು ನಿಗಮದಿಂದ (ಕೆಪೆಕ್) ಎಲ್ಲ ರೀತಿ ನೆರವು ನೀಡಲಾಗುವುದು' ಎಂದರು.

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರಸಿಂಗ್ ತೋಮರ್, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಸಚಿವ ಬಿ.ಸಿ.ಪಾಟೀಲ, ನಬಾರ್ಡ್ ಉಪ ಪ್ರಧಾನ ನಿರ್ದೇಶಕ ಪಿವಿಎಸ್ ಸೂರ್ಯಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಶಂಕರ ಪಾಟೀಲ, ಸಂಸದರಾದ ರಾಜಾ ಅಮರೇಶ್ವರ ನಾಯಕ ಸಂಗಣ್ಣ ಕರಡಿ, ವಿವಿ ಕುಲಪತಿ ಡಾ. ಕೆ.ಎನ್. ಕಟ್ಟಿಮನಿ ಮತ್ತು ಶಾಸಕ ಡಾ.ಶಿವರಾಜ ಪಾಟೀಲ ಇದ್ದರು.

ಸಿರಿಧಾನ್ಯಗಳ ಸಮಾವೇಶದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಳಿಗೆಗಳನ್ನು ವೀಕ್ಷಿಸಿದರು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಬಾರ್ಡ್ ಅಧಿಕಾರಿಗಳು ಇದ್ದರು

'ಏಮ್ಸ್ ಸ್ಥಾಪನೆಗೆ ರಾಯಚೂರು ಸೂಕ್ತ'

'ಏಮ್ಸ್ ಸ್ಥಾಪನೆಗೆ ರಾಜ್ಯದಲ್ಲಿ ಸಮೀಕ್ಷೆ ನಡೆಸಿ ಸ್ಥಳ ನಿರ್ಧರಿಸಲು ಹಾಗೂ ಹಿಂದುಳಿದ ಪ್ರದೇಶದಲ್ಲೇ ಸ್ಥಾಪಿಸಲು ಕೇಳಿಕೊಳ್ಳಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ರಾಯಚೂರು ಜಿಲ್ಲೆಯಲ್ಲಿ ಅಪೌಷ್ಟಿಕ ಸಮಸ್ಯೆ ವ್ಯಾಪಕವಾಗಿದೆ. ಮಹತ್ವಾಕಾಂಕ್ಷಿ ಯೋಜನೆಯಲ್ಲೂ ಇದೆ. ಏಮ್ಸ್ ಸ್ಥಾಪಿಸಲು ರಾಯಚೂರು ಸೂಕ್ತ ಸ್ಥಳವಾಗಿದೆ' ಎಂದು ಪ್ರತಿಪಾದಿಸಿದರು.

ತೆಲಂಗಾಣ ರಾಜ್ಯದಲ್ಲಿ ರಾಯಚೂರು ವಿಲೀನದ ಬಗ್ಗೆ ಅಲ್ಲಿನ ಮುಖ್ಯಮಂತ್ರಿ ಚಂದ್ರಶೇಖರರಾವ್ ಹೇಳಿಕೆ ಹಾಸ್ಯಾಸ್ಪದವಾಗಿದೆ. ಒಂದಿಂಚೂ ಜಾಗ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ರಾಜಕೀಯ ಪ್ರೇರಿತವಾಗಿ ಅವರು ಹೇಳಿಕೆ ನೀಡಿದ್ದಾರೆ' ಎಂದು ಹೇಳಿದರು.

ಕಾರು ಇರುವವರ ಬಿಪಿಎಲ್ ಕಾರ್ಡ್ ರದ್ದು ಇಲ್ಲ: ಸಚಿವ

ಆನಂದಪುರ (ಶಿವಮೊಗ್ಗ ಜಿಲ್ಲೆ): 'ಇನ್ನು ಮುಂದೆ ಕಾರು ಹೊಂದಿದವರ ಬಿಪಿಎಲ್ ಕಾರ್ಡ್ ರದ್ದು ಮಾಡುವುದಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಶನಿವಾರ ಹೇಳಿದರು.

ಮುರುಘಾ ಮಠದಲ್ಲಿ ಕಾರ್ಯಕ್ರಮ ವೊಂದರಲ್ಲಿ ಮಾತನಾಡಿದ ಅವರು, 'ಈಗ ₹50,000 ಹಾಗೂ ₹ 1 ಲಕ್ಷಕ್ಕೂ ಹಳೆ ಕಾರುಗಳು ಸಿಗುತ್ತವೆ. ಗಾರೆ ಮಾಡುವವರು, ಮೀನು ಹಿಡಿಯುವವರೂ ಕಾರು ತೆಗೆದುಕೊಂಡು ಹೋಗುತ್ತಾರೆ. ಅಂತವರ ಕಾರ್ಡ್ ಸಹಿತ ರದ್ದಾಗಿರುವುದು ಸರಿಯಲ್ಲ' ಎಂದರು.

'ಈ ವಿಷಯವಾಗಿ ಶಾಸಕ ಎಚ್. ಹಾಲಪ್ಪ ಹರತಾಳು ಹಾಗೂ ನಾನು ಮುಖ್ಯಮಂತ್ರಿ ಬಳಿ ಚರ್ಚಿಸಿದ್ದೇವೆ. ಈ ಕಾನೂನಿನಿಂದ ಬಡವರು ಹೊಂದಿರುವ ಕಾರ್ಡ್ ರದ್ದಾಗುತ್ತದೆ. ಅವರ ಜೀವನಾಧಾರಕ್ಕೆ ತೊಂದರೆ ಆಗುತ್ತದೆ ಎಂದು ಮನವರಿಕೆ ಮಾಡಿದ್ದೇವೆ. ಬಡವರ ಮೇಲೆ ಕರುಣೆ ತೋರಿ ಸಿ.ಎಂ ಆದೇಶ ಹೊರಡಿಸುತ್ತಾರೆ' ಎಂದರು.

ಪಿಎಸ್‌ಐ: ಪ್ರಥಮ ರ‍್ಯಾಂಕ್ ಅಭ್ಯರ್ಥಿ ಸೆರೆ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಒಎಂಆರ್ ಉತ್ತರ ಪತ್ರಿಕೆಯಲ್ಲಿ ತಿದ್ದುಪಡಿ ಮಾಡಿಸಿ ಮಹಿಳಾ ವಿಭಾಗದಲ್ಲಿ ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ರಚನಾ ಹನುಮಂತ (25) ಎಂಬ ಆರೋಪಿಯನ್ನು ಸಿಐಡಿ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ.

ಪೊಲೀಸರ ಕಣ್ತಪ್ಪಿಸಿ ಓಡಾಡುವುದರ ಜೊತೆಗೆ ಪದೇ ಪದೇ ವಾಸ್ತವ್ಯ ಬದಲಿಸುತ್ತಿದ್ದ ರಚನಾ ಪತ್ತೆಗೆ ಬೆಂಗಳೂರು, ಕಲಬುರಗಿ ಪೊಲೀಸರು, ಸಿಐಡಿ ಅಧಿಕಾರಿಗಳು ನಿರಂತರವಾಗಿ ಹುಡುಕಾಟ ನಡೆಸಿದ್ದರು.

ಮಹಾರಾಷ್ಟ್ರ ಗಡಿಯಲ್ಲಿರುವ ಜಿಲ್ಲೆಯ ಆಳಂದ ತಾಲ್ಲೂಕಿನ ಹಿರೋಳ್ಳಿ ಚೆಕ್‌ಪೋಸ್ಟ್ ಬಳಿ, ಸಿಐಡಿ ಡಿವೈಎಸ್ಪಿ ಶಂಕರಗೌಡ ಪಾಟೀಲ ಮತ್ತು ಸಿಐಡಿ ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್ ಮಂಜುನಾಥ ನೇತೃತ್ವದ ತಂಡವು ರಚನಾ ಅವರನ್ನು ವಶಕ್ಕೆ ಪಡೆದಿದೆ. ಶನಿವಾರ ನಗರದ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ದಸ್ತಗೀರಸಾಬ್ ಮುಲ್ಲಾ ಅವರ ಎದುರು ಹಾಜರುಪಡಿಸಿತು.

ರಚನಾ ವಿರುದ್ಧ ಬೆಂಗಳೂರಿನಲ್ಲಿ ಎಫ್‌ಐಆರ್ ದಾಖಲಾಗಿದ್ದರಿಂದ ಟ್ರಾನ್ಸಿಟ್ ವಾರೆಂಟ್ ಪಡೆದ ಸಿಐಡಿ ಅಧಿಕಾರಿಗಳು ಶನಿವಾರ ಸಂಜೆ ಬೆಂಗಳೂರಿಗೆ ಆರೋಪಿಯನ್ನು ಕರೆದೊಯ್ದರು.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ ಬಯಲಾಗಿ, ನೇಮಕಾತಿ ಪಟ್ಟಿ ರದ್ದುಗೊಳಿಸಿದ ಕ್ರಮ ಖಂಡಿಸಿ ಅಭ್ಯರ್ಥಿಗಳು ನಡೆಸಿದ್ದ ಪ್ರತಿಭಟನೆಯಲ್ಲಿ ರಚನಾ ಮುಂಚೂಣಿಯಲ್ಲಿದ್ದರು. ತಮ್ಮ ವಿರುದ್ಧ ಎಫ್‌ಐಆರ್ ದಾಖಲಾದ ಕೂಡಲೇ ನಾಪತ್ತೆಯಾಗಿದ್ದರು.

ರಚನಾ ಹನುಮಂತ

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. www.midnglb@rediffmail.com. ದೂರವಾಣಿ : 08472 –220196
ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–3/ಕೆ.ಡಬ್ಲ್ಯೂ–4/2022–23/2322 ದಿನಾಂಕ: 25–08–2022

–: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–3) :–

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆಯಡಿ ಕಾಮಗಾರಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ, 2) ಕಾಮಗಾರಿ ಅಂದಾಜು ಮೊತ್ತ: **ರೂ. 418,85,405.48,** 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಇ–ಪ್ರೊಕ್ಯೂರಮೆಂಟನಂತೆ, ಇ.ಎಂ.ಡಿ. ರೂ. 6,28,300.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **09–09–2022 ಬೆಳಿಗ್ಗೆ 11.00 ಗಂಟೆಯ ವರೆಗೆ,** 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **12–09–2022 ಸಾಯಂಕಾಲ 17.30 ಗಂಟೆಯ ವರೆಗೆ,** 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **13–09–2022 ಸಾಯಂಕಾಲ 17.30 ಗಂಟೆಯ ವರೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14–09–2022 ಸಾಯಂಕಾಲ 17.30 ಗಂಟೆಯ ವರೆಗೆ,** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/546/ಎಂ.ಸಿ.&ಎ/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜನಿಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ
ಫೋನ್: 08182-254832 ಫ್ಯಾಕ್ಸ್ : 08182-254832
E-mail : eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

1) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ ಟೆಂಡರ್/22 ದಿನಾಂಕ: 22.08.2022. 2) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ ಟೆಂಡರ್/23 ದಿನಾಂಕ: 22.08.2022. 3) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ ಟೆಂಡರ್/24 ದಿನಾಂಕ: 22.08.2022. 4) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ ಟೆಂಡರ್/25 ದಿನಾಂಕ: 22.08.2022.

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಪದ್ಧತಿಯ ಮೂಲಕ ಹದಿಮೂರು (13) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.
(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ. **4.96** ರಿಂದ **82.76** ಲಕ್ಷಗಳವರೆಗೆ ಇರುತ್ತದೆ. (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: **03.09.2022, 17.30** ಘಂಟೆಯವರೆಗೆ. (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: **25.08.2022** ರಿಂದ **03.09.2022** ಸಾಯಂಕಾಲ **17.30** ಘಂಟೆಯವರೆಗೆ. (ಕಚೇರಿ ವೇಳೆಯಲ್ಲಿ) ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://eproc.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ತುಂ.ಮೆ.ಯೋ. ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.129-08 ಝೋಂಕಾರ್/2022-23

ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕ ಅಂತ್ಯ

7 ಕಂಪನಿಗಳ ನಷ್ಟ ₹1.54 ಲಕ್ಷ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಕ್ರವಾರಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ಷೇರುಪೇಟೆಗಳ ವಹಿವಾಟು ನಕಾರಾತ್ಮಕವಾಗಿ ಅಂತ್ಯ ಕಂಡಿದೆ. ಇದರಿಂದಾಗಿ ಷೇರುಪೇಟೆ ನೋಂದಾಯಿತ ಕೆಲವು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ ಇಳಿಕೆ ಆಗಿದೆ.

ಪ್ರಮುಖ 10 ಕಂಪನಿಗಳ ಪೈಕಿ 7 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯದಲ್ಲಿ ₹ 1.54 ಲಕ್ಷ ಕೋಟಿ ಇಳಿಕೆ ಕಂಡುಬಂದಿದೆ. ಟಿಸಿಎಸ್ ಕಂಪನಿ ₹ 59,862 ಕೋಟಿಯಷ್ಟು ಗರಿಷ್ಠ ನಷ್ಟ ಅನುಭವಿಸಿದೆ. ರಿಲಯನ್ಸ್, ಐಸಿಐಸಿಐ ಬ್ಯಾಂಕ್ ಮತ್ತು ಎಸ್‌ಬಿಐ ಬಂಡವಾಳ ಮೌಲ್ಯದಲ್ಲಿ ಏರಿಕೆ ಆಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ವಾರದ ವಹಿವಾಟಿನಲ್ಲಿ 812 ಅಂಶ ಇಳಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 199 ಅಂಶ ಇಳಿಕೆ ಆಗಿದೆ. ಇದಕ್ಕೂ ಮೊದಲು ಸತತ ಐದು ವಾರಗಳಲ್ಲಿಯೂ ಷೇರುಪೇಟೆಗಳ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಗಿತ್ತು.

ವಿದೇಶಿ ಸಾಂಸ್ಥಿಕ ಹೂಡಿಕೆ: ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಆಗಸ್ಟ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಖರೀದಿಸುತ್ತಿದ್ದಾರೆ. ಆಗಸ್ಟ್ 1ರಿಂದ 26ರವರೆಗಿನ ವಹಿವಾಟು ಅವಧಿಯಲ್ಲಿ ಒಟ್ಟು ₹ 20,632 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಕಂಪನಿಗಳ ಬಂಡವಾಳ ಮೌಲ್ಯ (ಕೋಟಿಗಳಲ್ಲಿ)

ಕಂಪನಿ	ಇಳಿಕೆ/ಏರಿಕೆ	ಬಂಡವಾಳ ಮೌಲ್ಯ
ರಿಲಯನ್ಸ್	₹3,501 ▲	₹17,71,645
ಟಿಸಿಎಸ್	₹59,862 ▼	₹11,78,818
ಎಚ್‌ಡಿಎಫ್‌ಸಿ ಬ್ಯಾಂಕ್	₹16,091 ▼	₹8,13,952
ಇನ್ಫೊಸಿಸ್	₹31,789 ▼	₹6,40,352
ಐಸಿಐಸಿಐ ಬ್ಯಾಂಕ್	₹523 ▲	₹6,06,330
ಹಿಂದುಸ್ತಾನ್ ಯೂನಿಲಿವರ್	₹14,814 ▼	₹6,04,080
ಎಸ್‌ಬಿಐ	₹3,034 ▲	₹4,67,471
ಎಚ್‌ಡಿಎಫ್‌ಸಿ	₹13,032 ▼	₹4,34,644
ಎಲ್‌ಐಸಿ	₹4,459 ▼	₹4,29,309
ಬಜಾಜ್ ಫೈನಾನ್ಸ್	₹14,430 ▼	₹4,27,606

ಮಾಹಿತಿ: ಬಿಎಸ್‌ಇ, ಕೆಬಿಕೆ ಗ್ರಾಫಿಕ್ಸ್

ಮುಂಬೈ ಧಾರಣೆ

ಶೇಂಗಾ

27–8-2022

ಜಾವಾ 70/80(ಹೊಸ)	11400-11450
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10100-10150
ದಪ್ಪ ಗುಜರಾತ್(ಹೊಸ)	10800-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1730)
ಒಂದು ವಾರದ ಡೆಲಿವರಿ	1715 (1725)
ಸೋಯಾ ಕಚ್ಚಾ	1220 (1215)
ಪಾಮ್ ವಾರದ ಡೆಲಿವರಿ	1068 (1068)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,325 (51,550)
ಬೆಳ್ಳಿ ಕೆ.ಜಿ 55,100 (55,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಉಕ್ರೇನ್ ನಗರಗಳ ಮೇಲೆ ರಷ್ಯಾ ಕ್ಷಿಪಣಿ ದಾಳಿ

ಕೀವ್ (ಎಪಿ): 'ಉಕ್ರೇನ್‌ನ ಪರಮಾಣು ವಿದ್ಯುತ್ ಸ್ಥಾವರದ ಆಸುಪಾಸಿನಲ್ಲಿರುವ ನಗರಗಳ ಮೇಲೆ ರಷ್ಯಾ ಸೇನೆಯು ಕ್ಷಿಪಣಿ ಹಾಗೂ ಫಿರಂಗಿ ದಾಳಿ ನಡೆಸಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಝಪೋರಿಝಿಯಾದಲ್ಲಿರುವ ಸ್ಥಾವರವು ಯೂರೋಪ್‌ನ ಅತಿದೊಡ್ಡ ಅಣು ವಿದ್ಯುತ್ ಸ್ಥಾವರವೆನಿಸಿದೆ. ಇದು ನೀಪರ್ ನದಿ ತಟದಲ್ಲಿದೆ. ಈ ಸ್ಥಾವರದಿಂದ 10 ಕಿ.ಮೀ ದೂರದಲ್ಲಿರುವ ನಿಕೋಪಾಲ್ ಮತ್ತು ಮರ್ಹನೆಸ್ ನಗರಗಳ ಮೇಲೆ ರಷ್ಯಾ ಸೇನೆಯು ಗ್ರಾಡ್ ಕ್ಷಿಪಣಿಗಳು ಹಾಗೂ ಫಿರಂಗಿಗಳಿಂದ ದಾಳಿ ನಡೆಸಿದೆ' ಎಂದು ದಿನಿಪ್ರೊಪೆಟ್ರೋವ್ಸ್ಕ್ ಪ್ರದೇಶದ ಗವರ್ನರ್ ವ್ಯಾಲೆಂಟಿನ್ ರೆಜ್ನಿಚೆಂಕೊ ಶನಿವಾರ ತಿಳಿಸಿದ್ದಾರೆ.

ಬೆಂಕಿಯಿಂದಾಗಿ ಸ್ಥಾವರದಲ್ಲಿನ ವಿಕಿರಣ ಪ್ರಸರಣ ಮಾರ್ಗಕ್ಕೆ ಹಾನಿಯಾಗಿತ್ತು. ಇದರಿಂದ ಒಂದೊಮ್ಮೆ ವಿಕಿರಣ ಸೋರಿಕೆಯಾದರೆ ಉಂಟಾಗಬಹುದಾದ ಅಪಾಯ

ಝಪೋರಿಝಿಯಾದಲ್ಲಿರುವ ಅಣು ಸ್ಥಾವರ –ಎಎಫ್‌ಪಿ ಸಂಗ್ರಹ ಚಿತ್ರ

ತಪ್ಪಿಸುವ ಉದ್ದೇಶದಿಂದ ಅಧಿಕಾರಿಗಳು ಸ್ಥಾವರದ ಸನಿಹ ವಾಸವಿರುವವರಿಗೆ ಶುಕ್ರವಾರ ಅಯೋಡಿನ್ ಮಾತ್ರೆಗಳನ್ನು ವಿತರಿಸಿದ್ದರು.

'ಬಖಮತ್ ನಗರದ ಕೆಲ ಪ್ರದೇಶಗಳ ಮೇಲೆ ಹಿಡಿತ ಸಾಧಿಸುವ ಸಲುವಾಗಿ ರಷ್ಯಾ ಸೇನೆ ಹಾಗೂ ಪ್ರತ್ಯೇಕತಾವಾದಿಗಳ ಪಡೆ ನಡುವೆ ನಡೆದ ಗುಂಡಿನ ದಾಳಿಯಲ್ಲಿ ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ' ಎಂದು ಪೂರ್ವ ಡೊನೆಸ್ಕ್ ಪ್ರದೇಶದ ಗವರ್ನರ್ ಪಾವ್ಲೊ ಕಿರಿಲೆಂಕೊ ಹೇಳಿದ್ದಾರೆ.

ಕೆನರಾ ಬ್ಯಾಂಕ್‌ನಿಂದ ₹2 ಸಾವಿರ ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ಬಾಸೆಲ್–3 ಟಯರ್–2, ಸೀರಿಸ್–1 ಬಾಂಡ್ ಮೂಲಕ ಒಟ್ಟು ₹2 ಸಾವಿರ ಕೋಟಿ ಸಂಗ್ರಹ ಮಾಡಿದೆ. ಈ ಬಾಂಡ್‌ಗಳಿಗೆ ಬ್ಯಾಂಕ್ ವಾರ್ಷಿಕ ಶೇಕಡ 7.48ರಷ್ಟು ಲಾಭಾಂಶ (ಕೂಪನ್ ರೇಟ್) ಪಾವತಿಸಲಿದೆ.

ಬಾಂಡ್‌ಗಳಿಗೆ ಹೂಡಿಕೆದಾರರಿಂದ ಭಾರಿ ಸ್ಪಂದನ ವ್ಯಕ್ತವಾಗಿತ್ತು ಎಂದು ಬ್ಯಾಂಕ್ ಹೇಳಿದೆ.

ಆರಂಭಿಕ ಮೊತ್ತವಾಗಿ ₹1,000 ಕೋಟಿಯ ಬಾಂಡ್‌ಗಳನ್ನು ಹೂಡಿಕೆದಾರರಿಗೆ ಮುಕ್ತವಾಗಿಸಲಾಗಿತ್ತು, ಇದನ್ನು ಇನ್ನೂ ₹ 1000 ಕೋಟಿಯಷ್ಟು ಹೆಚ್ಚಿಸುವ ಆಯ್ಕೆ ಇರಿಸಿಕೊಳ್ಳಲಾಗಿತ್ತು.

ಒಟ್ಟು ₹ 8,930 ಕೋಟಿಗಿಂತ ಹೆಚ್ಚಿನ ಮೌಲ್ಯದ ಬಾಂಡ್‌ಗಳಿಗೆ ಹೂಡಿಕೆದಾರರು ಬಿಡ್ ಸಲ್ಲಿಸಿದ್ದರು ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1710 (1720)
ಸೋಯಾ (ರಿಫೈನ್ಡ್)	₹1265 (1260)
ಸೂರ್ಯಕಾಂತಿ (ರಿಫೈನ್ಡ್)	₹1510 (1510
ಪಾಮೋಲಿನ್	₹1070 (1070)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹435
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹435

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹300-661
ದ್ವಿತಳಿ (ಬಿ.ವಿ)
₹330-798

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹156
ಆರ್‌ಎಸ್‌ಎಸ್-5 ₹147
ಗುಡ್ ಲಾಟ್ ₹139

ಅಕ್ಟೋಬರ್‌ನಿಂದ ಮಾರಾಟ ● ಸಾಗಾಟದ ಸಬ್ಸಿಡಿ ತಗ್ಗಿಸುವ ಉದ್ದೇಶ

'ಭಾರತ್' ಬ್ರ್ಯಾಂಡ್ ರಸಗೊಬ್ಬರ

ನವದೆಹಲಿ (ಪಿಟಿಐ): ಯೂರಿಯಾ, ಡಿಎಪಿ ಸೇರಿದಂತೆ ಸಬ್ಸಿಡಿ ಇರುವ ಎಲ್ಲ ರಸಗೊಬ್ಬರಗಳನ್ನು ಅಕ್ಟೋಬರ್‌ನಿಂದ 'ಭಾರತ್' ಬ್ರ್ಯಾಂಡ್ ಅಡಿಯಲ್ಲಿ ಮಾರಾಟ ಮಾಡಲಾಗುತ್ತದೆ. ರಸಗೊಬ್ಬರಗಳು ರೈತರಿಗೆ ಸಕಾಲದಲ್ಲಿ ಸಿಗಬೇಕು, ಇವುಗಳ ಸಾಗಾಟದ ಮೇಲಿನ ಸಬ್ಸಿಡಿ ತಗ್ಗಿಸಬೇಕು ಎಂಬ ಉದ್ದೇಶ ಇದರ ಹಿಂದಿದೆ.

ರಸಗೊಬ್ಬರ ಸಬ್ಸಿಡಿ ಯೋಜನೆ 'ಪ್ರಧಾನಮಂತ್ರಿ ಭಾರತೀಯ ಜನಉರ್ವರಕ್ ಪರಿಯೋಜನಾ' (ಪಿಎಂಬಿಜೆಪಿ) ಅಡಿಯಲ್ಲಿ ಜಾರಿಗೆ ತರುತ್ತಿರುವ 'ಒಂದು ದೇಶ ಒಂದು ರಸಗೊಬ್ಬರ' ಎಂಬ ಹೊಸ ಉಪಕ್ರಮದ ಬಗ್ಗೆ ಮಾಹಿತಿ ನೀಡಿದ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರಗಳ ಸಚಿವ ಮನಸುಖ್ ಮಾಂಡವೀಯ ಅವರು, 'ಕಂಪನಿಗಳು ತಮ್ಮ ಬ್ರ್ಯಾಂಡ್, ಹೆಸರು, ಲೋಗೊ ಮತ್ತು ಉತ್ಪನ್ನಕ್ಕೆ ಸಂಬಂಧಿಸಿದ ಇತರ ಅಗತ್ಯ ವಿವರಗಳನ್ನು ಚೀಲದ ಮೂರನೆಯ ಒಂದರಷ್ಟು ಭಾಗದಲ್ಲಿ ಪ್ರದರ್ಶಿಸಬಹುದು' ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಹಾಲಿ ದಾಸ್ತಾನು ಖಾಲಿ ಮಾಡಲು 2022ರ ಅಂತ್ಯದವರೆಗೆ ಅವಕಾಶ
- ಕಳೆದ ವರ್ಷದ ಸಬ್ಸಿಡಿ ಮೊತ್ತ ₹ 1.62 ಲಕ್ಷ ಕೋಟಿ
- ರೈತರಲ್ಲಿ ಗೊಂದಲ ನಿವಾರಣೆಗೆ ಕ್ರಮ

ಇನ್ನುಳಿದ ಮೂರನೆಯ ಎರಡರಷ್ಟು ಭಾಗದಲ್ಲಿ ಕಂಪನಿಗಳು 'ಭಾರತ್' ಬ್ರ್ಯಾಂಡ್ ಹಾಗೂ ಪಿಎಂಬಿಜೆಪಿ ಲೋಗೊ ಪ್ರದರ್ಶಿಸಬೇಕಾಗುತ್ತದೆ. ಹಳೆಯ ದಾಸ್ತಾನು ಖಾಲಿ ಮಾಡಲು ಕಂಪನಿಗಳಿಗೆ ವರ್ಷಾಂತ್ಯದವರೆಗೆ ಅವಕಾಶ ಇದೆ.

ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರವು ರಸಗೊಬ್ಬರಗಳಿಗೆ ಸಬ್ಸಿಡಿ ನೀಡಲು ₹ 1.62 ಲಕ್ಷ ಕೋಟಿ ವ್ಯಯಿಸಿದೆ. ಕಳೆದ ಆರು ತಿಂಗಳಲ್ಲಿ ಜಾಗತಿಕ ಮಟ್ಟದಲ್ಲಿ ಆಗಿರುವ ಬೆಲೆ ಏರಿಕೆ ಗಮನಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಸರ್ಕಾರ ನೀಡಬೇಕಿರುವ ಸಬ್ಸಿಡಿ ಮೊತ್ತವು ₹ 2.25 ಲಕ್ಷ ಕೋಟಿ ಆಗುವ ಸಾಧ್ಯತೆ ಇದೆ.

ಬೇರೆ ಬೇರೆ ಕಂಪನಿಗಳು ತಯಾರಿಸುವ ರಸಗೊಬ್ಬರಗಳು ಒಂದೇ ಆಗಿದ್ದರೂ, ರಸಗೊಬ್ಬರಗಳನ್ನು ಬೇರೆ ಬೇರೆ ಬ್ರ್ಯಾಂಡ್ ಅಡಿ ಬೇರೆ ಬೇರೆ ರಾಜ್ಯಗಳಲ್ಲಿ ತಯಾರಿಸಲಾಗುತ್ತಿದೆ. ರಸಗೊಬ್ಬರಗಳನ್ನು ತಯಾರಿಕಾ ಕೇಂದ್ರಗಳಿಂದ ಬಹು ದೂರದಪ್ರದೇಶಗಳಿಗೆರವಾನೆಮಾಡಲಾಗುತ್ತಿದೆ. ಇದರಿಂದಾಗಿ ಸಾಗಣೆ ಸಬ್ಸಿಡಿ ಹೊರೆ ಕೇಂದ್ರದ ಮೇಲೆ ಬೀಳುತ್ತಿದೆ ಎಂದು ಸಚಿವರು ವಿವರಿಸಿದ್ದಾರೆ.

'ರಸಗೊಬ್ಬರ ತಯಾರಿಕಾ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಸ್ಥಳೀಯವಾಗಿ ಮಾರಾಟ ಮಾಡುವಂತಾಗಲಿ, ಅನಗತ್ಯ ಸಾರಿಗೆ ಕೆಲಸ ಕಡಿಮೆಯಾಗಲಿ ಎಂಬುದು ಏಕ ಬ್ರ್ಯಾಂಡ್ ಜಾರಿಗೆ ತರುವುತ್ತಿರುವುದು ಹಿಂದಿನ ಉದ್ದೇಶ' ಎಂದು ಹೇಳಿದ್ದಾರೆ.

ಏಕ ಬ್ರ್ಯಾಂಡ್ ವ್ಯವಸ್ಥೆ ಜಾರಿಗೆ ಬಂದ ನಂತರ, ಯಾವ ಬ್ರ್ಯಾಂಡ್‌ನ ರಸಗೊಬ್ಬರ ಖರೀದಿಸಬೇಕು ಎಂಬ ಗೊಂದಲವು ರೈತರಲ್ಲಿ ಮೂಡುವುದಿಲ್ಲ ಎಂದಿದ್ದಾರೆ.

ಎಸ್‌ಯುವಿ ವಿಭಾಗ ಬಲಪಡಿಸಲು ಟಾಟಾ ಮೋಟರ್ಸ್ ಯೋಜನೆ

ನವದೆಹಲಿ (ಪಿಟಿಐ): ಪ್ರತಿಸ್ಪರ್ಧಿ ಬ್ರ್ಯಾಂಡ್‌ಗಳಿಂದ ಪೈಪೋಟಿ ಹೆಚ್ಚಾಗುತ್ತಿರುವ ಕಾರಣ ಟಾಟಾ ಮೋಟರ್ಸ್ ಕಂಪನಿಯು ಎಸ್‌ಯುವಿ ವಿಭಾಗದಲ್ಲಿ ತನ್ನ ಪ್ರಬಲ ಸ್ಥಾನವನ್ನು ಕಾಯ್ದುಕೊಳ್ಳಲು ಯೋಜನೆ ರೂಪಿಸಿದೆ ಎಂದು ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ಉಪಾಧ್ಯಕ್ಷ ರಾಜನ್ ಅಂಬಾ ತಿಳಿಸಿದ್ದಾರೆ. ಇದಕ್ಕಾಗಿ ಹಾಲಿ ಇರುವ ಮಾದರಿಗಳ ವಿಸ್ತರಣೆ ಮತ್ತು ಹೊಸ ಮಾದರಿಗಳ ಬಿಡುಗಡೆಗೆ ಕಂಪನಿ ಯೋಜಿಸಿದೆ.

ಟಾಟಾ ಮೋಟರ್ಸ್ ಈಗ ಎಸ್‌ಯುವಿ ವಿಭಾಗದಲ್ಲಿ ಉತ್ತಮ ಮಾರುಕಟ್ಟೆ ಪಾಲು ಹೊಂದಿದ್ದು, ಪಂಚ್, ನೆಕ್ಸಾನ್, ಹ್ಯಾರಿಯರ್ ಮತ್ತು ಸಫಾರಿ ಮಾದರಿಗಳು ಉತ್ತಮ ಮಾರಾಟ ಕಾಣುತ್ತಿವೆ. ಗ್ರಾಹಕರ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ಆವೃತ್ತಿಗಳನ್ನು ತರಲು ಯೋಜನೆ ಹೊಂದಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

2021–22ರಲ್ಲಿ ಕಂಪನಿಯು 2.22 ಲಕ್ಷ ಎಸ್‌ಯುವಿಗಳನ್ನು ಮಾರಾಟ ಮಾಡಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಅದಕ್ಕಿಂತಲೂ ಹೆಚ್ಚಿನ ಮಾರಾಟ ಪ್ರಗತಿ ಸಾಧಿಸಲು ಮುಂದಾಗಿದೆ ಎಂದಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ಶೇ 40 ಕಮಿಷನ್ ಏನು ಇದರ ಗುಟ್ಟು?
ಭಾಗವಹಿಸುವವರು:
ಡಿ. ಕೆಂಪಣ್ಣ, ಅಧ್ಯಕ್ಷ, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ
ಲೋಕೇಶ್ ತಾಳಿಕಟ್ಟೆ, ಅಧ್ಯಕ್ಷ, ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ(ರುಪ್ಸಾ)
ಸಂವಾದ
ಮಧ್ಯಾಹ್ನ 12 ರಿಂದ 1

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490

ತಿಪಟೂರು ಕೊಬ್ಬರಿ

ಕನಿಷ್ಠ	13100
ಗರಿಷ್ಠ	14112
ಮಾದರಿ	13100

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16800	16000	16550	242 ಸೆಂಟ್ಸ್
ಎಸಿ	9100	8500	9200	
ಆರ್‌ಪಿ	10200	9800	9825	ಲಂಡನ್
ಆರ್‌ಸಿ	4800	4600	4750	2281 ಡಾಲರ್ಸ್

'ತೇಜಸ್ ಯುದ್ಧ ವಿಮಾನ ಖರೀದಿಗೆ ಅರ್ಜೆಂಟೀನಾ ಒಲವು'

ಬ್ಯೂನಸ್ ಐರಿಸ್ (ಪಿಟಿಐ): ಭಾರತದಲ್ಲಿ ಅಭಿವೃದ್ಧಿಪಡಿಸಿ, ತಯಾರಿಸಲಾಗುತ್ತಿರುವ 'ತೇಜಸ್' ಯುದ್ಧ ವಿಮಾನ ಖರೀದಿಗೆ ಅರ್ಜೆಂಟೀನಾ ಆಸಕ್ತಿ ತೋರಿದೆ.

ಅರ್ಜೆಂಟೀನಾ ಪ್ರವಾಸದಲ್ಲಿರುವವಿದೇಶಾಂಗ ಸಚಿವರಾದ ಎಸ್.ಜೈಶಂಕರ್ ಹಾಗೂ ಸ್ಯಾಂಟಿಯಾಗೊ ಕೆಫಿರೊ ಅವರೊಂದಿಗೆ ನಡೆಸಿದ ಸಭೆಯಲ್ಲಿ ಈ ವಿಷಯ ಪ್ರಸ್ತಾಪವಾಯಿತು. ಭದ್ರತಾ ಪಡೆಗಳಿಂದ ತರಬೇತಿ, ಸಮರಾಭ್ಯಾಸ ಹಾಗೂ ರಕ್ಷಣಾ ಸಾಮಗ್ರಿಗಳ ಉತ್ಪಾದನೆಯಲ್ಲಿ ಸಹಭಾಗಿತ್ವಕ್ಕೆ ಉಭಯ ನಾಯಕರು ಸಮ್ಮತಿಸಿದರು ಎಂದು ಪ್ರಕಟಣೆ ತಿಳಿಸಿದೆ

ಐಎಂಎ: 16 ವೈದ್ಯರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆಯ 2022ನೇ ಸಾಲಿನ 'ಶಿಕ್ಷಕ ದಿನಾಚರಣೆ' ಪ್ರಶಸ್ತಿಗೆ 16 ವೈದ್ಯರು ಆಯ್ಕೆಯಾಗಿದ್ದಾರೆ.

ವೈದ್ಯಕೀಯ ಕಾಲೇಜುಗಳಲ್ಲಿನ ಸೇವೆ ಹಾಗೂ ವೈದ್ಯಕೀಯ ಕ್ಷೇತ್ರದ ಸಾಧನೆಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ರಾಯಚೂರಿನ ಡಾ. ಅರವಿಂದ ಕುಮಾರ್, ಮಂಗಳೂರಿನ ಡಾ. ಚಕ್ರಪಾಣಿ ಎಂ., ಬೆಂಗಳೂರಿನ ಡಾ. ದಿವಾಕರ್ ಜಿ.ವಿ., ವಿಜಯಪುರದ ಡಾ. ಗುರುಶಾಂತಪ್ಪ, ಬಾಗಲಕೋಟೆಯ ಡಾ. ಕಲಡಗಿ ಪಾಂಡವೀರಪ್ಪ, ಬೆಂಗಳೂರಿನ ಮಾಲಿನಿ ಕೆ.ವಿ., ಡಾ. ನಾಗರತ್ನಾ ಆರ್., ಕೋಲಾರದ ಡಾ. ನಾರಾಯಣಸ್ವಾಮಿ ಎಂ., ಚಿತ್ರದುರ್ಗದ ಡಾ. ಪ್ರಹ್ಲಾದ್ ಎನ್. ಬಿ., ಮಣಿಪಾಲದ ಡಾ. ಶರತ್ ಕುಮಾರ್ ರಾವ್, ಹಾಸನದ ಡಾ. ಸುಧಾ ಟಿ.ಆರ್., ಚಾಮರಾಜನಗರದ ಡಾ. ಸಂಜೀವ್ ಜಿ.ಎಂ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಶಿವಮೊಗ್ಗದ ಡಾ. ಗಂಗಾಧರ್ ಕೆ.ಎಸ್., ವಿಜಯಪುರದ ಡಾ. ಸುರೇಶ್ ಕೆ., ಚಿಕ್ಕಬಳ್ಳಾಪುರದ ಡಾ. ವೆಂಕಟೇಶ್ ಎಚ್.ವಿ. ಹಾಗೂ ಬೆಂಗಳೂರಿನ ಡಾ.ಎಸ್.ಟಿ. ಯಾವಗಲ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸೆ.4ರಂದು ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನ ಐಎಂಎ ಕಚೇರಿಯ ಡಾ.ಎಂ.ಎ. ನರಸಿಂಹಾಚಾರ್ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಡಾ.ಎಸ್.ಎಂ. ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೆರಿಕದಲ್ಲಿ ಜನಾಂಗೀಯ ದಾಳಿ: ಭಾರತೀಯರ ಖಂಡನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಟೆಕ್ಸಾಸ್‌ನಲ್ಲಿ ನಾಲ್ವರು ಭಾರತೀಯ–ಅಮೆರಿಕನ್ನರ ವಿರುದ್ಧ ನಡೆದ ಜನಾಂಗೀಯ ದಾಳಿಯನ್ನು ಭಾರತೀಯರ ವಿವಿಧ ಸಂಘಟನೆಗಳು ತೀವ್ರವಾಗಿ ಖಂಡಿಸಿವೆ.

ಇತ್ತೀಚೆಗೆ ಟೆಕ್ಸಾಸ್‌ನ ಪಾರ್ಕಿಂಗ್ ಪ್ರದೇಶದಲ್ಲಿ ಮೆಕ್ಸಿಕೊ ಮೂಲದ ಮಹಿಳೆಯೊಬ್ಬರು ನಾಲ್ವರು ಭಾರತೀಯ–ಅಮೆರಿಕನ್ ಮಹಿಳೆಯರನ್ನು ಹೀಯಾಳಿಸಿದ್ದರು. ನಂತರ ಹಲ್ಲೆ ನಡೆಸಿ, ವಾಪಸ್ ಭಾರತಕ್ಕೆ ಹೋಗುವಂತೆ ಒತ್ತಾಯಿಸಿದ್ದರು.

ಈ ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬೆನ್ನಲ್ಲೇ ಪೊಲೀಸರು ಮಹಿಳೆಯನ್ನು ಬಂಧಿಸಿದ್ದರು. 'ನಾಲ್ವರು ಭಾರತೀಯ ಮಹಿಳೆಯರ ವಿರುದ್ಧ ಜನಾಂಗೀಯ ನಿಂದನೆ, ಅವರ ಮೇಲೆ ದಾಳಿ ನಡೆಸಿದ ಘಟನೆ ಅಮೆರಿಕದಲ್ಲಿ ನೆಲೆಸಿರುವ ಭಾರತೀಯರಲ್ಲಿ ಆಘಾತ ಮೂಡಿಸಿದೆ' ಎಂದು 'ಇಂಡಿಯಾಸ್ಪೊರಾ'ದ ಸಂಜೀವ್ ಜೋಶಿಪುರ ಹೇಳಿದ್ದಾರೆ.

ಕಾಶ್ಮೀರದಲ್ಲಿ ತನ್ನ ಪ್ರಜೆ ಸಾವಿಗೆ ಪ್ರತಿಭಟನೆ ದಾಖಲಿಸಿದ ಪಾಕ್

ಇಸ್ಲಾಮಾಬಾದ್ (ಪಿಟಿಐ): ಕಾಶ್ಮೀರದ ಜೈಲಿನಲ್ಲಿದ್ದ ತನ್ನ ಪ್ರಜೆ ಮೃತಪಟ್ಟಿರುವುದಕ್ಕೆ ಪಾಕಿಸ್ತಾನವು ಭಾರತದ ವಿರುದ್ಧ ಪ್ರತಿಭಟನೆ ದಾಖಲಿಸಿದೆ. ಇದನ್ನು ನಕಲಿ ಎನ್‌ಕೌಂಟರ್ ಎಂದೂ ಕರೆದಿದೆ.

ಈ ಸಂಬಂಧ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಭಾರತದ ರಾಜತಾಂತ್ರಿಕ ಅಧಿಕಾರಿಯನ್ನು ಕರೆಸಿಕೊಂಡು, ತನ್ನ ಪ್ರತಿಭಟನೆಯನ್ನು ದಾಖಲಿಸಿದೆ ಎಂದು ಪಾಕಿಸ್ತಾನದ ವಿದೇಶಾಂಗ ಕಾರ್ಯಾಲಯ (ಎಫ್‌ಒ) ಹೇಳಿದೆ.

'ಮೊಹಮ್ಮದ್ ಅಲಿ ಹುಸೇನ್ ಎಂಬುವವರು 2006ರಿಂದ ಕಾಶ್ಮೀರದ ಕೋಟ್ ಭಲ್ವಾಲ್ ಜೈಲಿನಲ್ಲಿದ್ದರು. ಅವರನ್ನು ಭಾರತೀಯ ಸೇನೆ ನಕಲಿ ಎನ್‌ಕೌಂಟರ್ ಮೂಲಕ ಹತ್ಯೆ ಮಾಡಿದೆ' ಎಂದು ಎಫ್‌ಒ ಪ್ರಕಟಣೆಯಲ್ಲಿ ಆರೋಪಿಸಿದೆ.

'ಭಾರತ ಸರ್ಕಾರವು ಹುಸೇನ್ ಅವರ ಮರಣೋತ್ತರ ಪರೀಕ್ಷೆಯ ವರದಿ ಸೇರಿದಂತೆ ಘಟನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ತನ್ನೊಂದಿಗೆ ಹಂಚಿಕೊಳ್ಳಬೇಕು. ಜೊತೆಗೆ ಈ ಸಂಬಂಧ ಪಾರದರ್ಶಕ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಬೇಕು' ಎಂದೂ ಪಾಕಿಸ್ತಾನ ಆಗ್ರಹಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ರಾಷ್ಟ್ರೀಯ ನವ ನಿರ್ಮಾಣ ವೇದಿಕೆ, ಬೆಂಗಳೂರು
ಕರ್ನಾಟಕದ ಮಾಜಿ ಮುಖ್ಯಮಂತ್ರಿ
ಶ್ರೀ ರಾಮಕೃಷ್ಣ ಹೆಗಡೆ
96 ನೇ ಜನ್ಮದಿನ
ಮುಖ್ಯ ಅತಿಥಿ
ಶ್ರೀ ಸೀತಾರಾಮ್ ಯೆಚೂರಿ
ಮತ್ತು
ಶ್ರೀ ಸಿದ್ದರಾಮಯ್ಯ
ದಿನಾಂಕ: 29-8-2022
ಸೋಮವಾರ ಸಂಜೆ 4.30
ಸ್ಥಳ: ಭಾರತೀಯ ವಿದ್ಯಾ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು
ಎಲ್ಲರಿಗೂ ಸ್ವಾಗತ

31 ನೇ ವರ್ಷದ ಪುಣ್ಯತಿಥಿ

ಶ್ರೀಮತಿ ಮೀನಮ್ಮ
ಶ್ರೀ ಬಿ. ನಾರಾಯಣರೆಡ್ಡಿಯವರ ಧರ್ಮಪತ್ನಿ
ಸೀತಾರಾಮಪಾಳ್ಯ
ನಿಧನ: 28–8–1991
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
–ಬಿ.ಎನ್.ಬಿ.ಕುಟುಂಬದವರು ಮತ್ತು ಸ್ನೇಹಿತರು

ಹುಟ್ಟು ಹಬ್ಬದ ಸವಿನೆನಪು



ಬಿ.ನಾರಾಯಣ ರೆಡ್ಡಿ (ಬಿ.ಎನ್.ಬಿ)
ಸೀತಾರಾಮಪಾಳ್ಯ
95 ನೇ ವರ್ಷದ ಹುಟ್ಟು ಹಬ್ಬದ ಪ್ರೀತಿಯ ಶುಭಾಶಯಗಳು
"ನಿಮ್ಮ ಆದರ್ಶ ಜೀವನವು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರವಾಗಿದ್ದು ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಸದಾ ಹಸಿರಾಗಿರುವುದು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥಿಸುವ."
– ಬಿ.ಎನ್.ಬಿ.ಕುಟುಂಬದವರು ಮತ್ತು ಸ್ನೇಹಿತರು

2ನೇ ವರ್ಷದ ಪುಣ್ಯಸ್ಮರಣೆ

1936 – 2020
ಶ್ರೀಯುತ ಎನ್. ಗಂಗಯ್ಯನವರು
ಶ್ರೀ ಗೋಪಿವೆಂಕಟೇಶ್ವರ ಕಲ್ಯಾಣ ಮಂಟಪದ ಮಾಲೀಕರು, ನೆಲಮಂಗಲ
ಶ್ರೀಮತಿ ಜಿ.ಮಂಜುಳ ರಾಮಕೃಷ್ಣಯ್ಯ
MBT Bricks ಮತ್ತು ಕುಟುಂಬ ವರ್ಗ, ನೆಲಮಂಗಲ

2ನೇ ವರ್ಷದ ಪುಣ್ಯಸ್ಮರಣೆ



1936 – 2020
ಶ್ರೀಯುತ ಎನ್. ಗಂಗಯ್ಯನವರು
ಶ್ರೀ ಗೋಪಿವೆಂಕಟೇಶ್ವರ ಕಲ್ಯಾಣ ಮಂಟಪದ ಮಾಲೀಕರು, ನೆಲಮಂಗಲ
ದುಃಖತಪ್ತ : ಶ್ರೀಮತಿ ಕೆ.ಜಿ. ಜಯಲಕ್ಷ್ಮಮ್ಮನವರು, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರು ಮತ್ತು ಜಿ. ಗೋಪಿನಾಥ್
ಮೊ : 9945236300

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಶಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು ಮತ್ತು ಪೇಂಟಿಂಗ್ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
House
Mysore
ಮೈಸೂರಿನ ಕುವೆಂಪುನಗರದ ಕಾಂಪ್ಲೆಕ್ಸ್ ಬಳಿ, ನವಿಲು ರಸ್ತೆ, 6ನೇ ಕ್ರಾಸ್, 20x35 ಅಳತೆ ಮನೆ ನಂ. 185, 2 ಬೆಡ್ ರೂಂ ಮನೆ ಮಾರಾಟಕ್ಕಿದೆ. 63 ಲಕ್ಷ (Neg) ಸಂಪರ್ಕಿಸಿ- 8431814206, 9663395082.

Residential/ Commercial
Hampinagar
G+1 HOUSE 'A' Khata West Facing 1335 Sft Rpc Layout 9008614614

Vijayanagar
ಮೂಡಲಪಾಳ್ಯ (15X50) ಉತ್ತರ ದಿಕ್ಕಿನ ಮನೆ ಮಾರಾಟಕ್ಕೆ ಇದೆ. 'ಎ' ಖಾತಾ. ಬೆಲೆ: 68L ನೆಗೋಶಬಲ್. ದಯವಿಟ್ಟು ಸಂಪರ್ಕಿಸಿ: 8073670948

ಉದ್ಯೋಗಾವಕಾಶ
Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18,000-20,000 ಪ್ರತಿ ತಿಂಗಳು+ ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Marketing & Sales
REPUTED PVT Ltd ಕಂಪನಿಯು ಸೇಲ್ಸ್ ಎಕ್ಸಿಕ್ಯೂಟಿವ್ ಹುದ್ದೆಯನ್ನು ಹುಡುಕುತ್ತಿದೆ Lighting Project Division ಸಂಪರ್ಕಕ್ಕೆ: 9840585835/9845054158

ವ್ಯಾಪಾರ
Business Offers
Distributors
WANTED STOCKIST / Distributor for Promoting, Selling Branded Basmati Rice, Jeera Rice, Bullet Rice in & Around Banglore. Ct:9003224421

Agents Wanted
WANTED CALENDAR Collecting Agent (Daily & Monthly) More details call: 9443379730. Sap Calendar Sivakasi

ವೈವಾಹಿಕ
Brides Wanted
Kannada
WANTED BRIDE for Vokkaligas Software Professional, 36 years, 5.11 height, fair, Divorced with Engineering background, Working in MNC & looking from same community, Contact: 9108237869

ಭವಿಷ್ಯ
Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರವಾಸ
Travel
★ಶ್ರೇಯಸ್ ಟೂರ್ಸ್★ 14.09.2022 10ದಿನಗಳು 6ವಿಮಾನದಲ್ಲಿ ಮುಕ್ತಿನಾಥ ಸಹಿತ ಅಖಂಡ ನೇಪಾಳರಾಷ್ಟ್ರ 26.09.2022 5ದಿನಗಳು ಅಹೋಬಲ,ಶ್ರೀಶೈಲ,ಮಹಾನಂದಿ ಮಂತ್ರಾಲಯ,ಯಾಗಂಟಿ ಬೇಲಂಗುಹೆ,09.10.2022 5ದಿನಗಳು ಅಷ್ಟವಿನಾಯಕ,ಶಿರಡಿ ಭೀಮಾಶಂಕರ,ಮಹಾಬಲೇಶ್ವರ ಕೊಲ್ಲಾಪುರ.8073824856/ 9206979202/ 6366322639

Book Your Classifieds Ads
Online Log in to dhclassifieds.com
DH DECCAN HERALD ಪ್ರಜಾವಾಣಿ
Contact :
Jerry Louis : 9731810277
Vishal GM : 9845114560
Ravichandra : 9901641752
Tanveer : 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಿಜೆಪಿ ವಿರುದ್ಧ ದೆಹಲಿ ಸಿ.ಎಂ ಅರವಿಂದ್ ಕೇಜ್ರಿವಾಲ್ ಗಂಭೀರ ಆರೋಪ

'ವಿಪಕ್ಷಗಳ ನೇತೃತ್ವದ ಸರ್ಕಾರ ಕೆಡವಲು ₹6,300 ಕೋಟಿ ವೆಚ್ಚ'

ನವದೆಹಲಿ (ಪಿಟಿಐ): ವಿವಿಧ ರಾಜ್ಯ ಸರ್ಕಾರಗಳನ್ನು ಉರುಳಿಸಲು ಬಿಜೆಪಿ ಈವರೆಗೆ ₹6,300 ಕೋಟಿ ಖರ್ಚು ಮಾಡಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಆರೋಪಿಸಿದ್ದಾರೆ.

ಅರವಿಂದ್ ಕೇಜ್ರಿವಾಲ್

ಅಬಕಾರಿ ನೀತಿ ಕುರಿತು ಚರ್ಚೆಗೆ ಬರುವಂತೆ ನಾನು ಕೇಜ್ರಿವಾಲ್ ಅವರಿಗೆ ಸವಾಲು ಹಾಕುತ್ತೇನೆ. ಹಗರಣದ ಹೂರಣವನ್ನು ನಾನು ಅವರಿಗೆ ತಿಳಿಸುತ್ತೇನೆ

ಅಜಯ್ ಮಾಕನ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಒಂದು ವೇಳೆ, ರಾಜ್ಯ ಸರ್ಕಾರಗಳನ್ನು ಬುಡಮೇಲು ಮಾಡಲು ಕೇಂದ್ರ ಸರ್ಕಾರವು ಇಷ್ಟು ಹಣವನ್ನು ಖರ್ಚು ಮಾಡದಿದ್ದರೆ, ಮೊಸರು, ಮಜ್ಜಿಗೆ ಜಿಎಸ್‌ಟಿ ವಿಧಿಸುವ ಪ್ರಮೇಯ ಬರುತ್ತಿರಲಿಲ್ಲ' ಎಂದು ಅವರು ಹೇಳಿದ್ದಾರೆ.

ಬೆಲೆ ಏರಿಕೆಯಿಂದ ದೇಶದ ಜನರು ಪರಿತಪಿಸುತ್ತಿರುವಾಗ, ರಾಜ್ಯ ಸರ್ಕಾರಗಳನ್ನು ಕೆಡವಲು ಹಾಗೂ ಶಾಸಕರನ್ನು ಸೆಳೆಯಲು ಬಿಜೆಪಿಯು ಕೋಟ್ಯಂತರ ರೂಪಾಯಿಯನ್ನು ವ್ಯಯಿಸುತ್ತಿದೆ ಎಂದು ಕೇಜ್ರಿವಾಲ್ ದೂರಿದ್ದಾರೆ. ಶುಕ್ರವಾರ ವಿಧಾನಸಭೆ ಅಧಿವೇಶನದಲ್ಲಿ ಮಾತನಾಡಿದ್ದ ಅವರು, ಬಿಜೆಪಿಯು 277 ಶಾಸಕರನ್ನು ಖರೀದಿಸಿದೆ ಎಂದು ಆರೋಪಿಸಿದ್ದರು.

ಅಗತ್ಯ ವಸ್ತುಗಳಿಗೆ ಜಿಎಸ್‌ಟಿ ವಿಧಿಸಿ ಹಾಗೂ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿ ಸಂಗ್ರಹಿಸಿದ ಹಣವನ್ನು ಶಾಸಕರ ಖರೀದಿಗೆ ಬಿಜೆಪಿ ಬಳಸಿಕೊಳ್ಳುತ್ತಿದೆ ಎಂದು ಶುಕ್ರವಾರ ನಡೆದ ವಿಶೇಷ ಅಧಿವೇಶನದಲ್ಲಿ ಆರೋಪಿಸಿದ್ದ ಕೇಜ್ರಿವಾಲ್, ಬಿಜೆಪಿಯನ್ನು 'ರಾಜ್ಯ ಸರ್ಕಾರಗಳ ಸರಣಿ ಹಂತಕ' ಎಂದು ಕರೆದಿದ್ದರು.

ಶನಿವಾರ ಟ್ವೀಟ್ ಮಾಡಿರುವ ಅವರು, 'ಮೊಸರು, ಮಜ್ಜಿಗೆ, ಜೇನುತುಪ್ಪ, ಅಕ್ಕಿ, ಗೋಧಿಗೆ ಜಿಎಸ್‌ಟಿ ವಿಧಿಸಲಾಗಿದ್ದು, ಈ ನಿರ್ಧಾರದಿಂದ ಕೇಂದ್ರ ಸರ್ಕಾರಕ್ಕೆ ವರ್ಷಕ್ಕೆ ₹7,500 ಕೋಟಿ ತೆರಿಗೆ ಸಂಗ್ರಹವಾಗಲಿದೆ ಎಂದು ಉಲ್ಲೇಖಿಸಿದ್ದಾರೆ.

ಎಎಪಿಯನ್ನು ತ್ಯಜಿಸಿ ಬಿಜೆಪಿ ಸೇರಿದರೆ ತಲಾ ₹20 ಕೋಟಿ ನೀಡುವ ಪ್ರಸ್ತಾವವನ್ನು ಬಿಜೆಪಿ ಇಟ್ಟಿತ್ತು ಎಂಬುದಾಗಿ ಎಎಪಿಯ ನಾಲ್ವರು ಶಾಸಕರು ಇತ್ತೀಚೆಗೆ ಆರೋಪ ಮಾಡಿದ್ದರು. ಕೇಜ್ರಿವಾಲ್ ನೇತೃತ್ವದ ದೆಹಲಿ ಸರ್ಕಾರವನ್ನು ಬುಡಮೇಲು ಮಾಡಲು ಪ್ರಧಾನಿ ಮುಂದಾಗಿದ್ದಾರೆ ಎಂದು ಆರೋಪಿಸಿದ್ದ ಎಎಪಿ, ತಮ್ಮ ಪಕ್ಷದ 40ಕ್ಕೂ ಹೆಚ್ಚು ಶಾಸಕರನ್ನು ಸೆಳೆಯಲು ಯತ್ನಿಸಲಾಗುತ್ತಿದೆ ಎಂದಿತ್ತು.

ಅಣಕು ಅಧಿವೇಶನ: ದೆಹಲಿ ವಿಧಾನಸಭೆಯ ವಿಶೇಷ ಅಧಿವೇಶನ ನಡೆದ ಮರುದಿನ, ಅಣಕು ಅಧಿವೇಶನ ನಡೆಸಿದ ಬಿಜೆಪಿ ಶಾಸಕರು, ದೆಹಲಿ ಸರ್ಕಾರದ 'ಅಬಕಾರಿ ಹಗರಣ'ವನ್ನು ಟೀಕಿಸಿದರು. ಕೇಜ್ರಿವಾಲ್, ಸಿಸೋಡಿಯಾ ಹಾಗೂ ಆಡಳಿತಾರೂಢ ಪಕ್ಷದ ಶಾಸಕರನ್ನು ಬಿಂಬಿಸುವ ಮುಖವಾಡಗಳನ್ನು ಬಿಜೆಪಿ ಶಾಸಕರು ಧರಿಸಿದ್ದರು. ಎಂಟು ಬಿಜೆಪಿ ಶಾಸಕರನ್ನು ಶುಕ್ರವಾರ ನಡೆದ ಅಧಿವೇಶನದಿಂದ ಹೊರಹಾಕಲಾಗಿತ್ತು. ಹೀಗಾಗಿ, ಶನಿವಾರ ಅಣಕು ಅಧಿವೇಶನ ನಡೆಸಿದ ಬಿಜೆಪಿ ಶಾಸಕರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಭ್ರಷ್ಟಾಚಾರ ಆರೋಪವಿರುವ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ರಾಜೀನಾಮೆ ನೀಡಬೇಕು ಇಲ್ಲವೇ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂಬ ತನ್ನ ಆಗ್ರಹವನ್ನು ಕಾಂಗ್ರೆಸ್ ಪುನರುಚ್ಚರಿಸಿದೆ.

ಕೇಜ್ರಿವಾಲ್–ಬಿಸ್ವ ಟ್ವಿಟರ್ ಸಮರ



ಹಿಮಂತ ಬಿಸ್ವ ಶರ್ಮಾ

ಶಾಲಾ ಶಿಕ್ಷಣ ಕುರಿತಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ನಡುವೆ ಬುಧವಾರ ಆರಂಭವಾದ ಟ್ವಿಟರ್ ಸಮರ ಶನಿವಾರವೂ ಮುಂದುವರಿದಿದೆ. 'ಅಸ್ಸಾಂ ಶಾಲೆಗಳನ್ನು ನೋಡಲು ಯಾವಾಗ ಬರಲಿ' ಎಂದು ಕೇಜ್ರಿವಾಲ್ ಅವರು ಬಿಸ್ವ ಅವರನ್ನು ಪ್ರಶ್ನಿಸಿದ್ದಾರೆ.

ಅಸ್ಸಾಂನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ ಎಂಬ ಪತ್ರಿಕಾ ವರದಿ ಕುರಿತು ಬುಧವಾರ ಟ್ವೀಟ್ ಮಾಡಿದ್ದ ಕೇಜ್ರಿವಾಲ್, ಶಾಲೆಗಳನ್ನು ಮುಚ್ಚುವುದು ಪರಿಹಾರವಲ್ಲ ಎಂದಿದ್ದರು. ಇದಕ್ಕೆ ಶುಕ್ರವಾರ ತಿರುಗೇಟು ನೀಡಿದ್ದ ಬಿಸ್ವ, ದೆಹಲಿ ಹಾಗೂ ಅಸ್ಸಾಂನ ಶಾಲೆಗಳ ನಡುವಿನ ವ್ಯತ್ಯಾಸಗಳನ್ನು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದರು. ದೆಹಲಿಗಿಂತ ಹೆಚ್ಚಿನ ಸಂಖ್ಯೆ ಶಾಲೆಗಳು, ಶಿಕ್ಷಕರು, ವಿದ್ಯಾರ್ಥಿಗಳು ಅಸ್ಸಾಂನಲ್ಲಿದ್ದು, ಹಲವು ಖಾಸಗಿ ಶಾಲೆಗಳನ್ನೂ ಸರ್ಕಾರ ನಡೆಸುತ್ತಿದೆ ಎಂದಿದ್ದರು. 'ಪ್ರಾಕೃತಿಕ ವಿಕೋಪಗಳ ನಡುವೆಯೂ ಶಿಕ್ಷಣ ನೀಡುತ್ತಿದ್ದೇವೆ. ಅಸ್ಸಾಂಗೆ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ನೀವು ಭೇಟಿ ಮಾಡಬಹುದು' ಎಂದು ಕೇಜ್ರಿವಾಲ್‌ಗೆ ಆಹ್ವಾನ ನೀಡಿದ್ದರು.

47 ಕಡತ ಸರ್ಕಾರಕ್ಕೆ ವಾಪಸ್

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬದಲಾಗಿ, ಮುಖ್ಯಮಂತ್ರಿ ಕಚೇರಿಯ (ಸಿಎಂಒ) ಸಿಬ್ಬಂದಿ ಸಹಿ ಮಾಡಿದ್ದ 47 ಕಡತಗಳನ್ನು ಲೆಫ್ಟಿನೆಂಟ್ ಗವರ್ನರ್ ಅವರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ. ಈ ನಡೆಯು, ಸರ್ಕಾರ ಮತ್ತು ಲೆ.ಗವರ್ನರ್ ನಡುವಿನ ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸುವ ಸಾಧ್ಯತೆಯಿದೆ.

ಸಲಹೆ ಹಾಗೂ ಅನುಮೋದನೆ ಕೋರಿ ಮುಖ್ಯಮಂತ್ರಿ ಕಚೇರಿಯು ಲೆಫ್ಟಿನೆಂಟ್ ಗವರ್ನರ್ ಸಚಿವಾಲಯಕ್ಕೆ ಮುಖ್ಯಮಂತ್ರಿ ಸಹಿ ಇಲ್ಲದ ಕೆಲವು ಕಡತಗಳನ್ನು ಕಳುಹಿಸುತ್ತಿದೆ ಎಂಬುದಾಗಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಕಳೆದ ವಾರ ಹೇಳಿಕೆ ನೀಡಿದ್ದರು. ಸಕ್ಸೇನಾ ಅವರು ಈ ವಿಚಾರ ಪ್ರಸ್ತಾಪಿಸಿದ ಬಳಿಕವೂ, ಮುಖ್ಯಮಂತ್ರಿ ಸಹಿ ಇಲ್ಲದ ಕಡತಗಳನ್ನು ಸಚಿವಾಲಯಕ್ಕೆ ಮುಖ್ಯಮಂತ್ರಿ ಕಚೇರಿಯು ಕಳುಹಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಹ್ಯಾಮರ್ ಥ್ರೊ: ಅಮ್ರೀನ್ ಮಿಂಚು

ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಎರಡನೇ ದಿನ 11 ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡಬಿದಿರೆಯ ಆಳ್ವಾಸ್ ಕಾಲೇಜು ತಂಡದ ಅಮ್ರೀನ್ ಅವರು ರಾಜ್ಯ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಹ್ಯಾಮರ್ ಥ್ರೊನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗೆದ್ದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶನಿವಾರ ಅವರು ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ 46.54 ಮೀಟರ್ಸ್ ದೂರ ಸಾಧನೆ ಮಾಡಿದರು. ಒಟ್ಟು 11 ಕೂಟ ದಾಖಲೆಗಳು ಶನಿವಾರ ನಿರ್ಮಾಣವಾದವು.

20 ವರ್ಷದೊಳಗಿನ ಮಹಿಳಾ 10 ಸಾವಿರ ಮೀಟರ್ಸ್ ನಡಿಗೆಯಲ್ಲಿ ವಂದನಾ (ಸಾಯ್, ಬೆಂಗಳೂರು, ಕಾಲ: 47 ನಿ.36.2 ಸೆ.), 20 ವರ್ಷದೊಳಗಿನ ಪುರುಷರ ಡಿಸ್ಕಸ್ ಥ್ರೊನಲ್ಲಿ ಆಳ್ವಾಸ್‌ನ ನಾಗೇಂದ್ರ (54.24 ಮೀ.), 18 ವರ್ಷದೊಳಗಿನ ಬಾಲಕರ 100 ಮೀ.ನಲ್ಲಿ ಡಿವೈಇಎಸ್ ವಿದ್ಯಾನಗರದ ರೋಹನ್ ವೆಂಕಟೇಶ (10.6 ಸೆ.), ಡಿಸ್ಕಸ್ ಥ್ರೊನಲ್ಲಿ ಮೈಸೂರಿನ ಸುಫೋಷ್ ಆರ್. ಜೋಷಿ (49. 35 ಮೀ.), ಬಾಲಕಿಯರ ಹ್ಯಾಮರ್ ಥ್ರೊನಲ್ಲಿ ಬೆಲ್ಲಾಪಿ ಅಥ್ಲೆಟಿಕ್ಸ್ ಕ್ಲಬ್‌ನ ಕೀರ್ತಿ ಪಿ. (48.11 ಮೀ.), 16 ವರ್ಷದೊಳಗಿನ ಬಾಲಕರ 100 ಮೀ.ನಲ್ಲಿ ದಕ್ಷಿಣ ಕನ್ನಡದ ಹಸ್ಮಿತ್ (10. 8ಸೆ.), 80 ಮೀ. ಹರ್ಡಲ್ಸ್‌ನಲ್ಲಿ ಆಳ್ವಾಸ್‌ನ ತೇಜಲ್ ಕೆ.ಆರ್ (11.7 ಸೆ.), ಬಾಲಕಿಯರ 300 ಮೀ.ನಲ್ಲಿ ಬೆಳಗಾವಿಯ ಸ್ವರ ಶಿಂಧೆ (43.9 ಸೆ.) ನೂತನ ಕೂಟ ದಾಖಲೆ ಬರೆದರು.

23 ವರ್ಷದೊಳಗಿನ ಪುರುಷರ 100 ಮೀ. ಓಟದಲ್ಲಿ ಡಿವೈಇಎಸ್ ಬೆಂಗಳೂರಿನ ಶಶಿಕಾಂತ್ ವಿ.ಎ. (10.5 ಸೆ.), ಡಿಸ್ಕಸ್ ಥ್ರೊನಲ್ಲಿ ಮೈಸೂರಿನ ಮಜಾಹಿದ್ (50. 20 ಮೀ.), ಮಹಿಳೆಯರ 1500 ಮೀ.ನಲ್ಲಿ ಫ್ಯೂಷನ್‌ನ ಅರ್ಪಿತಾ ಇ.ಬಿ. (4ನಿ.47 ಸೆ.) ಕೂಟ ದಾಖಲೆ ಬರೆದರು.

16 ವರ್ಷದೊಳಗಿನ ಬಾಲಕಿಯರ 80 ಮೀ. ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದ ದಕ್ಷಿಣ ಕನ್ನಡದ ಮಾನ್ಯಾ ಸಾಲಿಯಾನ್ (ಮಧ್ಯೆ, 12.5 ಸೆ.) ಗುರಿಯತ್ತ ಮುನ್ನುಗ್ಗಿದರು– ಪ್ರಜಾವಾಣಿ ಚಿತ್ರ/ದಿನೇಶ್ ಎಸ್‌.ಕೆ.

ಫಲಿತಾಂಶಗಳು (ಚಿನ್ನ ವಿಜೇತರು ಮಾತ್ರ): ಪುರುಷರು: 1500 ಮೀ.: ದೇವಯ್ಯ ಟಿ.ಎಚ್. (ಆಳ್ವಾಸ್) ಕಾಲ: 4 ನಿ.7.4 ಸೆ. ಶಾಟ್‌ಪಟ್: ಮೋಹನ್‌ಕುಮಾರ್ ಎಂ.ಸಿ. (ಎಂ.ಡಿ.ಎ), ದೂರ: 13.02 ಮೀ. 110 ಮೀ. ಹರ್ಡಲ್ಸ್: ಶಿವಕುಮಾರ್ ಸಿ. (ಆಳ್ವಾಸ್), ಕಾಲ: 14.20ಸೆ. ಡಿಸ್ಕಸ್ ಥ್ರೊ: ಬಸವರಾಜ ಎಂ. (ಕೆಎಸ್‌ಪಿಎಸ್‌ಪಿಬಿ), ದೂರ: 42.06 ಮೀ. ಲಾಂಗ್‌ಜಂಪ್: ಸಿದ್ಧಾರ್ಥ್ ನಾಯ್ಕ್ (ಆಳ್ವಾಸ್), ದೂರ: 7.47 ಮೀ.

ಮಹಿಳೆಯರು: 1500 ಮೀ.: ಚೈತ್ರಾ ದೇವಾಡಿಗ (ಆಳ್ವಾಸ್), ಕಾಲ: 4 ನಿ.44 ಸೆ. 100 ಮೀ. ಹರ್ಡಲ್ಸ್: ಮೇಧಾ ಕಾಮತ್ (ಫ್ಯೂಷನ್), ಕಾಲ: 13.09 ಸೆ. ಹ್ಯಾಮರ್ ಥ್ರೊ: ಅಮ್ರೀನ್ (ಆಳ್ವಾಸ್), ದೂರ: 46.54 ಮೀ. (ಕೂಟ ದಾಖಲೆ). ಡಿಸ್ಕಸ್ ಥ್ರೊ: ನಿವೇದಿತಾ ಸಾವಂತ್ (ಮಾಲಾದೇವಿ, ಕಾರವಾರ), ದೂರ: 39. 92 ಮೀ. 400 ಮೀ.: ಲಿಖಿತಾ ಎಂ. (ಫ್ಯೂಷನ್), ಕಾಲ: 54.94 ಸೆ.

23 ವರ್ಷದೊಳಗಿನವರು: ಪುರುಷರು: 1500 ಮೀ.: ಶಶಿಧರ್ ಬಿ.ಎಲ್. (ಆಳ್ವಾಸ್), ಕಾಲ: 4 ನಿ. 7 ಸೆ. 100 ಮೀ.: ಶಶಿಕಾಂತ್ ವಿ.ಎ. (ಡಿವೈಇಎಸ್ ಬೆಂಗಳೂರು), ಕಾಲ: 10.5 ಸೆ. (ಕೂಟ ದಾಖಲೆ). ಡಿಸ್ಕಸ್ ಥ್ರೊ: ಮುಜಾಹಿದ್ ಎಸ್.ಎ. (ಮೈಸೂರು), ದೂರ: 50.20 ಮೀ. (ಕೂಟ ದಾಖಲೆ). 110 ಮೀ. ಹರ್ಡಲ್ಸ್: ಅದ್ವಿತ್ ಶೆಟ್ಟಿ (ದಕ್ಷಿಣ ಕನ್ನಡ), ಕಾಲ: 14.50 ಸೆ. ಲಾಂಗ್‌ಜಂಪ್: ಆರ್ಯ ಎಸ್ (ಸಾಯ್), ದೂರ: 7.31 ಮೀ. 400 ಮೀ.: ಮಹಾಂತೇಶ್ ಎಸ್.ಎಚ್. (ಆಳ್ವಾಸ್), ಕಾಲ: 46.8ಸೆ.

ಮಹಿಳೆಯರು: 1500 ಮೀ.: ಅರ್ಪಿತಾ ಇ.ಬಿ. (ಫ್ಯೂಷನ್), ಕಾಲ: 4ನಿ.47 ಸೆ. , ಹ್ಯಾಮರ್ ಥ್ರೊ: ಅನನ್ಯಾ ಪೂಜಾರಿ (ಕಾರವಾರ). ದೂರ: 36.50 ಮೀ. 100 ಮೀ. ಹರ್ಡಲ್ಸ್: ಅಂಜಲಿ ಸಿ. (ಆಳ್ವಾಸ್), ಕಾಲ: 14.40 ಸೆ. ಡಿಸ್ಕಸ್ ಥ್ರೊ: ಕಲಾವತಿ ಬಿ.ಟಿ. (ಬೆಳಗಾವಿ), ದೂರ: 44.40 ಮೀ. 400 ಮೀ.: ಮೇಘಾ ಎಂ.ಎಂ. (ಧಾರವಾಡ), ಕಾಲ: 57.6 ಸೆ.

ಜಾವೆಲಿನ್ ಥ್ರೋ: ವಿದ್ಯಾರ್ಥಿ ತಲೆ ಹೊಕ್ಕ ಭರ್ಚಿ

ಮಧುಗಿರಿ: ಪಟ್ಟಣದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆಯುತ್ತಿದ್ದ ಪ್ರೌಢಶಾಲಾ ಕ್ರೀಡಾಕೂಟದಲ್ಲಿ ಅಭ್ಯಾಸ ನಿರತನಾಗಿದ್ದ ವಿದ್ಯಾರ್ಥಿ ಎಸೆದ ಜಾವೆಲಿನ್ (ಭರ್ಚಿ) ಅಲ್ಲಿಯೇ ಇದ್ದ ವಿದ್ಯಾರ್ಥಿಯೊಬ್ಬನ ತಲೆಗೆ ಹೊಕ್ಕಿದೆ.

ಗಂಭೀರವಾಗಿ ಗಾಯಗೊಂಡಿರುವ ವಿದ್ಯಾರ್ಥಿ ಇಂದ್ರೇಶ್‌ನನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಈತ ಮಧುಗಿರಿಯ ಜೂಪಿಟರ್ ಪಬ್ಲಿಕ್ ಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ಕಲಿಯುತ್ತಿದ್ದಾನೆ.

ಕ್ರೀಡಾಂಗಣದಲ್ಲಿ ಭರ್ಚಿ ಎಸೆತದ (ಜಾವೆಲಿನ್ ಥ್ರೋ) ತರಬೇತಿ ಪಡೆಯುತ್ತಿದ್ದ ಕಾರ್ಡಿಯಲ್ ಶಾಲೆಯ ವಿದ್ಯಾರ್ಥಿ ವೇಗವಾಗಿ ಎಸೆದ ಭರ್ಚಿ ಬೆನ್ನು ತಿರುಗಿಸಿಕೊಂಡು ಕುಳಿತಿದ್ದ ಇಂದ್ರೇಶ್ ತಲೆಗೆ ಹೊಕ್ಕಿದೆ.ತೀವ್ರ ರಕ್ತಸ್ರಾವದಿಂದ ಆತ ಸ್ಥಳದಲ್ಲೇ ಪ್ರಜ್ಞೆ ತಪ್ಪಿದ. ತಕ್ಷಣ ದೈಹಿಕ ಶಿಕ್ಷಣ ಶಿಕ್ಷಕ ಪ್ರತಾಪ್ ಹಾಗೂ ಇತರ ವಿದ್ಯಾರ್ಥಿಗಳು ಆತನನ್ನು ತಾಲ್ಲೂಕು ಆಸ್ಪತ್ರೆಗೆ ಕೊರೆದೊಯ್ದು ಚಿಕಿತ್ಸೆ ಕೊಡಿಸಿದರು. ವೈದ್ಯರ ಸೂಚನೆಯಂತೆ ವಿದ್ಯಾರ್ಥಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮ್ಹಾನ್ಸ್‌ಗೆ ಕರೆದೊಯ್ಯಲಾಗಿದೆ.

ಹಾಕಿ: ಶ್ಲೋಕ್ ತಂಡಕ್ಕೆ ಗೆಲುವು

ಬೆಂಗಳೂರು: ಪ್ರಜ್ವಲ್ ಗಳಿಸಿದ ಐದು ಗೋಲುಗಳು ಶ್ಲೋಕ್ ಎಚ್.ಸಿ. ತಂಡಕ್ಕೆ ಗೆಲುವು ತಂದುಕೊಟ್ಟವು. ಅವರ ಆಟದ ನೆರವಿನಿಂದ ತಂಡವು ಡಿ.ಎಸ್. ಮೂರ್ತಿ ಮತ್ತು ರಾಧಾ ಮೂರ್ತಿ ಸ್ಮಾರಕ ಹಾಕಿ ಟೂರ್ನಿಯಲ್ಲಿ ಜೆಎಫ್‌ಎಚ್‌ಎ 'ಎ' ತಂಡವನ್ನು 8–5ರಿಂದ ಪರಾಭವಗೊಳಿಸಿತು.

ಪ್ರಜ್ವಲ್ 7, 18, 12, 16 ಮತ್ತು 17ನೇ ನಿಮಿಷಗಳಲ್ಲಿ ಗೋಲು ಹೊಡೆದರು. ಸುಗುಣ್ ಮೂರು ಗೋಲು ಗಳಿಸಿದರು. ಜೆಎಫ್‌ಎಚ್‌ಎ ಪರ ಅರವಿಂದ್ ರಾಜ್ (1,13, 15ನೇ ನಿ.) ಮಿಂಚಿದರು. ಇನ್ನೊಂದು ಪಂದ್ಯದಲ್ಲಿ ಶ್ಲೋಕ್ 7–2ರಲ್ಲಿ ರೈಸಿಂಗ್ ಸ್ಟಾರ್ ಎದುರು ಗೆದ್ದಿತು.

ಕಬಡ್ಡಿ: ಕರ್ನಾಟಕ ತಂಡಕ್ಕೆ ಲಿಖಿತಾ ನಾಯಕಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಲಿಖಿತಾ, ಪಟ್ನಾದಲ್ಲಿ ನಡೆಯಲಿರುವ ರಾಷ್ಟ್ರೀಯ ಜೂನಿಯರ್ ಬಾಲಕಿಯರ ಕಬಡ್ಡಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಪಾಟಲಿಪುತ್ರ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 1ರಿಂದ 4ರವರೆಗೆ ಟೂರ್ನಿ ನಡೆಯಲಿದೆ.

ತಂಡ: ಲಿಖಿತಾ–ನಾಯಕಿ (ದಕ್ಷಿಣ ಕನ್ನಡ), ಶಾಂತಾಬಾಯಿ, ಸವಿತಾ (ಇಬ್ಬರೂ ವಿಜಯಪುರ), ಅಕ್ಷತಾ (ದಕ್ಷಿಣ ಕನ್ನಡ), ಸುಶ್ಮಿತಾ, ಲಲಿತಾ (ಇಬ್ಬರೂ ಬೆಳಗಾವಿ), ಸಹನಾ (ಉಡುಪಿ), ಸಿಂಧು (ರಾಮನಗರ), ಮಹಿಮಾ, ಶಿಲ್ಪಾ, ಕೀರ್ತನಾ (ಮೂವರೂ ಬೆಂಗಳೂರು), ಸುಚಿತ್ರಾ (ಬಾಗಲಕೋಟೆ). ಹಂಸಾವತಿ ಸಿ. ಎಚ್ (ಕೋಚ್); ರೂಪಶ್ರೀ (ಮ್ಯಾನೇಜರ್).

ಜಾರ್ಖಂಡ್ ರಾಜಕೀಯ ಬಿಕ್ಕಟ್ಟು • ಸರಣಿ ಸಭೆ, ರೆಸಾರ್ಟ್‌ನಲ್ಲಿ ವಿಹಾರ

ಶಾಸಕರನ್ನು ಹಿಡಿದಿಟ್ಟುಕೊಳ್ಳಲು ತಂತ್ರ

ರಾಂಚಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಶಾಸಕ ಸ್ಥಾನ ಡೋಲಾಯಮಾನವಾಗಿದ್ದು, ಆಡಳಿತಾರೂಢ ಮೈತ್ರಿಕೂಟದ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಅವರು ತಂತ್ರಗಾರಿಕೆ ರೂಪಿಸುತ್ತಿದ್ದಾರೆ. ಜೆಎಂಎಂ–ಕಾಂಗ್ರೆಸ್–ಆರ್‌ಜೆಡಿ ಪಕ್ಷಗಳ ಶಾಸಕರು ಶನಿವಾರ ಮೂರು ಬಸ್‌ಗಳಲ್ಲಿ ರಾಂಚಿ ಸಮೀಪದ ರೆಸಾರ್ಟ್‌ಗೆ ತೆರಳಿದರು. ಬಿಜೆಪಿಯೇತರ ಸರ್ಕಾರಗಳ ಆಡಳಿತವಿರುವ ರಾಜ್ಯಗಳಾದ ಪಶ್ಚಿಮ ಬಂಗಾಳ ಅಥವಾ ಛತ್ತೀಸಗಡಕ್ಕೆ ಶಾಸಕರನ್ನು ಸ್ಥಳಾಂತರಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಜಾರ್ಖಂಡ್‌ನಲ್ಲಿ ಎದುರಾಗಿರುವ ರಾಜಕೀಯ ಬಿಕ್ಕಟ್ಟಿಗೆ ಪರಿಹಾರ ಹುಡುಕುವ ನಿಟ್ಟಿನಲ್ಲಿ ಹೇಮಂತ್ ಸೊರೇನ್ ಅವರ ನಿವಾಸದಲ್ಲಿ ಶನಿವಾರ ಬೆಳಿಗ್ಗೆಯಿಂದ ಸತತವಾಗಿ ಮೂರು ಸುತ್ತಿನ ಸಭೆಗಳು ನಡೆದವು. ಮೈತ್ರಿಕೂಟದ ಶಾಸಕರು ತಮ್ಮ ಲಗೇಜ್ ಜೊತೆ ಸಭೆಗೆ ಬಂದಿದ್ದರು.

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ಜಾರ್ಖಂಡ್ ಕಾಂಗ್ರೆಸ್ ಘಟಕದ ಅಧ್ಯಕ್ಷ ರಾಜೇಶ್ ಠಾಕೂರ್ ಹಾಗೂ ಮೈತ್ರಿಕೂಟದ ಶಾಸಕರು ಖುಂಟಿ ಜಿಲ್ಲೆಯ ರೆಸಾರ್ಟ್‌ನಲ್ಲಿ ಶನಿವಾರ ದೋಣಿ ವಿಹಾರ ಮಾಡಿದರು —ಪಿಟಿಐ ಚಿತ್ರ

ಸಭೆ ಬಳಿಕ, ಶಾಸಕರು ಖುಂಟಿ ಜಿಲ್ಲೆಯ ಲತರಾತೂ ಸಮೀಪದ ಮೊಮೆಂಟ್ಸ್ ರೆಸಾರ್ಟ್‌ಗೆ ತೆರಳಿದರು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಆಲಮಗೀರ್ ಆಲಮ್ ಅವರು ಹೇಳಿದ್ದಾರೆ. 'ಶಾಸಕರನ್ನು ಸೆಳೆಯಲಾಗದು. ಎಲ್ಲರೂ ರಾಂಚಿಯಲ್ಲಿ ಇರಲಿದ್ದಾರೆ' ಎಂದು ಶುಕ್ರವಾರವಷ್ಟೇ ಅವರು ಹೇಳಿಕೆ ನೀಡಿದ್ದರು. ಪಕ್ಷದ ನಿರ್ದೇಶನವನ್ನು ಪಾಲಿಸುತ್ತೇವೆ ಎಂದು ಶಾಸಕಿ ಶಿಲ್ಪಿ ನೇಹಾ ಟಿರ್ಕೆ ಹೇಳಿದ್ದಾರೆ.

ಶಾಸಕರು ಉಳಿದುಕೊಳ್ಳಲು ಪಶ್ಚಿಮ ಬಂಗಾಳ ಅಥವಾ ಛತ್ತೀಸಗಡದಲ್ಲಿ ವ್ಯವಸ್ಥೆ ಕಲ್ಪಿಸಲಾಗುತ್ತಿದೆ ಎಂದು ಕಾಂಗ್ರೆಸ್ ಮೂಲಗಳು ಈ ಹಿಂದೆ ತಿಳಿಸಿದ್ದವು. ಛತ್ತೀಸಗಡದ ಬರಮುಡಾ ಹಾಗೂ ರಾಯಪುರ ಮತ್ತು ಪಶ್ಚಿಮ ಬಂಗಾಳದ ಕೆಲವು ಸ್ಥಳಗಳನ್ನು ಗುರುತಿಸಲಾಗಿದೆ ಎನ್ನಲಾಗಿದೆ.

ಶಾಸಕರನ್ನು ರಾಜ್ಯದಿಂದ ಹೊರಗೆ ಕಳುಹಿಸುವ ಆಯ್ಕೆಯನ್ನು ಮುಕ್ತವಾಗಿರಿಸಲಾಗಿದ್ದು, ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜೆಎಂಎಂ ಮೂಲಗಳು ತಿಳಿಸಿವೆ. 'ಅಗತ್ಯಬಿದ್ದರೆ ಎಲ್ಲ ಶಾಸಕರನ್ನು ಒಂದೇ ಕಡೆಗೆ ಕಳುಹಿಸಲಾಗುತ್ತದೆ. ಶಾಸಕರ ಸಂಖ್ಯಾಬಲ ಕಾಯ್ದುಕೊಳ್ಳುವುದು ಈಗಿನ ತುರ್ತು. ಹೀಗಾಗಿ ರೆಸಾರ್ಟ್ ರಾಜಕಾರಣ ಅಗತ್ಯ' ಎಂದು ಅಭಿಪ್ರಾಯಪಟ್ಟಿದೆ.

ಶಾಸಕ ಸ್ಥಾನದಿಂದ ಹೇಮಂತ್ ಸೊರೇನ್ ಅವರ ಅನರ್ಹತೆ ವಿಚಾರದಲ್ಲಿ ಚುನಾವಣಾ ಆಯೋಗ ನೀಡಿರುವ ವರದಿಯನ್ನು ಆಧರಿಸಿ, ರಾಜ್ಯಪಾಲರು ಶನಿವಾರವೇ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಲಾಗಿತ್ತು.

ನೆಲಸಮಗೊಳ್ಳಲಿರುವ ಅವಳಿ ಕಟ್ಟಡ

ಅವಳಿ ಕಟ್ಟಡ ಇಂದು ನೆಲಸಮ

ನೊಯ್ಡಾ (ಪಿಟಿಐ): ಇಲ್ಲಿ ನಿರ್ಮಾಣಗೊಂಡಿರುವ ಬಹು ಅಂತಸ್ತಿನ ಅವಳಿ ಕಟ್ಟಡಗಳನ್ನು ಭಾನುವಾರ ಮಧ್ಯಾಹ್ನ ನೆಲಸಮಗೊಳಿಸಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

'ಸುಮಾರು 100 ಮೀಟರ್‌ನಷ್ಟು ಎತ್ತರವಿರುವ ಈ ಕಟ್ಟಡಗಳನ್ನು ನೆಲಸಮ ಮಾಡಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಾನುವಾರ ಮಧ್ಯಾಹ್ನ 2.30ಕ್ಕೆ ನೆಲಸಮ ಕಾರ್ಯ ಆರಂಭವಾಗಲಿದೆ' ಎಂದು ನೊಯ್ಡಾ ಪ್ರಾಧಿಕಾರದ ಸಿಇಒ ರಿತು ಮಹೇಶ್ವರಿ ಹೇಳಿದ್ದಾರೆ.

'ಕಟ್ಟಡಗಳನ್ನು ಕೆಡವಲು ಸುಮಾರು 3,700 ಕೆ.ಜಿ ಸ್ಫೋಟಕಗಳನ್ನು ಬಳಸಲಾಗುತ್ತದೆ. ಎಮರಾಲ್ಡ್ ಕೋರ್ಟ್ ಹಾಗೂ ಎಟಿಎಸ್ ವಿಲೇಜ್ ಸೊಸೈಟಿಯಲ್ಲಿ ನೆಲೆಸಿರುವ ಸುಮಾರು 5 ಸಾವಿರ ಮಂದಿ ಭಾನುವಾರ ಬೆಳಿಗ್ಗೆ 7 ಗಂಟೆಗೆ ಬೇರೆಡೆ ಸ್ಥಳಾಂತರಗೊಳ್ಳಲಿದ್ದಾರೆ.

ಜಯಲಲಿತಾ ಸಾವಿನ ಕಾರಣ: ತನಿಖಾ ವರದಿ ಸಲ್ಲಿಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಸಾವಿನ ಕಾರಣ ಕುರಿತು ತನಿಖೆಗೆ ನೇಮಿಸಲಾಗಿದ್ದ ನ್ಯಾಯಮೂರ್ತಿ ಎ.ಆರ್ಮುಗಸ್ವಾಮಿ ಆಯೋಗ, ಶನಿವಾರ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಸೋಮವಾರ ನಡೆಯುವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರುವ ನಿರೀಕ್ಷೆಯಿದೆ.

ಆಯೋಗವು 150 ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿದೆ. ನ್ಯಾಯಮೂರ್ತಿ ಆರ್ಮುಗಸ್ವಾಮಿ ನೇತೃತ್ವದ ಆಯೋಗವನ್ನು ಹಿಂದಿನ ಎಐಎಡಿಎಂಕೆ ಸರ್ಕಾರ ರಚಿಸಿತ್ತು. ಆಯೋಗವು ನವೆಂಬರ್ 22, 2017ರಂದು ತನಿಖೆ ಆರಂಭಿಸಿತ್ತು.

'ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ಆಯೋಗವು ವರದಿಯನ್ನು ಸಲ್ಲಿಸಿದೆ. ಮುಂದಿನ ಕ್ರಮಕ್ಕಾಗಿ ವರದಿಯನ್ನು ಸಂಪುಟದ ಮುಂದಿಡುವಂತೆ ಮುಖ್ಯಮಂತ್ರಿ ಅವರು ಸೂಚಿಸಿದ್ದಾರೆ' ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

2021ರ ಚುನಾವಣೆಗೂ ಮೊದಲು ಡಿಎಂಕೆ ಪಕ್ಷವು, ಜಯಲಲಿತಾ ಸಾವಿಗೆ ಕಾರಣವಾದ ಅಂಶಗಳ ಕುರಿತಂತೆ ಸಮಗ್ರ ತನಿಖೆ ನಡೆಸಲಾಗುವುದು. ತಪ್ಪಿತಸ್ಥರು ಎಂದು ಕಂಡುಬರುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿತ್ತು.

ಜಯಲಲಿತಾ ಅವರ ಆರೋಗ್ಯ ಸ್ಥಿತಿ, ಅಪೋಲೊ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಿದ ಸಂದರ್ಭ, 75 ದಿನದ ಆಸ್ಪತ್ರೆಯ ಅವಧಿಯಲ್ಲಿ ನೀಡಲಾದ ಚಿಕಿತ್ಸೆ ಕುರಿತ ಅಂಶಗಳನ್ನು ಆಧರಿಸಿ ಆಯೋಗವು ತನಿಖೆ ನಡೆಸಿದೆ. 'ವರದಿಯಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಲಾಗಿದೆ' ಎಂದು ನ್ಯಾಯಮೂರ್ತಿ ಆರ್ಮುಗಸ್ವಾಮಿ ಅವರು ಹೇಳಿದರು.

ಅತ್ಯಾಚಾರ: ಬಿಎಸ್‌ಎಫ್‌ನ ಇಬ್ಬರ ಬಂಧನ

ಕೋಲ್ಕತ್ತ (ಪಿಟಿಐ): ಭಾರತದಿಂದ ಬಾಂಗ್ಲಾದೇಶಕ್ಕೆ ನುಸುಳಲು ಯತ್ನಿಸುತ್ತಿದ್ದ ಮಹಿಳೆ ಮೇಲೆ ಅತ್ಯಾಚಾರ ನಡೆಸಿದ ಆರೋಪ ಸಂಬಂಧ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಇಬ್ಬರು ಸಿಬ್ಬಂದಿಯನ್ನು ಬಂಧಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಬಿಎಸ್‌ಎಫ್‌ನ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೆಬಲ್ ಬಂಧಿತರು. ಸದ್ಯ ಅವರನ್ನು ಪಶ್ಚಿಮ ಬಂಗಾಳ ಪೊಲೀಸ್ ವಶಕ್ಕೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

'ಆಗಸ್ಟ್ 26ರಂದು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಸಮೀಪ ಬಾಂಗ್ಲಾದೇಶಕ್ಕೆ ಅಕ್ರಮವಾಗಿ ನುಸುಳಲು ಯತ್ನಿಸಿದ ಮಹಿಳೆಯನ್ನು ಬಿಎಸ್‌ಎಫ್‌ನ ಕಾನ್‌ಸ್ಟೆಬಲ್‌ವೊಬ್ಬರು ಎಳೆದೊಯ್ದು ಅತ್ಯಾಚಾರ ಎಸಗಿದ್ದರು. ಕೃತ್ಯಕ್ಕೆ ಎಎಸ್‌ಐ ಸಹಕರಿಸಿದ್ದರು. ಈ ಬಗ್ಗೆ ಮಹಿಳೆ ದೂರು ನೀಡಿದ ನಂತರ ಕೃತ್ಯ ಬೆಳಕಿಗೆ ಬಂದಿದೆ. ಆರೋಪಿಗಳನ್ನು ಕೆಲಸದಿಂದ ಅಮಾನತು ಮಾಡಿ, ಪ್ರಕರಣದ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ' ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಲ್ಕಿಸ್ ಪ್ರಕರಣ:- ಸಿಜೆಐಗೆ ಪತ್ರ

ನವದೆಹಲಿ: ಗುಜರಾತ್‌ನಲ್ಲಿ 2002ರಲ್ಲಿ ನಡೆದ ಬಿಲ್ಕಿಸ್ ಬಾನು ಮೇಲಿನ ಅತ್ಯಾಚಾರ ಮತ್ತು 14 ಜನರ ಹತ್ಯೆ ಪ್ರಕರಣದ 11 ಅಪರಾಧಿಗಳನ್ನು ಬಿಡುಗಡೆ ಮಾಡಿರುವ ಗುಜರಾತ್ ಸರ್ಕಾರದ ಆದೇಶವನ್ನು ಅಸಿಂಧುಗೊಳಿಸುವಂತೆ ಕೋರಿ 134 ನಿವೃತ್ತ ಅಧಿಕಾರಿಗಳು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್ ಅವರಿಗೆ ಪತ್ರ ಬರೆದಿದ್ದಾರೆ.

11 ಅಪರಾಧಿಗಳನ್ನು ಬಿಡುಗಡೆಗೊಳಿಸಲು ಆದೇಶಿಸಿರುವ ಗುಜರಾತ್ ಸರ್ಕಾರ ಹಲವು ಲೋಪಗಳನ್ನು ಎಸಗಿದೆ ಎಂದು 'ಕಾನ್‌ಸ್ಟಿಟ್ಯೂಷನಲ್ ಕಂಡಕ್ಟ್ ಗ್ರೂಪ್' (ಸಿಸಿಜಿ) ಏಳು ಪುಟಗಳ ಮನವಿಯಲ್ಲಿ ತಿಳಿಸಿದೆ.

ನೀಟ್: 'ನೊಂದವರಿಗೆ' ಮರುಪರೀಕ್ಷೆ

ನವದೆಹಲಿ/ಕೊಲ್ಲಂ (ಪಿಟಿಐ): ಕೇರಳದ ಕೊಲ್ಲಂ ಜಿಲ್ಲೆಯ ಖಾಸಗಿ ಶಿಕ್ಷಣ ಸಂಸ್ಥೆಯ ಕೇಂದ್ರದಲ್ಲಿ ಕಳೆದ ತಿಂಗಳು 'ನೀಟ್' ಪರೀಕ್ಷೆ ಬರೆದ ವಿದ್ಯಾರ್ಥಿನಿಯರಿಗೆ ಸೆಪ್ಟೆಂಬರ್ 4ರಂದು ಮರು ಪರೀಕ್ಷೆ ನಡೆಸಲು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಜುಲೈ 17ರಂದು 'ನೀಟ್' ಪರೀಕ್ಷೆ ಬರೆಯಲು ಕೊಲ್ಲಂನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದ ವಿದ್ಯಾರ್ಥಿನಿಯರಿಗೆ, ಪರೀಕ್ಷೆಗೆ ಹಾಜರಾಗುವ ಮುನ್ನ ಬಲವಂತವಾಗಿ ಒಳ ಉಡುಪುಗಳನ್ನು ತೆಗೆಸಲಾಗಿತ್ತು ಎಂಬ ಆರೋಪ ವ್ಯಕ್ತವಾಗಿತ್ತು. ಈ ಕುರಿತು ದೂರು ದಾಖಲಾಗಿತ್ತು.

ಕೊಲ್ಲಂ ಪರೀಕ್ಷಾ ಕೇಂದ್ರದಲ್ಲಿ ನೊಂದ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ 4ರಂದು ನಡೆಯುವ ನೀಟ್ ಮರು ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸಲಾಗುತ್ತದೆ. ಇದೇ ವೇಳೆ ರಾಜಸ್ಥಾನ ಮತ್ತು ಮಧ್ಯ ಪ್ರದೇಶದ ತಲಾ ಎರಡು ಕೇಂದ್ರಗಳು ಹಾಗೂ ಉತ್ತರ ಪ್ರದೇಶದ ಒಂದು ಪರೀಕ್ಷಾ ಕೇಂದ್ರದಲ್ಲೂ ತೊಂದರೆಗೊಳಗಾದ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಯಲಿದೆ.

ಮುನವ್ವರ್ ಕಾರ್ಯಕ್ರಮ ರದ್ದು

ನವದೆಹಲಿ: ಸ್ಟ್ಯಾಂಡ್ ಅಪ್ ಕಾಮಿಡಿಯನ್ ಮುನವ್ವರ್ ಫಾರೂಕಿ ಅವರ ಕಾರ್ಯಕ್ರಮಕ್ಕೆ ದೆಹಲಿ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಕಾರ್ಯಕ್ರಮವು ಆ ಪ್ರದೇಶದಲ್ಲಿ ಕೋಮು ಸಾಮರಸ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ.

ಆಗಸ್ಟ್ 28ರಂದು ದೆಹಲಿಯ ಕೇದಾರನಾಥ ಸಾಹ್ನಿ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಿವೃತ್ತ ಸಿಜೆಐಗಳಿಗೆ ಹೆಚ್ಚಿನ ಸೌಲಭ್ಯ, ಭದ್ರತೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳು ಹಾಗೂ ನ್ಯಾಯಮೂರ್ತಿಗಳಿಗೆ ನಿವೃತ್ತಿಯ ತರುವಾಯ ಕಾರು ಚಾಲಕ, ಆಪ್ತ ಸಹಾಯಕ ಮತ್ತು ಮನೆಕೆಲಸದ ಸಿಬ್ಬಂದಿ ಸೇವೆ ಜೀವಿತಾವಧಿಯವರೆಗೂ ಲಭ್ಯವಾಗಲಿದೆ. ಕೇಂದ್ರ ಸರ್ಕಾರ ಶುಕ್ರವಾರ ಈ ಕುರಿತು ಅಧಿಸೂಚನೆ ಹೊರಡಿಸಿದೆ.

ನಿವೃತ್ತಿ ನಂತರ ಹೆಚ್ಚಿನ ಸೌಲಭ್ಯವನ್ನು ಒದಗಿಸಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ ಎಂದು ನ್ಯಾಯಾಂಗ ಸಚಿವಾಲಯವು ಅಧಿಸೂಚನೆಯಲ್ಲಿ ತಿಳಿಸಿದೆ. ಆಗಸ್ಟ್ 23ರಂದು ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಹಾಲಿ ಇರುವ ಎಲ್ಲ ನಿವೃತ್ತ ನ್ಯಾಯಮೂರ್ತಿಗಳಿಗೂ ಈ ಸೌಲಭ್ಯ ಸಿಗಲಿದೆ.

ನಿವೃತ್ತಿ ಸೌಲಭ್ಯ ಕುರಿತ ಹೊಸ ಪರಿಷ್ಕರಣೆ ಪ್ರಕಾರ, ನಿವೃತ್ತ ನ್ಯಾಯಮೂರ್ತಿಗಳಿಗೆ ದಿನದ 24 ಗಂಟೆಯೂ ಅವರ ನಿವಾಸ ಮತ್ತು ವೈಯಕ್ತಿಕವಾಗಿ ಭದ್ರತೆಯನ್ನು ನಿವೃತ್ತಿ ದಿನದಿಂದ ಐದು ವರ್ಷಗಳವರೆಗೂ ನೀಡಲಾಗುತ್ತದೆ.

ಒಂದು ವೇಳೆ, ಸದ್ಯ ಬೆದರಿಕೆ ಆಧರಿಸಿ 'ಹೆಚ್ಚಿನ ಭದ್ರತೆ' ಒದಗಿಸಿದ್ದಲ್ಲಿ, ಆ ವ್ಯವಸ್ಥೆಯೇ ಮುಂದುವರಿಯಲಿದೆ. ದೆಹಲಿಯಲ್ಲಿ ಆರು ತಿಂಗಳವರೆಗೂ 'ಟೈಪ್ 7' ಶ್ರೇಣಿಯ ಬಾಡಿಗೆ ರಹಿತ ವಸತಿಸೌಲಭ್ಯ ಸಿಗಲಿದೆ. ಸಾಮಾನ್ಯವಾಗಿ ಈ ಸೌಲಭ್ಯವನ್ನು ಕೇಂದ್ರದ ಮಾಜಿ ಸಚಿವರು, ಹಾಲಿ ಸಂಸದರಿಗೆ ನೀಡಲಾಗುತ್ತದೆ ಎಂದು ತಿಳಿಸಿದೆ.

ಲಲಿತ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ 49ನೇ ಮುಖ್ಯ ನ್ಯಾಯಮೂರ್ತಿಯಾಗಿ ಯು.ಯು. ಲಲಿತ್ ಅವರು ಶನಿವಾರ ಅಧಿಕಾರ ವಹಿಸಿಕೊಂಡರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣವಚನ ಬೋಧಿಸಿದರು.

ಇವರು 65ನೇ ವರ್ಷದವರೆಗೂ ಸಿಜೆಐ ಆಗಿರಲಿದ್ದು, ನವೆಂಬರ್ 8ರಂದು ನಿವೃತ್ತರಾಗಲಿದ್ದಾರೆ. ಇವರ ಅಧಿಕಾರಾವಧಿ 74 ದಿನ. ಆ ನಂತರ ಸುಪ್ರೀಂ ಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿಗಳಾಗಿರುವ ಡಿ.ವೈ.ಚಂದ್ರಚೂಡ್ ಅವರು ಸಿಜೆಐ ಸ್ಥಾನ ಅಲಂಕರಿಸುವ ಸಾಧ್ಯತೆ ಇದೆ.

ವಕೀಲರಾಗಿ ವೃತ್ತಿ ಆರಂಭಿಸಿ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸ್ಥಾನಕ್ಕೇರಿದ ಎರಡನೆಯವರು ಯು.ಯು. ಲಲಿತ್. ಈ ಹಿಂದೆ, 1964ರಲ್ಲಿ ಎಸ್.ಎಂ.ಸಿಕ್ರಿ ಅವರು ವಕೀಲಿ ವೃತ್ತಿಯಿಂದ ನೇರವಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. ಬಳಿಕ 1971ರ ಜನವರಿಯಲ್ಲಿ ಮುಖ್ಯನ್ಯಾಯಮೂರ್ತಿಯಾಗಿ ಬಡ್ತಿ ಪಡೆದಿದ್ದರು.



ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಲಲಿತ್ ಅವರು ಕಡತದಲ್ಲಿ ಸಹಿ ಹಾಕಿದರು – ಪಿಟಿಐ ಚಿತ್ರ

ಸೋನಾಲಿ ಕೊಲೆ: ಮತ್ತಿಬ್ಬರ ಸೆರೆ

ಪಣಜಿ (ಪಿಟಿಐ): 'ಬಿಜೆಪಿ ನಾಯಕಿ ಸೋನಾಲಿ ಫೋಗಾಟ್ ಕೊಲೆ ಪ್ರಕರಣ ಸಂಬಂಧ ಡ್ರಗ್ ಪೆಡ್ಲರ್ ದತ್ತಪ್ರಸಾದ್ ಗಾಂವ್ಕರ್ ಹಾಗೂ ಉತ್ತರ ಗೋವಾದ ಕರ್ಲೀಸ್ ರೆಸ್ಟೋರೆಂಟ್‌ನ ಮಾಲೀಕ ಎಡ್ವಿನ್ ನೂನೆಸ್ ಎಂಬುವರನ್ನು ಶನಿವಾರ ಬಂಧಿಸಲಾಗಿದೆ. ಇದರೊಂದಿಗೆ ಬಂಧಿತರ ಒಟ್ಟು ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ' ಎಂದು ಗೋವಾ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ದತ್ತಪ್ರಸಾದ್ ಹಾಗೂ ಎಡ್ವಿನ್ ಅವರನ್ನು ಅಂಜುನಾದಲ್ಲಿ ಶನಿವಾರ ಮಧ್ಯಾಹ್ನ ಬಂಧಿಸಲಾಗಿದೆ. ಇವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ಈಗಾಗಲೇ ಬಂಧನಕ್ಕೊಳಪಟ್ಟಿರುವ ಸುಧೀರ್ ಸಗಾವಾನ್ ಮತ್ತು ಸುಖ್ವಿಂದರ್ ಸಿಂಗ್ ಅವರಿಗೆ ದತ್ತಪ್ರಸಾದ್ ಡ್ರಗ್ ಪೂರೈಸಿದ್ದ. ವಿಚಾರಣೆ ವೇಳೆ ಆರೋಪಿಗಳು ಈ ವಿಷಯ ಬಾಯ್ಬಿಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.

'ದತ್ತಪ್ರಸಾದ್‌ನಿಂದ ಡ್ರಗ್ ಖರೀದಿಸಿದ್ದ ಆರೋಪಿಗಳು ಅದನ್ನು ನೀರಿನಲ್ಲಿ ಬೆರೆಸಿ ಸೋನಾಲಿ ಅವರಿಗೆ ಬಲವಂತವಾಗಿ ಕುಡಿಸಿದ್ದರು. ಕರ್ಲೀಸ್ ರೆಸ್ಟೋರೆಂಟ್‌ನಲ್ಲಿ ಆಗಸ್ಟ್ 22ರಂದು ಪಾರ್ಟಿ ನಡೆಸಲಾಗಿತ್ತು. ಸುಧೀರ್ ಮತ್ತು ಸುಖ್ವಿಂದರ್ ಅವರನ್ನು ಕೊಲೆ ಆರೋಪದಡಿ ಬಂಧಿಸಲಾಗಿತ್ತು' ಎಂದು ಮಾಹಿತಿ ನೀಡಿದ್ದಾರೆ.

ಆರೋಪಿಗಳು 10 ದಿನ ಪೊಲೀಸ್ ಕಸ್ಟಡಿಗೆ: ಪ್ರಕರಣದ ಪ್ರಮುಖ ಆರೋಪಿಗಳಾದ ಸುಧೀರ್ ಮತ್ತು ಸುಖ್ವಿಂದರ್ ಅವರನ್ನು ಇಲ್ಲಿನ ನ್ಯಾಯಾಲಯವು 10 ದಿನಗಳವರೆಗೆ ಪೊಲೀಸ್ ವಶಕ್ಕೆ ಒಪ್ಪಿಸಿದೆ.

ಅಂಜುನಾ ಪೊಲೀಸರು ಆರೋಪಿಗಳನ್ನು ಶನಿವಾರ ಮಪುಸಾ ನಗರದಲ್ಲಿರುವ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ಸೋನಾಲಿ ಅವರು ಆರೋಪಿ ಸುಧೀರ್ ಜೊತೆ ರೆಸ್ಟೋರೆಂಟ್‌ನಲ್ಲಿ ನೃತ್ಯ ಮಾಡುತ್ತಿರುವ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಇದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸೋನಾಲಿ ಅವರಿಗೆ ಸಗಾವಾನ್ ಬಲವಂತವಾಗಿ ಏನನ್ನೊ ಕುಡಿಸುತ್ತಿರುವುದೂ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಯು ಸೋನಾಲಿಯವರನ್ನು ರೆಸ್ಟೋರೆಂಟ್‌ನಿಂದ ಹೊರಗೆ ಕರೆದೊಯ್ಯುತ್ತಿರುವ ದೃಶ್ಯ ಮತ್ತೊಂದು ವಿಡಿಯೊದಲ್ಲಿದೆ.

'ಚಪರಾಸಿ'ಗಳ ಮಾರ್ಗದರ್ಶನ ಹಾಸ್ಯಾಸ್ಪದ: ಮನೀಶ್ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಿನ್ನೆಯವರೆಗೂ ಕಾಂಗ್ರೆಸ್ ಮುಖಂಡರ ಜವಾನರಾಗಿದ್ದವರು (ಚಪರಾಸಿ) ಈಗ ಪಕ್ಷ ಸಂಘಟನೆ ಬಗ್ಗೆ ಮಾರ್ಗದರ್ಶನ ನೀಡುವಂತಾಗಿರುವುದು ಹಾಸ್ಯಾಸ್ಪದ' ಎಂದು ಕಾಂಗ್ರೆಸ್ ಸಂಸದ ಮನೀಶ್ ತಿವಾರಿ ಶನಿವಾರ ಹೇಳಿದ್ದಾರೆ.



ಗುಲಾಂ ನಬಿ ಆಜಾದ್ ಅವರು ಶುಕ್ರವಾರ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಈ ಬೆಳವಣಿಗೆ ನಂತರ ಅವರು ಪಕ್ಷದ ಆಂತರಿಕ ಬಿಕ್ಕಟ್ಟಿನ ಕುರಿತು ಮಾತನಾಡಿದ್ದಾರೆ.

'ವಾರ್ಡ್‌ಮಟ್ಟದ ಚುನಾವಣೆಗೇ ಸ್ಪರ್ಧಿಸುವ ಅರ್ಹತೆ ಇಲ್ಲದವರು, ಚುನಾವಣೆ ಗೆಲ್ಲುವ ಬಗ್ಗೆ ಮಾತನಾಡುತ್ತಾರೆ' ಎಂದು ವ್ಯಂಗ್ಯವಾಡಿದ್ದಾರೆ.

'ಪಕ್ಷದ 23 ಹಿರಿಯ ಮುಖಂಡರು ಕಾಂಗ್ರೆಸ್‌ನ ಸ್ಥಿತಿ ಬಿಗಡಾಯಿಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ ಎರಡು ವರ್ಷಗಳ ಹಿಂದೆಯೇ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದರು. ಅದಾದ ನಂತರ ನಡೆದ ಎಲ್ಲಾ ವಿಧಾನಸಭೆ ಚುನಾವಣೆಗಳಲ್ಲೂ ಪಕ್ಷ ಸೋಲು ಕಂಡಿತ್ತು. ಸೋನಿಯಾ ಅವರ ನಿವಾಸದಲ್ಲಿ 2020ರ ಡಿಸೆಂಬರ್ 20ರಂದು ನಡೆದ ಸಭೆಯ ವೇಳೆ ಚರ್ಚಿಸಲಾದ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿದ್ದರೆ ಪಕ್ಷಕ್ಕೆ ಇಂತಹ ಸ್ಥಿತಿ ಎದುರಾಗುತ್ತಿರಲಿಲ್ಲ' ಎಂದು ತಿಳಿಸಿದ್ದಾರೆ.

'42 ವರ್ಷ ಪಕ್ಷಕ್ಕಾಗಿ ದುಡಿದಿದ್ದೇನೆ. ನನಗೆ ಯಾವ ಪ್ರಮಾಣ ಪತ್ರದ ಅಗತ್ಯವೂ ಇಲ್ಲ. ನಾವು ಈ ಸಂಸ್ಥೆಯ (ಕಾಂಗ್ರೆಸ್) ಸದಸ್ಯರೇ ಹೊರತು ಬಾಡಿಗೆದಾರರಲ್ಲ. ಈ ಮಾತನ್ನು ಹಿಂದೆಯೂ ಹೇಳಿದ್ದೇನೆ' ಎಂದಿದ್ದಾರೆ.

'ಕೊನೆಗೂ ಗುಲಾಂ ಸ್ವತಂತ್ರರಾಗಿದ್ದಾರೆ'(ಗ್ವಾಲಿಯರ್ ವರದಿ): 'ಹಲವು ವರ್ಷಗಳ ಹಿಂದೆಯೇ ಕಾಂಗ್ರೆಸ್‌ನ ಆಂತರಿಕ ಸ್ಥಿತಿ ಬಿಗಡಾಯಿಸಿತ್ತು. ಕೊನೆಗೂ ಆ ಪಕ್ಷ ತೊರೆಯುವ ಮೂಲಕ ಗುಲಾಂ ನಬಿ ಆಜಾದ್ ಸ್ವತಂತ್ರರಾಗಿದ್ದಾರೆ' ಎಂದು ಕೇಂದ್ರ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಹೇಳಿದ್ದಾರೆ.

15 ದಿನಗಳಲ್ಲಿ ಆಜಾದ್ ಹೊಸ ಪಕ್ಷ ಸ್ಥಾಪನೆ: ಗುಲಾಂ ನಬಿ ಆಜಾದ್ ಅವರು ಹೊಸ ಪಕ್ಷ ಸ್ಥಾಪಿಸಲು ಸನ್ನದ್ಧರಾಗಿದ್ದಾರೆ. ಮುಂದಿನ 15 ದಿನಗಳ ಒಳಗೆ ಹೊಸ ಪಕ್ಷದ ಮೊದಲ ಘಟಕವು ಜಮ್ಮು ಮತ್ತು ಕಾಶ್ಮೀರದಲ್ಲಿ ಆರಂಭವಾಗಲಿದೆ ಎಂದು ಆಜಾದ್ ಅವರ ಆಪ್ತ ಜಿ.ಎಂ. ಸರೂರಿ ಶನಿವಾರ ತಿಳಿಸಿದರು.

'ಒಬ್ಬರನ್ನೇ ಹೊಣೆಯಾಗಿಸುವುದು ತಪ್ಪು'

ನವದೆಹಲಿ (ಪಿಟಿಐ): 'ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಒಬ್ಬರನ್ನೇ ಹೊಣೆ ಮಾಡುವುದು ತಪ್ಪು' ಎಂದು ಕಾಂಗ್ರೆಸ್ ಮುಖಂಡ ಸಚಿನ್ ಪೈಲಟ್ ಹೇಳಿದ್ದಾರೆ.

2014ರ ಲೋಕಸಭೆ ಚುನಾವಣೆ ಸೋಲಿಗೆ ರಾಹುಲ್ ಗಾಂಧಿಯೇ ಕಾರಣ ಎಂದು ಆಜಾದ್ ದೂರಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿರುವ ಸಚಿನ್, 'ಆಜಾದ್ ಸೇರಿದಂತೆ ಕಾಂಗ್ರೆಸ್‌ನಲ್ಲಿದ್ದವರೆಲ್ಲರೂ ಯುಪಿಎ ಸರ್ಕಾರದ ಭಾಗವಾಗಿದ್ದರು. ಹೀಗಿರುವಾಗ ಚುನಾವಣೆ ಸೋಲಿಗೆ ಒಬ್ಬರತ್ತ ಬೊಟ್ಟು ಮಾಡುವುದು ತಪ್ಪು' ಎಂದಿದ್ದಾರೆ.

'ಆಜಾದ್ ಅವರು 50 ವರ್ಷಗಳಿಂದ ಪಕ್ಷದ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದರು. ಬಿಜೆಪಿ ದುರಾಡಳಿತದ ವಿರುದ್ಧ ಹೋರಾಡುವ ಸಮಯದಲ್ಲಿ ಅವರು ಪಕ್ಷ ತ್ಯಜಿಸಿದ್ದು ಸರಿಯಲ್ಲ' ಎಂದು ತಿಳಿಸಿದ್ದಾರೆ.

ಸೌಂದರ್ಯದ ರಾಣಿ: ಅಂಬೋಲಿ

11

ಗುಬ್ಬಿಯ ಅಜೇಯ ಶತಕ

13



ಪ್ರಭುತ್ವವನ್ನು ಪ್ರಶ್ನಿಸುವ ದೊಡ್ಡ ಪರಂಪರೆಯೇ ಕನ್ನಡ ಸಾಹಿತ್ಯಕ್ಕಿದೆ: ಪಂಪ, ಕುಮಾರವ್ಯಾಸ, ಕುವೆಂಪು, ಕಾರಂತ, ನಿರಂಜನ, ಲಂಕೇಶ್, ಅನಂತಮೂರ್ತಿ, ಸಿದ್ದಲಿಂಗಯ್ಯ... ಹೀಗೆ ಅನ್ಯಾಯವನ್ನು ಪ್ರಶ್ನಿಸಿದವರು ಹಲವರು. ಆದರೆ, ಈಗೇಕೆ ಸಾಹಿತ್ಯಲೋಕ ಗಟ್ಟಿಯಾಗಿ ಮಾತನಾಡುತ್ತಿಲ್ಲ?

ಗೌಣವಾಗುತ್ತಿರುವ ಬುದ್ಧಿಜೀವಿಗಳು

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಭುತ್ವದ ದರ್ಪವನ್ನು ಲೇಖಕರು ಸದಾ ಪ್ರಶ್ನಿಸುತ್ತಲೇ ಬಂದಿದ್ದಾರೆ. ಆದರೆ, ಇವತ್ತು ಸರ್ಕಾರದ ಮುಖ್ಯ ಇಲಾಖೆಗಳಲ್ಲಿ, ಸಾರ್ವಜನಿಕ ಚರ್ಚೆಗಳಲ್ಲಿ, ಉನ್ನತ ಕುರ್ಚಿಗಳಲ್ಲಿ ಬುದ್ಧಿಜೀವಿಗಳು ಮತ್ತು ಲೇಖಕರು ಕಾಣಿಸುವುದೇ ಅಪೂರ್ವವಾಗಿದೆ. ಬುದ್ಧಿಜೀವಿಗಳೇ ಎಲ್ಲಿದ್ದೀರಿ? ಏನು ಮಾಡುತ್ತಿದ್ದೀರಿ ಎಂದು ಪ್ರಶ್ನಿಸುತ್ತಿದೆ ಈ ಬರಹ

ಪುರುಷೋತ್ತಮ ಬಿಳಿಮಲೆ

2014ರ ರಾಜಕೀಯ ಬದಲಾವಣೆಯ ಅನಂತರ ಭಾರತದಲ್ಲಿ ಬುದ್ಧಿಜೀವಿಗಳ ಮತ್ತು ಲೇಖಕರ ಮೇಲೆ ಆಕ್ರಮಣಗಳು ಹೆಚ್ಚಾದವು. ಸ್ವತಃ ಪ್ರಧಾನಿ ಮೋದಿ ಸಂಸತ್ತಿನಲ್ಲಿಯೇ ಬುದ್ಧಿಜೀವಿಗಳನ್ನು 'ಆಂದೋಲನ ಜೀವಿಗಳು' ಎಂದು ವ್ಯಂಗ್ಯವಾಡಿದರು. ಮೋದಿ ಅವರನ್ನು ಅನುಸರಿಸುವವರು ಹಾದಿಬೀದಿಯಲ್ಲೆಲ್ಲಾ ಅದನ್ನು ಪ್ರಚಾರ ಮಾಡಿದರು. ಇದರ ಪರಿಣಾಮವೋ ಎಂಬಂತೆ ಇವತ್ತು ಸರ್ಕಾರದ ಮುಖ್ಯ ಇಲಾಖೆಗಳಲ್ಲಿ, ಸಾರ್ವಜನಿಕ ಚರ್ಚೆಗಳಲ್ಲಿ, ಉನ್ನತ ಕುರ್ಚಿಗಳಲ್ಲಿ ಬುದ್ಧಿಜೀವಿಗಳು ಮತ್ತು ಲೇಖಕರು ಕಾಣಿಸುವುದೇ ಅಪೂರ್ವವಾಗಿದೆ.

ಅಲ್ಲಿ ಇಲ್ಲಿ ಕೆಲವರು ಕಂಡರೂ ಅವರ ತುಟಿಗಳು ಹೊಲಿದಂತಿರುತ್ತವೆ. ಪ್ರಭುತ್ವದ ಜೊತೆಗೆ ನಕಲಿ ಬುದ್ಧಿಜೀವಿಗಳು ಕಾಣಿಸಿಕೊಳ್ಳುತ್ತಿದ್ದಾರೆ. ಅನೇಕ ಲೇಖಕರು ಅವರವರ ಕುಟುಂಬದವರಿಂದಲೇ ಇವತ್ತು ಅಪಹಾಸ್ಯಕ್ಕೆ ಒಳಪಡುತ್ತಿದ್ದಾರೆ. ಕನ್ನಡದ ಪ್ರಖ್ಯಾತ ಲೇಖಕರೊಬ್ಬರು ನನ್ನಲ್ಲಿ ಖಾಸಗಿಯಾಗಿ ಹೇಳಿದ್ದು: 'ನಾನೀಗ ಕುಟುಂಬದವರ ಯಾವ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲೂ ಇಲ್ಲ, ಅವರ ಮದುವೆಗಳಿಗೂ ನಾನು ಹೋಗುವುದಿಲ್ಲ.'

ಈ ಬೆಳವಣಿಗೆಯು ಉನ್ನತ ಶಿಕ್ಷಣ ಕ್ಷೇತ್ರವನ್ನು ಬರಡುಗೊಳಿಸಿದೆ. ವಿಶ್ವವಿದ್ಯಾಲಯಗಳ ವಿಚಾರ ಸಂಕಿರಣಗಳು ಕಳೆಗುಂದಿ, ಯಾಂತ್ರಿಕವಾಗಿವೆ. ದೇಶದ ಮುಖ್ಯ ಚಿಂತಕರನ್ನೂ ಲೇಖಕರನ್ನೂ ಅನಧಿಕೃತವಾಗಿ, ಆದರೆ ವ್ಯವಸ್ಥಿತವಾಗಿ ಹೊರಗಿಟ್ಟು ಹಲ್ಲು ಗಿಂಜುವವರನ್ನು ಜೊತೆಗಿರಿಸಿಕೊಳ್ಳಲಾಗಿದೆ. ಇದರಿಂದಾಗಿ ಅಕಾಡೆಮಿ, ಪ್ರಾಧಿಕಾರ ಮತ್ತು ಟ್ರಸ್ಟ್‌ಗಳಿಗೆ ತೀರಿಕೊಂಡವರನ್ನೂ ನೇಮಕ ಮಾಡಿಕೊಳ್ಳುವ ದಯನೀಯ ಪರಿಸ್ಥಿತಿಗೆ ಸರ್ಕಾರ ಇಳಿದುಬಿಟ್ಟಿದೆ. ಲೇಖಕರನ್ನು ದೂರವಾಣಿಯಲ್ಲಿ ಸಂಪರ್ಕ ಮಾಡಿ ಒಪ್ಪಿಗೆ ಪಡೆಯಬೇಕೆಂಬ ಕನಿಷ್ಠ ಸೌಜನ್ಯವೂ ಇವತ್ತು ಕಾಣೆಯಾಗಿದೆ. 'ಕೇಳುವುದೇನು, ನಾವು ಮಾಡಿದ್ದೇವೆ, ಅದು ನಿಮ್ಮ ಭಾಗ್ಯ ಅಂತ ಭಾವಿಸಿಕೊಂಡು ಕೆಲಸಮಾಡಿ' ಎಂಬ ದುರಹಂಕಾರ ಅಲ್ಲಿ ವಿಜೃಂಭಿಸಿದೆ. ಅಂಥದ್ದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುವವರು ಇರುವವರೆಗೂ ಪ್ರಭುತ್ವ ಈ ಬಗೆಯ ದರ್ಪವನ್ನು ತೋರಿಸುತ್ತಲೇ ಇರುತ್ತದೆ.

ಬುದ್ಧಿಜೀವಿ ಲೇಖಕರನ್ನು ದೂರ ಇಡುವುದರಿಂದ ಪ್ರಜಾಸತ್ತಾತ್ಮಕ ವಾಗ್ವಾದಗಳಿಗೆ ಹಾನಿ ಉಂಟಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲಾಗದಷ್ಟೂ ಸರ್ಕಾರಗಳು ಜಡವಾಗಿವೆ. ಮಾನ್ಯ ಪ್ರಧಾನಿಯವರೇ ಅಂಬೇಡ್ಕರ್ ಮತ್ತು ಸಾವರ್ಕರ್ ಅವರನ್ನು ಒಂದೇ ಉಸಿರಿನಲ್ಲಿ ಒಟ್ಟಿಗೆ ತರುತ್ತಾರೆ. ಕರ್ನಾಟಕ ಸರ್ಕಾರವು ದೇಶದ ಮೊದಲ ಪ್ರಧಾನಿ, ಸ್ವಾತಂತ್ರ್ಯ ಹೋರಾಟಗಾರ, ಲೇಖಕ ನೆಹರೂ ಅವರನ್ನೇ ಜಾಹೀರಾತಿನಿಂದ ಕೈಬಿಡುತ್ತದೆ. ಈ ಮಟ್ಟಿನ ಬೌದ್ಧಿಕ ದಾರಿದ್ರ್ಯವು ಸಂವಿಧಾನವನ್ನು ಕೂಡಾ ಒರೆಸಿ ಹಾಕಿದರೆ ಯಾರೂ ಅಚ್ಚರಿ ಪಡಬೇಕಾಗಿಲ್ಲ. ಇಂಥ ಸಂದರ್ಭದಲ್ಲಿ ನಿಜ ತಿಳಿದಿರುವ ನಮ್ಮ ಲೇಖಕರು ಯಾಕೆ ಮೌನವಾಗಿದ್ದಾರೆ ಎಂಬ ಪ್ರಶ್ನೆಯನ್ನು ಅನೇಕರು ಕೇಳುತ್ತಿದ್ದಾರೆ. ಕೆಲವು ಲೇಖಕರ ಜಾಣ ನಡೆಗಳನ್ನು ಸಂಶಯಿಸಲಾಗುತ್ತಿದೆ. ಲೇಖಕರು ಬರೆದ ಪುಸ್ತಕಗಳ 300 ಪ್ರತಿಗಳು ಮಾರಾಟವಾಗದಿದ್ದರೂ ಜನ, ಲೇಖಕರ ಕಡೆ ನೋಡುತ್ತಿದ್ದಾರೆ. ಇದು ಸಮಾಜವೊಂದು ಲೇಖಕರ ಬಗ್ಗೆ ಇರಿಸಿದ ಗೌರವವೆಂದು ಭಾವಿಸಲಡ್ಡಿಯಿಲ್ಲ.

ಹಾಗೆ ನೋಡಿದರೆ, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಭುತ್ವದ ದರ್ಪವನ್ನು ಲೇಖಕರು ಸದಾ ಪ್ರಶ್ನಿಸುತ್ತಲೇ ಬಂದಿದ್ದಾರೆ. ಕನ್ನಡದ ಆದಿಕವಿ ಪಂಪನು ಸ್ವತಃ ಅರಿಕೇಸರಿಯ ಆಸ್ಥಾನದಲ್ಲಿದ್ದರೂ 'ನಿಜದಿಂ ಭೂಪರೆಂಬುವರ್ ಅವಿವೇಕಿಗಳ್' ಎಂದದ್ದಲ್ಲದೆ, ಈ ಅರಸರು 'ಕಲಿಯನ್ನು ಹಂದಿಗಳನ್ನಾಗಿ ಮಾಡುತ್ತಾರೆ ಮತ್ತು ಹಂದಿಯನ್ನು ಕಲಿಯನ್ನಾಗಿ ಮಾಡುತ್ತಾರೆ' ಎಂದು ಧೈರ್ಯದಿಂದ ಘೋಷಿಸಿದ.

ವಚನಕಾರರು ಪ್ರಭುತ್ವವನ್ನೇ ಧಿಕ್ಕರಿಸಿ ಅನುಭವ ಮಂಟಪ ಕಟ್ಟಿದರು. ಕುಮಾರವ್ಯಾಸನಂತೂ 'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ, ಉರಿ ಉರಿವುತಿದೆ ದೇಶ, ನಾವಿನ್ನಿರಲುಬಾರದು' ಎಂದು ಬರೆದ. ಕೃಷ್ಣದೇವರಾಯನ ಮೂಗಿನ ಕೆಳಗೇ ಓಡಾಡುತ್ತಿದ್ದ ಪುರಂದರದಾಸ 'ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ, ಆನೆ ಕುದುರೆ ಒಂಟೆ ಲೊಳಲೊಟ್ಟೆ, ಬಹುಸೇನೆ ಭಂಡಾರವು ಲೊಳಲೊಟ್ಟೆ, ದೊಡ್ಡ ಕ್ಷೋಣೀಶನೆಂಬುದು ಲೊಳಲೊಟ್ಟೆ'ಎಂದು ಹಾಡುತ್ತಾ, ಚಿನ್ನಾಭರಣಗಳನ್ನು ಮಾರುತ್ತಿದ್ದ ಹಂಪಿಯ ಬೀದಿಗಳಲ್ಲಿ ಲಂಗೋಟಿ ತೊಟ್ಟುಕೊಂಡು ಸುತ್ತಿದ. 20ನೇ ಶತಮಾನದ ಬಹುತೇಕ ಸಾಹಿತಿಗಳು ಸಮಕಾಲೀನ ಘಟನೆಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸುತ್ತಿದ್ದರು. ಅವರ ಪ್ರತಿಕ್ರಿಯೆಗಳಲ್ಲಿ ಎರಡು ರೀತಿಯಿತ್ತು. ಮೊದಲನೆಯದು, ಕುವೆಂಪು ಮಾಡಿದ ಹಾಗೆ, ಸಾರ್ವಜನಿಕವಾಗಿ ಹೆಚ್ಚು ಮಾತಾಡದೆ, ಗಂಭೀರವಾದ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡು ಪ್ರಭುತ್ವವನ್ನು ಆಳವಾಗಿ ಪ್ರಶ್ನಿಸುವುದು. ಎರಡನೆಯದು, ಶಿವರಾಮ ಕಾರಂತರ ರೀತಿ. ಗಂಭೀರವಾಗಿ ಬರೆಯುವುದರ ಜೊತೆಗೆ ಗಟ್ಟಿಯಾಗಿ ಜನರೊಡನೆ ಮಾತಾಡುವುದು. ಅವರು ಸುಮಾರು 427 ಪುಸ್ತಕಗಳನ್ನು ಬರೆದರು, ಯಕ್ಷಗಾನಕ್ಕೆ ಕಾಯಕಲ್ಪ ನೀಡಿದರು, ವೇಶ್ಯಾ ವಿವಾಹ ಮಾಡಿಸಿದರು.

12ನೇ ಪುಟಕ್ಕೆ...

ಹಬ್ಬದ ರಸಪಾಕ ಮತ್ತು ಆನ್‌ಲೈನ್ ಯುಗ

ಗಣೇಶ ಚತುರ್ಥಿ
ಜಿಡ್ಡಿನ ಪದಾರ್ಥಗಳಿಂದ ದೂರವಿರಲು ಬೇಯಿಸಿದ ಕಡುಬು, ಮೋದಕಗಳನ್ನು ತಿನ್ನುವುದು ಈ ಹಬ್ಬದ ವಿಶೇಷ

ಲೋಹ್ರಿ
ಸೂರ್ಯಕಿರಣಗಳಿಂದ ವಂಚಿತರಾದ ಜನರಿಗೆ ಜನವರಿಯ ಹದವಾದ ಬಿಸಿಲಿನಲ್ಲಿ ಖರ್ಜೂರ ಮೆಲ್ಲುವ ಸಂಭ್ರಮ

ಧನುರ್ಮಾಸ
ಹುಗ್ಗಿಯನ್ನು (ಪೊಂಗಲ್) ಬೆಳಗಿನ ಜಾವದಲ್ಲಿಯೇ ಸೇವಿಸುವ ಪದ್ಧತಿ ಮಲೆನಾಡಿನ ಪ್ರದೇಶಗಳಲ್ಲಿತ್ತು

ಭೂಮಿಹುಣ್ಣಿಮೆ
ಹಲವಾರು ವಿಧದ ಸೊಪ್ಪುಗಳನ್ನು ಬಳಸಿ ಪಲ್ಲೆಯನ್ನು ತಯಾರಿಸಿ ಉಣ್ಣುವ ಸಂಪ್ರದಾಯ ಹಲವೆಡೆ ಇದೆ

ಮಕರ ಸಂಕ್ರಾಂತಿ
ಎಳ್ಳುಬೆಲ್ಲ, ಕಬ್ಬಿನ ತುಂಡು ಹಂಚುವ ಉದ್ದೇಶ ಆಗ ದೇಹಕ್ಕೆ ಎಣ್ಣೆ ಮತ್ತು ಕಬ್ಬಿಣಾಂಶ ಬೇಕೆನ್ನುವುದು

ನಾಗರಪಂಚಮಿ
ಉತ್ತರ ಕರ್ನಾಟಕದಲ್ಲಿ ಆಚರಿಸುವ ನಾಗರಪಂಚಮಿಯಲ್ಲಿ ನೈವೇದ್ಯಕ್ಕೆ ನಿರ್ದಿಷ್ಟ ಉಂಡಿಗಳೇ ಬೇಕು

ಆಟಿ ಅಮವಾಸ್ಯೆ
ತುಳುನಾಡಿನಲ್ಲಿ ಹಾಲೆಮರದ ತೊಗಟೆಯಿಂದ ತಯಾರಿಸುವ ಕಷಾಯವನ್ನು ಸೇವಿಸುವ ಪರಿಪಾಟವಿದೆ



ಸಹನಾ ಹೆಗಡೆ

ಕಾಡಿನ ಕಂದಮೂಲಗಳನ್ನು, ಹಣ್ಣುಹಂಪಲುಗಳನ್ನು ಕಿತ್ತು, ಪ್ರಾಣಿಗಳನ್ನು ಬೇಟೆಯಾಡಿ ಕೊಂದು ತಿಂದು ತಿರುಗಾಡಿಕೊಂಡಿದ್ದ ಮನುಷ್ಯ, ಬೆಂಕಿ, ಚಕ್ರ, ಹಣ, ಆಯುಧ, ಸಲಕರಣೆಗಳನ್ನು ಆವಿಷ್ಕರಿಸಿಕೊಂಡು, ಕೃಷಿ ಮಾಡಿ ಧಾನ್ಯಗಳನ್ನೂ ಬೆಳೆದು ಜೀವಜಗತ್ತಿನಲ್ಲಿಯೇ ಅತ್ಯಂತ ಬುದ್ಧಿವಂತ ಪ್ರಾಣಿಯೆನಿಸಿಕೊಂಡು ಬದುಕತೊಡಗಿ ಸಾವಿರಾರು ವರ್ಷಗಳು ಸಂದಿವೆ.

ವ್ಯಕ್ತಿಯು ತಾನು ಸೇವಿಸುವ ಆಹಾರ ಮತ್ತು ಅದನ್ನು ಸೇವಿಸುವ ಕ್ರಮಗಳಿಂದಾಗಿ ಇನ್ನೊಬ್ಬನಿಂದ ಭಿನ್ನ ಎನಿಸಿಕೊಳ್ಳುತ್ತಾನೆ. ಆದರೆ ಇಂತಹದೊಂದು ರೀತಿನೀತಿ ಬೆಳೆದುಬಂದಿದ್ದಕ್ಕೆ ಕಾರಣಗಳೇನು, ಅವು ನಿರ್ಧರಿಸುವ ಸಂಗತಿಗಳಾವುವು, ಅವುಗಳನ್ನು ಬದಲಾಯಿಸಲು ಸಾಧ್ಯವಿಲ್ಲವೇ, ಬದಲಾಯಿಸುವುದು ನ್ಯಾಯವೇ, ಬದಲಾವಣೆ ವ್ಯಕ್ತಿಗತ ಆಯ್ಕೆಯೇ, ಸಮಷ್ಟಿಯ ಇಷ್ಟಾನಿಷ್ಟಗಳ ಸೂಚಕವೇ ಇತ್ಯಾದಿ ಮನಸ್ಸಿನಲ್ಲಿ ಮೂಡುವ ಪ್ರಶ್ನೆಗಳು ಕೆಲವೊಮ್ಮೆ ಹುಟ್ಟಿ ಹಾಗೆಯೇ ಮಾಯವಾಗುವುದಿಲ್ಲ. ಬೃಹದಾಕಾರವಾಗಿ ಬೆಳೆದು ವ್ಯಕ್ತಿಯ, ಸಮಾಜದ, ನಾಡಿನ, ದೇಶದ ನೆಮ್ಮದಿಯನ್ನು ಹಾಳುಗೆಡಹುತ್ತವೆ ಕೂಡ.

ಜಗತ್ತಿನ ಯಾವುದೇ ಭಾಗದ ಜನರ ಆಹಾರ ಪದ್ಧತಿಯನ್ನು ಗಮನಿಸಿದರೂ ಅದರ ಹುಟ್ಟು ಮತ್ತು ಬೆಳವಣಿಗೆಗೆ ಅವರು ವಾಸಿಸುವ ಭೌಗೋಳಿಕ ಪರಿಸರ ಮತ್ತು ಹವಾಮಾನ ಮುಖ್ಯ ಕಾರಣವಾಗಿದ್ದು ಖಾದ್ಯ ಪದಾರ್ಥಗಳ ಲಭ್ಯತೆ, ಸಾರಿಗೆ, ಸಂಪರ್ಕ ಸಾಧನ, ತಂತ್ರಜ್ಞಾನಗಳಲ್ಲಿನ ಪ್ರಗತಿ, ಆರ್ಥಿಕ-ಸಾಮಾಜಿಕ-ರಾಜಕೀಯ ಪರಿಸ್ಥಿತಿಗಳು ಕೂಡ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಹೀಗೆ ಅಭ್ಯಾಸವಾದ ಒಂದು ಆಹಾರ ಕ್ರಮ ಹಾಗೆಯೇ ಮುಂದುವರೆದು ಅಲ್ಲಿನ ಜನಸಮುದಾಯದ ಸಂಸ್ಕೃತಿಯನ್ನೇ ರೂಪಿಸುತ್ತದೆ. ಯಾವುದೇ ಪ್ರದೇಶವಿರಲಿ, ಬಹುತೇಕವಾಗಿ ಪ್ರತೀ ಇಪ್ಪತ್ತೋ ಮೂವತ್ತೋ ಕಿಲೋಮೀಟರ್‌ಗೆ ಭಾಷೆಯಲ್ಲಿ ಭಿನ್ನತೆ ಕಂಡುಬರುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಆಹಾರಕ್ಕೆ ಸಂಬಂಧಿಸಿದಂತೆಯೂ ವ್ಯತ್ಯಾಸಗಳಿರುವುದು ಕಾಣುತ್ತದೆ. ಇವೆರಡಕ್ಕೆ ಹೋಲಿಸಿದರೆ ವಸ್ತ್ರದಲ್ಲಿನ ಭಿನ್ನತೆಯು ರಾಜ್ಯ, ದೇಶಗಳ ಮಟ್ಟದಲ್ಲಿ ಮಾತ್ರ ಎದ್ದುತೋರುವಂಥದು. ಪ್ರತಿಯೊಂದು ಪ್ರದೇಶಕ್ಕೂ ಜನಸಮುದಾಯಕ್ಕೂ ತನ್ನತನವನ್ನು ತಂದುಕೊಡುವಂತಹ ಆಹಾರ-ಬಟ್ಟೆ-ಭಾಷೆಗಳು ವ್ಯಕ್ತಿ, ಸಮುದಾಯಗಳ ನಡುವೆ ಪರಸ್ಪರ ಸಂಘರ್ಷಗಳಿಗೆ ಎಡೆಮಾಡಿಕೊಡುವುದು, ಸೌಹಾರ್ದವನ್ನು ಕದಡುವುದು ವಿಷಾದಕರ ಸಂಗತಿ.

ಸೇವಿಸುವ ಆಹಾರ ಮತ್ತು ದೇಹ-ಮನಸ್ಸಿನ ಆರೋಗ್ಯದ ನಡುವಿನ ಅವಿನಾಭಾವ ಸಂಬಂಧವು ಈಗ ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಸಸ್ಯಾಹಾರ, ಮಾಂಸಾಹಾರ ಎನ್ನುವುದು ಪ್ರಧಾನವಾದ, ಆದರೆ ಸಾಕಷ್ಟು ಹಳೆಯದಾದ ವಿಭಜನೆ. ಈಗ ಯಾರು, ಎಷ್ಟರ ಮಟ್ಟಿಗೆ ಶುದ್ಧ ಸಸ್ಯಾಹಾರಿ, ಶುದ್ಧ ಮಾಂಸಾಹಾರಿ ಎನ್ನುವುದೇ ಗೊಂದಲದ ಸಂಗತಿ. ಹಿತ್ತಲ ಒಳಹೊರಗೆ ಸಿಗುತ್ತಿದ್ದ, ಮನೆಯಂಗಳದಲ್ಲಿ ಬೆಳೆಸಿಕೊಂಡಿದ್ದ ತರಕಾರಿ-ಹಣ್ಣು-ಸೊಪ್ಪು-ದಂಟು-ಧಾನ್ಯ ಇತ್ಯಾದಿಗಳಿಗೆ ಸಾಕಿಕೊಂಡಿದ್ದ ಕುರಿ-ಕೋಳಿ-ಹಂದಿ ಮುಂತಾದ ಪ್ರಾಣಿಗಳು ಸೇರಿ, ಹತ್ತಿರದ ನದಿತೊರೆಗಳಿಂದ ಹಿಡಿದು ತರುತ್ತಿದ್ದ ಏಡಿ-ಸೀಗಡಿ-ಮೀನಿನಂತಹ ಜಲಚರಗಳು ಜೊತೆಗೂಡಿ, ಆಹಾರ ಸೇವನೆಯೆಂದರೆ, ನಿರ್ದಿಷ್ಟ ಋತುಮಾನದಲ್ಲಿ ಸುತ್ತಮುತ್ತ ಲಭ್ಯವಿದ್ದ ಪದಾರ್ಥಗಳನ್ನು ಪೌಷ್ಟಿಕತೆ, ಸ್ವಾದಾನುಸಾರ ಸಂಸ್ಕರಿಸಿ ದೇಹಪೋಷಣೆಗೆ ಒಗ್ಗಿಸಿಕೊಳ್ಳುವುದಷ್ಟೇ ಆಗಿತ್ತು. ಈಗ ಸನ್ನಿವೇಶ ಸಂಪೂರ್ಣವಾಗಿ ಬದಲಾಗಿದೆ. ತಂತ್ರಜ್ಞಾನದಲ್ಲಿನ ಪ್ರಗತಿ, ಸಾರಿಗೆ ವ್ಯವಸ್ಥೆ, ಸಂವಹನ ಮಾಧ್ಯಮ, ಜಾಹೀರಾತು, ವಾಣಿಜ್ಯೀಕರಣ, ದೊಡ್ಡ ಪ್ರಮಾಣದ ವ್ಯಾಪಾರ ವಹಿವಾಟು, ಉದಾರೀಕರಣದ ನೀತಿ, ಸಿದ್ಧ ಆಹಾರವನ್ನು ಕ್ಷಿಪ್ರವಾಗಿ ಮನೆ ಬಾಗಿಲಿಗೆ ತಲುಪಿಸುವಂತಹ ವ್ಯಾಪಾರ ಚಟುವಟಿಕೆಗಳು ಇತ್ಯಾದಿ ಕಾಲಕ್ಕೆ ತಕ್ಕಂತೆ ಆದ ಬೆಳವಣಿಗೆಗೆ ಪೂರಕವಾಗಿ ಎಲ್ಲವೂ ತಮ್ಮ ತಮ್ಮ ನಿರ್ದಿಷ್ಟ ಸೀಮೆಯನ್ನು ದಾಟಿ ದಾಪುಗಾಲನ್ನಿಟ್ಟಾಗಿದೆ. ಇಂದು ಪ್ರಪಂಚದ ಯಾವುದೇ ಮೂಲೆಯಲ್ಲಿರುವ ವ್ಯಕ್ತಿ ಏನನ್ನೇ ಆದರೂ ಪಡೆದುಕೊಳ್ಳಬಹುದಾದ ಸ್ಥಿತಿಯು ನಿರ್ಮಾಣವಾಗಿದೆ.

ಈರುಳ್ಳಿ-ಬೆಳ್ಳುಳ್ಳಿಯನ್ನು ಕೂಡ ನಿಷಿದ್ಧವೆಂದು ಭಾವಿಸುವ ಶಾಕಾಹಾರಿಗಳು, ಮೀನು ಮಾಂಸಾಹಾರ ವಲ್ಲವೆಂದು ಪರಿಗಣಿಸುವ ಸಸ್ಯಾಹಾರಿಗಳು, ಸಸ್ಯಾಹಾರಿಗಳಾಗಿದ್ದೂ ಮೊಟ್ಟೆಯನ್ನು ಮಾತ್ರ ಆಹಾರದ ಭಾಗವಾಗಿ ಒಪ್ಪುವವರು, ಹಾಲು-ಹೈನಿನಂತಹ ಪ್ರಾಣಿಜನ್ಯ ಪದಾರ್ಥಗಳನ್ನು ಕೂಡ ಸಂಪೂರ್ಣವಾಗಿ ನಿರಾಕರಿಸುವ ವೀಗನ್ ಸಮುದಾಯದವರು, ರಾಸಾಯನಿಕಮುಕ್ತ ನೈಸರ್ಗಿಕ, ಸಾವಯವ ಪದಾರ್ಥಗಳ ಬಳಕೆದಾರರು ಹೀಗೆ ಇತ್ತೀಚಿನ ದಿನಗಳಲ್ಲಿ ವಿಭಜನೆ ಮತ್ತಷ್ಟು ನಿರ್ದಿಷ್ಟ ಹಾಗೂ ಸೂಕ್ಷ್ಮ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಔಷಧ ಪದಾರ್ಥ, ಪ್ರಸಾಧನ ಸಾಮಗ್ರಿ ಮತ್ತು ಸಿದ್ಧ ತಿಂಡಿತಿನಿಸುಗಳಲ್ಲಿ ಸಾಮಾನ್ಯವಾಗಿ ಇದ್ದೇ ಇರುವ ಬಣ್ಣ, ಸ್ವಾದವರ್ಧಕ, ಸಂರಕ್ಷಕ ಇತ್ಯಾದಿ ನೈಸರ್ಗಿಕ ಹಾಗೂ ಕೃತಕ ಪದಾರ್ಥಗಳ ಮೂಲವನ್ನು ಹುಡುಕುತ್ತ ಹೋದಲ್ಲಿ ಈ ವಿಭಜನೆಗಳೆಲ್ಲ ಬಹುತೇಕ ಅರ್ಥ ಕಳೆದುಕೊಳ್ಳುತ್ತವೆ.

ಈ ಹಿನ್ನೆಲೆಯಲ್ಲಿ ಮಾನವನ ಆಹಾರ ಪದ್ಧತಿಯು ಆತನ ಸಂಸ್ಕೃತಿಯ ಭಾಗವೂ ಹೇಗಾಯಿತು ಎಂಬುದರ ಬಗ್ಗೆ ಆಲೋಚಿಸಬಹುದು. ಒಂದೊಂದು ಪ್ರದೇಶದಲ್ಲಿ ವಾಸವಾಗಿರುವ ಜನಸಮುದಾಯವೂ ಕಾಲಾನಂತರದಲ್ಲಿ ಅವಶ್ಯಕತೆಗನುಗುಣವಾಗಿ ಲಭ್ಯ ಸಂಪನ್ಮೂಲಗಳ ಆಧಾರದಲ್ಲಿ ಅನ್ವೇಷಣೆ, ಅನುಭವಗಳ ಮೂಲಕ ತನ್ನದೇ ಆದ ದೇಸೀ ಜ್ಞಾನ-ವಿವೇಕವನ್ನು ಒಟ್ಟುಗೂಡಿಸಿಕೊಂಡಿರುತ್ತದೆ. ವ್ಯಕ್ತಿ ಮತ್ತು ಒಟ್ಟಾರೆ ಸಮುದಾಯದ ಸ್ವಾಸ್ಥ್ಯಕ್ಕೆ ಹಾಗೂ ಕುಲ-ಪಂಗಡಗಳ ಮುಂದುವರೆಯುವಿಕೆಗೆ ಅದನ್ನು ಪಾಲಿಸುವುದು ಅಗತ್ಯ ಎನ್ನುವ ಧೋರಣೆಯೂ ಬೆಳೆಯುತ್ತದೆ.

ಸೂಕ್ತ ವೈದ್ಯಕೀಯ ನೆರವು, ಚಿಕಿತ್ಸೆಗಳಿಲ್ಲದಿದ್ದ ಕಾಲದಲ್ಲಿ, ರೋಗ ರುಜಿನಗಳು ಆಹಾರದ ಮೂಲಕವೂ ಬರುತ್ತಿದ್ದ ದಿನಗಳಲ್ಲಿ (ಈಗಲೂ) ಆಹಾರ ಸೇವನೆಗೆ ಸಂಬಂಧಿಸಿದಂತೆ ಕಟ್ಟುಪಾಡುಗಳು ಅನಿವಾರ್ಯವಾಗಿದ್ದವು. ಶರೀರದ ಸಂರಚನೆ-ಕಾರ್ಯಶೈಲಿಯ ಬಗ್ಗೆ, ಬಾಹ್ಯ ಪದಾರ್ಥಗಳಿಗೆ ಅದು ಪ್ರತಿಕ್ರಿಯಿಸುವ ರೀತಿಯ ಬಗ್ಗೆ ತಿಳಿವು ಹೆಚ್ಚಾದಂತೆಲ್ಲ ಆಹಾರ ಸೇವನೆಯ ನೀತಿನಿಯಮಗಳನ್ನು ರೂಪಿಸುವ ಕ್ರಮವೂ ಕಂಡುಬರತೊಡಗಿತು. ಆದರೆ ಕಟ್ಟಳೆಗಳನ್ನು ಪ್ರಶ್ನಿಸುವ, ಉಲ್ಲಂಘಿಸುವ ಮನೋಭಾವದ ಜನ ಎಲ್ಲ ಕಾಲದಲ್ಲಿಯೂ ಕಾಣಸಿಗುತ್ತಾರಲ್ಲ, ಆಗ ಸಹಾಯಕ್ಕೆ ಬಂದಿದ್ದು ಧಾರ್ಮಿಕತೆ ಹಾಗೂ ಸಾಮಾಜಿಕತೆ. ನೀತಿನಿಯಮಗಳನ್ನು ಪಾಲಿಸುವಂತೆ ಮಾಡಲು ದೇವರುದಿಂಡರು-ಪಾಪಪುಣ್ಯ-ಕರ್ಮ-ಪುನರ್ಜನ್ಮ ಮುಂತಾದ ಸಂಗತಿಗಳ ಭೀತಿ ನೆರವಿಗೆ ಬರುವಷ್ಟು ಬಹುಶಃ ಇನ್ಯಾವುದೂ ಬರುವುದಿಲ್ಲವೇನೋ. ಅದಕ್ಕೇ ಎಲ್ಲದಕ್ಕೂ ಪೂಜೆ-ಆರಾಧನೆ-ಹಬ್ಬ-ಆಚರಣೆ-ಸಂಭ್ರಮ-ಉತ್ಸವ-ನೇಮ-ನಿಷ್ಠೆ-ವ್ರತ-ನೋಂಪಿಗಳ ಚೌಕಟ್ಟು. ದಿನ-ವಾರ-ಮಾಸ-ಸಂವತ್ಸರ-ಋತು-ಕಾಲಗಳ ಇತಿಮಿತಿ. ಪ್ರತಿಯೊಂದು ಜಾತಿ-ಧರ್ಮ-ಕುಲ-ಪಂಗಡಗಳಿಗೆ ಈ ನೀತಿನಿಯಮಗಳು ಬೇರೆಯಾಗಿರುವಂತೆ ಕಂಡರೂ ಎಲ್ಲವುಗಳ ಮೂಲ ಉದ್ದೇಶ ಮಾತ್ರ ಒಂದೇ.

11ನೇ ಪುಟಕ್ಕೆ...

ಜೀನ್ಸ್ ವ್ಯಾಮೋಹಿಗಳ ನಡುವೆ ಖಾದಿ ಮೋಹಿಗಳು!

ಧಾರವಾಡದ ಬಾಲಬಳಗ ಶಾಲೆಯ ಆವರಣದಲ್ಲಿ ನೂಲಲು ಚರಕ ಹೊತ್ತು ತರುತ್ತಿರುವ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಚಿತ್ರ: ಬಿ.ಎಂ. ಕೇದಾರನಾಥ

ಇ.ಎಸ್. ಸುಧೀಂದ್ರ ಪ್ರಸಾದ್

ಆನ್‌ಲೈನ್ ಶಿಕ್ಷಣದ ಗುಂಗಿನಿಂದ ಮೆಲ್ಲನೆ ಹೊರಬರಲು ಯತ್ನಿಸುತ್ತಿರುವ ಮಕ್ಕಳು ಮತ್ತೆ ಅಂಕಗಳಿಕೆಯ ಓಟಕ್ಕೆ ಧುಮುಕಿದ್ದಾರೆ. ಅದೇ ಸ್ಕೂಲು, ಅದೇ ಪರೀಕ್ಷೆ ಎನ್ನುವ ಈ ಮಕ್ಕಳ ಬದುಕಿನ ಓಟದಲ್ಲಿ ಸುಸ್ಥಿರ ಬದುಕಿನ ಪಾಠ ಖಾದಿ ನೂಲಿನ ಎಳೆಯಷ್ಟೇ ಅದೃಶ್ಯವಾಗಿದೆ. ಇದಕ್ಕೆ ಪರಿಹಾರವೇನು ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಹೊರಟ ಧಾರವಾಡದ ಬಾಲಬಳಗ ಶಾಲೆಯ ಮಕ್ಕಳಿಗೆ ಉತ್ತರವಾಗಿ ದೊರಕಿದ್ದು ಇದೇ ಖಾದಿ!

ಅಂಕದೋಟದೊಳಗೆ ಕಳೆದುಹೋದ ಎಳೆಯ ಮಕ್ಕಳ ಕೈಗೆ, ಖಾದಿ ಎಳೆಯನ್ನಿಟ್ಟು ಖಾದಿ ಉಳಿಸುವ ಪ್ರಯತ್ನದ ಜೊತೆಗೆ ಸುಸ್ಥಿರ ಬದುಕಿನ ಪಾಠವನ್ನೂ ಕಲಿಸಿದವರ, ಕಲಿತವರ ಕಥೆ ಇದು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಆವರಣ ಪಕ್ಕದಲ್ಲಿರುವ ಸಸ್ಯಕಾಶಿಯಲ್ಲಿರುವ ಬಾಲಬಳಗ ಶಾಲೆಯ ಆವರಣವೀಗ ಖಾದಿ ಭಂಡಾರ! ಜೀನ್ಸ್, ಟಿಶರ್ಟ್ ಆಕರ್ಷಣೆಯಿಂದ ಕೊಂಚ ದೂರ ಉಳಿದು ಇಲ್ಲಿನ ಮಕ್ಕಳು ಇದೀಗ ಖಾದಿ ಮೋಹಿಗಳು. ಈ ಕಪ್ಪು ಭೂಮಿಯಲ್ಲಿ ಚಿಗುರೊಡೆದು, ಹೂವು ಬಿಟ್ಟ ಜವಾರಿ ಜೈಧರ್ ಹತ್ತಿಯನ್ನೇ ಬಳಸಿ, ಚರಕ ತಿರುವುತ್ತಾ ನೂಲುತ್ತಿದ್ದಾರೆ. ಅದರಿಂದ ಸಿದ್ಧಗೊಂಡ ಲಡಿಯನ್ನು ಸಿದ್ಧಪಡಿಸುವ ಮೂಲಕ ತಮ್ಮ ಬಟ್ಟೆಯನ್ನು ತಾವೇ ತಯಾರಿಸುವ ಕ್ರಿಯೆಯಲ್ಲಿ ನಿತ್ಯ ಒಂದು ಹೆಜ್ಜೆ ಮುಂದಡಿ ಇಡುತ್ತಿದ್ದಾರೆ.

'ಬೀಜದಿಂದ ಬಟ್ಟೆಯವರೆಗೆ' ಎಂಬ ಪರಿಕಲ್ಪನೆಯ ಈ ಕಾರ್ಯಕ್ರಮದಲ್ಲಿ ಈ ಶಾಲೆಯ 9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳು ಹತ್ತಿ ಬೀಜವನ್ನು ಬಿತ್ತುವುದರಿಂದ ಹಿಡಿದು ಬಟ್ಟೆ ತಯಾರಿಕೆಯವರೆಗಿನ ಎಲ್ಲಾ ಪ್ರಕ್ರಿಯೆಯಲ್ಲೂ ಪಾಲ್ಗೊಂಡು ಸುಸ್ಥಿರ ಬದುಕಿನ ಕಲಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಹತ್ತಿ ಬೀಜದ ಬಿತ್ತನೆ, ಬೆಳೆದ ಹತ್ತಿಯನ್ನು ಸ್ವಚ್ಛಗೊಳಿಸಿ ಹಂಜಿ ಮಾಡಿ, ನೂಲು ತೆಗೆಯುವುದು, ಲಡಿ ಸಿದ್ಧಪಡಿಸಿ ಅದನ್ನು ಖಾದಿ ಕೇಂದ್ರಕ್ಕೆ ಕಳುಹಿಸುವವರೆಗೂ ಎಲ್ಲಾ ಜವಾಬ್ದಾರಿಯನ್ನೂ ಪುಟಾಣಿ ಕೈಗಳೇ ನಿಭಾಯಿಸುತ್ತಿವೆ. ಈ ಹಂತದಲ್ಲಿ ರೈತ, ಕಮ್ಮಾರ, ಕುಂಬಾರ, ಬಡಗಿ, ನೇಕಾರ ಹೀಗೆ ಶ್ರಮಜೀವಿಗಳೊಂದಿಗೆ ವ್ಯವಹಾರ ನಡೆಸುವ ಕೌಶಲವನ್ನು ಎಳೆಮನಸ್ಸುಗಳು ಬೆಳೆಸಿಕೊಳ್ಳುತ್ತಿವೆ. ಮಣ್ಣು, ಬೇರಿನಿಂದ ದೂರ ಸರಿಯುತ್ತಿರುವ ಶಿಕ್ಷಣ ವ್ಯವಸ್ಥೆಯನ್ನು ಮತ್ತೆ ಹಳಿಗೆ ತರುವ ಪ್ರಯತ್ನ ಈ ಶಾಲೆಯದ್ದು. ಶಾಲೆ ಆವರಣದಲ್ಲಿ ಹೆಚ್ಚು ಹತ್ತಿ ಬೆಳೆಯಲು ಸ್ಥಳಾವಕಾಶವಿಲ್ಲದ ಕಾರಣ, ಗದಗ, ಹುಲುಕೋಟಿ, ಅಥಣಿಯ ರೈತರಿಗೆ ಜೈಧರ್ ಹತ್ತಿ ಬೀಜ ನೀಡಿ ಹತ್ತಿ ಬೆಳೆಸುತ್ತಿದ್ದಾರೆ. ಹತ್ತಿ ಗಿಡಗಳ ಬೆಳವಣಿಗೆಯ ಪ್ರತೀ ಹಂತವನ್ನೂ ದಾಖಲಿಸುವ ಪ್ರಕ್ರಿಯೆಯೂ ಈ ಮಕ್ಕಳದ್ದೇ.

13ನೇ ಪುಟಕ್ಕೆ...

ಮಳೆಗಾಲದಲ್ಲಿ ಅಂಬೋಲಿ ಅಂದೊಂಥರಾ ಧರೆಗೆ ಸ್ವರ್ಗವೇ ಇಳಿದಂತೆ ಭಾಸವಾಗುವ ತಾಣ. ಹೀಗಾಗಿಯೇ ಆಕೆಯನ್ನು 'ಮಹಾರಾಷ್ಟ್ರದ ರಾಣಿ' ಎಂದೂ ಕರೆಯುತ್ತಾರೆ. ಈ ಹಸಿರ ಜಗತ್ತಿನೊಳಗೆ ಕಾಣಸಿಗುವ ಜೀವಜಗತ್ತು ಬಲುಅಪರೂಪ. ಕತ್ತಿನಲ್ಲೊಂದು ಕ್ಯಾಮೆರಾ ಸಿಕ್ಕಿಸಿಕೊಂಡು ಈ ಲೋಕದೊಳಗೆ ಹೆಜ್ಜೆ ಇಟ್ಟರೆ ಸ್ವರ್ಗಕ್ಕೆ ಮೂರೇ ಗೇಣು...

ಅಂಬೋಲಿಯ ಪರ್ವತದಲ್ಲಿ ಹರಿಯುವ ಜಲಪಾತಗಳು

ಸೌಂದರ್ಯದ ರಾಣಿ ಅಂಬೋಲಿ

ಚಿತ್ರ ಬರಹ: ಕಲೀಮ್ ಉಲ್ಲಾ

ನಾವು ಬೆಟ್ಟದ ತುದಿಯ ಆ ಪುಟಾಣಿ ಊರು ತಲುಪಿದಾಗ ಸರಿರಾತ್ರಿಯಾಗಿತ್ತು. ದಟ್ಟವಾದ ಹಿಮ ಎಲ್ಲೆಡೆ ಆವರಿಸಿಕೊಂಡು ದಾರಿಯೇ ಕಾಣದಾಗಿತ್ತು. ಕಾರಿನ ಬೆಳಕು ಹೊಗೆಯಂತಹ ಬಿಳಿ ಮಂಜನ್ನು ಸೀಳಿ ಮುನ್ನುಗ್ಗದೆ ನಮ್ಮಲ್ಲಿ ಹೆದರಿಕೆ ಹುಟ್ಟಿಸಿತ್ತು. ಸಣ್ಣ ಎಡವಟ್ಟಾದರೂ ಕಾರು ಎಲ್ಲಿ ಜಾರಿ ಪ್ರಪಾತಕ್ಕೆ ಬೀಳುವುದೋ ಎಂಬ ಜೀವಭಯ. ವಾಹನ ಪಕ್ಕಕ್ಕೆ ನಿಲ್ಲಿಸಿ ಕೆಳಗಿಳಿದರೆ ಕಪ್ಪೆಗಳ ಮಿತಿಮೀರಿದ ಕಿರುಚಾಟ. ಮೋಡಗಳ ಒಳಗೆ ನಾವೆಲ್ಲರೂ ತೇಲಿ ಸಾಗುವ ಅಮೋಘ ಅನುಭವ. ಅಬ್ಬಾ! ಈ ಭೂಮಿಯಲ್ಲಿ ಹುಟ್ಟಿದ್ದು ಸಾರ್ಥಕವಾಯಿತೆಂಬ ವಿನೀತ ಪುಳಕ. ನಿಧಾನಕ್ಕೆ ಬಂದು ಮುಖಕ್ಕೆ ರಾಚುವ ಎಳೆನೀರ ಹನಿಗಳ ಸಿಂಚನ. ಒಂದು ವಿನಮ್ರ ಚಳಿಯನ್ನು ಆಹ್ಲಾದಕರವಾಗಿ ಅನುಭವಿಸಿದ ಹಿತ ಕ್ಷಣಗಳವು.

ಬೆಳಗಾನ ಎದ್ದು ಊರ ನೋಡಲು ಹೊರಟರೂ ಮತ್ತದೆ ಮಂಜಿನ ಕಾಟ. ಇಡೀ ರಸ್ತೆ, ಕಾಡು, ಬೆಟ್ಟ, ಮನೆ, ಜನ, ಎಲ್ಲವೂ ಹೊಗೆಯಲ್ಲಿ ಅವಿತುಕೊಂಡಂತೆ. ಈ ಶ್ವೇತ ಮುಸುಕಿನ ಕನ್ಯೆಗೆ ಅಂಬೋಲಿ ಎಂದು ಕರೆಯುತ್ತಾರೆ. ನಮ್ಮ ಕೆಮ್ಮಣ್ಣುಗುಂಡಿ, ನಂದಿಬೆಟ್ಟ, ಹಿಮವದ್ ಗೋಪಾಲಸ್ವಾಮಿಯ ಬೆಟ್ಟಗಳ ತರಹದ ಗಿರಿಧಾಮ. ನಿಧಾನಕ್ಕೆ ಮೋಡಗಳ ಸೆರಗು ಕಣ್ಣು ತೆರೆದಾಗ ಕಾಣುವುದು ಸ್ವರ್ಗ ಸಮಾನಸೌಂದರ್ಯ. ಜತೆಗೆ ಆಗಸದಿಂದ ಪ್ರಪಾತಕ್ಕೆ ಎರಗುವ ಧಾರಾಕಾರದ ಜಲಪಾತಗಳು.

ಎಲ್ಲೋ ಟೈಗರ್ ಮಾತ್ ಕ್ಯಾಟರ್ ಪಿಲ್ಲರ್

ಅಂಬೋಲಿ ಬುಶ್ ಫ್ರಾಗ್

ಕಿತ್ತಲೆ ಬಣ್ಣದ ಮಲಬಾರ್ ಪಿಟ್ ವೈಪರ್ (ಹಪ್ಪಟ್ಟೆ ಹಾವು)

ಗ್ಲೈಡಿಂಗ್ ಫ್ರಾಗ್

ಪ್ರವಾಸ

ಈ ತಾಣ ಪ್ರಕೃತಿ ಪ್ರಿಯರಿಗೆ ನೆಚ್ಚಿನ ಬೀಡು. 690 ಮೀಟರ್ ಎತ್ತರದಲ್ಲಿರುವ ಇದು ಗೋವಾದ ಕರಾವಳಿ ದಾಟಿಕೊಂಡು ನುಗ್ಗಿರುವ ಪಶ್ಚಿಮ ಘಟ್ಟದ ಎತ್ತರದ ಬೆಟ್ಟಗಳನ್ನು ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿಕೊಂಡಿದೆ. ಪ್ರಪಂಚದ 'ಪರಿಸರ ಹಾಟ್-ಸ್ಪಾಟ್'ಗಳಲ್ಲಿ ಇದೂ ಒಂದು ಎಂದು ಖ್ಯಾತಿ ಪಡೆದಿದೆ. ಅಸಾಮಾನ್ಯ ಸಸ್ಯ ಪ್ರಭೇಧಗಳೂ, ವಿಶಿಷ್ಟ ಪ್ರಾಣಿ, ಪಕ್ಷಿ, ಸರೀಸೃಪಗಳ ತವರೂರು ಇದು. ಮುಖವನ್ನು ಬಲೂನಿನಂತೆ ಊದಿಸಿಕೊಂಡು ಪ್ರಣಯ ಗೀತೆ ಹಾಡುವ 'ಅಂಬೋಲಿ ಕಪ್ಪೆ' ಕೂಡ ಇಲ್ಲಿಯ ಪ್ರಮುಖ ಆಕರ್ಷಣೆ. ಮ್ಯಾಕ್ರೊ ಫೋಟೊಗ್ರಫಿ ಮಾಡುವ ಹಂಬಲದ ಜನರಿಗೆ ಇಲ್ಲಿನ ಬಣ್ಣಬಣ್ಣದ ಮಲಬಾರ್ ಪಿಟ್ ವೈಪರ್ ಹಾವುಗಳು ಹೆಡೆಯಾಡಿಸಿ ಕರೆಯುತ್ತವೆ.

ಸ್ಥಳೀಯ ಗೈಡ್ ಕಾಕಬೀಸೆ ಎಂಬಾತನ ಹಿಡಿದುಕೊಂಡು ರಾತ್ರಿ ಕಾಡು ಸುತ್ತಲು ಹೊರಟೆವು. ನಮ್ಮ ಕೊರಳಲ್ಲಿ ಕ್ಯಾಮೆರಾಗಳು ನೇತಾಡುತ್ತಿದ್ದವು. ರಭಸವಾಗಿ ಬೀಸುವ ಗಾಳಿ, ನಡುವೆ ಸುಳಿವ ಮಳೆಯ ಹೊಡೆತ, ಜೊತೆಗೆ ಪದೇಪದೇ ಕಾಲಿಗೆ ಹತ್ತಿ ನಿಂತು ರಕ್ತವನ್ನು ಸಾಲವಾಗಿ ಕೇಳುವ ಇಂಬಳಗಳು. ಹಟಮಾರಿಗಳಾದ ನಾವು ಬಿಡದೆ ಸುತ್ತಾಡಿ ಮಲಬಾರ್ ಗ್ಲೈಡಿಂಗ್ ಕಪ್ಪೆಯ ಮರಿಯನ್ನು ಹುಡುಕಿದೆವು. ಹಪ್ಪಟ್ಟೆ ಹಾವು ಎಂದು ಕರೆಯಲಾಗುವ ಬಣ್ಣಬಣ್ಣದ ಮಲಬಾರ್ ಪಿಟ್ ವೈಪರ್ ಉರಗಗಳು ಸಿಕ್ಕವು. ರಾತ್ರಿಯ ನಿಸರ್ಗ ಜಗತ್ತಿನಲ್ಲಿ ಕಾಣುವ ಅನೇಕ ಜೀವಚರಗಳು ಹಗಲೊತ್ತಿನಲ್ಲಿ ಹುಡುಕಿದರೂ ಸಿಗುವುದಿಲ್ಲ. ನಿಶಾಚರಿಗಳಾಗಿ ಹೀಗೆ ಅಲೆಯುತ್ತಾ ಊಹೆಗೆ ನಿಲುಕದ ಚಿತ್ರವಿಚಿತ್ರ ಜೀವಜಾಲವನ್ನು ನೋಡಿ ನಲಿಯುವುದು ನಮ್ಮ ಮಟ್ಟಿಗಂತೂ ರೋಮಾಂಚನವೇ ಹೌದು.

ಅಂಬೋಲಿಗೆ ಭೇಟಿ ನೀಡಲು ಉತ್ತಮ ಸಮಯವೆಂದರೆ ಅಕ್ಟೋಬರ್ ಮತ್ತು ಫೆಬ್ರುವರಿ ತಿಂಗಳು ಎನ್ನುತ್ತಾರೆ. ಆದರೆ ನಾವು ಹೋಗಿದ್ದು ಪಕ್ಕಾ ಮಳೆ ಸುರಿಯುವ ಸಮಯದಲ್ಲಿ. ಒಂದೊಂದು ಋತುವಿನಲ್ಲೂ ಈ ಜಾಗ ಕಾಣುವ ನೋಟ ವಿಭಿನ್ನ. ಸಿಗುವ ಆನಂದವೂ ವಿಶಿಷ್ಟವಾಗಿರುತ್ತದೆ. ಹೆಪ್ಪುಗಟ್ಟಿದ ಹಸಿರು ಕಾಡು, ಶ್ವೇತಮಯ ಮೋಡ, ಜಿಟಿಜಿಟಿ ಮಳೆಯಲ್ಲಿ ಅಂಬೋಲಿ ಅತ್ಯುತ್ತಮವಾಗಿತ್ತು. ಗಿರಿಧಾಮದಲ್ಲಿ ಕ್ಷಣಕ್ಷಣಕ್ಕೂ ಬದಲಾಗುವ ನಿಸರ್ಗದ ನಾಟಕೀಯ ದೃಶ್ಯಗಳು ಸಾಕಷ್ಟು ಮುದ ನೀಡಿದವು.

ಅಂಬೋಲಿ ಪ್ರಶಾಂತತೆ ಮತ್ತು ನೈಸರ್ಗಿಕ ಸೌಂದರ್ಯದ ಖನಿ. ಈ ಜನಪ್ರಿಯ ಗಿರಿಧಾಮವನ್ನು 'ಮಹಾರಾಷ್ಟ್ರದ ರಾಣಿ' ಎಂದೂ ಕರೆಯುತ್ತಾರೆ. ಅಂಬೋಲಿ ಜಲಪಾತ, ಶಿರ್ಗಾಂವ್ಕರ್ ಪಾಯಿಂಟ್, ಹಿರಣ್ಯಕೇಶಿ ದೇವಸ್ಥಾನ, ಮಾಧವಗಡ್ ಕೋಟೆ, ಸನ್ಸೆಟ್ ಪಾಯಿಂಟ್, ನಂಗರ್ತಾ ಜಲಪಾತಗಳಂತಹ ಅನೇಕ ಆಸಕ್ತಿದಾಯಕ ದೃಶ್ಯವೀಕ್ಷಣೆಯ ಸ್ಥಳಗಳು ಮನದಲ್ಲಿ ಉಳಿದು ಹೋಗುತ್ತವೆ.

ನೀವು ಸೊಂಪಾದ ಪರಿಸರದಲ್ಲಿ ಸುತ್ತಾಡುತ್ತಾ ಧರೆಯ ಮೇಲೊಂದು ಸ್ವರ್ಗವನ್ನು ಹುಡುಕುತ್ತಿದ್ದರೆ ಅಂಬೋಲಿಗೆ ಪ್ರವಾಸಕ್ಕೆ ಹೋಗಲೇಬೇಕು. ಈ ಸ್ಥಳವು ನೈಸರ್ಗಿಕವಾಗಿ ಶಾಂತವಾಗಿದ್ದು ಹಿತವಾದ ಪರಿಸರದಿಂದ ಆಶೀರ್ವದಿಸಲ್ಪಟ್ಟಿದೆ. ಕೈಯಿಂದ ಮಾಡಿದ ಮರದ ಆಟಿಕೆಗಳು, ಮಸಾಲೆಗಳು ಮತ್ತು ಜೇನುತುಪ್ಪಕ್ಕೆ ಕೂಡ ಈ ಊರು ಹೆಸರುವಾಸಿ. ನೀವು ನಗರದ ಜೀವನಶೈಲಿಯಿಂದ ರೋಸಿ ಹೋದವರಾದರೆ ಇಲ್ಲಿನ ನಿಬ್ಬೆರಗಾಗಿಸುವ ಸೌಂದರ್ಯದಲ್ಲಿ ಕಳೆದುಹೋಗಬಹುದು. ಎಲ್ಲಕ್ಕಿಂತ ಮಿಗಿಲಾಗಿ ಅಲ್ಲಿ ಸಿಗುವ ಬೆಲ್ಲದ ಘಮಘಮ ಟೀ ಸವಿಯಲಾದರೂ ನೀವೊಮ್ಮೆ ಅಲ್ಲಿಗೆ ಹೋಗಲೇಬೇಕು.

ಹಬ್ಬದ ರಸಪಾಕ ಮತ್ತು ಆನ್‌ಲೈನ್ ಯುಗ

10ನೇ ಪುಟದಿಂದ...

ವರ್ಷಾನುಗಟ್ಟಲೆ ನಿಯತವಾಗಿ ಪಾಲಿಸಲ್ಪಟ್ಟ ಆಚರಣೆಯೊಂದು ಮುಂದೆ ಉತ್ಸವದ ರೂಪದಲ್ಲಿಯೋ ಹಬ್ಬಹರಿದಿನವಾಗಿಯೋ ನಿರ್ದಿಷ್ಟ ಸಮುದಾಯ-ಕುಲ-ಪಂಗಡಗಳ ಬದುಕಿನ ಅವಿಭಾಜ್ಯ ಅಂಗವಾಗಿಹೋಗುತ್ತದೆ, ಸಂಸ್ಕೃತಿಯ ಕುರುಹಾಗಿಬಿಡುತ್ತದೆ. ಹುಟ್ಟು, ಬೆಳವಣಿಗೆಗಳ ಕಾರಣ ಯಾವುದನ್ನು ತನ್ನದೆಂದುಕೊಳ್ಳಲಾಗಿದೆಯೋ ಅದನ್ನು ಬಿಡದೆ ಪಾಲಿಸುವ ಆಂತರಿಕ ಬಯಕೆ ಹಾಗೂ ಶಿಕ್ಷಣ, ಉದ್ಯೋಗ, ಪ್ರಯಾಣ, ಆರ್ಥಿಕ-ಸಾಮಾಜಿಕ-ರಾಜಕೀಯ ಸ್ಥಿತಿಗತಿಗಳೇ ಮೊದಲಾದ ಪರಿಸರದ ಪ್ರಭಾವಕ್ಕೆ ಒಳಗಾಗಿ ತನ್ನದಲ್ಲದುದನ್ನು ಮೈಗೂಡಿಸಿಕೊಳ್ಳಬೇಕಾದ ಬಾಹ್ಯ ಒತ್ತಡಗಳ ನಡುವೆ ಆಧುನಿಕ ಮನುಷ್ಯ ಇವೆಲ್ಲದಕ್ಕೂ ಭಿನ್ನವಾದುದೇನೋ ಆಗಿ ಮಾರ್ಪಾಟಾಗುತ್ತಿದ್ದಾನೆಯೇ? ಒಂದೊಮ್ಮೆ ಹಾಗಾದರೆ, ಅದರ ಪರಿಣಾಮವೇನು? ಇದು ಒಳಿತಿಗೋ, ಕೆಡುಕಿಗೋ?

ಇದು ಹೀಗೇ ಎಂದು ಅಂತಿಮ ತೀರ್ಪು ಬರೆಯುವ ಮುನ್ನ ಬೆಳೆದುಬಂದ ಆಹಾರ ಪದ್ಧತಿಯ ಹಿನ್ನೆಲೆ, ಆಚರಣೆಯ ಮೂಲ ಮತ್ತು ಅದರ ಉದ್ದೇಶಗಳನ್ನು ತೆರೆದ ಮನಸ್ಸಿನಿಂದ ಸೂಕ್ಷ್ಮವಾಗಿ ಗಮನಿಸಿದರೆ, ಸಂಸ್ಕೃತಿಯ ಭಾಗವಾಗುವಷ್ಟು ಮಹತ್ವ ಅವುಗಳಿಗೇಕಿದೆ ಎನ್ನುವುದು ನಮ್ಮ ಅರಿವಿಗೆ ಬಂದೀತು. ಆಹಾರದೊಡನೆ ಬೆಸೆದುಕೊಂಡಿರುವ ಆಚರಣೆಗಳನ್ನು ಗೊಡ್ಡು, ಸಂಪ್ರದಾಯವಾದಿ ಎಂದು ಸಾರಾಸಗಟಾಗಿ ತಿರಸ್ಕರಿಸುವುದರ ಬದಲಾಗಿ ಅವುಗಳ ಹಿಂದಿರುವ ಕಾರಣಗಳನ್ನು ವಿಶ್ಲೇಷಿಸಿದರೆ, ಕೌಟುಂಬಿಕ, ಸಾಮಾಜಿಕ ಸೌಹಾರ್ದಕ್ಕೆ ಅವುಗಳ ಕೊಡುಗೆಯನ್ನು ಪರಿಗಣಿಸಿದರೆ, ಸಂಘರ್ಷಕಾರಿ ಮನಃಸ್ಥಿತಿ ಬದಲಾದೀತು. ಕಾಲ-ದೇಶ-ಸನ್ನಿವೇಶಕ್ಕನುಗುಣವಾಗಿ ಎಲ್ಲ ಸಂಗತಿಗಳ ಹಾಗೆ ಆಹಾರಕ್ರಮವೂ ಬದಲಾಗುವುದು ಸಹಜ ಎಂದು ಭಾವಿಸಿದರೆ, ಬದುಕು ಸುಗಮವಾದೀತು. ಅಂತಿಮವಾಗಿ ತನಗೇನು ಬೇಕು, ಏಕೆ ಬೇಕು ಎಂದು ನಿರ್ಧರಿಸುವ ಹಕ್ಕು ವ್ಯಕ್ತಿಯದು, ಅದಕ್ಕೇ ಆಯ್ಕೆಯೂ ಅವನದೇ.

ಈ ಹಿನ್ನೆಲೆಯಲ್ಲಿ ಆಚರಣೆಯಲ್ಲಿರುವ ಹಲವಾರು ಸಂಪ್ರದಾಯ, ಪದ್ಧತಿಗಳನ್ನು ನೋಡಬಹುದು. ಮಕರ ಸಂಕ್ರಾಂತಿಯ ಸಂದರ್ಭದಲ್ಲಿ ಕರ್ನಾಟಕದ ಮನೆಮನೆಗಳಲ್ಲಿ ಎಳ್ಳುಬೆಲ್ಲ, ಕಬ್ಬಿನ ತುಂಡುಗಳನ್ನು ಹಂಚುವ ಪದ್ಧತಿಯಿದೆ. ಚಳಿಗಾಲದಲ್ಲಿ ಶುಷ್ಕವಾಗುವ ಚರ್ಮಕ್ಕೆ ತೈಲಾಂಶವಿರುವ ಎಳ್ಳು, ಕಬ್ಬಿಣಾಂಶವಿರುವ ಬೆಲ್ಲ ಏಕೆ ಬೇಕೆನ್ನುವುದು ಸ್ಪಷ್ಟ. ಹಂಚಿ ತಿನ್ನುವ ಸಂಪ್ರದಾಯದ ಕಾರಣ ಅವುಗಳನ್ನು ಕೊಳ್ಳಲು ಸಾಮರ್ಥ್ಯವಿಲ್ಲದವರಿಗೂ ಅವು ಸಿಗುವಂತಾಗಿ ಪ್ರೀತಿ, ಆತ್ಮೀಯತೆಯೂ ಹೆಚ್ಚುತ್ತಿತ್ತು.

ಸಂಕ್ರಾಂತಿಗೂ ಮೊದಲು ಬರುವ ಧನುರ್ಮಾಸದಲ್ಲಿ ಕೆಲ ದಿನಗಳಾದರೂ ಹುಣಿಸೇಹಣ್ಣಿನ ಸಿಹಿ ಗೊಜ್ಜಿನ ಜೊತೆಗೆ ಹೆಸರು ಬೇಳೆಯ ಹುಗ್ಗಿಯನ್ನು (ಪೊಂಗಲ್) ಬೆಳಗಿನ ಜಾವದಲ್ಲಿಯೇ ಸೇವಿಸುವ ಪದ್ಧತಿ ಮಲೆನಾಡಿನ ಪ್ರದೇಶಗಳಲ್ಲಿತ್ತು.

ಉತ್ತರಭಾರತದಲ್ಲಿ ತೀವ್ರ ಚಳಿಯ ಕಾರಣ ಮನೆಯಲ್ಲಿಯೇ ಇದ್ದು ಸೂರ್ಯಕಿರಣಗಳಿಂದ ವಂಚಿತರಾದ ಜನರಿಗೆ ಜನವರಿಯ ಹದವಾದ ಬಿಸಿಲಿನಲ್ಲಿ ಖರ್ಜೂರ ಮೆಲ್ಲುತ್ತ ಗಾಳಿಪಟ ಹಾರಿಸಿ ಎಲ್ಲರೊಡನೆ ಸಂಭ್ರಮಿಸುವುದು ಎಷ್ಟು ಮುಖ್ಯವೆನ್ನುವುದು ಅರಿವಾಗುತ್ತದೆ. ಯುಗಾದಿಯಲ್ಲಿ ತಿನ್ನುವ ಬೇವುಬೆಲ್ಲದ ಮಹತ್ವವಂತೂ ತಿಳಿದಿದ್ದೇ. ಚೈತ್ರಮಾಸದ ಮೊದಲ ದಿನದಿಂದ ಆರಂಭಿಸಿ, ಒಂದು ತಿಂಗಳ ಕಾಲ ಬೆಳಿಗ್ಗೆ ಎದ್ದ ಕೂಡಲೇ ಬೇವಿನ ಎಲೆ, ಬೆಲ್ಲದಿಂದ ತಯಾರಿಸಿದ ಗೋಲಿಗಾತ್ರದ ಉಂಡೆಯನ್ನು ತಿನ್ನುವ ರೂಢಿ ಗುಜರಾತಿಗಳಲ್ಲಿದೆ. ಬೇಸಿಗೆಯಲ್ಲಿ ತಲೆದೋರುವ ದಡಾರ, ಸಿಡುಬುಗಳಂತಹ ವೈರಾಣು ರೋಗಗಳ ವಿರುದ್ಧ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇದು ನೆರವಾಗುತ್ತಿತ್ತು.

ಮತ್ತೊಂದು ಉದಾಹರಣೆಯೆಂದರೆ, ಆಷಾಢ ಮಾಸದಲ್ಲಿ ಆಚರಿಸುವ ಆಟಿ ಅಮವಾಸ್ಯೆ. ತುಳುನಾಡಿನಲ್ಲಿ ಹಾಲೆಮರದ ತೊಗಟೆಯಿಂದ ತಯಾರಿಸುವ ಕಷಾಯವನ್ನು ಸೇವಿಸುವ ಪರಿಪಾಟವಿದ್ದರೆ, ಕೊಡಗಿನಲ್ಲಿ ಆಟಿ ಸೊಪ್ಪಿನ ರಸವನ್ನು ಸೇರಿಸಿ ತಯಾರಿಸಿದ ಪಾಯಸವನ್ನು ಸೇವಿಸುವ ಪದ್ಧತಿಯಿದೆ. ಆರೋಗ್ಯದ ದೃಷ್ಟಿಯಿಂದ ಒಳ್ಳೆಯದೆಂದೇ ಇವುಗಳನ್ನು ಸೇವಿಸುವ ರೂಢಿ ಬೆಳೆದುಬಂದಿದೆ. ಉತ್ತರ ಕರ್ನಾಟಕದಲ್ಲಿ ಆಚರಿಸುವ ನಾಗರಪಂಚಮಿಯಲ್ಲಿ ನೈವೇದ್ಯಕ್ಕೆ ನಿರ್ದಿಷ್ಟ ಖಾದ್ಯಗಳೇ ಆಗಬೇಕೆಂಬ ಸಂಪ್ರದಾಯವಿರುವಂತೆ ಬಂಗಾಲಿ ಮತ್ತು ಒಡಿಯಾ ಜನರು ಆಚರಿಸುವ ಲಕ್ಷ್ಮೀ ಪೂಜೆಯ ಸಂದರ್ಭದಲ್ಲಿ ಪ್ರತೀ ವಾರ ವಿಭಿನ್ನ ಭೋಗ್ ಅನ್ನು ಅರ್ಪಿಸುವ ಪರಿಪಾಟವಿದೆ.

ನೆಲದಡಿ ಬೆಳೆಯುವ ಗಡ್ಡೆಗೆಣಸುಗಳನ್ನು ತಿನ್ನದ ಶ್ವೇತಾಂಬರ ಪಂಥದ ಜೈನ ಧರ್ಮೀಯರು ಸೊಪ್ಪು, ತರಕಾರಿ ಮೊದಲಾದ ಹಸಿರು ಪದಾರ್ಥಗಳನ್ನು ಭಾದ್ರಪದ ಮಾಸದ ಒಂದಿಡೀ ತಿಂಗಳ ಕಾಲ ತಮ್ಮ ಆಹಾರದಲ್ಲಿ ಬಳಸುವುದಿಲ್ಲ. ಮಳೆಗಾಲದಲ್ಲಿ ಕ್ರಿಮಿಕೀಟಗಳು ಹೆಚ್ಚುತ್ತವೆ, ಜೊತೆಗೆ ಸಸ್ಯಗಳಲ್ಲಿ ನೈಸರ್ಗಿಕವಾಗಿ ಉತ್ಪನ್ನವಾಗುವ ವಸ್ತುವಿನಿಂದಾಗಿ ಇವು ಮಾನವ ಸೇವನೆಗೆ ಉಚಿತವಲ್ಲ ಎನ್ನುವ ವೈಜ್ಞಾನಿಕ ಅಂಶವನ್ನು ಅಂದಿನ ಜನ ತಿಳಿದಿದ್ದರೆನ್ನುವುದು ಬೆರಗು ಮೂಡಿಸುವ ಸಂಗತಿ.

ಕೆಲವೆಡೆ ದೀಪಾವಳಿಗೂ ಮೊದಲು ಆಚರಿಸುವ ಭೂಮಿಹುಣ್ಣಿಮೆಯ ಆಚರಣೆಯಲ್ಲಿ ಹಲವಾರು ವಿಧದ ಸೊಪ್ಪುಗಳನ್ನು ಬಳಸಿ ಪಲ್ಲೆಯನ್ನು ತಯಾರಿಸಿ ನೈವೇದ್ಯ ಮಾಡಿ ಸ್ವೀಕರಿಸುವುದಲ್ಲದೇ ಅವುಗಳನ್ನು ಹೊಲಗದ್ದೆಗಳಿಗೂ ಬೀರುವ ಸಂಪ್ರದಾಯ ಕೃಷಿ ಸಮುದಾಯದಲ್ಲಿದೆ. ಇದು ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವುದಲ್ಲದೇ ಮಿಡತೆ, ಹಕ್ಕಿ ಮುಂತಾದವುಗಳ ಗಮನವನ್ನು ಬೇರೆಡೆ ಸೆಳೆದು ಬೆಳೆಯನ್ನು ರಕ್ಷಣೆ ಮಾಡುತ್ತದೆ ಎನ್ನುವುದು ಆಚರಣೆಯ ಹಿಂದಿರುವ ಉದ್ದೇಶ.

ಇಂದು ಮನುಷ್ಯ ತಾನು ರೂಢಿಸಿಕೊಂಡಿದ್ದ ಆಹಾರ ಪದ್ಧತಿಯನ್ನು ತಾನೇ ಮೀರಿ, ದೇಶ-ಕಾಲ-ಸನ್ನಿವೇಶಗಳ ಗಡಿಮಿತಿಯನ್ನು ದಾಟಿ, ಬದುಕಿನ ಬೇರೆಲ್ಲ ಮುಖ್ಯ ಸಂಗತಿಗಳ ಹಾಗೆಯೇ ಸಂಕರಿತ ಶೈಲಿಯೊಂದನ್ನು ತನ್ನದಾಗಿಸಿಕೊಳ್ಳುತ್ತಿದ್ದಾನೆ, ತಾನೇ ಸೃಷ್ಟಿಸಿಕೊಂಡಿದ್ದ ಭೇದಭಾವ-ತಾರತಮ್ಯಗಳನ್ನೆಲ್ಲ ಬದಿಗೊತ್ತಿ, ತಿಂದುಂಡು ಸುಖವಾಗಿರುವುದಷ್ಟೇ ಬದುಕಿನ ಪರಮಸತ್ಯವೆನ್ನುವ ಹಂತವನ್ನು ತಲುಪಿದ್ದಾನೆ. ಇಲ್ಲಿಂದ ಮುಂದೆ ಆತನ ನಡೆ ಹೇಗಿರುತ್ತದೆ ಎನ್ನುವುದು ಕೌತುಕದ ಸಂಗತಿ.

ಆಧುನಿಕ ಜೀವನಶೈಲಿ, ವಿಶಾಲ ಪ್ರಪಂಚದ ವೈವಿಧ್ಯಮಯ ಸಂಗತಿಗಳಿಗೆ ತೆರೆದುಕೊಂಡ ಬದುಕು, ಹೊಸದಕ್ಕೆ ಒಡ್ಡಿಕೊಳ್ಳುವ ಮನೋಭಾವ, ಆರ್ಥಿಕ ಸಬಲತೆ ಮುಂತಾದವುಗಳ ಕಾರಣ ಬದಲಾವಣೆಗಳಿಲ್ಲದ ಬದುಕನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಬದಲಾವಣೆ-ಬದಲಾವಣೆಯ ಕುರಿತಾದ ಹೆಬ್ಬಯಕೆ ಎನ್ನುವುದೊಂದೇ ಬದುಕಿನ ನಿತ್ಯಸತ್ಯ. ಆಹಾರ ತಯಾರಿಕೆ, ಸೇವನೆಗಳ ರೀತಿನೀತಿಯೇ ಬದಲಾಗುತ್ತಿರುವ ಇಂದಿನ ಸನ್ನಿವೇಶದಲ್ಲಿ ಸಂಸ್ಕೃತಿಯೊಂದಿಗಿನ ಅದರ ನಂಟೇನೂ ಬದಲಾಗುವುದಿಲ್ಲ. ಸಂಸ್ಕೃತಿಯೇ ಬದಲಾಗಿರುತ್ತದೆ ಅಷ್ಟೆ. ಸೇವಿಸುವ ಆಹಾರ, ಆಚರಿಸುವ ಸಂಪ್ರದಾಯಗಳ ಆಧಾರದ ಮೇಲೆ ಜನರ ಜಾತಿ-ಧರ್ಮ-ಪಂಗಡಗಳನ್ನು ನಿರ್ಧರಿಸಿ, ವ್ಯವಹರಿಸುವ ಸಂಪ್ರದಾಯಕ್ಕೆ, ವೈವಿಧ್ಯಮಯ ಬದುಕಿನ ಶೈಲಿಗೆ ಹಾಡುತ್ತಿರುವ ಚರಮಗೀತೆಯೋ ಏಕರೂಪದ ಜೀವನಕ್ರಮಕ್ಕೆ, ಆಹಾರ ಪದ್ಧತಿಗೆ ಹಾಡುತ್ತಿರುವ ನಾಂದಿಪದ್ಯವೋ ಎನ್ನುವುದೂ ಅರ್ಥವಾಗದಂತಹ ಬೆಳವಣಿಗೆಗಳು ಇತ್ತೀಚೆಗೆ ಕಂಡುಬರುತ್ತಿವೆ:

ನಮ್ಮ ವಸತಿ ಸಂಕೀರ್ಣದ ಭದ್ರತಾ ಸಿಬ್ಬಂದಿಯೊಬ್ಬ, ದ್ವಿಚಕ್ರವಾಹನದವನೊಬ್ಬನನ್ನು ಕೂಗಿ ಕರೆಯುತ್ತಿದ್ದ, 'ಓ ಡಂಜೊ ಭಾಯ್!'

ಇಲ್ಲಿಗೆ, ಭವಿಷ್ಯದ ಚಿತ್ರಣ ಸ್ಪಷ್ಟವಾಯಿತು ಅಂದುಕೊಳ್ಳುತ್ತೇನೆ.

ಮುನ್ನೋಟ 28-08-2022 ರಿಂದ 03-09-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಯತ್ನಗಳಿಗೆ ಅಡ್ಡಿ ಎದುರಾದರೂ ಕಾರ್ಯನಿಲ್ಲದೆ ನಿಧಾನವಾಗಿಯಾದರೂ ಮುಂದುವರಿಯುವುದು. ಯಾವುದೇ ವ್ಯಕ್ತಿಯ ಹೊಗಳಿಕೆಗೆ ಮರುಳಾಗುವುದು ಬೇಡ. ನೀವು ಅವಮಾನಿಸಿದ ವ್ಯಕ್ತಿಗಳು, ಕಾದು ನಿಮ್ಮನ್ನೇ ಅವಮಾನಿಸಬಹುದು. ಹಣದ ಒಳಹರಿವು ಸಾಮಾನ್ಯ ಸ್ಥಿತಿಯಲ್ಲಿರುತ್ತದೆ. ಖರ್ಚು ಸಾಕಷ್ಟು ಕಡಿಮೆ ಮಾಡುವುದು ಉತ್ತಮ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವ್ಯಾಪಾರ-ವ್ಯವಹಾರದಲ್ಲಿ ನಿಮ್ಮ ಮಾತು ಹೆಚ್ಚು ನಡೆಯುತ್ತದೆ ಹಾಗೂ ಪ್ರಮುಖ ಸ್ಥಾನವನ್ನು ಹೊಂದುವ ಅವಕಾಶವಿದೆ. ಹೋಟೆಲ್ ಉದ್ಯಮದವರಿಗೆ ವ್ಯಾಪಾರದಲ್ಲಿ ಏರಿಕೆಯಾಗುವ ಸಂಭವವಿದೆ. ಸಹೋದರಿಯರನ್ನು ಭೇಟಿಯಾಗುವ ಲಕ್ಷಣಗಳಿವೆ. ಸ್ಥಿರಾಸ್ತಿ ಕುರಿತ ನಿಮ್ಮ ನಿರ್ಧಾರಗಳು ಸರಿಯಾಗಿರುತ್ತವೆ. ರಾಜಕೀಯ ವ್ಯಕ್ತಿಗಳಿಗೆ ಅವರ ಪ್ರತಿಸ್ಪರ್ಧಿಗಳಿಂದ ಹೆಚ್ಚಿನ ಹೋರಾಟವಿರಲಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವ್ಯವಹಾರದಲ್ಲಿ ವಾದ ವಿವಾದಕ್ಕಿಂತ ಸಮಾಧಾನದ ಮಾತುಗಳು ಹೆಚ್ಚು ಫಲ ಕೊಡುತ್ತವೆ. ಸಹೋದರರಿಂದ ನಿಮ್ಮ ಕೆಲವು ಕೆಲಸಗಳಿಗೆ ವಿರೋಧ ವ್ಯಕ್ತವಾಗಬಹುದು. ಆದಾಯದಷ್ಟೇ ಖರ್ಚು ಇದ್ದೇ ಇರುತ್ತದೆ. ನಿಮ್ಮ ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡಿಕೊಳ್ಳಿರಿ. ಸಾಂಸಾರಿಕ ವಿಷಯಗಳಲ್ಲಿ ನಿಮ್ಮ ಹಿರಿಯರ ಮಾತನ್ನು ಮೀರದಿರುವುದು ನಿಮಗೆ ಉತ್ತಮ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಈ ವಾರ ಹಣಕ್ಕೆ ಕೊರತೆ ಇಲ್ಲ. ಚಿನ್ನ, ಬೆಳ್ಳಿ ವ್ಯಾಪಾರಸ್ಥರಿಗೆ ಹೆಚ್ಚಿನ ವ್ಯಾಪಾರ ಆಗುವ ಸಾಧ್ಯತೆಗಳಿವೆ. ಸರ್ಕಾರದ ಕಡೆಯಿಂದ ಬರಬೇಕಿದ್ದ ಎಲ್ಲ ರೀತಿಯ ಸಹಾಯಧನ ಈಗ ಬರುತ್ತದೆ. ಆಸ್ತಿ ವಿಚಾರದಲ್ಲಿ ಅಷ್ಟು ಮುಂದುವರಿಯಲು ಅನುಕೂಲವಿರುವುದಿಲ್ಲ. ವೃತ್ತಿರಂಗದಲ್ಲಿ ತಮ್ಮತನವನ್ನು ಕಾಯ್ದುಕೊಳ್ಳುವುದರಿಂದ ಮುಂದಿನ ಅಭಿವೃದ್ಧಿಗೆ ಅನುಕೂಲವಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ರಾಜಕಾರಣಿಗಳಿಗೆ ಸ್ಥಾನ ಬದಲಾವಣೆ ಅಥವಾ ಸ್ಥಾನ ಭದ್ರತೆಯ ಬಗ್ಗೆ ಗಮನಹರಿಸಬೇಕಾದ ಅವಶ್ಯಕತೆ ಇರುತ್ತದೆ. ರೇಷ್ಮೆ ನೇಕಾರರಿಗೆ ಬೇಡಿಕೆ ಬಂದು ಆದಾಯ ಹೆಚ್ಚುತ್ತದೆ. ರೋಗದ ಬಗ್ಗೆ ಇದ್ದ ಸಂಶಯ ದೂರವಾಗಿ ಮನಸ್ಸು ಹಗುರವಾಗುತ್ತದೆ. ಕೂಲಿ ಕೆಲಸ ಮಾಡುವವರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ಧಾರ್ಮಿಕ ಕೆಲಸ ಮಾಡುವವರ ಆದಾಯದಲ್ಲಿ ಹೆಚ್ಚಳ ಕಾಣಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಮಾತುಕತೆಗಳಲ್ಲಿ ಸಂಪೂರ್ಣ ವ್ಯಾವಹಾರಿಕತೆ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಸೋದರರಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ಹಿರಿಯರ ಆಸ್ತಿ ವಿಚಾರದಲ್ಲಿ ತಗಾದೆಗಳು ಬರುವ ಸಾಧ್ಯತೆ ಇದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಹೆಚ್ಚು ಖರ್ಚು ಮಾಡಬೇಕಾದ ಅನಿವಾರ್ಯವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಉದ್ಯೋಗ ಕ್ಷೇತ್ರದಲ್ಲಿ ಹಿತಶತ್ರುಗಳ ಕಾಟ ಜಾಸ್ತಿಯಾಗಬಹುದು. ಸಾರಿಗೆ ವಾಹನ ಬಳಸಿ ದಿನನಿತ್ಯ ದುಡಿಯುವವರಿಗೆ ಸಂಪಾದನೆ ಜಾಸ್ತಿ ಆಗುವ ಯೋಗವಿದೆ. ನ್ಯಾಯಾಲಯದ ವಿಚಾರಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಕಾಣಬಹುದು. ನಿಮ್ಮ ಶಕ್ತಿ ಸಾಮರ್ಥ್ಯ ಅರಿತು ಜವಾಬ್ದಾರಿ ವಹಿಸಿಕೊಳ್ಳುವುದು ಬಹಳ ಉತ್ತಮ. ವಿದ್ಯಾರ್ಥಿಗಳ ಶಿಸ್ತುಬದ್ಧ ಅಭ್ಯಾಸ ಅವರಿಗೆ ಉತ್ತಮ ಫಲ ಕೊಡುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವೃತ್ತಿಯಲ್ಲಿ ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಅನಿವಾರ್ಯವಾಗುತ್ತದೆ. ನಿಮ್ಮ ಶತ್ರುಗಳನ್ನು ಮಟ್ಟಹಾಕಲು ಅವರದೇ ತಂತ್ರಗಳನ್ನು ಬಳಸಬೇಕಾದ ಅಗತ್ಯವಿರುತ್ತದೆ. ಬಹಳ ಕಾಲದಿಂದ ಅಪೇಕ್ಷಿಸುತ್ತಿದ್ದ ವಸ್ತುವೊಂದು ದೊರೆತು ಸಂತಸವಾಗುತ್ತದೆ. ನಿಮ್ಮ ವ್ಯವಹಾರದಲ್ಲಿ ಸಾಕಷ್ಟು ಪಾರದರ್ಶಕತೆ ಕಾಪಾಡಿಕೊಳ್ಳುವುದು ಅತಿ ಅಗತ್ಯ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಮನೆ ಬದಲಾಯಿಸುವ ಯೋಚನೆಗೆ ಚಾಲನೆ ಸಿಗುತ್ತದೆ. ಸಿನಿಮಾ ರಂಗದವರಿಗೆ ಅದರಲ್ಲೂ ಸಾಹಸ ಕಲಾವಿದರುಗಳಿಗೆ ಹೆಚ್ಚು ಅವಕಾಶ ದೊರೆಯುತ್ತದೆ. ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಹಿರಿಯ ಅಧಿಕಾರಿಗಳಿಗೆ ವರ್ಗಾವಣೆಯ ಭಾಗ್ಯ ಇರುತ್ತದೆ. ವೃತ್ತಿಯಲ್ಲಿ ನಿಮ್ಮ ತಾಂತ್ರಿಕತೆಯ ಒಳಗುಟ್ಟುಗಳನ್ನು ಕಾಪಾಡಿಕೊಳ್ಳಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಎಲ್ಲವನ್ನೂ ನೀವು ಕಷ್ಟಪಟ್ಟು ಸಂಪಾದಿಸುವಿರಿ. ಉದ್ಯೋಗದಲ್ಲಿ ಸಮಾಧಾನವಿಲ್ಲದಿದ್ದರೂ ಆರ್ಥಿಕ ತೊಂದರೆ ಇರುವುದಿಲ್ಲ. ಸಾಮಾಜಿಕ ಕೆಲಸಗಳಲ್ಲಿ ಅಪಾರ ಜನಬೆಂಬಲ ದೊರೆತು ಕಾರ್ಯಗಳನ್ನು ಮಾಡಿ ಸಾಧಿಸುವಿರಿ. ಬೇರೆಯವರ ಸಮಸ್ಯೆಗಳಿಗೆ ನೆರವಾಗುವ ನಿಮ್ಮ ಗುಣ ಎಲ್ಲರ ಮೆಚ್ಚುಗೆ ಗಳಿಸುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಣ ವ್ಯವಹಾರ ಮಾಡುವವರಿಗೆ ನಿರೀಕ್ಷೆಗೂ ಮೀರಿ ಆದಾಯವಿರುತ್ತದೆ. ಹಿರಿಯರು ಸಾಮಾಜಿಕ ಕೆಲಸಗಳಿಂದ ಹೆಚ್ಚು ಗೌರವ ಪಡೆಯುತ್ತಾರೆ. ತೆರಿಗೆ ಅಧಿಕಾರಿಗಳಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಆಸ್ಪತ್ರೆ ಸಿಬ್ಬಂದಿಗೆ ಹೆಚ್ಚಿನ ಸೌಲಭ್ಯ ದೊರೆಯುತ್ತದೆ. ಬಟ್ಟೆಯ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಹೈನುಗಾರಿಕೆ ಮಾಡುವವರಿಗೆ ಆದಾಯ ಸಮತೋಲನವಾಗಿರುವುದು. ಕೃಷಿಕರಿಗೆ ಹೆಚ್ಚು ಆದಾಯ ಬರುವ ಸಾಧ್ಯತೆಯಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ನಿಮ್ಮ ಸಂತಸಕ್ಕಾಗಿ ಸಾಕಷ್ಟು ಹಣ ಖರ್ಚು ಮಾಡುವಿರಿ. ನಿಮ್ಮ ನೆಚ್ಚಿನ ಕ್ಷೇತ್ರದಲ್ಲಿ ಸಾಕಷ್ಟು ಸ್ಪರ್ಧೆ ಇರಲಿದೆ.

ಪದಬಂಧ 2753



ಮೇಲಿನಿಂದ ಕೆಳಕ್ಕೆ

1. ಸಮಸ್ತವಾದ ಎಲ್ಲವನ್ನೂ ಒಳಗೊಂಡಿದ್ದು 3
2. ಅನಿಷ್ಟಕ್ಕೆಲ್ಲಾ ಗುರಿಯಾಗುವ ಗ್ರಹ 2
3. ದಮನದಲ್ಲಿರುವ ಗುಣ 2
4. ತೀರ್ಥ ಮತ್ತು ಮಂಗಳಾರತಿ ಒಟ್ಟಿಗೆ ತೆಗೆದುಕೊಂಡಾಗ ಆಗಬಹುದಾದ ಸ್ಥಿತಿ 3
6. ಒಂದೊಂದು ಸಲ ಒಂಟಿಯಾಗಿ ಬರುವ ಆನೆ ತಲೆಕೆಳಗು 3
8. ವೈರಿಗಳು ಕೊಡುವ ತೊಂದರೆ 4
9. ನಾಡಿಯಿಂದ ಕೂಡಿದ ಮಾನವ ದೀರ್ಘಪಡೆದು ತಲೆಕೆಳಗು 2
11. ಮತ್ತೇರಿಸಿ ಮೈಮರೆಸುವಂತದ್ದು 3
13. ಬರಹಗಾರರರಿಗೆ ಪತ್ರಿಕೆಯಲ್ಲಿ ಸಿಗುವ ಕಾಲಂ 3
14. ಸುದ್ದಿ ಸಮಾಚಾರವನ್ನು ಮಂದಿಗೆ ಮುಟ್ಟಿಸುವ ಮುದ್ರಿತ ಮಾಧ್ಯಮ 3
16. ಚೇಳಿನಂತೆ ಕುಟುಕುವ ರಾಶಿ 3
18. ಕನ್ನಡಕ್ಕೆ ಕೊಡುಗೆಯಾಗಿ ಬಂದ ನವೋದಯದ ಕಾವ್ಯ ಸೃಷ್ಟಿಕರ್ತ 4
21. ಮುನಿದರೆ ಇವಳು ಮಾರಿಯಾಗುತ್ತಾಳೆ 2
22. ಇದ್ದದ್ದನ್ನು ಇದ್ದ ಹಾಗೆ ಅಚ್ಚೊತ್ತಿರುವ ಪ್ರತಿ 3
23. ರಭಸದ ಜೋರು 3
25. ಕವನದ ರೀತಿ ಕತೆ ಹೇಳುವ ಕ್ರಮ 3
26. ಬಿತ್ತನೆಗೆ ಚೆಲ್ಲುವ ಧಾನ್ಯ 2
27. ಉಪ್ಪಿಟ್ಟಿಗೆ ಬಳಸುವ ಮೂಲ ಪದಾರ್ಥ ತಲೆಕೆಳಗು 2

ಎಡದಿಂದ ಬಲಕ್ಕೆ

1. ನಿಜದಿಂದ ಹೊಮ್ಮಿದ ಬೆಳಕು 5
3. ಭಾರತದ ನಮ್ಮ ಭಾಗದಲ್ಲಿನ ವಾರಣಾಸಿ 5
5. ಆಗಮದ ಜೊತೆಗೂಡುವ ಆಡಳಿತ ವ್ಯವಸ್ಥೆ 3
7. ಎಳ್ಳು-ಹಲ್ಲಿನ ಜೋಡಿಯಂತೆ ರಾಮಾಯಣದ ಅವಳಿ ಸೋದರರು 4
9. ಬೃಂದಾವನದ ಪ್ರೇಮಕ್ಕೆ ಹೆಸರಾದ ಪ್ರೇಯಸಿ ಪ್ರಿಯತಮ 4
10. ಗರಿಕೆಯಷ್ಟು ಅಲ್ಪವಾದದ್ದು 5
12. ಶೂನ್ಯವನ್ನು ಅಡಗಿಸಿಟ್ಟುಕೊಂಡಿರುವ ಮೊಟ್ಟೆ ಹಿಂದುಮುಂದು 2
14. ಸೂಕ್ಷ್ಮ ಅಕ್ಷಿಯ ಖಗ 2
15. ನಮ್ಮ ರಾಜ್ಯ ನಮ್ಮ ಕರುನಾಡು 4
17. ಕಲ್ಪನೆಯ ಸಾಲುಗಟ್ಟುವ ನಿಸ್ಸೀಮೆ ಇವಳು 4
19. ಬದುಕು ನಡೆಸಲು ಬೇಕಾಗುವ ಝಣಝಣ ಕಾಂಚಾಣ 2
20. ಒಂದಲ್ಲ ಹಲವಲ್ಲ, ಕೆಲಸದಲ್ಲಿ ಅರ್ಧ 2
21. ಸ್ವರ್ಗ ಮತ್ತು ಅದಕ್ಕೆ ವ್ಯತಿರಿಕ್ತ ಸ್ಥಿತಿಯನ್ನು ಜೋಡಿಸಿ 5
23. ರಂಗನಾಥನಿಗೆ ಮೀಸಲಾದ ಶ್ವೇತವರ್ಣದ ಬೆಟ್ಟ 4
24. ಮುಂದೆ ವಿಧಿಯಾಗಬಹುದಾದ ನಿರ್ಣಯ 4
26. ನೀರು ಹರಿಯಲು ಮಾಡುವ ವ್ಯವಸ್ಥೆ 3
28. ಯಾವುದೇ ಅಡಚಣೆಯಿಲ್ಲದೆ ಸಾಗುವ ಬದುಕು 5
29. ನೆತ್ತರ ಕೆಂಪಿನ ಗಂಧ 5

ಪದಬಂಧ ಉತ್ತರ -2752

ಮೇಲಿಂದ ಕೆಳಕ್ಕೆ

1. ವದನ 2.ವರದಾ 3.ಮಧುರಾ 4.ವಿಸ್ತಾರ 5.ವಿರಹಿ 6.ಕನ್ನಡ 9.ಮಂಜುಳ 11.ಲವಣ 12.ಕಲಾಮ 13.ತ್ರಿಶಂಕು 14.ಶಿರಸಿ 15.ತಿರುಕ 18.ಕಣಜ 20.ನಿರ್ಮಲ

ಎಡದಿಂದ ಬಲಕ್ಕೆ

1.ವನಮಹೋತ್ಸವ 3.ಮಹಾಮನವಿ 5.ವಿದ್ಯಾದಾಯಕ 7.ಸ್ಥಾವರ 8.ರಾಮಮಂದಿರ 10.ಹಿತ್ತಲಗಿಡ 12.ಕರಾಳರಾತ್ರಿ 14.ಶಿಕ್ಷಣನೀತಿ 16.ಶಂಕರ 17.ಮನಕಲಕು 19.ಸಿನಿಮಾಲೋಕ 21.ಜನಸಂಪನ್ಮೂಲ

ಭಾವ ತೀವ್ರತೆ, ವಸ್ತು ವೈವಿಧ್ಯದ ಕಥಾ ಜಗತ್ತು

ದಾದಾಪೀರ್ ಜೈಮನ್ ಅವರು ತಮ್ಮ ಚೊಚ್ಚಲ ಕಥಾ ಸಂಕಲನ ನೀಲಕುರಿಂಜಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಆ ಕೃತಿಯ ಒಂದು ಒಳನೋಟ ಇಲ್ಲಿದೆ...

ದಾದಾಪೀರ್ ಜೈಮನ್

ಕೇಶವ ಮಳಗಿ

ಒಳನೋಟ

ಕನ್ನಡ ಸಾಹಿತ್ಯದಲ್ಲೀಗ ಮುಕ್ತಛಂದಸ್ಸಿನ ಕಾಲ. ಇದೇ ಭರತವಾಕ್ಯಕ್ಕೆ ಇನ್ನೆರಡು ವಿಶೇಷಣಗಳನ್ನು ಸೇರಿಸಬಹುದಾದರೆ ಇದು ಯುವೋತ್ಸಾಹದ ಮತ್ತು ಗದ್ಯದ ಸೊಬಗಿಗೆ ಮಾರುಹೋದ ಯುಗಧರ್ಮ. ಈ ತಾರುಣ್ಯದ ಕಸುವು, ಕಥೆ, ಕಾದಂಬರಿ ಮತ್ತು ಅನುವಾದ ಕ್ಷೇತ್ರಗಳಲ್ಲಿ ಎದ್ದು ಕಾಣುತ್ತಿದೆ. ಕಳೆದ ದಶಕಗಳ ಸಾಹಿತ್ಯಕ್ಕೂ, ವರ್ತಮಾನದ ಸಾಹಿತ್ಯಕ್ಕೂ ಇರುವ ಬಹುಮುಖ್ಯ ವ್ಯತ್ಯಾಸವೆಂದರೆ ಈಗಿನ ತಲೆಮಾರು ಬೌದ್ಧಿಕತೆ ಹೇರುವ ಸಿದ್ಧಾಂತಗಳ ಕೃತಕ ಭಾರದಿಂದ, ನಿರೀಕ್ಷಿತ ತಾರ್ಕಿಕ ಅಂತ್ಯಗಳಿಂದ ದೂರ ಸರಿದು ಹೆಚ್ಚು ವಸ್ತುನಿಷ್ಠತೆಗೆ, ಅಭಿವ್ಯಕ್ತಿಯ ಪ್ರಾಮಾಣಿಕತೆಗೆ ಒತ್ತು ನೀಡುತ್ತಿರುವುದು.

ಹಾಗೆಂದು, ಈ ಬರಹಗಾರರಿಗೆ ವಿಶಾಲನೆಲೆಯಲ್ಲಿ ರಾಜಕೀಯ ನಂಬಿಕೆ-ಬದ್ಧತೆ, ಬದಲಾವಣೆಯ ಕಾತರ-ಕನಸು ಭವಿಷ್ಯದ ಕುರಿತು ಭರವಸೆ, ತರತಮಗಳಿಂದ ಮುಕ್ತವಾದ ಸಮಾಜದ ಆಶೋತ್ತರಗಳು ಇಲ್ಲವೆಂದಲ್ಲ. ಆದರೆ, ಅವನ್ನು ಸಾಹಿತ್ಯದಲ್ಲಿ ಪ್ರತಿಬಿಂಬಿಸುವಾಗ ದಶಕಗಳ ಹಿಂದೆ ಕಾಣುತ್ತಿದ್ದ ಆವೇಶ, ಉದ್ವೇಗ ಮತ್ತು ಆಳದ ಗಹನ ಸಮಸ್ಯೆಗಳಿಗೆ ತಾಕ್ಷಣಿಕ ನಿರ್ಣಯ ಕೈಗೊಳ್ಳುವ ಆತುರತೆ ಮರೆಯಾಗಿ ಹೆಚ್ಚು ಸಹಜವೂ, ಸಾವಯವವೂ ಆದ ತೋಡಿಕೊಳ್ಳುವ ವಿಧಾನವನ್ನು ಹುಡುಕುತ್ತಿರುವಂತೆ ಕಾಣುತ್ತಿದೆ.

ಈ ಬಗೆಯ ಹೊಸ ಗದ್ಯ ಸಾಹಿತ್ಯವನ್ನು ಸೃಷ್ಟಿಸುತ್ತಿರುವವರಲ್ಲಿ ದಾದಾಪೀರ್ ಜೈಮನ್ ಒಬ್ಬರು. ಅವರದು ಮೃದು ಮತ್ತು ನವಿರು ಧೋರಣೆ. ಆ ಮೂಲಕವೇ ತಮ್ಮ ಕಥೆ, ಕವಿತೆ ಹಾಗೂ ಅನುವಾದಗಳಲ್ಲಿ ಜೈಮನ್ ಸ್ವಂತಿಕೆಯನ್ನು ಕಂಡುಕೊಳ್ಳಲು ಹವಣಿಸುತ್ತಿದ್ದಾರೆ. ತಮ್ಮ ಕಥೆಗಾಗಿ ಅವರು ಆಯ್ದುಕೊಳ್ಳುವ ವಸ್ತು, ಒಟ್ಟಾರೆ ಕಟ್ಟೋಣದಲ್ಲಿ ಸಾಧಿಸುತ್ತಿರುವ ಪರಿಣತಿ, ಬದುಕಿನ ಕುರಿತು ರೂಢಿಸಿಕೊಳ್ಳುತ್ತಿರುವ ಹದವಾದ ದೃಷ್ಟಿಕೋನ ಮತ್ತು ಆಯಾ ಕಥೆಗಳಲ್ಲಿ ಸಾಧಿಸುತ್ತಿರುವ ಕೊಂಚ ಮಾತ್ರದ ಪಕ್ವತೆಗಳು ಇಂತಹ ಮಾತುಗಳನ್ನು ಬರೆಯಲು ಪ್ರೇರೇಪಿಸುತ್ತಿವೆ.

'ನೀಲ ಕುರಿಂಜಿ' ಜೈಮನ್‌ರ ಮೊದಲ ಕಥಾ ಸಂಕಲನ. ಕೆಲವು ಕಥೆಗಳು ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿವೆ ಎಂಬ ವಿಶೇಷಣವೂ ಈ ಸಂಕಲನಕ್ಕಿದೆ. ಈ ಸಂಕಲನವು ತನ್ನ ವಸ್ತು-ವಿಷಯ ವೈವಿಧ್ಯ, ಸಂಯಮಪೂರ್ಣ ನಿರೂಪಣೆ, ತಾರ್ಕಿಕವಾಗಿಯಲ್ಲದೆ ಆ ಕ್ಷಣಕ್ಕಷ್ಟೇ ಮುಗಿದು ಓದುಗನಲ್ಲಿ ಬೆಳೆಯಬಹುದಾದ ಅಂತ್ಯಗಳು ತಟ್ಟನೆ ಗಮನ ಸೆಳೆಯುತ್ತವೆ. ತಮ್ಮ ಸಮುದಾಯದ ಬದುಕಿನಾಚೆಗೂ ಬದುಕಿದೆ ಮತ್ತು ಅಂತಹ ಅನುಭವಗಳಿಗೆ ತಾನು ನಿರಂತರವಾಗಿ ತೆರೆದುಕೊಳ್ಳುತ್ತಿದ್ದೇನೆ ಎಂಬ ಎಚ್ಚರವು ಕಥಾವಸ್ತು ವೈವಿಧ್ಯವನ್ನು ನಿರ್ಧರಿಸಿವೆ. ಪಾತ್ರಗಳನ್ನು ಜತನದಿಂದ ಕಟ್ಟುವಾಗ ಪೂರ್ವಗ್ರಹಗಳಿಂದ ಮುಕ್ತವಾಗಿ ಅವನ್ನು ಮನುಷ್ಯ ಗೊಂಬೆಗಳು ಎಂಬಂತೆ ನೋಡುವುದು ಕೂಡ ಗಮನಾರ್ಹ ಅಂಶವೇ.

ಸಂಕಲನದ ಕಥೆಗಳನ್ನು ವಿಶಾಲವಾಗಿ ಎರಡು ನೆಲೆಗಳಲ್ಲಿ ನೋಡಬಹುದು. ಸಣ್ಣಪುಟ್ಟ ಊರುಗಳಲ್ಲಿನ ಬದುಕಿನ ಸಂಕಟಗಳನ್ನು ದಿಟ್ಟತನದಿಂದ ಎದುರಿಸುತ್ತ ಓದುಗರ ಮನಸ್ಸನ್ನು ತೇವಗೊಳಿಸಬಲ್ಲ ಪಾತ್ರಗಳಿರುವ ಕಥೆಗಳದ್ದು ಒಂದು ಬಗೆ. ನಗರದ ಸಂಕೀರ್ಣ ಬದುಕಿನ ಸಂಕೀರ್ಣ ಅನುಭವಗಳಲ್ಲಿ ನೋಯುತ್ತ-ಬೇಯುತ್ತ ಓದುಗರನ್ನು ಕಾಡಬಲ್ಲ ಕಥೆಗಳದ್ದು ಇನ್ನೊಂದು ಬಗೆ. ಇಂತಹ ವರ್ಗೀಕರಣ ಕೂಡ ಓದಿನ ಅನುಕೂಲಕ್ಕಾಗಿ, ಕಥೆಗಳನ್ನು ಇನ್ನಷ್ಟು ಸೂಕ್ಷ್ಮವಾಗಿ ಗಮನಿಸಲೆಂದು ಮಾಡಿಕೊಂಡಿರುವುದಷ್ಟೆ.

ತೇರು, ಟೋಕನ್ ನಂಬರ್, ಆವರಣ, ಕೊನೆ ಮಳೆ, ನೀಲ ಕುರಿಂಜಿ ಕಥೆಗಳನ್ನು ಮೊದಲ ಬಗೆಯ ನಿರೂಪಣೆಗಳಿಗೆ ಸೇರಿಸಿದರೆ; ಎಲ್ಲೋ ಯೆಲ್ಲೋ, ಪೇಟೆ ಸಮುದ್ರದ ದಾರಿ, ಜಾಲಗಾರ, ತೀರದ ಒಲವಿನ ಒಂಟಿ ಹಾಡು ಕಥೆಗಳನ್ನು ಎರಡನೆಯ ಮಾದರಿಗೆ ಸೇರಿಸಬಹುದು. ಮೊದಲ ಬಗೆಯ ಕಥೆಗಳಲ್ಲಿ ಪ್ರಕಟಗೊಳ್ಳುವ ಅನುಭವ, ಆರ್ದ್ರತೆ, ಬದುಕಿನ ಸಂಕೀರ್ಣತೆಗಳ ಸ್ವರೂಪ ಒಂದು ಬಗೆಯದ್ದಾದರೆ, ಎರಡನೆ ಬಗೆಯ ಕಥೆಗಳಲ್ಲಿ ಕಾಣಸಿಕ್ಕುವ ಬದುಕು, ತಲ್ಲಣ, ಆಘಾತಗಳ ಸ್ವರೂಪ ಇನ್ನೊಂದು ರೀತಿಯದು.

ತೇರು, ಟೋಕನ್ ನಂಬರ್, ನೀಲ ಕುರಿಂಜಿ, ಕೊನೆಯ ಮಳೆ ರೀತಿಯ ಕಥೆಗಳು ಮುನ್ನೆಲೆಗೆ ತರುತ್ತಿರುವುದು ಬಡ ಕುಟುಂಬಗಳ ಅಸ್ತಿತ್ವದ ಹೋರಾಟ, ಅವರ ಕ್ಷಣಿಕ ಸುಖ, ಸೂಕ್ಷ್ಮವಾಗಿ ಬೆಸೆದಿರುವ ಸಂಬಂಧದ ಎಳೆ, ಅಂತಃಕರಣ ಮತ್ತು ಬಿಟ್ಟು ಕೊಡದ ಘನತೆಗಳು ಒಳಗೇ ಪ್ರವಹಿಸುವ ತಣ್ಣಗಿನ ನೀರಿನ ಅನುಭವ ನೀಡುವಂಥವು. ಓದುಗನನ್ನು ಕ್ಷಣಕಾಲ ಗಂಟಲು ಒತ್ತಿ ಬರುವಂತೆ ಮಾಡುಬಲ್ಲ ಭಾವುಕತೆಯನ್ನು ಹೊಂದಿರುವಂಥವು.

ಎಲ್ಲೋ ಯೆಲ್ಲೋ, ಆವರಣದಂತಹ ಕಥೆಗಳು ಸಂಬಂಧಗಳ ಜಟಿಲತೆ, ಬದುಕು ಮನುಷ್ಯನಿಗೆ ನಿಜವಾದ ಆಯ್ಕೆಗಳನ್ನು ನೀಡುತ್ತದೆಯೇ, ಬದುಕು ನೀಡುವುದನ್ನು ಸ್ವೀಕರಿಸುವುದೇ ಮನುಷ್ಯ ಆಯ್ಕೆ ಎಂದು ಪರಿಗಣಿಸುತ್ತಾನೆಯೇ? ಆಯಾ ಕ್ಷಣದಲ್ಲಿ ಪಡೆಯುವ ತಾತ್ಕಾಲಿಕ ಬಿಡುಗಡೆಯೇ ಬದುಕನ್ನು ನಡೆಸುವ ಶಕ್ತಿಯೇ? ಎಂಬಂಥ ಪ್ರಶ್ನೆಗಳನ್ನು ಎತ್ತುತ್ತವೆ.



ಪು: 102 ₹120

ನೀಲಕುರಿಂಜಿ
ಲೇ: ದಾದಾಪೀರ್ ಜೈಮನ್
ಪ್ರ: ವೈಷ್ಣವಿ ಪ್ರಕಾಶನ
ಸಂ: 9620170027

ಪೇಟೆ ಸಮುದ್ರದ ದಾರಿ, ಜಾಲಗಾರ ಕಥೆಗಳು ನಗರ ಬದುಕಿನ ಸಂಕೀರ್ಣತೆ, ಭ್ರಮೆ ಮತ್ತು ವಾಸ್ತವಗಳೇನಾಗಿರಬಹುದು ಎಂದು ಶೋಧಿಸಲು ಯತ್ನಿಸುತ್ತವೆ. ಪೇಟೆ ಸಮುದ್ರದ ದಾರಿ ಕಥೆಯು ಬದುಕಿನ ಅಮೂರ್ತತೆ, ಅಸಂಗತತೆ, ಚೆದುರಿ ಚೆಲ್ಲಾಪಿಲ್ಲಿಯಾದ ತುಣುಕುಗಳನ್ನು ಜೋಡಿಸಿ ಕಥೆ ಅಥವಾ ಅರ್ಥಪೂರ್ಣ ಬದುಕನ್ನಾಗಿಸಲು ಪ್ರಯತ್ನಿಸಿದರೆ, ತನ್ನ ಮಹತ್ವಾಕಾಂಕ್ಷೆಯಿಂದ ಗಮನ ಸೆಳೆಯುವ ಜಾಲಗಾರ ಕಥೆ ಸಂಬಂಧದ ಅರ್ಥಪೂರ್ಣತೆಯನ್ನು ಅರಿತುಕೊಳ್ಳಲು ಹಾತೊರೆಯುತ್ತದೆ. ಇವೆರಡೂ ಕಥೆಗಳ ಪ್ರಯೋಗಶೀಲತೆ, ಶೈಲಿ ಮತ್ತು ಸಂಕೀರ್ಣ ವಸ್ತು ನಿರ್ವಹಣೆ ಗಮನಾರ್ಹ. ಆಧುನಿಕ ಅರ್ಥನೀತಿಯ ಕೂಸಾದ ಜಾಲ ಮಾರುಕಟ್ಟೆ ಎಂಬ ಪರಿಕಲ್ಪನೆಯನ್ನು ನಿರುದ್ವಿಗ್ನವಾಗಿ ಬಿಚ್ಚಿಡುವ ಮತ್ತು ಮನುಷ್ಯರನ್ನು ಕೊನೆಮೊದಲು ಇಲ್ಲದ ಸರಪಳಿಯ ಸರಕುಗಳಾಗಿ ಪರಿವರ್ತಿಸುವ ಲೋಕದ ಅನುಭವವನ್ನು ಈ ಕಥೆ ಮನನೀಯವಾಗಿ ಮುಖಾಮುಖಿಯಾಗಿಸುತ್ತದೆ. ಕನ್ನಡ ಕಥನಕ್ಕೆ ಸೇರಿಕೊಳ್ಳುತ್ತಿರುವ ಹೊಸ ವಸ್ತುಗಳಲ್ಲಿ ಇದು ಕೂಡ ಒಂದು. ಕಥಾ ವಿವರಗಳ ನಿಖರತೆ ಕಥೆಯ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗಿವೆ.

ಕೆಲವು ಕಥೆಗಳನ್ನು ಆವರಿಸಿರುವ ಕಾತರ, ಅನಾಥಪ್ರಜ್ಞೆ, ದುಃಖ, ಅಸಹಾಯಕತೆ, ವಿಷಾದ ಮತ್ತು ದುರಂತಗಳು ಮನ ಕಲಕುವಂಥವು. ತಾವು ಜನ್ಮದತ್ತವಾಗಿ ಪಡೆದ ವಿಶಿಷ್ಟ ದೇಹ ಸಂವೇದನೆಯಿಂದಾಗಿ ಪಾಪಪ್ರಜ್ಞೆಯಿಂದ ನರಳುವ, ಸಾಮಾಜಿಕ ತಿರಸ್ಕಾರಕ್ಕೆ ಒಳಗಾಗುವ ಮನುಷ್ಯಲೋಕದ ಭಯಾನಕ ಹೋರಾಟವನ್ನು ನಿರೂಪಿಸುವಂಥವು. ಇತ್ತೀಚಿನ ದಿನಮಾನದಲ್ಲಿ ದೇಹವಿಶಿಷ್ಟ ಸಂವೇದನೆಯ ಕಥೆಗಳು ಕನ್ನಡ ಸಾಹಿತ್ಯದಲ್ಲಿ ಮೊದಲಿಗಿಂತ ಹೆಚ್ಚು ಸ್ಫುಟವಾಗಿ ಕಾಣಿಸಿಕೊಳ್ಳುತ್ತಿವೆ. ಇದಕ್ಕೆ ಜಾಗತಿಕ ಮತ್ತು ದೇಶಿಯ ನೆಲೆಯಲ್ಲಿ ಬದಲಾಗುತ್ತಿರುವ ಮನುಷ್ಯ ನಂಬಿಕೆ-ನಡವಳಿಕೆ, ಕಾನೂನು-ನ್ಯಾಯಾಲಯದ ತೀರ್ಪು ಪ್ರಕ್ರಿಯೆ ಇತ್ಯಾದಿಗಳು ಕಾರಣವಾಗಿವೆ. ಅದೇನೆ ಇರಲಿ, ಆ ಮೂಲಕ ವಿಶಿಷ್ಟ ದೈಹಿಕ ಕಾಮ ಸಂವೇದನೆಯಂತಹ ವಿಷಯಗಳು ಸಾಹಿತ್ಯವನ್ನು ಪ್ರವೇಶಿಸುತ್ತಿವೆ.

ಜೈಮನ್‌ರಿಗೆ ಇಲ್ಲಿನ ಕೆಲವು ಕಥೆಗಳಲ್ಲಿ ಇನ್ನೂ ಕಲಾತ್ಮಕ ಪರಿಣತಿ, ಪಕ್ವತೆ ಸಾಧಿಸುವ ಅವಕಾಶಗಳಿದ್ದರೂ ಹಲವೊಮ್ಮೆ ಅವಸರದ ಬೆನ್ನು ಸವಾರಿ ಮಾಡಿರುವುದು ಗೋಚರಿಸುತ್ತದೆ. ಇದು, ಈ ಕಾಲದ ಲೇಖಕರು ಎದುರಿಸುತ್ತಿರುವ ಸಂಕೀರ್ಣ ಬಿಕ್ಕಟ್ಟಾಗಿದೆ. ಹೊರಗಿನ ಒತ್ತಡ, ಜನಪ್ರಿಯ ಸಂಸ್ಕೃತಿಯ ಸಿದ್ಧಮಾದರಿ ಹುಟ್ಟು ಹಾಕುತ್ತಿರುವ ಬಿಗುಪಿನ ಪರಿಸರ ತರುಣ ಬರಹಗಾರರನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುತ್ತಿರುವಂತೆ ಕಾಣುತ್ತದೆ. ಇಲ್ಲಿ ಬರೆದಿರುವ ಮಾತುಗಳ ಹೊರತಾಗಿಯೂ ಜೈಮನ್ ಅವರ 'ನೀಲ ಕುರಿಂಜಿ' ಸಂಕಲನದ ಕಥೆಗಳು ತಮ್ಮ ವ್ಯಕ್ತಿವಿಶಿಷ್ಟ ಸಂವೇದನೆಯನ್ನು, ತಮ್ಮ ಸಮುದಾಯದ ಸುಖದುಃಖಗಳನ್ನು ನಿರುದ್ವಿಗ್ನವಾಗಿ, ಆದಷ್ಟು ಪಕ್ವತೆಯಿಂದ ಕಥನಕ್ಕೆ ಒಗ್ಗಿಸುತ್ತಿರುವ ಅಂಶವೇ ಅತ್ಯಂತ ಮಹತ್ವದ್ದಾಗಿದೆ. ಈ ಅಂಶವೇ ಅವರನ್ನು ಅಪಾರವಾದ ಭರವಸೆಯ ಲೇಖಕರನ್ನಾಗಿಸುತ್ತಿದೆ.

ಮೊದಲ ಓದು

ಉಪಕರಣಗಳ ವಿಶಿಷ್ಟ 'ವಿಶ್ವ'ದಲ್ಲೊಂದು ಸುತ್ತು

ಪು: 914 ₹270

ಉಪಕರಣ ವಿಶ್ವಕೋಶ
ಲೇ: ಡಾ.ಎನ್.ಎನ್.ಚಿಕ್ಕಮಾದು
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಸಂ: 080-22211730

ಜಾನಪದ ಜಗತ್ತಿನ ವಿಸ್ತಾರ ನಿಲುಕದ್ದು. ಆ ಜಗತ್ತಿನಲ್ಲಿರುವ ಶಬ್ದಭಂಡಾರವೂ ಅಷ್ಟೇ ವಿಸ್ತಾರ. ಈ ಜಗತ್ತಿನೊಳಗೆ ಇಳಿದು ಮೂವತ್ತು ವರ್ಷ ಕ್ಷೇತ್ರಕಾರ್ಯ ಮಾಡುತ್ತಾ ಲೇಖಕರು ಓದುಗರ ಎದುರಿಗಿಟ್ಟಿರುವ ಕೃತಿ 'ಉಪಕರಣ ವಿಶ್ವಕೋಶ'.

ಇದು ಜನಪದ ಉಪಕರಣಗಳ ಜಗತ್ತು. ಇದು ರತ್ನಕೋಶವಷ್ಟೇ ಅಲ್ಲ. ಇದರೊಳಗೆ ಇಂದು ಅಪರೂಪವಾಗಿ ಬಳಸುವ ಅಥವಾ ನೆನಪಿಸಿಕೊಳ್ಳುವ ಉಪಕರಣಗಳ ವಿವರಣೆ ಇದೆ. ವಿವರಣೆಯೊಂದಿಗೆ ಅದರ ಹಿನ್ನೆಲೆ, ಎಲ್ಲೆಲ್ಲಿ ಈ ಉಪಕರಣಗಳನ್ನು ಉಲ್ಲೇಖಿಸಲಾಗಿದೆ? ಇವುಗಳ ಬಳಕೆ ಹೇಗೆ? ಯಾರು ಬಳಸುತ್ತಾರೆ ಎನ್ನುವ ಮಾಹಿತಿಯನ್ನೂ ಇದು ಒಳಗೊಂಡಿದೆ. ಉದಾಹರಣೆಗೆ 'ಅಂಕುಶ' ಎಂಬ ಆಯುಧದ ವಿವರಣೆಯಲ್ಲಿ ಮಧುಗಿರಿ ತಾಲ್ಲೂಕಿನ ಶ್ರವಣಗುಡಿಯಲ್ಲಿರುವ ಒಂದು ವೀರಗಲ್ಲನ್ನು ಲೇಖಕರು ಇಲ್ಲಿ ಉಲ್ಲೇಖಿಸಿ ವಿವರಿಸುತ್ತಾರೆ. ಅದರಲ್ಲಿ ಕೆತ್ತಲಾಗಿರುವ ಅಂಕುಶವನ್ನು ಸೂಕ್ಷ್ಮವಾಗಿ ಗಮನಿಸಿರುವುದು ಲೇಖಕರ ಕ್ಷೇತ್ರಕಾರ್ಯದ ವ್ಯಾಪ್ತಿಗೆ ಸಾಕ್ಷಿ.

ಉಪಕರಣಗಳು ಗಾದೆ ಮಾತು, ಕೀರ್ತನೆ, ಕಿನ್ನರಿ, ಪೌರಾಣಿಕ ಕಥೆ, ಘಟನೆಗಳಲ್ಲಿ ಉಲ್ಲೇಖಿಸಲ್ಪಟ್ಟ ವಿವರಣೆಯನ್ನೂ ಇಲ್ಲಿ ಲೇಖಕರು ದಾಖಲಿಸಿದ್ದಾರೆ. 895 ಉಪಕರಣಗಳನ್ನು ಅಕ್ಷರಮಾಲೆಗನುಗುಣವಾಗಿ ನೀಡಲಾಗಿದೆ. ಉಪಕರಣಗಳ ಛಾಯಾಚಿತ್ರ ಅಥವಾ ರೇಖಾಚಿತ್ರಗಳಿದ್ದರೆ ಓದುಗನಿಗೆ ತಕ್ಷಣದಲ್ಲೇ ಅವುಗಳನ್ನು ಗುರುತಿಸಲು ಸಹಕಾರಿಯಾಗುತ್ತಿತ್ತು. ಇವು ಇಲ್ಲದೇ ಇರುವುದಕ್ಕೆ ಪುಟಮಿತಿ ಮತ್ತು ವೆಚ್ಚಮಿತಿಯ ಕಾರಣವನ್ನು ಲೇಖಕರು ನೀಡಿದ್ದಾರೆ.

ಮಲೆನಾಡಿನ ಗತ ಜೀವನದ ಬಿಂಬ



ಪು: 238 ₹270

ಗರ್ಜಿ
ಲೇ: ಶಿವಾನಂದ ಕರ್ಕಿ
ಪ್ರ: ಧ್ವನಿ ಪ್ರಕಾಶನ ತೀರ್ಥಹಳ್ಳಿ
ಸಂ: 9945306617

ಮೈಸೂರು ಪೇಪರ್ ಮಿಲ್ಸ್ (ಎಂಪಿಎಂ) ವ್ಯಾಪ್ತಿಯ ರೇಂಜರ್‌ನ ಬುಲೆಟ್ ಸದ್ದು ನಿಧಾನಗತಿಯಲ್ಲಿ ವ್ಯಾಪಿಸಿ ತೀರ್ಥಹಳ್ಳಿ ಸುತ್ತಮುತ್ತಲಿನ ಹಸಿರು ಪರಿಸರದ ಮೌನವನ್ನು ಆಪೋಷನ ತೆಗೆದುಕೊಳ್ಳುತ್ತಿರುವ ರೂಪಕವನ್ನು ಕಾದಂಬರಿಯ ಮೊದಲ ದೃಶ್ಯದಲ್ಲೇ ಕಟ್ಟಿಕೊಟ್ಟಿದ್ದಾರೆ ಲೇಖಕರು. ಹಾಗಾಗಿಯೇ ಓದುವಿಕೆಯ ವೇಗವೂ ಸರಾಗವಾಗಿ ಏರುತ್ತದೆ. ಪುಟ್ಟ ಕೃಷಿಭೂಮಿ ರೂಪಿಸಲು ಅಡೆತಡೆಯಾಗುವ ಹತ್ತೆಂಟು ಕಾನೂನುಗಳು ಕೈಗಾರಿಕೆ, ಪೇಪರ್ ಮಿಲ್ಲು, ಅಕೇಶಿಯಾ ನಾಟಿ ಇತ್ಯಾದಿ 'ಅಧಿಕೃತ' ಕಾರ್ಯಗಳ ವಿಚಾರದಲ್ಲಿ ಜಾಣಮೌನ ವಹಿಸುತ್ತವೆ. ಅರಣ್ಯ ನಾಶವನ್ನು ತಾವೇ ಮುಂದೆ ನಿಂತು ಮಾಡಿಸುತ್ತವೆ ಎಂಬುದನ್ನು ವಿಷಾದದಿಂದಲೇ ಇಲ್ಲಿನ ಪಾತ್ರಗಳು ಚರ್ಚಿಸುತ್ತವೆ.

ಕೃತಿಯಲ್ಲಿ ಮಲೆನಾಡಿನ ಹಸಿರು, ತರಕಾರಿಗಳು, ಕೃಷಿ ಪರಿಕರಗಳು, ಜಾನುವಾರುಗಳು ಎಲ್ಲವೂ ಮಾತನಾಡಿವೆ. ಹಲವೆಡೆ ಸ್ವಗತದ ರೂಪದಲ್ಲಿ, ಸುಮ್ಮನೆ ಇರುವಿಕೆಯ ರೂಪದಲ್ಲಿ ಧ್ವನಿ ಎತ್ತಿವೆ. ಶಿವಕುಮಾರ, ತನಿಯ ಪಾತ್ರಗಳು ಬಹುಶಃ ಲೇಖಕರು ತಾವು ಹತ್ತಿರದಲ್ಲಿ ಕಂಡು, ಅನುಭವಿಸಿದಂತಿವೆ. ಹಲವು ಸಂಕಷ್ಟಗಳಿಂದ ಮೇಲೆದ್ದು ಬಂದು ಶಿವಾನಂದರು ಈ ಕಾದಂಬರಿಯ ಮೂಲಕ ಮತ್ತೆ ಪುಟಿದೆದ್ದಿದ್ದಾರೆ. ಅದೇ ಕಸುವು ತುಂಬಿಕೊಂಡಿದ್ದಾರೆ.

ಪರಿಸರಾಸಕ್ತರು, ಮಲೆನಾಡಿನ ಜನಜೀವನದ ಹಳೆಯ ಕ್ಯಾನ್ವಾಸ್ ನೆನಪಿಸಲು ಬಯಸುವವರು ಓದಬಹುದಾದ ಕೃತಿ.

ಕಡಲು ನೋಡಿ ಕಥೆಯಾದವಳು

ಅಭಿಲಾಷ್ ಪಿ.ಎಸ್.

ಅವಲೋಕನ

ಕಥೆಗಾರ್ತಿ ಫಾತಿಮಾ ರಲಿಯಾ ಅವರ ಪಾಲಿಗೆ ಬರವಣಿಗೆ ಅಂದರೆ ಅದು ನವಿರು ಭಾವಗಳ ಉದ್ಯಾನ. ಇನ್ನೊಂದು ರೀತಿಯಲ್ಲಿ ಅದು ಅವರಿಗೆ ಸರ್ವಜನಾಂಗದ ಶಾಂತಿಯ ತೋಟವೂ ಹೌದು. ಈಗಾಗಲೇ ಕಥೆ ಮತ್ತು ಕಾವ್ಯದ ಮೂಲಕ ಹೆಜ್ಜೆ ಗುರುತು ಮೂಡಿಸಿರುವ ಫಾತಿಮಾ ಇದೀಗ ಪ್ರಬಂಧಗಳ ಸಂಕಲನ ಹಿಡಿದು ಓದುಗರ ಮುಂದೆ ಬಂದಿದ್ದಾರೆ. 'ಕಡಲು ನೋಡಲು ಹೋದವಳು' ಅವರ ಚೊಚ್ಚಲ ಕೃತಿ. ಆದರೆ, ಅದರೊಳಗಿನ ಪ್ರಬಂಧಗಳ ಮೇಲೆ ಕಣ್ಣಾಡಿಸಿದರೆ, 'ಇದು ಚೊಚ್ಚಲ ಕೃತಿಯೆಂದು ಅವರು ಸುಳ್ಳು ಹೇಳುತ್ತಿಲ್ಲ ತಾನೆ' ಎಂಬ ಅನುಮಾನ ಬರುವಷ್ಟು ಅವರ ಬರಹ ಪ್ರಬುದ್ಧವಾಗಿದೆ.

ಇಲ್ಲಿನ ಬರಹಗಳು ಲಘು ಓಘಕ್ಕೆ ಒಗ್ಗಿಕೊಂಡು, ಗಂಭೀರ ಓದನ್ನೂ ಬಯಸುತ್ತವೆ. ಹೀಗಾಗಿ ಕೃತಿಯ ಶೀರ್ಷಿಕೆಯಡಿ ಇರುವ 'ಲಲಿತ ಪ್ರಬಂಧಗಳು' ಎನ್ನುವ ಅಡಿಬರಹಕ್ಕೆ ಓದುಗನ ಗಮನ ಮತ್ತೆ ಮತ್ತೆ ಹೋಗುತ್ತದೆ. ಪುಟ ತಿರುವುತ್ತಾ 'ಉನ್ಮತ್ತ ಕುರುಕ್ಷೇತ್ರ..'ದತ್ತ ಇಣುಕಿ ನೋಡಿ ಆಳಕ್ಕಿಳಿದು ಚೆನ್ನಪ್ಪಜ್ಜನ ಕಾಲ್ಕೆಳಗೆ ಕುಳಿತು ಅವನ ಕೊಳಲ ದನಿ ಆಲಿಸಿದರೆ, ಗಹನವಾದ ಚರ್ಚೆ ಅಗತ್ಯವೆನಿಸುತ್ತದೆ.

ಲಘುವಾದ ಕಥೆಯಂತೆ ಆರಂಭವಾಗುವ ಕೃತಿಯ ಪ್ರತೀ ಅಧ್ಯಾಯವೂ ಲೇಖಕಿಯ ಅನುಭವದ ಬುತ್ತಿಯನ್ನು ಬಿಚ್ಚಿಡುತ್ತಾ ಗಂಭೀರವಾಗುತ್ತದೆ. ಲೇಖಕಿಯೇ ಹೇಳಿರುವಂತೆ ಇಲ್ಲಿರುವ ಎಲ್ಲ ಬರಹಗಳ ಹಿಂದೆ ಬದುಕನ್ನು ಆಳವಾಗಿ ತಟ್ಟಿದ, ಹಲವು ಪಾಠ ಕಲಿಸಿದ, ಅಂತರಂಗದ ಕಣ್ಣು ತೆರೆಸಲು ನೆರವಾದ, ಸಹಜ ಸೌಹಾರ್ದವನ್ನು ಯಾವ ಆಡಂಬರವೂ ಇಲ್ಲದೆ ಮೈಗೂಡಿಸಿಕೊಳ್ಳಲು ನೆರವಾದ ಘಟನೆಗಳಿವೆ.

ಸ್ವಾತಂತ್ರ್ಯದ ಅಮೃತಘಳಿಗೆಯಲ್ಲೂ ನಡೆಯುತ್ತಿರುವ ಧರ್ಮ, ಸಿದ್ಧಾಂತ, ವ್ಯಕ್ತಿಯಾಧಾರಿತ ಸಂಘರ್ಷ, ಹೆಚ್ಚುತ್ತಿರುವ ದುರಾಸೆ, ಜಾತಿ, ಅಸ್ಪೃಶ್ಯತೆಯ ಒಟ್ಟಾರೆ ಸಂಗತಕ್ಕೆ ಹಿಡಿದ ಕನ್ನಡಿ ಈ ಕೃತಿ. 'ಉನ್ಮತ್ತ ಕುರುಕ್ಷೇತ್ರವೂ ಬೃಂದಾವನದ ಕೊಳಲೂ...' ಎಂಬ ಶೀರ್ಷಿಕೆಯೇ ಲೇಖಕಿಯ ಬರವಣಿಗೆಯ ಸತ್ವ, ಶಕ್ತಿಯನ್ನು ತೋರುತ್ತದೆ. 'ಗೌರಿ'ಯ ಮುಗ್ಧ ಪ್ರಶ್ನೆಗೆ ಉತ್ತರವೀಯುತ್ತಾ ಲೇಖಕಿ ಬಿಚ್ಚಿಡುವ ವಾಸ್ತವ ಕರಾವಳಿಯಲ್ಲಿ ಕ್ಷಣಕ್ಷಣಕ್ಕೊಮ್ಮೆ ಸ್ಫೋಟಿಸಿ ತಣ್ಣಗಾಗುವ ಧರ್ಮ ಸಂಘರ್ಷದ ಕಿಡಿಗೆ ಸಾಕ್ಷಿ. 'ಕೆಂಪಿ'ಯೂ ಧರ್ಮ ಬದಲಿಸದೇ ಹೇಳುವ ಉಪ್ಪಾಪನ ಕಥೆ ಸಂಘರ್ಷದ ಈ ಹೊತ್ತಿನಲ್ಲಿ ಮದರಂಗಿಯಂತೆ ಶಾಶ್ವತ ಅಚ್ಚಾಗಿ ಉಳಿದರೆ ಹಲವು ಜೀವಗಳು ಉಳಿದಾವು.



ಪು: 104 ₹105

ಕಡಲು ನೋಡಲು ಹೋದವಳು
ಲೇ: ಫಾತಿಮಾ ರಲಿಯಾ
ಪ್ರ: ಅಹರ್ನಿಶಿ ಪ್ರಕಾಶನ
ಸಂ: 9449174662

ಕೃತಿಯ ಶೀರ್ಷಿಕೆಯನ್ನು ಹೊತ್ತ ಅಧ್ಯಾಯದಲ್ಲಿ ಹಲವು ಪ್ರಶ್ನೆಗಳನ್ನು ತನಗೆ ತಾನೇ ಹಾಕಿಕೊಳ್ಳುತ್ತಾ, ಓದುಗರ ಮನಸ್ಸಿನೊಳಗೂ ಹಲವು ಪ್ರಶ್ನೆಗಳನ್ನು ಇಳಿಸುತ್ತಾ ಸಾಗುತ್ತಾರೆ ಫಾತಿಮಾ. ಕರಾವಳಿ ಮತ್ತು ಕಡಲಿನ ವರ್ಣನೆ ಇಲ್ಲಿ ಅದ್ಭುತ. ಕಣ್ಣಿಗೆ ಕಂಡದನ್ನು ನೋಡಿ ಊಹಿಸಿದರೆ, ಯೋಚಿಸಿದರೆ ಆಗುವ ಆಪತ್ತನ್ನು ಬಿಚ್ಚಿಡುತ್ತಾ ಚಹಾ ಕಪ್ ಕೆಳಗಿಡುತ್ತಾರೆ ಲೇಖಕಿ.

ಆಪ್ತವಾದ ಪದಗಳು ಕೂಡಿ ವಾಕ್ಯವಾದಾಗ ಓದಿನ ಓಘವೂ ಹೆಚ್ಚುತ್ತದೆ. ಪುಟ್ಟ ಗೌರಿಯ ಕಣ್ಣಲ್ಲಿನ ಹಬ್ಬದ ಸಂಭ್ರಮವನ್ನು ವಿವರಿಸುತ್ತಾ, 'ಅಲ್ಲೆಲ್ಲೋ ಶರಶಯ್ಯೆಯ ಮೇಲಿನ ಭೀಷ್ಮ ಪಿತಾಮಹ ಇವಳ ಸಂಭ್ರಮವನ್ನು ಕಣ್ಣು ತುಂಬಿಕೊಳ್ಳುವುದಕ್ಕಾಗಿಯೇ ಇಷ್ಟು ಹೊತ್ತು ಉಸಿರಿಡಿದು ಮಲಗಿದ್ದನೇನೋ ಅನ್ನುವ ಭಾವ' ಎಂದು ದಾಖಲಿಸುವ ಲೇಖಕಿ, ಖುದಾನಿಗೆ ಕೃತಜ್ಞತೆ ಸಲ್ಲಿಸುವಾಗ ಆಸ್ಪತ್ರೆ ಎಂಬ ಯೂನಿವರ್ಸಿಟಿಗಳು ಕಲಿಸಿದ ಬದುಕಿನ ಪಾಠವನ್ನು ಗಂಟಲುಕಟ್ಟಿ ಬರೆದಿದ್ದಾರೆ. ನೂರು ಮುಡಿ ಭತ್ತದ ಆಸ್ತಿಯಿದ್ದ ಚಂದ್ರಕಲಾ ಶೆಟ್ಟಿಯ ದುಡ್ಡಿನ ಮದ ಆಸ್ಪತ್ರೆಯಲ್ಲಿ ಕರಗಿದ ಕಥೆ ಸಾವಿನ ಖಾಲಿತನ ತೆರೆದಿಟ್ಟಿದೆ. ಗಂಭೀರವಾಗಿ ಯೋಚಿಸಬೇಕಾದ, ಚಿಂತನೆಗೆ ಹಚ್ಚುವ ವಿಚಾರಗಳೇ ಇಲ್ಲಿನ ಕೃತಿಗಳಲ್ಲಿ ತುಂಬಿವೆ.

ಕಥೆ
ಕೆ.ವಿ.ರಾಜಲಕ್ಷ್ಮಿ ಅವರ
ಸಂಗಮ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸದಾಶಿವ್ ಸೊರಟೂರು ಅವರ
ಊರಿಗೆ ಹೆಣ ಹೋಗುವ ಮುನ್ನ...
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಬಾಂಗ್ಲಾದ ಹಕ್ಕಿಗಳು ಇಲ್ಲಿ ಹಾರುವುದಿಲ್ಲ

ಸುಶೀಲಾ ಡೋಣೂರ

ಪು: 80 ₹90

ಬಾಂಗ್ಲಾದ ಹಕ್ಕಿಗಳು
ಲೇ: ಅಮರೇಶ ಗಿಣಿವಾರ
ಪ್ರ: ಅರವಿಂದ ಪ್ರಕಾಶನ
ಸಂ: 9901942452

'ಬಾಂಗ್ಲಾದ ಹಕ್ಕಿಗಳು' – ಇದು ಅಮರೇಶ ಗಿಣಿವಾರ ಅವರ ಎಂಟು ಕತೆಗಳ ಪುಟ್ಟ ಕಥಾಸಂಕಲನ. ಹೆಸರೇ ಸೂಚಿಸುವಂತೆ ವಲಸಿಗರ ಭಾವಬುತ್ತಿಯನ್ನು ಬಿಚ್ಚಿಡುವ 'ಬಾಂಗ್ಲಾದ ಹಕ್ಕಿಗಳು' ಕತೆಯ ಮೂಲಕ ಇಲ್ಲಿನ ಕಥಾಲೋಕ ಬಿಚ್ಚಿಕೊಳ್ಳುತ್ತದೆ. ಅಷ್ಟೆ ಅಲ್ಲ, ಉಳಿದೆಲ್ಲಾ ಕತೆಗಳನ್ನು ಓದಿ ಮುಗಿಸಿದ ಮೇಲೂ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿದುಕೊಳ್ಳುವುದು ಇದೇ ಕತೆ. ಎಲ್ಲಿಂದಲೊ ಬಂದು ಇಲ್ಲಿ ಸೇರಿಕೊಳ್ಳುವ ಈ ವಲಸೆ ಹಕ್ಕಿಗಳು ಹಾರುವುದಿಲ್ಲ. ಇಲ್ಲಿ ಸಿಗುವ ಸಣ್ಣಸಣ್ಣ ನೆಮ್ಮದಿ, ಚಿಕ್ಕಪುಟ್ಟ ಖುಷಿ, ಬೂದಿ ಮುಚ್ಚಿದ ಕೆಂಡದಂತಿರುವ ತಣ್ಣನೆಯ ಕ್ರೌರ್ಯ, ಸದಾ ಉಳ್ಳವರನ್ನೇ ಕಾಯುವ ವ್ಯವಸ್ಥೆ... ಇವೆಲ್ಲವುಗಳೊಂದಿಗೆ ಹೊಂದಿಕೊಂಡು, ತಮ್ಮ ಬಾಳನ್ನೂ, ಮನಸ್ಸನ್ನೂ ಅದಕ್ಕೆ ಒಗ್ಗಿಸುತ್ತ ಬದುಕಿ ಬಿಡುತ್ತವೆ ಎನ್ನುವ ಸಂಗತಿಯನ್ನು ಇಲ್ಲಿನ ಪ್ರತೀ ಕತೆ ಧ್ವನಿಸುತ್ತದೆ.

ಇದು ಅಮರೇಶರ ಎರಡನೇ ಕಥಾಸಂಕಲನ. ಮೊದಲ ಕಥಾಸಂಕಲನದಲ್ಲಿ ಕಾಣಸಿಗುವ ಹುಡುಕಾಟ, ಭಾವತೀವ್ರತೆ, ಆಕ್ರೋಶ ಓದುಗನನ್ನು ಇಲ್ಲಿಯೂ ತಟ್ಟುತ್ತವೆ. ಅನೇಕ ಕತೆಗಳಲ್ಲಿ ಸಮಾಜದ ಬಗ್ಗೆ, ವ್ಯವಸ್ಥೆಯ ಬಗ್ಗೆ ಲೇವಡಿ ಇದೆ. ಔದ್ಯೋಗೀಕರಣದಂತಹ ಬದಲಾವಣೆಗಳು ಬಡವರ, ಹಳ್ಳಿಗರ ಬದುಕನ್ನು ಹೇಗೆಲ್ಲಾ ಬದಲಿಸಬಲ್ಲವು ಎಂಬುದಕ್ಕೆ ಇಲ್ಲಿ ಸಾಕಷ್ಟು ನಿದರ್ಶನಗಳು ಸಿಕ್ಕುತ್ತವೆ. 'ಹಸಿವೆ', 'ಸುರಳಿ', 'ಸಣ್ಣಜಾಗ' ಸೇರಿದಂತೆ ಅನೇಕ ಕತೆಗಳಲ್ಲಿ ಮನುಷ್ಯನ ಸಣ್ಣತನ, ಹಪಹಪಿ, ವಾಂಛೆಗಳು ಹೇಗೆಲ್ಲಾ ಇನ್ನೊಬ್ಬರ ಬದುಕನ್ನು ಬಲಿ ಪಡೆಯುತ್ತವೆ ಎನ್ನುವುದನ್ನು ಹೇಳಲು ಪ್ರಯತ್ನಿಸುತ್ತವೆ. ಕನ್ನಡದ ಮಟ್ಟಿಗೆ ಬಹುತೇಕ ಹೊಸದೇ ಎನ್ನುವಂತಹ ಬದುಕುಗಳು ಈ ಕತೆಗಳಲ್ಲಿ ಅನಾವರಣಗೊಂಡಿವೆ.

ಕಥಾವಸ್ತುವಿನ ಆಯ್ಕೆಯಂತೆಯೇ ಅವರು ಕತೆ ಹೇಳುವ ಶೈಲಿಯೂ ವಿಶಿಷ್ಟ. ಅಮರೇಶರ ಕಥನದ ತಂತ್ರಗಾರಿಕೆಯಲ್ಲಿ ಸೊಗಸಾಗಿದೆಯಾದರೂ ಭಾಷೆಯ ವಿಚಾರಕ್ಕೆ ಬಂದಾಗ ಅಲ್ಲಲ್ಲಿ ನಿಂತು ಹೋಗುವಂತಾಗುತ್ತದೆ.

ಇತ್ತೀಚೆಗೆ ಕತೆಗಳನ್ನು ಹೇಳುವ ಶೈಲಿ, ಭಾಷೆ ಹಾಗೂ ತಂತ್ರಗಳಲ್ಲಿ ಭಾರೀ ಬದಲಾವಣೆ ಆಗುತ್ತಿರುವುದನ್ನು ಗಮನಿಸುತ್ತಿದ್ದೇವೆ. ಹೊಸ ಪೀಳಿಗೆ ಅಜ್ಜ ನೆಟ್ಟ ಆಲದ ಮರವೇ ಅಂತಿಮವಲ್ಲ ಎನ್ನುವ ನಿಲುವಿಗೆ ಬಂದಿದೆ. ಕತೆಗಳೆಂದರೆ ಹೀಗೇ ಇರಬೇಕು ಎನ್ನುವ ಸಿದ್ಧಸೂತ್ರಗಳನ್ನು ಮುರಿದು ಮುಂದಡಿ ಇಡುತ್ತಿದೆ. ಗಿಣಿವಾರ ಕೂಡ ಈ ಸಾಲಿಗೆ ನಿಲ್ಲುವ ಕತೆಗಾರ. ಮಾತ್ರವಲ್ಲ, ಕತೆ ಹೇಳುವ ಹೊಸ ದಾರಿಯಲ್ಲಿ ನಿರ್ಭಿಡೆಯ ಹೆಜ್ಜೆಯನ್ನೂ ಇಡುತ್ತಿರುವ ಬರಹಗಾರ.

ಗೌಣವಾಗುತ್ತಿರುವ ಬುದ್ಧಿಜೀವಿಗಳು

10ನೇ ಪುಟದಿಂದ...

ಪುತ್ತೂರಿನಲ್ಲಿ ಬಾಲವನ ಎಂಬ ಅಸಾಂಪ್ರದಾಯಿಕ ಶಿಕ್ಷಣ ಕೇಂದ್ರ ತೆರೆದರು. ಪರಿಸರಕ್ಕೆ ಹಾನಿಯಾಗುತ್ತದೆ ಎಂದನ್ನಿಸಿದಾಗ ಅದರ ರಕ್ಷಣೆಗೆ ಕಟಿಬದ್ಧರಾದರು. ಕೈಗಾ ಅಣು ವಿದ್ಯುತ್ ಸ್ಥಾವರದ ವಿರುದ್ಧದ ಹೋರಾಟಕ್ಕೆ ನಾಯಕತ್ವ ನೀಡಿದರು. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಪದ್ಮಭೂಷಣ ಪ್ರಶಸ್ತಿಯನ್ನು ಹಿಂದಿರುಗಿಸಿದರು.

ಪ್ರಗತಿಶೀಲ ಸಾಹಿತಿಗಳಾಗಿದ್ದ ನಿರಂಜನ, ಬಸವರಾಜ ಕಟ್ಟೀಮನಿ, ಚದುರಂಗ ಮೊದಲಾದವರು ಸಾಹಿತ್ಯದ ಮಡಿವಂತಿಕೆಯನ್ನೇ ಪ್ರಶ್ನಿಸಿದರು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನವ್ಯ ಸಾಹಿತಿಗಳು ನೆಹರೂ ಯುಗದ ಭ್ರಮೆಗಳನ್ನು ಒಡೆದರು. ಅಡಿಗರಂತೂ 'ನೆಹರೂ ನಿವೃತ್ತರಾಗುವುದಿಲ್ಲ' ಎಂಬ ಕವಿತೆಯನ್ನೇ ಬರೆದರು. ಲಂಕೇಶ್ ಉತ್ಕೃಷ್ಟವಾದ ಕತೆ, ಕಾದಂಬರಿ, ನಾಟಕಗಳನ್ನು ಬರೆಯುತ್ತಲೇ ಪ್ರಭುತ್ವಕ್ಕೆ ಸಿಂಹಸ್ವಪ್ನರಾಗಿದ್ದರು. ಅನಂತಮೂರ್ತಿಯವರು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡುತ್ತಲೇ ಕೊನೆಯುಸಿರೆಳೆದರು.

1975ರಲ್ಲಿ ಆರಂಭವಾದ ದಲಿತ ಬಂಡಾಯ ಸಾಹಿತ್ಯ ಚಳವಳಿಯ ಲೇಖಕರಂತೂ ದಟ್ಟವಾದ ಸಾಮಾಜಿಕ ಪ್ರಜ್ಞೆಯುಳ್ಳವರಾಗಿಯೇ ಬರೆದರು. ಸಿದ್ದಲಿಂಗಯ್ಯ, ದೇವನೂರ ಮಹಾದೇವ, ಕುಂವೀ, ಬರಗೂರು, ಸಾರಾ, ಬೊಳುವಾರು, ಚಂಪಾ ಮೊದಲಾದವರು ಅನೇಕ ಬಗೆಯ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಲೇ ಕನ್ನಡ ನಾಡಿನ ಚೈತನ್ಯವನ್ನು ಹೆಚ್ಚಿಸಿದರು. ಸಿದ್ದಲಿಂಗಯ್ಯನವರ ಕವಿತೆಗಳು ಜನರ ಹೃದಯದ ಹಾಡುಗಳಾದುವು. ಅವುಗಳನ್ನು ಕಾಲೇಜುಗಳಲ್ಲಿ, ಬೀದಿಗಳಲ್ಲಿ ಧೈರ್ಯವಾಗಿ ಹಾಡಲಾಯಿತು. ಗೋಡೆಗಳು ಕೂಡಾ ಆಗ ಮಾತಾಡತೊಡಗಿದುವು. ಕನ್ನಡ ಕಾವ್ಯಕ್ಕೆ ತಮಟೆಯ ದನಿ ಸೇರಿಸುವಲ್ಲಿ ದಲಿತ ಲೇಖಕರು ಯಶಸ್ವಿಯಾದರು. ಇಂಥ ಇತಿಹಾಸವಿರುವ ಕನ್ನಡದ ಬರೆಹಗಾರರು 1990ರ ದಶಕದ ಆನಂತರ ಬಹುಮಟ್ಟಿಗೆ ಮೌನವಾಗುತ್ತಲೇ ಹೋದರು. ಲಾಲ್‌ಕೃಷ್ಣ ಅಡ್ವಾಣಿಯವರು 1990ರಲ್ಲಿ ಆರಂಭಿಸಿದ ರಾಮ ರಥಯಾತ್ರೆಯು ಉಗ್ರ ಹಿಂದುತ್ವವನ್ನು ಮುನ್ನೆಲೆಗೆ ತಂದಿತು. ಇದರಿಂದ ದೇಶದಾದ್ಯಂತ ಕೋಮು ಗಲಭೆಗಳೂ ಹುಟ್ಟಿಕೊಂಡವು. ಇದರ ರಾಜಕೀಯ ಲಾಭ ಪಡೆದು ಅಧಿಕಾರವನ್ನು ಹೆಚ್ಚಿಸಿಕೊಂಡಿದ್ದ ಬಿಜೆಪಿಯು ಮುಂದೆ ಇದೇ ತಂತ್ರವನ್ನು ಅನುಸರಿಸಿತು. ಬಾಬ್ರಿ ಮಸೀದಿ ಧ್ವಂಸಗೊಂಡು 28 ವರ್ಷಗಳ ಬಳಿಕ ವಿಶೇಷ ನ್ಯಾಯಾಲಯವು ಅಡ್ವಾಣಿ, ಮುರಳಿ ಮನೋಹರ ಜೋಷಿ, ಉಮಾ ಭಾರತಿ ಸೇರಿದಂತೆ ಎಲ್ಲಾ 32 ಆರೋಪಿಗಳನ್ನೂ ಖುಲಾಸೆಗೊಳಿಸಿತು. ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇಲ್ಲವೆಂದು ತನ್ನ ತೀರ್ಪಿನಲ್ಲಿ ನ್ಯಾಯಾಲಯ ಹೇಳಿತು. 2002ರಲ್ಲಿ ಗುಜರಾತ್‌ನಲ್ಲಿ ಗೋಧ್ರಾ ಹತ್ಯಾ ಪ್ರಕರಣ ನಡೆಯಿತು. ಗರ್ಭಿಣಿಯಾಗಿದ್ದ ಬಿಲ್ಕಿಸ್‌ಬಾನು ಮೇಲೆ ಹಿಂಸಾಚಾರದ ಸಂದರ್ಭದಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿದ್ದಲ್ಲದೆ, ಅವರ ಮೂರು ವರ್ಷದ ಮಗಳು ಸೇರಿದಂತೆ ಕುಟುಂಬದ ಏಳು ಮಂದಿಯನ್ನು ಕೊಲ್ಲಲಾಯಿತು. ಪ್ರಕರಣದಲ್ಲಿ 11 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತಾದರೂ ಮೊನ್ನೆ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಆರೋಪಿಗಳನ್ನು 'ಸನ್ನಡತೆ' ಆಧಾರದಲ್ಲಿ ಬಿಡುಗಡೆ ಮಾಡಲಾಯಿತು. ಇಂಥ ಕೆಲವು ಘಟನೆಗಳು ಪರೋಕ್ಷವಾಗಿ ಭಾರತೀಯ ಸಮಾಜವನ್ನು ಆಕ್ರಮಣಕಾರಿಯಾಗಿ ಬೆಳೆಸಲು ಅನುವು ಮಾಡಿಕೊಟ್ಟವು. ಜನರೂ ಇದ್ದಕ್ಕಿದ್ದಂತೆ ಯುದ್ಧೋನ್ಮತ್ತತೆಯನ್ನು ಬೆಳೆಸಿಕೊಂಡರು. ಈ ಹಂತದಲ್ಲಿ ಬುದ್ಧಿಜೀವಿಗಳೂ ಲೇಖಕರೂ ಹತಾಶೆಯಿಂದ ಹಿಂದೆ ಸರಿದರು. ಎದೆಯೊಡ್ಡಿ ನಿಂತ ಕೆಲವರನ್ನು ವ್ಯವಸ್ಥೆಯೇ ಬೇಟೆಯಾಡಿತು. ಈ ಬೆಳವಣಿಗೆಗಳನ್ನು ಸೃಜನಾತ್ಮಕವಾಗಿ ಹಿಡಿಯುವಲ್ಲಿ ಕನ್ನಡದ ಲೇಖಕರು ಇದುವರೆಗೆ ಯಶಸ್ವಿಯಾಗಿಲ್ಲ. ಪ್ರಭುತ್ವದ ಬಗೆಗಿನ ಭಯವೇ ಇದಕ್ಕೆ ಮುಖ್ಯ ಕಾರಣ.

1990ರ ದಶಕದಲ್ಲಿ ನಡೆದ ಇನ್ನೊಂದು ಮುಖ್ಯ ಘಟನೆಯೆಂದರೆ ಜಾಗತೀಕರಣ ಪ್ರಕ್ರಿಯೆ. ಇದು ಭಾರತವನ್ನು ಜಗತ್ತಿನ ಇತರ ಭಾಗಗಳಿಗೆ ಜೋಡಿಸಿತು. ಮಾರುಕಟ್ಟೆ ಆಧಾರಿತವಾದ ಜಾಗತೀಕರಣವು ಮುಂದೆ ಆರ್ಥಿಕ ಪ್ರಕ್ರಿಯೆಯಾಗಿಯಷ್ಟೇ ಉಳಿಯದೆ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳೊಂದಿಗೂ ಸೇರಿಕೊಂಡು ಸಂವಹನ ಮತ್ತು ಮಾನವ ಸಂಬಂಧಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ತಂದಿತು. ಸ್ಥಳೀಯ ಭಾಷೆ, ಸಂಸ್ಕೃತಿಗಳು ಜಾಗತಿಕ ಮತ್ತು ಬೃಹತ್ ಪ್ರಮಾಣದ ಸಂಸ್ಕೃತಿಗಳೊಡನೆ ಮುಖಾಮುಖಿಯಾಗುವ ಪರಿಸ್ಥಿತಿ ನಿರ್ಮಾಣವಾಯಿತು.

ಇದರಿಂದಾಗಿ, 1990ರ ದಶಕದಿಂದ ಈಚೆಗೆ ಜನಿಸಿದವರು ಒಂದು ರಾಜ್ಯದ ಅಥವಾ ದೇಶದ ಗಡಿಗೆ ಸೀಮಿತವಾಗಿ ಉಳಿಯದೆ, ಸೀಮಾತೀತವಾಗುತ್ತಲೇ ಹೋದರು. ಈ ಹಂತದಲ್ಲಿ ರಾಷ್ಟ್ರೀಯತೆಯನ್ನು ಒಂದು ಪ್ರಬಲ ಅಸ್ತ್ರವಾಗಿ ಸರ್ಕಾರಗಳು ಬಳಸಿದರೂ ಅದರಿಂದ ಜನರಿಗೆ ಯಾವುದೇ ಪ್ರಯೋಜನ ಆಗಿಲ್ಲ, ಆಗುವುದೂ ಇಲ್ಲ. ಇಂಥ ಪರಿವರ್ತನೆಗಳನ್ನು ಗ್ರಹಿಸಿ ಮಂಡಿಸಲು ಲೇಖಕರಿಗೆ ಹೊಸ ಭಾಷೆ, ತಂತ್ರ ಮತ್ತು ತಿಳಿವಳಿಕೆ ಬೇಕಾಗುತ್ತದೆ. ಈ ವಿಷಯದಲ್ಲೂ ನಾವು ಹಿಂದೆ ಬಿದ್ದಿದ್ದೇವೆ.

1990ರ ಆನಂತರ ಕಾಣಿಸಿಕೊಂಡ ಉಗ್ರ ಹಿಂದುತ್ವ ಮತ್ತು ಜಾಗತೀಕರಣದ ಶಕ್ತಿಗಳು ದಿನ ಸಾಗಿದಂತೆ ಒಂದರೊಳಗೊಂದು ಸೇರಿಕೊಂಡು ಕಾರ್ಯ ನಿರ್ವಹಿಸಲು ಅರಂಭಿಸಿದುವು. ಇವತ್ತು ಜಾಗತೀಕರಣದ ಭಾಗವಾದ ಖಾಸಗೀಕರಣ ಮತ್ತು ನವಬಂಡವಾಳಶಾಹಿ ಶಕ್ತಿಗಳು ಹಿಂದುತ್ವದ ಜೊತೆ ಕೈಜೋಡಿಸಿವೆ. ಇವು ಯಾವುದೇ ಜನಪರ ಚಳವಳಿಗಳು ತಲೆ ಎತ್ತದಂತೆ ಮಾಡಿವೆ. ಬಂಡವಾಳಶಾಹಿಗಳಿಗೆ ಲಾಭ ತಂದುಕೊಡುವ ಯಾವುದೇ ಯೋಜನೆಗಳು, ನಿರುದ್ಯೋಗ, ಬೆಲೆ ಏರಿಕೆ, ಅಸಮಾನತೆಯ ಅಗಾಧ ಹೆಚ್ಚಳ, ಭ್ರಷ್ಟಾಚಾರ, ಲಿಂಗ ತಾರತಮ್ಯ, ದೇಸೀ ಭಾಷೆಗಳ ಕುಸಿತ, ಸ್ಥಳೀಯ ಸಂಸ್ಕೃತಿಗಳ ನಾಶ ಇತ್ಯಾದಿಗಳನ್ನು ಹಿಂದುತ್ವದ ಪರವಾಗಿರುವವರು ವಿರೋಧಿಸುವುದೇ ಇಲ್ಲ. ಬದಲು ದೇಶದ ಹೆಸರಿನಲ್ಲಿ ಅವನ್ನು ಸಮರ್ಥಿಸಲು ಮುಂದಾಗುತ್ತಾರೆ.

ಬಂಡವಾಳಶಾಹಿಗಳಿಗೆ ಅಡಿಯಾಳಾಗಿರುವ ಟಿವಿ ಚಾನೆಲ್‌ಗಳು ಮತ್ತು ವಾಟ್ಸ್‌ಆ್ಯಪ್, ಫೇಸ್‌ಬುಕ್‌ಗಳಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುವ ಸುಳ್ಳುಗಳು, ದ್ವೇಷಪೂರಿತ ಭಾಷಣಗಳು, ರಾಜಕಾರಣಿಗಳು ಬಳಸುವ ಸೌಜನ್ಯರಹಿತ ನುಡಿಗಟ್ಟು ಮೊದಲಾದುವು ನಮ್ಮ ನೆಲದ ಗುಣಗಳನ್ನು ಬದಲಾಯಿಸಿವೆ. ಇಂಥ ಬೆಳವಣಿಗೆಗಳ ಕುರಿತು ಎಚ್ಚರ ಹುಟ್ಟಿಸುವ ಮಾನವಿಕಗಳನ್ನು 'ಅನುತ್ಪಾದಕ' ಎಂದು ಘೋಷಿಸುವ ಮಟ್ಟಿಗೆ ಜನ ಬದಲಾಗಿದ್ದಾರೆ.

ಹೀಗೆ ನಾಗರಿಕ ಸಮಾಜದ ಯೋಚನಾ ಶಕ್ತಿಯೇ ಕೊಲೆಯಾಗುತ್ತಿರುವಾಗ ಲೇಖಕರು ಸುಮ್ಮನೆ ಕುಳಿತಿರುವುದು ಅಪೇಕ್ಷಣೀಯವಲ್ಲ. 2015ರಲ್ಲಿ ತಮಿಳು ಲೇಖಕ ಪೆರುಮಾಳ್ ಮುರುಗನ್ ಕೋಮುವಾದಿ ಶಕ್ತಿಗಳ ಉಪಟಳ ತಾಳಲಾರದೆ 'ನಾನು ಸತ್ತಿದ್ದೇನೆ' ಎಂದು ಘೋಷಿಸಿಕೊಂಡರು. ಇಂಥ ಘೋಷಣೆ ಇನ್ನೊಮ್ಮೆ ಮೊಳಗದಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಮ್ಮೆಲ್ಲರದು.

ಗುಬ್ಬಿಯ ಅಜೇಯ ಶತಕ

ಮಲ್ಲಿಕಾರ್ಜುನ ಕಡಕೋಳ

ನಮ್ಮ ನಡುವಿನ ಮಹತ್ವದ ರಂಗಕರ್ಮಿ ಗುಬ್ಬಿ ಚನ್ನಬಸಯ್ಯ ಮೊನ್ನೆಯ ಮೇ ಆರನೇ ತಾರೀಖಿನಂದು ಬರೋಬ್ಬರಿ ನೂರರ ಪ್ರಾಯದಲ್ಲಿ ಕಾಲಿಟ್ಟರು. ಅವರ ಹುಟ್ಟೂರು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ (ಜನನ: 06.05.1923) ಒಡೆಯರ ಮತಿಘಟ್ಟ. ಚನ್ನಬಸಯ್ಯ ಕಳೆದ ಎಂಬತ್ತು ವರುಷಗಳಿಂದ ಕನ್ನಡ ರಂಗಭೂಮಿಯ ಮೌಲ್ಯಗಳನ್ನು ಬಿತ್ತಿ ಬೆಳೆದವರು. ವೃತ್ತಿರಂಗಭೂಮಿಯ ಹಲವು ಅನನ್ಯತೆಗಳನ್ನು ಬದುಕಿದವರು. ಸ್ವಾತಂತ್ರ್ಯ ಸೇನಾನಿಗಳಾದ ಸುಭಾಷ್ ಚಂದ್ರ ಬೋಸ್, ಹೊಸಮನಿ ಸಿದ್ದಪ್ಪ (ಸುಭಾಷ್‌ಚಂದ್ರ ಬೋಸ್ ಒಡನಾಡಿ) ಅವರ ಬದುಕು ಸಾಧನೆಗಳ ಮೇಲೆ ನಿಚ್ಚಳ ಬೆಳಕು ಚೆಲ್ಲುವ ಮಹತ್ವದ ನಾಟಕಗಳನ್ನು ಕನ್ನಡ ರಂಗಭೂಮಿಗೆ ತಂದವರು. ಸ್ವಾತಂತ್ರ್ಯದ ರಂಗಸಂಸ್ಕೃತಿ ಪರಂಪರೆ ಮೆರೆದವರು.

ದೂರದ ದೆಹಲಿ, ಕೊಲ್ಕತ್ತಾ ಮಹಾನಗರಗಳಿಗೆ ಒಂಬತ್ತು ವರ್ಷಗಳ ಕಾಲ ಓಡಾಡಿ, ವಾರಗಟ್ಟಲೇ ವಾಸ್ತವ್ಯ ಹೂಡಿದ್ದರು. ಸುಭಾಷ್‌ಚಂದ್ರ ಬೋಸ್ ಅವರ ಮೊಮ್ಮಗ ಶಿಶಿರಚಂದ್ರ ಬೋಸ್ ಅವರೊಂದಿಗೆ ಸುದೀರ್ಘ ಕಾಲ ಒಡನಾಡಿ ಅಪರೂಪದ ಮಾಹಿತಿಗಳನ್ನು ಸಂಗ್ರಹಿಸಿ ಸುಭಾಷ್‌ಚಂದ್ರ ಬೋಸ್ ಕುರಿತು ಚಿಂತನಾರ್ಹ ನಾಟಕ ರೂಪಿಸಿದರು. ಅದಕ್ಕಾಗಿ ಸುಭಾಷ್ ಚಂದ್ರ ಬೋಸ್ ಅನುಯಾಯಿಗಳಾದ ಡಿ.ಬಿ. ಕಲ್ಮಣಕರ್ ಅವರ ನೆರವು ಪಡೆದರು. ಈ ನಾಟಕವನ್ನು ಇಂಗ್ಲಿಷ್ ಭಾಷೆಯಲ್ಲೂ ಪ್ರಕಟಿಸಿದರು. ಹಾಗೆಯೇ ಕರ್ನಾಟಕದ ಹೊಸಮನಿ ಸಿದ್ದಪ್ಪ ಕುರಿತು ನಾಟಕ ಬರೆದರು. ಈ ಎರಡೂ ನಾಟಕಗಳು ಅನೇಕ ಕಡೆ ಪ್ರದರ್ಶನ ಕಂಡಿವೆ. ಖುದ್ದಾಗಿ ಚನ್ನಬಸಯ್ಯ ಪಾತ್ರ ಮಾಡಿದ್ದಾರೆ.

ಸೌಭಾಗ್ಯಲಕ್ಷ್ಮಿ, ಬಾಲಚಂದ್ರ, ಕಡಕೋಳ ಮಡಿವಾಳಪ್ಪ, ಪುತ್ಥಳಿಯಂತಹ ಅಪರೂಪದ ನೂರೈವತ್ತಕ್ಕೂ ಅಧಿಕ ನಾಟಕಗಳ ನೂರಾರು ಪಾತ್ರಗಳಲ್ಲಿ ಅಭಿನಯಿಸಿದವರು ಗುಬ್ಬಿ. ಸಹಸ್ರಾರು ಪ್ರದರ್ಶನಗಳ ಮೂಲಕ ಕನ್ನಡ ರಂಗಭೂಮಿಯ ಪರಂಪರೆಯನ್ನು ಸಮೃದ್ಧಗೊಳಿಸಿದವರು.

ಪರದೆ ಎಳೆಯುವ ರಂಗಕಾರ್ಮಿಕನಾಗಿ, ನಟನಾಗಿ, ನಿರ್ದೇಶಕನಾಗಿ, ನಾಟಕ ಕಂಪನಿ ಮಾಲೀಕನಾಗಿ, ನಾಟಕಕಾರನಾಗಿ, ಚಲನಶೀಲ ರಂಗೇತಿಹಾಸಕಾರನಾಗಿ ಹೀಗೆ ಬಹುಮುಖಿ ರಂಗಕರ್ಮಿಯ ಎಂಟು ದಶಕಗಳನ್ನು ಹಾಳತವಾಗಿ ಬಾಳಿದವರು. ಇನ್ನೂ ಇಂತಹ ಹತ್ತಾರು ಮಹತ್ತರ ರಂಗಭೂಮತ್ವದ ವ್ಯಕ್ತಿತ್ವವುಳ್ಳ ಗುಬ್ಬಿ ಚನ್ನಬಸಯ್ಯ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿಗಳು ಇದುವರೆಗೆ ಬಾರದಿರುವುದೇ ಪರಮಾಶ್ಚರ್ಯ. ಅವರೇನು ಪ್ರಶಸ್ತಿಗಳಿಗಾಗಿ ಇಷ್ಟೆಲ್ಲ ರಂಗಸಾಧನೆ ಮಾಡಿದವರಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಹಿರಿಯ ರಂಗಚೇತನದ ಹೆಸರು, ರಂಗವ್ಯಕ್ತಿತ್ವದ ಪರಿಚಯ ಇಲ್ಲವೆಂದೇನಿಲ್ಲ. ಹಾಗಂತ ಇವರ ಹೆಸರು ರಾಜ್ಯೋತ್ಸವ ಮತ್ತು ಗುಬ್ಬಿ ವೀರಣ್ಣ ಪ್ರಶಸ್ತಿಗಳ ಆಯ್ಕೆ ಸಮಿತಿ ಗಮನ ಸೆಳೆದಿಲ್ಲವೆಂತಲೂ ಇಲ್ಲ. ಪ್ರತೀ ಬಾರಿಯೂ ಕಟ್ಟಕಡೇ ಗಳಿಗೆವರೆಗೂ ಇವರ ಹೆಸರು ಕೇಳಿಬಂದು ಪವಾಡ ಸದೃಶದಂತೆ ಅದೇ ಕಟ್ಟಕಡೇ ಕ್ಷಣದಲ್ಲಿ ಆಯ್ಕೆ ಸಮಿತಿಯ ಕಣ್ತಪ್ಪಿಸಿ ಮಾಯವಾಗಿ ಹೋಗುತ್ತದೆ. ಆದರೆ ಜನಮಾನಸ ನೀಡಿದ ಪ್ರಶಸ್ತಿಗಳ ಬಹುದೊಡ್ಡ ಪಟ್ಟಿಯೇ ಇದೆ.

ಚನ್ನಬಸಯ್ಯ ಗುಬ್ಬಿ, ತಮ್ಮ ಪರಿಚಯಕ್ಕೆ ಮುನ್ನವೇ 'ನಾನು ಗುಬ್ಬಿ ವೀರಣ್ಣನವರ ಕುಟುಂಬಕ್ಕೆ ಸಂಬಂಧಿಸಿದವನಲ್ಲ' ಎಂದು ವಿನೀತರಾಗೇ ಸ್ಪಷ್ಟಪಡಿಸುತ್ತಾರೆ. ಅದು ಅವರ ಮನೋಧರ್ಮವೇ ಆಗಿದೆ. ಅದು ಅವರ ಸ್ವಯಂ ಪರಿಚಯದ ಗಟ್ಟಿಧ್ವನಿಯ ವಾಡಿಕೆಯೇ ಆಗಿದೆ.

ಕೆಲವು ಮಂದಿ ಕಲಾವಿದರು ತಮ್ಮ ಪರಿಚಯವನ್ನು ಹೆಗ್ಗಳಿಕೆಯ ಧ್ವನಿಯಲ್ಲಿ 'ತಾವು ಗುಬ್ಬಿ ವೀರಣ್ಣನವರ ಖಾಸಾ ಸಂಬಂಧಿಗಳೆಂಬಂತೆ' ಅವರ ಮರಿ ಗಿರಿ ಮೊಮ್ಮಕ್ಕಳೆಂದು ತಲೆಮಾರುಗಳ ನಂಟಿನ 'ಗಂಟುಹಾಕಿ' ಹೇಳುವುದನ್ನು ಕೇಳಿದ್ದೇವೆ. ಎಷ್ಟೋಬಾರಿ ಅವರ ಮೂಲ ಕುಟುಂಬಸ್ಥರಿಗೇ ಅವು ಗೊತ್ತಿರದ ಮುಜುಗರದ ಸಂಬಂಧಗಳಾಗಿರುತ್ತವೆ.

ಅಂಥದಕ್ಕೆ ಅವಕಾಶವೇ ಬೇಡ ಎನ್ನುವುದಕ್ಕಾಗಿ ಚನ್ನಬಸಯ್ಯ ಗುಬ್ಬಿ ಅದನ್ನು ಕರಾರುವಾಕ್ಕಾಗಿ ಎಂಬಂತೆ ತಮ್ಮ ಹೆಸರಿನ ಪರಿಚಯದ ಆರಂಭಕ್ಕೇ ಅದನ್ನು ಹೇಳಿ ನಿರಾಳರಾಗುತ್ತಾರೆ. ಗುಬ್ಬಿ ವೀರಣ್ಣನವರ ಹೆಸರಿಗೆ ಮುಕ್ಕು ಬಾರದಿರುವ ಕಳಕಳಿ ಅವರದು. ಅಷ್ಟು ಮಾತ್ರವಲ್ಲ ಚನ್ನಬಸಯ್ಯ ಗುಬ್ಬಿ ಅವರಿಗೆ ನಾಟಕರತ್ನ ಗುಬ್ಬಿ ವೀರಣ್ಣನವರ ಬಗ್ಗೆ ಅಪಾರ ಪ್ರೀತಿ ಮತ್ತು ಗೌರವ.

ಹಿರಿಯ ರಂಗಚೇತನ ಗುಬ್ಬಿ ಚನ್ನಬಸಯ್ಯ ಅವರಿಗೀಗ ಬರೋಬ್ಬರಿ ನೂರರ ತುಂಬು ಹರೆಯ. ಕಳೆದ ಮೇ 6ರಂದು ತುಮಕೂರು ಮತ್ತು ಬೆಂಗಳೂರಿನ ಅಭಿಮಾನಿಗಳು ಚನ್ನಬಸಯ್ಯನವರ ನೂರನೇ ಜನ್ಮದಿನ ಖುಷಿಯಿಂದ ಆಚರಿಸಿದರು. ಅವರು ತಮ್ಮ ಐವತ್ತನೇ ವಯಸಿನಲ್ಲಿ ಅದೆಷ್ಟು ಗಟ್ಟಿಮುಟ್ಟಾಗಿದ್ದರೋ ಈಗಲೂ ಅಷ್ಟೇ ಸದೃಢಶಾಲಿ. ಶತಮಾನದ ಹೊಸ್ತಿಲಲ್ಲಿಯೂ ಅವರ ರಂಗೋಲ್ಲಾಸ, ಜೀವನೋತ್ಸಾಹ ಕಿಂಚಿತ್ತೂ ಕುಂದಿಲ್ಲ. ಅದು ಅಕ್ಷರಶಃ ಅಚ್ಚರಿ.

ಕಳೆದ ವರ್ಷ ಅಕ್ಟೋಬರ್‌ನಲ್ಲಿ ದಾವಣಗೆರೆಗೆ ಬಂದಿದ್ದರು. ಆಗ ಇಲ್ಲಿ ಮೊಕ್ಕಾಂ ಹೂಡಿದ್ದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳ ಕುಮಾರ ವಿಜಯ ನಾಟಕ ಕಂಪನಿಗೆ ಭೇಟಿ ಕೊಟ್ಟರು. ಚಿತ್ತರಗಿ ಕಂಪನಿ ಚನ್ನಬಸಯ್ಯರಿಗೆ ಗಟ್ಟಿ ಬದುಕು ಕಟ್ಟಿಕೊಟ್ಟ ಅವರ ಪಾಲಿನ ವಿಶ್ವವಿದ್ಯಾಲಯ. ಅಷ್ಟಕ್ಕೂ ಚಿತ್ತರಗಿ ಶಾಸ್ತ್ರಿಗಳ ಕಂಪನಿಗೆ ವೃತ್ತಿರಂಗಭೂಮಿ ಚರಿತ್ರೆಯಲ್ಲಿ ಮಹತ್ತರ ಸ್ಥಾನಮಾನ. ಗುಣಾತ್ಮಕ ರಂಗ ಪರಂಪರೆಗಳ ಮೇಲ್ಪಂಕ್ತಿ.

ಅಂದು ದಾವಣಗೆರೆಯಲ್ಲಿ ಚಿತ್ತರಗಿ ಕಂಪನಿಯ ಕಲಾವಿದರಿಗೆ ಚನ್ನಬಸಯ್ಯ ತಾವೇ ಖುದ್ದು ಶಾಲು ಹೊದಿಸಿ ಸನ್ಮಾನ ಮಾಡಿ, ಕೈಲಾದ ಕಾಣಿಕೆ ನೀಡಿ ಹದುಳ ಪ್ರೀತಿಯಿಂದ ಹಾರೈಸಿದರು. ಸೊಗಸಾಗಿ ಓಡಾಡಿ, ಮಾತಾಡಿ, ವೃತ್ತಿನಾಟಕ ಕಂಪನಿಗಳ ಶತಮಾನದ ರಂಗಸಂಸ್ಕೃತಿಯ ತಮ್ಮ ಅನುಭವ ಹಂಚಿಕೊಂಡ ರಂಗಚೈತನ್ಯ ಪರಮ ಬೆರಗಿನದು. ನೂರರ ಪ್ರಾಯದಲ್ಲೂ ಯಾರ ನೆರವಿಲ್ಲದೇ ದೂರದ ಊರುಗಳಿಗೆ ಅವರು ಸರ್ಕಾರಿ ಕೆಂಪು ಬಸ್ಸುಗಳಲ್ಲಿ ಪ್ರಯಾಣಿಸುತ್ತಾರೆ. ಅವಕಾಶ ದೊರಕಿದರೆ ರಂಗಮಂಟಪದಲ್ಲಿ ಅಭಿನಯಿಸುವುದು, ಅಸ್ಖಲಿತವಾಗಿ ಸಂಭಾಷಣೆ ಹೇಳುವುದು... ಹೀಗೆ ಅವರ ಚುರುಕಿನ ರಂಗಚಟುವಟಿಕೆ ಸೋಜಿಗದ್ದು.

ಸಿದ್ರಾಮಯ್ಯ, ಲಕ್ಷ್ಮಿದೇವಮ್ಮ ಇವರ ಅಪ್ಪ- ಅಮ್ಮ. ಬಾಲ್ಯದಲ್ಲಿಯೇ ಅಲೆಮಾರಿ ಬದುಕು. ಹತ್ತು ವರ್ಷದ ಬಾಲಕನಿದ್ದಾಗಲೇ ರೈಲು ಹತ್ತಿ ಹುಬ್ಬಳ್ಳಿಗೆ ಹೋಗಿ ಹೋಟೆಲೊಂದರಲ್ಲಿ ಚಹದ ಕಪ್ಪುಬಸಿ ತೊಳೆಯುವ ಕಾಯಕ. ಆಗಲೇ ಅಲ್ಲಿ ಕ್ಯಾಂಪ್ ಮಾಡಿದ್ದ ಚಿತ್ತರಗಿ ನಾಟಕ ಮಂಡಳಿಯ ಮಾಲಿಕ ಗಂಗಾಧರ ಶಾಸ್ತ್ರಿಗಳ ಕಣ್ಣಿಗೆ ಬಿದ್ದ ಈ ಬಾಲಕ.

ಚಿಕ್ಕಹುಡುಗ ಚನ್ನಬಸಯ್ಯನ ಕ್ರಿಯಾಶೀಲತೆ ಶಾಸ್ತ್ರಿಗಳ ಅಂತಃಕರಣ ಸೆಳೆಯಿತು. ಅವನ ಸೂಕ್ಷ್ಮ ಸಂವೇದನೆ ಶಾಸ್ತ್ರಿಗಳ ಅಂತರಂಗದಲ್ಲಿ ಅದಮ್ಯವಾದ ಕಕ್ಕುಲತೆ ಹುಟ್ಟಿಸಿತು. ತಡಮಾಡದೇ ಹುಡುಗನ ಮೈದಡವಿ ಅವನಲ್ಲಿ ಮಾತೃತ್ವದ ಪ್ರೀತಿ ಹಂಚಿದರು. 'ನಮ್ ಕಂಪ್ನಿಗೆ ಬರ್ತಿಯಾ' ಅಂತ ಶಾಸ್ತ್ರಿಗಳು ಕೇಳುತ್ತಿದ್ದಂತೆ, ಒಂದೇ ಮಾತಿಗೆ ಬಾಲಕ ಚನ್ನಬಸಯ್ಯ ಹೋಟೆಲಿನಿಂದ ಸಿದ್ಧಗೊಂಡವರಂತೆ ಎದ್ದು ನಿಂತ. ಶಾಸ್ತ್ರಿಗಳ ತಾಯ್ತನದ ಪ್ರೀತಿ ಬಾಲಕನನ್ನು ನಾಟಕ ಕಂಪನಿಗೆ ಕರೆದೊಯ್ದಿತು. ಅಂದಿನಿಂದ ಇಂದಿನವರೆಗೂ ಶಾಸ್ತ್ರಿಗಳ ನಂತರವೂ ಅವರ ಕಂಪನಿ ಮೇಲಿನ ಮಮಕಾರ ತಾಯ್ತನದ ಪ್ರೀತಿಯ ನಂಟಿಗೆ ಧಕ್ಕೆ ಉಂಟಾಗಿಲ್ಲ.

ಗುಬ್ಬಿ ವೀರಣ್ಣನವರ ಸಮಕಾಲೀನರಾದ ಚಿತ್ತರಗಿ ಗಂಗಾಧರ ಶಾಸ್ತ್ರಿಗಳಿಗೆ ವೀರಣ್ಣನವರ ಬಗ್ಗೆ ಎಲ್ಲಿಲ್ಲದ ಪ್ರೀತಿ. ಪ್ರೀತಿಯ ದ್ಯೋತಕವಾಗಿ ಅದೇ ಗುಬ್ಬಿ ತಾಲ್ಲೂಕಿನ ಚನ್ನಬಸಯ್ಯಗೆ 'ಗುಬ್ಬಿ' ಹೆಸರಿನಿಂದಲೇ ಕರೆಯುವುದು ಶಾಸ್ತ್ರಿಗಳಿಗೆ ರೂಢಿಯಾಗುತ್ತದೆ. 'ಎಲೋ ಮಗಾ ಗುಬ್ಬಿ' ಅಂತಲೇ ಕರೆದು ಕರೆದು ಇವರ ಹೆಸರು ಗುಬ್ಬಿ ಚನ್ನಬಸಯ್ಯ ಅಂತಾಗಿ ಬಿಟ್ಟಿದೆ. ಆ ಹೆಸರಿಗೀಗ ನೂರರ ಮಹಾಪ್ರಾಯ.

ಮಿಲಿಟರಿ ಶಿಸ್ತಿನ ಚಿತ್ತರಗಿ ಶಾಸ್ತ್ರಿಗಳ ರಂಗ ಗರಡಿಯಲ್ಲಿ ಚನ್ನಬಸಯ್ಯ ಶಿಸ್ತಿನ ರಂಗ ಸಿಪಾಯಿಯಾದರು. ಚಿತ್ತರಗಿ ಕಂಪನಿಯ ಹೆಸರಾಂತ ಬಾಲಚಂದ್ರ, ಸೌಭಾಗ್ಯಲಕ್ಷ್ಮಿ, ಜೀವನಯಾತ್ರೆ ಈ ಎಲ್ಲ ನಾಟಕಗಳ ಪ್ರಮುಖ ಪಾತ್ರಗಳಲ್ಲಿ ಚನ್ನಬಸಯ್ಯ ಪಳಗಿದರು. ಆ ಪಾತ್ರಗಳು ಅವರಿಗೆ ಹೆಸರು ತಂದವು. ಗಜಾನನ ಸಂಗೀತ ನಾಟಕ ಮಂಡಳಿಯಲ್ಲಿ ಕೆಲಕಾಲ ರಂಗಾನುಭವ. 1981ರಲ್ಲಿ ಅಮರೇಶ್ವರ ವಿಜಯ ನಾಟಕ ಸಂಘ, ಹೆಸರಿನ ಸ್ವಂತ ನಾಟಕ ಕಂಪನಿಯ ಸ್ಥಾಪನೆ. ತನ್ಮೂಲಕ ರಂಗ ಕೈಂಕರ್ಯ. ಚನ್ನಬಸಯ್ಯರ ಬದುಕಿನಲ್ಲಿ ಕೆಲವು ಅನಿರೀಕ್ಷಿತ ತಿರುವುಗಳು ಘಟಿಸಿದವು. ಒಂದಲ್ಲ ಎರಡು ಮದುವೆಗಳು. ಇಂತಹ ಕೆಲವು ಘಟನೆಗಳು ಅವರನ್ನು ಕೊಂಚ ಧೃತಿಗೆಡಿಸಿದವು. ಆದಾಗ್ಯೂ ತಮ್ಮೆಲ್ಲ ಸಂಕಟ, ಸಂತಸಗಳನ್ನು ರಂಗಭೂಮಿಯ ತೊಡಗಿಸಿಕೊಳ್ಳುವಿಕೆ ಮೂಲಕ ಬದುಕು ನಿಭಾಯಿಸಿಕೊಂಡು ನೂರರ ಪ್ರಾಯದಲ್ಲಿ ಹೆಜ್ಜೆ ಇಟ್ಟಿದ್ದಾರೆ. ಈ ರಂಗಚೇತನ ಬದುಕಿರುವಾಗಲೇ ಬರಬೇಕಾದ ಪ್ರಶಸ್ತಿ ಗೌರವಗಳು ಅವರ ಮುಡಿಸೇರಲಿ.

> ಹಿರಿಯ ರಂಗಚೇತನ ಗುಬ್ಬಿ ಚನ್ನಬಸಯ್ಯ ಅವರಿಗೀಗ ಬರೋಬ್ಬರಿ ನೂರರ ತುಂಬು ಹರೆಯ. ಪರದೆ ಎಳೆಯುವ ರಂಗಕಾರ್ಮಿಕನಾಗಿ, ನಟನಾಗಿ, ನಿರ್ದೇಶಕನಾಗಿ, ನಾಟಕ ಕಂಪನಿ ಮಾಲೀಕನಾಗಿ, ನಾಟಕಕಾರನಾಗಿ, ಚಲನಶೀಲ ರಂಗೇತಿಹಾಸಕಾರನಾಗಿ ಹೀಗೆ ಬಹುಮುಖಿ ರಂಗಕರ್ಮಿಯ ಎಂಟು ದಶಕಗಳನ್ನು ಹಾಳತವಾಗಿ ಬಾಳಿದವರು. ಅವರ ಬದುಕಿನ ಒಂದು ಹಿನ್ನೋಟ...

ಗುಬ್ಬಿ ಚನ್ನಬಸಯ್ಯ

> ಚನ್ನಬಸಯ್ಯ ಗುಬ್ಬಿ, ತಮ್ಮ ಪರಿಚಯಕ್ಕೆ ಮುನ್ನವೇ 'ನಾನು ಗುಬ್ಬಿ ವೀರಣ್ಣನವರ ಕುಟುಂಬಕ್ಕೆ ಸಂಬಂಧಿಸಿದವನಲ್ಲ' ಎಂದು ವಿನೀತರಾಗೇ ಸ್ಪಷ್ಟಪಡಿಸುತ್ತಾರೆ. ಅದು ಅವರ ಮನೋಧರ್ಮವೇ ಆಗಿದೆ.

ಧಾರವಾಡದ ಬಾಲಬಳಗ ಶಾಲೆಯಲ್ಲಿ ಚರಕ ಬಳಸಿ ನೂಲುತ್ತಿರುವ ವಿದ್ಯಾರ್ಥಿಗಳು

ಖಾದಿ ಮೋಹಿಗಳು!

10ನೇ ಪುಟದಿಂದ...

'ಇದು ಸ್ವಾವಲಂಬನೆ, ಸರಳತೆ, ಶರೀರ ಶ್ರಮ ಸೇರಿದ ಒಂದು ಪ್ರಯತ್ನ. ಒಂದು ಗಂಟೆ ಪದ್ಮಾಸನದಲ್ಲಿ ಅಥವಾ ಸುಖಾಸನದಲ್ಲಿ ನೇರವಾಗಿ ಕೂತು, ನೂಲನ್ನು ಶ್ರದ್ಧೆಯಿಂದ ತುಂಡಾಗದಂತೆ ನೂಲುವ ಪ್ರಕ್ರಿಯೆ ಕಲಿಸುವ ಶಿಸ್ತು ಬೇರೆಲ್ಲೂ ಸಿಗಲು ಸಾಧ್ಯವಿಲ್ಲ. ಅಷ್ಟು ಮಾತ್ರವಲ್ಲ ನಮ್ಮ ಬಟ್ಟೆಯನ್ನು ನಾವೇ ಸಿದ್ಧಪಡಿಸಿಕೊಂಡೆವು ಎಂಬ ಅಭಿಮಾನ ಮೂಡುತ್ತದೆ ಅಲ್ಲವೇ? ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ' ಎನ್ನುವುದು ಈ ಶಾಲೆಯ ಮುಖ್ಯಸ್ಥ ಡಾ. ಸಂಜೀವ ಕುಲಕರ್ಣಿ ಮಾತು.

'ಇಷ್ಟು ಮಾತ್ರವಲ್ಲ, ಚರಕ ನೂಲುವುದರಲ್ಲಿ ಗಣಿತವಿದೆ. ಚರಕ ತಿರುಗಿಸುವುದರಲ್ಲಿ ಭೌತವಿಜ್ಞಾನ, ಹತ್ತಿ ಬೆಳೆಯುವುದರಲ್ಲಿ ಜೀವವಿಜ್ಞಾನ, ಎಲ್ಲಿ ಬೆಳೆಯುತ್ತದೆ ಎಂಬುದರಲ್ಲಿ ಭೂಗೋಳ, ರೈತರೊಂದಿಗೆ ವ್ಯವಹರಿಸುವ ಕೌಶಲ, ಶರೀರ ರಚನೆ, ಕಣ್ಣು ಹಾಗೂ ಕೈಗಳ ಸಂಯೋಜನೆ ಮತ್ತು ಏಕಾಗ್ರತೆ ಇಷ್ಟನ್ನೂ ಈ ಒಂದು ಕಾಯಕ ಕಲಿಸುತ್ತದೆ' ಎನ್ನುತ್ತಾರೆ ಅವರು.

'ನೂತನ ಶಿಕ್ಷಣ ನೀತಿಯ ಆಶಯವೇ ಸುಸ್ಥಿರತೆ. 2030ರ ಹೊತ್ತಿಗೆ ಸುಸ್ಥಿರತೆಗೆ ಹೋಗಬೇಕೆಂಬ ಅಭಿಯಾನದಲ್ಲಿ ಬಾಲಬಳಗದ ಮಕ್ಕಳು ಈಗಲೇ ಹೆಜ್ಜೆ ಇಟ್ಟಿದ್ದಾರೆ. ಇದಕ್ಕಾಗಿ ಮೈಸೂರಿನವರಾದ ಸಚ್ಚಿದಾನಂದ ಅವರಲ್ಲಿ 15 ಚರಕ ಖರೀದಿಸಲಾಗಿದೆ. ಮುಂದಿನ ದಿನಗಳಲ್ಲಿ ಶಾಲೆಯ ಎಲ್ಲಾ ಮಕ್ಕಳು ಚರಕ ಕಲಿಯಬೇಕು ಎಂಬುದು ನಮ್ಮ ಗುರಿ' ಎನ್ನುತ್ತಾರೆ ಕುಲಕರ್ಣಿ.

ಸ್ವತಃ ನೂಲಿದ ಲಡಿಯಿಂದ ಸಿದ್ಧಗೊಂಡ ಅಂಗಿಯನ್ನು ತೊಡುವ ಕುಲಕರ್ಣಿಯವರು, ಮಕ್ಕಳಿಗೆ ಮಾದರಿಯಾಗಿದ್ದಾರೆ. 'ಕಳೆದ ನ. 14ರಿಂದ ನಿತ್ಯ ಸುಮಾರು ಒಂದು ಗಂಟೆ ನೂಲು ತೆಗೆದು 10 ಮೀಟರ್‌ಗೆ ಆಗುವಷ್ಟು ನೂಲು ಸಿದ್ಧಪಡಿಸಿದೆ. ಅದನ್ನು ಧಾರವಾಡ ತಾಲ್ಲೂಕಿನ ಹೆಬ್ಬಳ್ಳಿಯಲ್ಲಿರುವ ಖಾದಿ ಕೇಂದ್ರಕ್ಕೆ ನೀಡಿದೆ. ಹಾಸುಗೆ ಹಾಕಿದ ನೂಲು ಖಾದಿ ಕೇಂದ್ರದ್ದು, ನಾನು ತೆಗೆದ ನೂಲು ಹೊಕ್ಕಾಗಿ ಬಳಸಿ ಅಂಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ಇದರಿಂದ 2 ಮೀಟರ್‌ನ ಎರಡು ಅಂಗಿ ಸಿದ್ಧಪಡಿಸಿಕೊಂಡಿದ್ದೇನೆ. ಇನ್ನೂ ಒಂದಷ್ಟು ಬಟ್ಟೆ ಉಳಿದಿದೆ. ನಾನು ನೂಲು ತೆಗೆದ ಬಟ್ಟೆಯನ್ನು ತೊಡುವುದೇ ದೊಡ್ಡ ಸಂಭ್ರಮ' ಎಂದಾಗ ಅವರ ಮುಖದಲ್ಲೊಮ್ಮೆ ಸಾರ್ಥಕತೆ ಮಿಂಚುತ್ತದೆ.


ಧಾರವಾಡದ ಬಾಲಬಳಗ ಶಾಲೆಯಲ್ಲಿ ಚರಕ ಬಳಸಿ ನೂಲುತ್ತಿರುವ ಡಾ. ಸಂಜೀವ ಕುಲಕರ್ಣಿ ಹಾಗೂ ಶಾಲಾ ಮಕ್ಕಳು

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಟ್ವೆಂಟಿ – 20 ಮ್ಯಾಚ್

ಅಕ್ಷರ ಪದ ಹೊಂದಿಸಿ

1.	ಕಾ	–	A.	ಹರಿ
2.	ಮಾ	–	B.	ಬಳಿ
3.	ಸ	–	C.	ಗಡಿ
4.	ವ	–	D.	ರತಿ
5.	ಬು	–	E.	ರಣ
6.	ನೆ	–	F.	ಮಾರಿ
7.	ಕ	–	G.	ನವ
8.	ಜೋ	–	H.	ಕರ
9.	ಕಿಂ	–	I.	ರಾಡಿ
10.	ಮ	–	J.	ದನ
11.	ಓ	–	K.	ಜಾಣ
12.	ಜ	–	L.	ಕುಳಿ
13.	ನ	–	M.	ಗುರಿ
14.	ಖ	–	N.	ಕಾಲಿ
15.	ಕಿ	–	O.	ರಸ
16.	ಸೋ	–	P.	ವನ
17.	ಶಿ	–	Q.	ನಿಜ
18.	ಗ	–	R.	ಗತ್ತು
19.	ಕಂ	–	S.	ಗರ
20.	ಲ	–	T.	ಚಡಿ

ಜಂತ್ರಿ ಮಾಡುವ ವಿಧಾನ

ಇದೊಂದು ಮೀಟರ್, ಲೀಟರ್, ಗ್ರಾಂಗಳನ್ನು ಥಟ್ಟನೆ ಪರಿವರ್ತಿಸುವ ಜಂತ್ರಿ. ನೀವು ಮಾಡಬೇಕಾದದ್ದು ಇಷ್ಟೇ. ಉದಾ: 8 ಮೀಟರಿಗೆ ಪಟ್ಟಿ ಸೆಂಟಿ ಮೀಟರ್ ಎಂದು ತಿಳಿಸಬೇಕಾಗಿದೆ ಎಂದಿಟ್ಟುಕೊಳ್ಳಿ. ನೀವು ಮೀಟರ್ ಇದ್ದ ಸ್ಥಳದಲ್ಲಿ '8' ಅಂಕಿಯನ್ನು ಇಟ್ಟು, ಮುಂದೆ ನಿಮಗೆ ಬೇಕಾದ ಅಳತೆಯವರೆಗೆ '0' ಇಟ್ಟು ಹೋಗಿ. ಎಲ್ಲವನ್ನೂ ಕೂಡಿಸಿ ಈಗ ಸಂಖ್ಯೆಯನ್ನು ಓದಿ. ಈಗ '800' ಎಂದು ತಿಳಿಯುವುದು. ಹೀಗೆ ಬೇರೆ ಬೇರೆ ಗ್ರಾಂ, ಮಿಲಿ, ಲೀಟರ್ ಪರಿವರ್ತಿಸಿ. ಒಂದು ವೇಳೆ '8' ಸೆಂಟಿ ಮೀಟರ್‌ಗೆ ಮಿಲಿ ಎಷ್ಟೆಂದು ತಿಳಿಯಬೇಕಾದರೆ '8'ನ್ನು ಸೆಂಟಿ ಮೀಟರ್ ಸ್ಥಳದಲ್ಲಿ ಹಾಗೇ ಇಡಿ. ಬಿಂದುವನ್ನು ಮೀಟರ್ ಸ್ಥಾನದಲ್ಲಿ ಇಡಿ. ನಡುವೆ '0' ಹಾಕಿ ಓದಿ. ಈಗ '08' ಆಗುವುದು.

ಘಟಾಫಟ್ ಪರಿವರ್ತನ ಪಟ್ಟಿ (ಜಂತ್ರಿ ಲೆಕ್ಕ)

ಕಿಲೋ	ಹೆಕ್ಟೋ	ಡೆಕೋ	ಮೀಟರ್, ಲೀಟರ್, ಗ್ರಾಂ	ಡೆಸಿ	ಸೆಂಟಿ	ಮಿಲಿ

ಅದಲು ಬದಲು ಕಂಚಿ ಕದಲು

1. ಬದರಿಕಾಶ್ರಮ __________
2. ನೀಳನಾರಿ __________
3. ಹೋರಿಗೆ ನೀರಾಟ __________
4. ಅವನಲೋಕ __________

ಡಶ್ಗ ಚಕ್ಕಶೀಶ್ರಷ್ಟ ಕಥೆಯ

ಪರಿಸರ ಸ್ನೇಹಿ ಗಣೇಶ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಗಣೇಶ ಹಬ್ಬ ಇನ್ನೇನು ಸಮೀಪದಲ್ಲಿದೆ. ಆದರೆ, ಈ ಹಬ್ಬಕ್ಕೆ ಕೆಲವು ತಿಂಗಳುಗಳಿರುವಾಗಲೇ ಗಣಪನ ಮೂರ್ತಿ ಮಾಡಲು ಜೇಡಿ ಮಣ್ಣನ್ನು ಹದಗೊಳಿಸಿ ಸಜ್ಜು ಮಾಡಲಾಗುತ್ತದೆ. ಹೊಲಗಳು, ಕೆರೆಯ ಅಂಗಳದ ತೆಳು ಮಣ್ಣನ್ನು ಮೂರ್ತಿ ತಯಾರಿಕೆಗೆ ಬಳಸಲಾಗುತ್ತದೆ

ಕಲಾವಿದ ಗಣೇಶನ ನಿರ್ದಿಷ್ಟ ವಿನ್ಯಾಸದ ಮೂರ್ತಿಯ ನಕ್ಷೆ ಅಥವಾ ಚಿತ್ರ ರಚಿಸಿಕೊಂಡು ಅದರಂತೆಯೇ ಮಣ್ಣಿನ ಮೂರ್ತಿ ರಚಿಸುತ್ತಾನೆ. ನಿಗದಿತ ಅಳತೆಯ ಪೀಠದ ಮೇಲೆ ಮಣ್ಣು, ಹತ್ತಿ, ನಾರು ಬಳಸಿ ಮೂರ್ತಿಯ ದೇಹ, ಅಂಗಾಂಗ, ಆಭರಣವನ್ನು ರಚಿಸಲಾಗುತ್ತದೆ. ಅಗತ್ಯ ಬಿದ್ದರೆ ಅಚ್ಚನ್ನೂ ಬಳಸಲಾಗುತ್ತದೆ


ಮಣ್ಣಿನಿಂದ ಸಿದ್ಧನಾದ ಗಣೇಶ ಮೂರ್ತಿಯ ಮೂಲ ರೂಪ ಹೀಗಿರುತ್ತದೆ. ಇಲ್ಲಿರುವುದು ಹಂಸವಾಹನ ಗಣೇಶ. ಮಣ್ಣಿನಲ್ಲಿದ್ದ ನೀರಿನ ಅಂಶ ಒಣಗಿದ ಬಳಿಕ ವಿಗ್ರಹಕ್ಕೆ ನೈಸರ್ಗಿಕ ಬಣ್ಣ ಬಳಿದು ಅಂದಗೊಳಿಸಲಾಗುತ್ತದೆ

ನೈಸರ್ಗಿಕ ಬಣ್ಣಗಳಿಂದ ಅಲಂಕೃತಗೊಂಡ ಗಣೇಶ ಹೀಗೆ ವರ್ಣಮಯವಾಗಿ ಕಾಣಿಸಿಕೊಳ್ಳುತ್ತಾನೆ. ಹೀಗೆ ಸಿದ್ಧನಾದ ಗಣೇಶನನ್ನು ಮನೆ ಮನೆಗಳಲ್ಲಿ ಪೂಜಿಸಲಾಗುತ್ತದೆ. ಬಳಿಕ ಕೆರೆ, ಬಾವಿಗಳಲ್ಲಿ ವಿಸರ್ಜಿಸಲಾಗುತ್ತದೆ. ನೈಸರ್ಗಿಕವಾಗಿ ರೂಪುಗೊಂಡ ಪರಿಸರ ಸ್ನೇಹಿ ಗಣೇಶ ಮತ್ತೆ ಮಣ್ಣಿಗೇ ಸೇರುತ್ತಾನೆ

ಸಿನಿ ಒಗಟು

ಒಂದು ಸಿನಿಮಾ ಹೆಸರು ಅದರ **1-2** ಅಕ್ಷರ ಸೇರಿಸಿ ಓದಿದರೆ ಒಂದು ಬಣ್ಣದ ಹೆಸರು
3-2 ಅಕ್ಷರ ಸೇರಿಸಿದರೆ ಒಂದು ಪಕ್ಷಿಯ ಹೆಸರು
3-4 ಹೆಸರು ಸೇರಿದರೆ ಒಂದು ಬೆಟ್ಟ
6-2 ಹತ್ತಿರ
7-4 ಒಂದು ಪ್ರಾಣಿ
8-5 ಅನುಕಂಪ
7-8 ನಳ ಎಂದಾದರೆ ಆ ಸಿನಿಮಾ ಹೆಸರೇನು?

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳಿಗೆ ಬಲಭಾಗದಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ಹೊಸ ಪದ ರಚಿಸಿ

	ಬ	ಲ	ಸುಳಿವು
1			ಮೌಲ್ಯ
2			ಹುಡುಗಿ
3			ರಂಧ್ರ
4			ಜಾಲ
5			ದೊಡ್ಡದಾಗು

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: 1. ಗಿರಿ 2. ಗುರಿ 3. ಗೆರೆ 4. ಗರಿ 5. ಗೇರು
ಅಕ್ಷರ ಆಟ: 1. ಕೊರಳು 2. ಬೆರಳು 3. ಸರಳು 4. ಹರಳು 5. ನೆರಳು 6. ತರಳು 7. ಕೆರಳು 8. ನರಳು 9. ಅರಳು 10. ಹೆರಳು 11. ಮರಳು 12. ಹುರುಳು 13. ಹೊರಳು
ಅದಲು ಬದಲು ಕಂಚಿ ಕದಲು: 1. ಮಾನವಕುಲ 2. ಅಕ್ಕಿ ಕುಟ್ಟು 3. ಪ್ರಗತಿ ತೋರಿಸು 4. ಕಾಡಿನದಾರಿ
ಟ್ವೆಂಟಿ -20 ಮ್ಯಾಚ್: A: 1-F 2-H 3-I 4-G 5-D 6-C 7-E 8-A 9-J 10-B
B: 1-G 2-H 3-D 4-E 5-F 6-J 7-I 8-C 9-B 10-A

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಪ್ರಣವ್ ಉಲ್ಲಾಸ್ ಕೆ., ಹಾವೇರಿ

ಪಾರ್ಶ್ವನಾಥ ಪ್ರವೀಣ್ ಕಾಸಾರ, ಕಲಬುರಗಿ

ಧನುಷ್ ಕೆ.ಆರ್., ತುಮಕೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಏಷ್ಯಾಕಪ್ ಟೂರ್ನಿಯಲ್ಲಿ ರೋಹಿತ್–ಬಾಬರ್ ಮುಖಾಮುಖಿ

ದುಬೈನಲ್ಲಿ ಭಾರತ–ಪಾಕ್ ಸೆಣಸಾಟ

ದುಬೈ (ಪಿಟಿಐ): ಸುಮಾರು ಒಂದು ದಶಕದಿಂದ ಭಾರತದ ಸೀಮಿತ ಓವರ್‌ಗಳ ಕ್ರಿಕೆಟ್ ತಂಡಕ್ಕೆ ಆಧಾರಸ್ತಂಭಗಳಾಗಿರುವ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಈಗ ತಮ್ಮ ವೃತ್ತಿಜೀವನದ ಪ್ರಮುಖ ಘಟ್ಟದಲ್ಲಿದ್ದಾರೆ.

ಇಬ್ಬರಿಗೂ ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳುವ ಸವಾಲು ಇದೆ. ಆದರೆ ರೋಹಿತ್ ನಾಯಕನಾಗಿಯೂ ಗೆಲ್ಲುವ ದೊಡ್ಡ ಸವಾಲು ಕೂಡ ಇದೆ. ಏಕೆಂದರೆ ಭಾನುವಾರ ಏಷ್ಯಾ ಕಪ್ ಟೂರ್ನಿಯಲ್ಲಿ ಬದ್ಧ ಎದುರಾಳಿ ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ರೋಹಿತ್ ನಾಯಕತ್ವದ ಸತ್ವಪರೀಕ್ಷೆ ನಡೆಯಲಿದೆ.

ಹತ್ತು ತಿಂಗಳುಗಳ ಹಿಂದಷ್ಟೇ ಟಿ20 ವಿಶ್ವಕಪ್ ಟೂರ್ನಿಯಲ್ಲಿ ವಿರಾಟ್ ನಾಯಕತ್ವದ ಭಾರತ ತಂಡವು ಪಾಕ್ ಎದುರು ಸೋತಿತ್ತು. ವಿಶ್ವಕಪ್ ಟೂರ್ನಿಗಳ ಇತಿಹಾಸದಲ್ಲಿಯೇ ಭಾರತವು ತನ್ನ ನೆರೆರಾಷ್ಟ್ರದ ಬಳಗಕ್ಕೆ ಸೋತ ಮೊದಲ ಪಂದ್ಯವಾಗಿತ್ತು. ಆಗ ಹಣಾಹಣಿ ನಡೆದಿದ್ದ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿಯೇ ಈ ಪಂದ್ಯವೂ ನಡೆಯಲಿದ್ದು ಕುತೂಹಲ ಕೆರಳಿಸಿದೆ.

ಕಳೆದ ಮೂರು ವರ್ಷಗಳಿಂದ ಯಾವುದೇ ಮಾದರಿಯಲ್ಲಿಯೂ ಶತಕ ಬಾರಿಸದ 'ರನ್ ಯಂತ್ರ' ವಿರಾಟ್

ಬಾಬರ್ ಆಜಂ

ಬ್ಯಾಟಿಂಗ್ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ದೀರ್ಘ ವಿಶ್ರಾಂತಿ ಪಡೆದು ಅಂಗಳಕ್ಕೆ ಮರಳಿರುವ ಅವರು ಇಲ್ಲಿ ತಮ್ಮ ಫಾರ್ಮ್ ಕಂಡುಕೊಳ್ಳುವ ಛಲದಲ್ಲಿದ್ದಾರೆ.

ಕನ್ನಡಿಗ ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ದೀಪಕ್ ಹೂಡಾ ಹಾಗೂ ದಿನೇಶ್ ಕಾರ್ತಿಕ್ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಹಾರ್ದಿಕ್, ಜಡೇಜ, ಅಶ್ವಿನ್ ಅವರ ಮೇಲೆ ಆಲ್‌ರೌಂಡ್ ಆಟದ ಹೊಣೆ ಇದೆ. ಟಿ20 ಪರಿಣತ ಸ್ಪಿನ್ನರ್ ಚಾಹಲ್ ಪಾಕ್ ಬ್ಯಾಟರ್‌ಗಳಿಗೆ ಸವಾಲೆಸೆಯಲು ಸಿದ್ಧರಾಗಿದ್ದಾರೆ. ಜಸ್‌ಪ್ರೀತ್ ಬೂಮ್ರಾ ಅನುಪಸ್ಥಿತಿಯಲ್ಲಿ ಭುವನೇಶ್ವರ್ ಕುಮಾರ್ ಜವಾಬ್ದಾರಿ ಹೆಚ್ಚಿದೆ.

ಪಾಕ್ ತಂಡದ ಬಾಬರ್ ಆಜಂ, ರಿಜ್ವಾನ್, ಜಮಾನ್ ಅವರ ಬ್ಯಾಟಿಂಗ್‌ಗೆ ತಡೆಯೊಡ್ಡುವುದೇ ಭಾರತದ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು. ಪಾಕ್ ಬೌಲಿಂಗ್ ಪಡೆಯಲ್ಲಿ ಶಾಹೀನ್ ಅಫ್ರಿದಿ ಕೊರತೆ ಕಾಡಲಿದೆ. ಇದು ಭಾರತಕ್ಕೆ ಅನುಕೂಲವೂ ಆಗಬಹುದು.

ನೂರನೇ ಪಂದ್ಯಕ್ಕೆ ಶತಕದ ಮೆರಗು ತುಂಬುವರೇ ವಿರಾಟ್?

ವಿರಾಟ್ ಕೊಹ್ಲಿಗೆ ಭಾನುವಾರದ ಪಂದ್ಯವು ಟಿ20 ಮಾದರಿಯಲ್ಲಿ ನೂರನೇಯದ್ದಾಗಲಿದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನ ಮೂರು ಮಾದರಿಗಳಲ್ಲಿಯೂ ನೂರು ಪಂದ್ಯಗಳನ್ನಾಡಿದ ಮೊದಲ ಭಾರತೀಯ ಆಟಗಾರನಾಗಲಿದ್ದಾರೆ.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಅವರು ಇದುವರೆಗೆ ಶತಕ ಬಾರಿಸಿಲ್ಲ. ಅಲ್ಲದೇ ಕಳೆದ ಮೂರು ವರ್ಷಗಳಿಂದ ಯಾವುದೇ ಮಾದರಿಯಲ್ಲಿ ಹಾಗೂ ಐಪಿಎಲ್‌ನಲ್ಲಿಯೂ ಶತಕ ದಾಖಲಿಸಿಲ್ಲ. ಆದ್ದರಿಂದ ಪಾಕ್ ಎದುರಿನ ಪಂದ್ಯದಲ್ಲಿ ಅವರು ತಮ್ಮ ಲಯಕ್ಕೆ ಮರಳುವ ಜೊತೆಗೆ ಶತಕದ ಬರವನ್ನೂ ನೀಗಿಸಿಕೊಳ್ಳುವರೇ ಎಂಬ ಕುತೂಹಲ ಅಭಿಮಾನಿಗಳ ವಲಯದಲ್ಲಿ ಗರಿಗೆದರಿದೆ.

'ಶತಕ'ದತ್ತ ವಿರಾಟ್ ಕೊಹ್ಲಿ

ಮಾದರಿ	ಪಂದ್ಯ	ರನ್	ಶ್ರೇಷ್ಠ
ಟೆಸ್ಟ್	102	8,074	254
ಏಕದಿನ	262	12,344	183
ಟಿ20	99	6,624	94

ರೋಹಿತ್ ಶರ್ಮಾ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ದೀಪಕ್ ಹೂಡಾ, ದಿನೇಶ್ ಕಾರ್ತಿಕ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಆರ್. ಅಶ್ವಿನ್, ಯಜುವೇಂದ್ರ ಚಾಹಲ್, ರವಿ ಬಿಷ್ಣೋಯಿ, ಭುವನೇಶ್ವರ್ ಕುಮಾರ್, ಅರ್ಷದೀಪ್ ಸಿಂಗ್, ಆವೇಶ್ ಖಾನ್.

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಶಾದಾಬ್ ಖಾನ್, ಆಸಿಫ್ ಅಲಿ, ಫಖ್ರ್ ಜಮಾನ್, ಹೈದರ್ ಅಲಿ, ಹ್ಯಾರಿಸ್ ರವೂಫ್, ಇಫ್ತಿಕಾರ್ ಅಹಮದ್, ಖುಷ್‌ದಿಲ್ ಶಾ, ಮೊಹಮ್ಮದ್ ನವಾಜ್. ಮೊಹಮ್ಮದ್ ರಿಜ್ವಾನ್, ನಸೀಂ ಶಾ, ಶಾನವಾಜ್ ದಹಾನಿ, ಉಸ್ಮಾನ್ ಖಾದಿರ್, ಮೊಹಮ್ಮದ್ ಹಸನೈನ್, ಹಸನ್ ಅಲಿ

ಉಭಯ ತಂಡಗಳ ಸಾಧನೆ

ತಂಡ	ಚಾಂಪಿಯನ್	ರನ್ನರ್ಸ್ ಅಪ್
ಭಾರತ	7 (1984,1988,1990-91,1995,2010,2016,2018)	3 (1997, 2004,2008)
ಪಾಕಿಸ್ತಾನ	2 (2000, 2012)	2 (1986, 2014)

ಇಂದಿನ ಪಂದ್ಯ

ಭಾರತ Vs ಪಾಕಿಸ್ತಾನ
ಸ್ಥಳ: ದುಬೈ
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್
ರಾತ್ರಿ 7.30

ಏಷ್ಯಾ ಕಪ್‌ನ 15 ಪಂದ್ಯಗಳಲ್ಲಿ ಉಭಯ ತಂಡಗಳ ಬಲಾಬಲ

ಭಾರತ ಜಯ	8
ಪಾಕ್ ಜಯ	5
ಫಲಿತಾಂಶವಿಲ್ಲ	2

ಏಷ್ಯಾಕಪ್ ಟಿ20 ಕ್ರಿಕೆಟ್: ಐತಿಹಾಸಿಕ ಜಯ ಸಾಧಿಸಿದ ನಬಿ ಬಳಗ

ಶ್ರೀಲಂಕೆಗೆ ಆಘಾತ ನೀಡಿದ ಅಫ್ಗಾನಿಸ್ತಾನ

ದುಬೈ (ಪಿಟಿಐ): ಅಫ್ಗಾನಿಸ್ತಾನದ ಎಡಗೈ ವೇಗಿ ಫಜಲ್ ಹಕ್ ಫಾರೂಕಿ ಶಿಸ್ತಿನ ದಾಳಿ ಹಾಗೂ ರೆಹಮಾನುಲ್ಲಾ ಗುರ್ಬಾಜ್ ಬ್ಯಾಟಿಂಗ್ ನೆರವಿನಿಂದ ಅಫ್ಗಾನಿಸ್ತಾನ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶನಿವಾರ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಆರಂಭವಾದ ಟೂರ್ನಿಯ ಮೊದಲ ಪಂದ್ಯದಲ್ಲಿ ಅಫ್ಗನ್ ತಂಡವು 8 ವಿಕೆಟ್‌ಗಳಿಂದ ಶ್ರೀಲಂಕಾಕ್ಕೆ ಆಘಾತ ನೀಡಿತು. ಐತಿಹಾಸಿಕ ಜಯ ದಾಖಲಿಸಿತು.

ಟಾಸ್ ಗೆದ್ದ ಅಫ್ಗಾನಿಸ್ತಾನ ತಂಡದ ನಾಯಕ ಮೊಹಮ್ಮದ್ ನಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಶಿಸ್ತಿನ ದಾಳಿಯ ಮುಂದೆ ಶ್ರೀಲಂಕಾ 19.4 ಓವರ್‌ಗಳಲ್ಲಿ 105 ರನ್ ಗಳಿಸಿ ಆಲೌಟ್ ಆಯಿತು. ಅಲ್ಪಮೊತ್ತದ ಗುರಿ ಬೆನ್ನಟ್ಟಿದ ಅಫ್ಗನ್ ತಂಡವು 10.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 106 ರನ್ ಗಳಿಸಿತು. ರೆಹಮಾನುಲ್ಲಾ (40; 18ಎ, 4X3, 6X4) ಹಾಗೂ ಹಜ್ರತುಲ್ಲಾ ಝಝೈ (ಔಟಾಗದೆ 37) ಮೊದಲ ವಿಕೆಟ್‌ಗೆ 83 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು.

ಫಾರೂಕಿ ದಾಳಿ: ಅಫ್ಗಾನಿಸ್ತಾನದ ಬೌಲರ್‌ಗಳು ತಂಡದ ಗೆಲುವಿಗೆ ಮುನ್ನುಡಿ ಬರೆದರು. ಮೊದಲ ಓವರ್‌ನಲ್ಲಿ ಫಾರೂಕಿ ಎರಡು ವಿಕೆಟ್ ಕಿತ್ತು ತಮ್ಮ ನಾಯಕನ ನಿರ್ಧಾರ ಸಮರ್ಥಿಸಿಕೊಂಡರು. ಐದನೇ ಎಸೆತದಲ್ಲಿ ಕುಶಾಲ ಮೆಂಡಿಸ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರೆ, ಆರನೇ ಎಸೆತದಲ್ಲಿ ಅಸಲಂಕಾ ಔಟಾದರು.

ಫಜಲ್‌ಹಕ್ ಫಾರೂಕಿ –ಎಎಫ್‌ಪಿ ಚಿತ್ರ

ನಂತರದ ಓವರ್‌ನಲ್ಲಿ ನವೀನ್ ಉಲ್ ಹಕ್ ಕೂಡ ಲಂಕೆಗೆ ಪೆಟ್ಟುಕೊಟ್ಟರು. ಪಥುಮ್ ನಿಸಾಂಕಾ ವಿಕೆಟ್ ಪಡೆದು ಸಂಭ್ರಮಿಸಿದರು.

ಗುಣತಿಲಕ (17;17ಎ, 4X3) ಹಾಗೂ ರಾಜಪಕ್ಸ (38; 29ಎ, 4X5) ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿದರು. ಆದರೆ ಎಂಟನೇ ಓವರ್‌ನಲ್ಲಿ ಗುಣತಿಲಕ ವಿಕೆಟ್ ಗಳಿಸಿದ ಮುಜೀಬ್ ಜೊತೆಯಾಟವನ್ನು ಮುರಿದರು.

ಎರಡು ಓವರ್‌ಗಳ ನಂತರ ವಣಿಂದು ಹಸರಂಗಾ ವಿಕೆಟ್ ಕೂಡ ಮುಜೀಬ್ ಪಾಲಾಯಿತು. ಸ್ವಲ್ಪ ಭರವಸೆ ಮೂಡಿಸಿದ್ದ ರಾಜಪಕ್ಸ ರನೌಟ್ ಆದರು. ಇದರಿಂದಾಗಿ ತಂಡವು ನೂರರ ಗಡಿ ದಾಟುವುದೇ ಅನುಮಾನವಾಗಿತ್ತು. ಈ ಹಂತದಲ್ಲಿ ಒಂದಿಷ್ಟು ಉತ್ತಮ ಹೊಡೆತಗಳ ಆಟವಾಡಿದ ಕರುಣಾರತ್ನೆ (31; 38ಎ, 4X3, 6X1) ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 19.4 ಓವರ್‌ಗಳಲ್ಲಿ 105 (ರಾಜಪಕ್ಸ 38, ಕರುಣಾರತ್ನೆ 31, ಗುಣತಿಲಕ 17, ಫಜಲ್ ಹಕ್ ಫಾರೂಕಿ 11ಕ್ಕೆ3, ಮುಜೀಬ್ 24ಕ್ಕೆ2, ಮೊಹಮ್ಮದ್ ನಬಿ 14ಕ್ಕೆ2) **ಅಫ್ಗಾನಿಸ್ತಾನ:** 10.1 ಓವರ್‌ಗಳಲ್ಲಿ 2ಕ್ಕೆ 106 (ಹಜ್ರತುಲ್ಲಾ ಝಝೈ ಔಟಾಗದೆ 37, ರೆಹಮಾನುಲ್ಲಾ ಗುರ್ಬಾಜ್ 40, ಇಬ್ರಾಹಿಂ ಜದ್ರಾನ್ ಔಟಾಗದೆ 15; ವನಿಂದು ಹಸರಂಗ 19ಕ್ಕೆ 1). ಫಲಿತಾಂಶ: ಅಫ್ಗಾನಿಸ್ತಾನ ತಂಡಕ್ಕೆ ಎಂಟು ವಿಕೆಟ್‌ಗಳ ಜಯ

ಸಾತ್ವಿಕ್–ಚಿರಾಗ್ ಜೋಡಿಗೆ ಕಂಚು

ವಿಶ್ವ ಬ್ಯಾಡ್ಮಿಂಟನ್: ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತಕ್ಕೆ ಮೊದಲ ಪದಕ

ಟೋಕಿಯೊ (ಪಿಟಿಐ): ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್‌ನಲ್ಲಿ ಐತಿಹಾಸಿಕ ಕಂಚಿನ ಪದಕ ಗಳಿಸಿದ್ದಾರೆ. ಚಾಂಪಿಯನ್‌ಷಿಪ್‌ನ ಈ ವಿಭಾಗದಲ್ಲಿ ಪದಕ ಸಾಧನೆ ಮಾಡಿದ ಭಾರತದ ಮೊದಲ ಜೋಡಿ ಎಂಬ ಶ್ರೇಯ ಅವರದಾಯಿತು.

ಟೋಕಿಯೊದಲ್ಲಿ ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಭಾರತದ

ಚಿರಾಗ್‌ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಪಿಟಿಐ ಚಿತ್ರ

ಆಟಗಾರರು 22-20, 18-21, 16-21ರಿಂದ ಮಲೇಷ್ಯಾದ ಆ್ಯರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ವಿರುದ್ಧ ಸೋತರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಏಳನೇ ಸ್ಥಾನದಲ್ಲಿರುವ ಭಾರತದ ಜೋಡಿ ಮೊದಲ ಗೇಮ್ ಜಯದ ಲಾಭ ಪಡೆಯುವಲ್ಲಿ ಎಡವಿತು. ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಆ್ಯರನ್ ಮತ್ತು ಸೋಹ್ 77 ನಿಮಿಷಗಳ ಹಣಾಹಣಿಯಲ್ಲಿ ಭಾರತದ ಆಟಗಾರರ ಸವಾಲು ಮೀರಿದರು.

ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್‌ಗಳಾದ ಸಾತ್ವಿಕ್– ಚಿರಾಗ್ ಜೋಡಿಗೆ ಮಲೇಷ್ಯಾ ಆಟಗಾರರ ಎದುರು ಇದು ಸತತ ಆರನೇ ಸೋಲಾಗಿದೆ. ಚಾಂಪಿಯನ್‌ಷಿಪ್‌ನಲ್ಲಿ 2011ರಿಂದ ಭಾರತದ ಆಟಗಾರರು ಬರಿಗೈಯಿಂದ ಮರಳಿಲ್ಲ. ಆ ವರ್ಷ ಮಹಿಳಾ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ– ಜ್ವಾಲಾ ಗುಟ್ಟಾ ಕಂಚು ಜಯಿಸಿದ್ದರು.

ನಾಲ್ಕರ ಘಟ್ಟದ ಸೆಣಸಾಟದಲ್ಲಿ ಚಿರಾಗ್ ಅವರಿಗೆ ಸರ್ವ್ ಮತ್ತು ಡಿಫೆನ್ಸ್‌ಗಳಲ್ಲಿ ನಿರೀಕ್ಷಿತ ಸಾಮರ್ಥ್ಯ ತೋರಲಾಗಲಿಲ್ಲ. ಆದರೆ ಸಾತ್ವಿಕ್ ಸಾಧ್ಯವಾದಷ್ಟು ಶ್ರೇಷ್ಠ ಆಟವಾಡಿದರು.

ಚಿರಾಗ್ ಶೆಟ್ಟಿ (ಮಹಾರಾಷ್ಟ್ರ)
ವಯಸ್ಸು: **25**
ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ (ಆಂಧ್ರಪ್ರದೇಶ)
ವಯಸ್ಸು: **22**

ಡಬಲ್ಸ್ ವಿಭಾಗದ ಪದಕ ಸಾಧನೆ

ವಿಶ್ವ ಚಾಂಪಿಯನ್‌ಷಿಪ್
ಟೋಕಿಯೊ (2022)– ಕಂಚು
ಕಾಮನ್‌ವೆಲ್ತ್ ಗೇಮ್ಸ್ (2)
ಗೋಲ್ಡ್‌ಕೋಸ್ಟ್ (2018)– ಬೆಳ್ಳಿ
ಬರ್ಮಿಂಗ್‌ಹ್ಯಾಮ್ (2022)– ಚಿನ್ನ
ಬಿಡಬ್ಲ್ಯುಎಫ್ ವಿಶ್ವ ಟೂರ್ಸ್ (3)
ಹೈದರಾಬಾದ್ ಓಪನ್ (2018)
ಥಾಯ್ಲೆಂಡ್ ಓಪನ್ (2019)
ಇಂಡಿಯಾ ಓಪನ್ (2022)

ಇಂಗ್ಲೆಂಡ್‌ಗೆ ಇನಿಂಗ್ಸ್ ಗೆಲುವು

ಮ್ಯಾಂಚೆಸ್ಟರ್ (ಎಎಫ್‌ಪಿ): ಒಲಿ ರಾಬಿನ್ಸನ್ (43ಕ್ಕೆ 4) ಮತ್ತು ಜೇಮ್ಸ್ ಆ್ಯಂಡರ್‌ಸನ್ (30ಕ್ಕೆ 3) ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಇಂಗ್ಲೆಂಡ್ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಇನಿಂಗ್ಸ್ ಹಾಗೂ 85 ರನ್‌ಗಳ ಜಯ ಸಾಧಿಸಿತು.

ಇದರೊಂದಿಗೆ ಮೂರು ಪಂದ್ಯಗಳ ಸರಣಿಯನ್ನು 1-1 ರಲ್ಲಿ ಸಮಬಲ ಮಾಡಿಕೊಂಡಿತು. ಮೂರು ದಿನಗಳಲ್ಲೇ ಈ ಪಂದ್ಯ ಕೊನೆಗೊಂಡಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ 151. ಇಂಗ್ಲೆಂಡ್ 9ಕ್ಕೆ 415 ಡಿಕ್ಲೇರ್ಡ್ (ಬೆನ್ ಸ್ಟೋಕ್ಸ್ 103, ಬೆನ್ ಫೋಕ್ಸ್ ಔಟಾಗದೆ 113, ಎನ್ರಿಕ್ ನಾರ್ಕಿಯಾ 82ಕ್ಕೆ 3) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ 85.1 ಓವರ್‌ಗಳಲ್ಲಿ 179 (ಕೀಗನ್ ಪೀಟರ್‌ಸನ್ 42, ವಾನ್ ಡಸೆನ್ 41, ಒಲಿ ರಾಬಿನ್ಸನ್ 43ಕ್ಕೆ 4, ಆ್ಯಂಡರ್‌ಸನ್ 30ಕ್ಕೆ 3, ಬೆನ್ ಸ್ಟೋಕ್ಸ್ 30ಕ್ಕೆ 2)

ಮ್ಯೂಸಿಯಂಗೆ ಚೋಪ್ರಾ ಜಾವೆಲಿನ್

ಲಾಸನ್ (ಪಿಟಿಐ): ನೀರಜ್ ಚೋಪ್ರಾ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಮಗೆ ಚಿನ್ನ ತಂದಿತ್ತ ಜಾವೆಲಿನ್‌ಅನ್ನು ಸ್ವಿಟ್ಜರ್‌ಲೆಂಡ್‌ನ ಲಾಸನ್‌ನಲ್ಲಿರುವ 'ಒಲಿಂಪಿಕ್ ಮ್ಯೂಸಿಯಂ'ಗೆ ಉಡುಗೊರೆಯಾಗಿ ನೀಡಿದ್ದಾರೆ.

ಶೂಟಿಂಗ್‌ನಲ್ಲಿ ಭಾರತಕ್ಕೆ ಮೊದಲ ವೈಯಕ್ತಿಕ ಚಿನ್ನ ತಂದಿತ್ತ ಅಭಿನವ್ ಬಿಂದ್ರಾ ಅವರ ರೈಫಲ್ ಕೂಡಾ ಇಲ್ಲಿದೆ.

'ಬಿಂದ್ರಾ ಅವರ ರೈಫಲ್ ನೋಡಿದಾಗ ಅದ್ಭುತ ಪ್ರೇರಣೆ ಮೂಡಿತು. ನನ್ನ ಜಾವೆಲಿನ್ ಕೂಡಾ ಭವಿಷ್ಯದ ಅಥ್ಲೀಟ್‌ಗಳಿಗೆ ಪ್ರೇರಣೆಯಾಗಬಹುದು' ಎಂದು ಚೋಪ್ರಾ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ನವಜೀತ್ ಕೌರ್‌ಗೆ 3 ವರ್ಷ ನಿಷೇಧ

ನವಜೀತ್ ಕೌರ್

ನವದೆಹಲಿ (ರಾಯಿಟರ್ಸ್/ಪಿಟಿಐ): ನಿಷೇಧಿತ ಮದ್ದು ಸೇವಿಸಿದ ಆರೋಪ ಸಾಬೀತಾದ ಕಾರಣ ಭಾರತದ ಮಹಿಳಾ ಡಿಸ್ಕಸ್ ಥ್ರೋ ಸ್ಪರ್ಧಿ ನವಜೀತ್ ಕೌರ್ ಧಿಲ್ಲೋನ್ ಅವರ ಮೇಲೆ ಅಥ್ಲೆಟಿಕ್ಸ್ ಇಂಟಿಗ್ರಿಟಿ ಯೂನಿಟ್ (ಎಐಯು) 3 ವರ್ಷಗಳ ನಿಷೇಧ ಹೇರಿದೆ.

27 ವರ್ಷದ ಧಿಲ್ಲೋನ್ ಅವರು ಅನಬೊಲಿಕ್ ಸ್ಟಿರಾಯ್ಡ್ ಸೇವಿಸಿರುವುದು ಪರೀಕ್ಷೆಯ ವೇಳೆ ಖಚಿತವಾಗಿತ್ತು. 'ತಮಗೆ ಅರಿವಿಲ್ಲದೆಯೇ ನಿಷೇಧಿತ ಮದ್ದು ಸೇವಿಸಿದ್ದೆ' ಎಂದು ಈ ತಿಂಗಳ ಆರಂಭದಲ್ಲಿ ಅವರು ಎಐಯು ಮುಂದೆ ಒಪ್ಪಿಕೊಂಡಿದ್ದರು.

ಧಿಲ್ಲೋನ್ ಅವರಿಗೆ ಗರಿಷ್ಠ ನಾಲ್ಕು ವರ್ಷ ನಿಷೇಧ ಶಿಕ್ಷೆ ವಿಧಿಸಬಹುದಿತ್ತು. ಆದರೆ ಮದ್ದು ಸೇವಿಸಿರುವುದು ಒಪ್ಪಿಕೊಂಡಿರುವ ಕಾರಣ ಶಿಕ್ಷೆಯನ್ನು ಒಂದು ವರ್ಷ ಕಡಿತಗೊಳಿಸಲಾಗಿದೆ. ನವಜೀತ್ 2018ರ ಕಾಮನ್‌ವೆಲ್ತ್ ಕೂಟದಲ್ಲಿ ಕಂಚು ಗೆದ್ದಿದ್ದರು. ಬರ್ಮಿಂಗ್‌ಹ್ಯಾಂ ಕೂಟದಲ್ಲಿ ಎಂಟನೇ ಸ್ಥಾನ ಪಡೆದಿದ್ದರು.

ರಷ್ಯಾದ ನಡಿಗೆ ಸ್ಪರ್ಧಿ ಅಲೆಕ್ಸಾಂಡರ್ ಇವನೋವ್ ಅವರ ಮೇಲೂ ನಿಷೇಧ ಹೇರಿದೆ.

ನಿಷೇಧ ಶಿಕ್ಷೆಯ ವಿರುದ್ಧ ಅಥ್ಲೀಟ್‌ಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂದು ಎಐಯು ಹೇಳಿದೆ.

ಕೊಕ್ಕೊ: ಗೆಲುವಿನ ಹಳಿಗೆ ಚೆನ್ನೈ

ಪುಣೆ (ಪಿಟಿಐ): ಮದನ್ ಮತ್ತು ರಾಮ್‌ಜೀ ಕಶ್ಯಪ್ ಅವರ ಅಮೋಘ ಆಟದ ಬಲದಿಂದ ಚೆನ್ನೈ ಕ್ವಿಕ್ ಗನ್ಸ್ ತಂಡವು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಜಯ ಗಳಿಸಿತು.

ಶಿವ ಛತ್ರಪತಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಚೆನ್ನೈ 57–36ರಿಂದ ರಾಜಸ್ಥಾನ ವಾರಿಯರ್ಸ್ ಎದುರು ಗೆದ್ದಿತು. ಮದನ್ 3 ನಿಮಿಷ 55 ಸೆಕೆಂಡುಗಳ ಕಾಲ ಔಟಾಗಲಿಲ್ಲ. ಆಲ್‌ರೌಂಡ್ ಆಟವಾಡಿದ ಕಶ್ಯಪ್ 18 ಪಾಯಿಂಟ್ಸ್ ಕಲೆಹಾಕಿದರು.

ಇನ್ನೊಂದು ಪಂದ್ಯದಲ್ಲಿ ಒಡಿಶಾ ಜಗರ್‌ನಾಟ್ಸ್ 60–37ರಿಂದ ಮುಂಬೈ ಖಿಲಾಡೀಸ್ ಎದುರು ಗೆದ್ದಿತು.

ಡಿಸ್ನಿ ಸ್ಟಾರ್‌ಗೆ ಐಸಿಸಿ ಪ್ರಸಾರ ಹಕ್ಕುಗಳು

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ಯ ಭಾರತದ ಮಾರುಕಟ್ಟೆ ವಿಭಾಗದ ಪ್ರಸಾರ ಹಕ್ಕುಗಳನ್ನು ಡಿಸ್ನಿ ಸ್ಟಾರ್ ಸಂಸ್ಥೆಯು ಖರೀದಿಸಿದೆ.

ಮುಂದಿನ ನಾಲ್ಕು ವರ್ಷಗಳವರೆಗೆ (2024–2027) ಟಿ.ವಿ ಹಾಗೂ ಡಿಜಿಟಲ್ ಪ್ರಸಾರ ಹಕ್ಕುಗಳನ್ನು ಡಿಸ್ನಿ ಸ್ಟಾರ್ ತನ್ನದಾಗಿಸಿಕೊಂಡಿದೆ ಎಂದು ಐಸಿಸಿಯ ಆಡಳಿತ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ. 24 ಸಾವಿರ ಕೋಟಿ ರೂಪಾಯಿಗೆ ಈ ಹಕ್ಕುಗಳನ್ನು ಖರೀದಿಸಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಸಿಂಗಲ್ ರೌಂಡ್ ಸೀಲ್ಡ್ ಬಿಡ್ ಇದಾಗಿತ್ತು. ಭಾರತದ ಮಾರುಕಟ್ಟೆಯ ಪ್ರಸಾರ ಹಕ್ಕುಗಳಿಗಾಗಿ ಟೆಂಡರ್‌ಗೆ ಬಹಳಷ್ಟು ಸ್ಪಂದನೆ ಲಭಿಸಿತ್ತು. ವಯಕಾಮ್ 18, ಸೋನಿ ಸ್ಪೋರ್ಟ್ಸ್ ಹಾಗೂ ಝೀ ನೆಟ್‌ವರ್ಕ್ ಪೈಪೋಟಿಯನ್ನು ಮೀರಿ ಡಿಸ್ನಿ ಸ್ಟಾರ್ ಮೇಲುಗೈ ಸಾಧಿಸಿದೆ.

ಕಳೆದ ಏಳು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದಲೂ ಡಿಸ್ನಿ ಸ್ಟಾರ್ ಐಸಿಸಿ ಪಂದ್ಯಗಳನ್ನು ಪ್ರಸಾರ ಮಾಡುವಲ್ಲಿ



ಮಹತ್ವದ ಕಾರ್ಯನಿರ್ವಹಿಸಿದೆ.

'ಐಸಿಸಿ ಡಿಜಿಟಲ್ ಹಾಗೂ ಟಿವಿ ಪ್ರಸಾರ ಹಕ್ಕುಗಳನ್ನು ಖರೀದಿಸುವ ಮೂಲಕ ಸ್ಟಾರ್ ತನ್ನ ಕಾರ್ಯವ್ಯಾಪ್ತಿ ಹಾಗೂ ವಿಶ್ವಾಸವನ್ನು ವಿಸ್ತರಿಸಿಕೊಂಡಿದೆ. ಐಸಿಸಿಯ ಪ್ರಮುಖ ಕ್ರಿಕೆಟ್ ಟೂರ್ನಿಗಳನ್ನು ಭಾರತದ ಪ್ರೇಕ್ಷಕರಿಗೆ ನೀಡುವುದು ಅತ್ಯಂತ ಪ್ರತಿಷ್ಠಿತವಾದ ಕಾರ್ಯವಾಗಿದೆ' ಎಂದು ಡಿಸ್ನಿ ಸ್ಟಾರ್ ಅಧ್ಯಕ್ಷ ಹಾಗೂ ರಾಷ್ಟ್ರೀಯ ವ್ಯವಸ್ಥಾಪಕ ಕೆ. ಮಾಧವನ್ ತಿಳಿಸಿದ್ದಾರೆ.

'ಕ್ರಿಕೆಟ್ ಅಲ್ಲದೇ ಪ್ರೊ ಕಬಡ್ಡಿ ಲೀಗ್, ಇಂಡಿಯನ್ ಸೂಪರ್ ಲೀಗ್ ಹಾಗೂ ಇನ್ನಿತರ ಅಂತರರಾಷ್ಟ್ರೀಯ ಕ್ರೀಡೆಗಳ ಪ್ರಸಾರ ಹಕ್ಕುಗಳನ್ನೂ ಹೊಂದಿದ್ದೇವೆ. ವಿಂಬಲ್ಡನ್ ಹಾಗೂ ಇಂಗ್ಲಿಷ್ ಪ್ರೀಮಿಯರ್ ಲೀಗ್ ಟೂರ್ನಿಗಳನ್ನು ಪ್ರಸಾರ ಮಾಡುವುದು ಹೆಗ್ಗಳಿಕೆ' ಎಂದು ಮಾಧವನ್ ಹೇಳಿದ್ದಾರೆ.